ಶನಿವಾರ, ಏಪ್ರಿಲ್ 6, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಾರ್ಥನೆ
ಜಮ್ಮು-ಕಾಶ್ಮೀರದ ಶ್ರೀನಗರದ ಹಜರತ್‌ಬಾಲ್ ದರ್ಗಾದಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರ ಬಾಲಕಿ ಆಟದಲ್ಲಿ ತೊಡಗಿದ್ದಾಗ ಕಂಡಿದ್ದು ಹೀಗೆ...

JioMart
ಸಮ್ಮರ್ ರೆಡಿ ಸೇಲ್
6th - 8th APRIL
Also at SMART BAZAAR
ಮಾಜಾ 1.5 L
ಉಳಿಸಿರಿ ₹21
ಎಮ್‌ಆರ್‌ಪಿ ₹90 ರಿಂದ
ನಮ್ಮ ಬೆಲೆ ₹69 ರಿಂದ
ಅಮುಲ್ ಮಸ್ತಿ ಮಸಾಲೆ ಮಜ್ಜಿಗೆ 1 L
ನಮ್ಮ ಬೆಲೆ ₹63
ಎಮ್‌ಆರ್‌ಪಿ ₹70
ಉಳಿಸಿರಿ ₹7
ಎನರ್ಜಿ ಡ್ರಿಂಕ್ / ಸೋಡಾ / ಪ್ಯಾಕ್ಡ್ ನೀರು 250 ml ರಿಂದ (ಆಯ್ದ ಪ್ರಕಾರಗಳು)
ಮಿನಿಮಮ್ 25% ಕಡಿತ
ಎಮ್‌ಆರ್‌ಪಿ ₹20 ರಿಂದ
ಬ್ರಿಟಾನಿಯಾ / ಕ್ಯಾವಿನ್ಸ್ / ಸನ್‌ಫೀಸ್ಟ್ / ಹರ್ಷೆ ಸ್ ಮಿಲ್ಕ್‌ಶೇಕ್ 180 ml ರಿಂದ (ಆಯ್ದ ಪ್ರಕಾರಗಳು)
ಮಿನಿಮಮ್ 25% ಕಡಿತ
ಎಮ್‌ಆರ್‌ಪಿ ₹35 ರಿಂದ
ಮಿಲ್ಕಿ ಮಿಸ್ಟ್ ಮೊಸರು 400 g
ನಮ್ಮ ಬೆಲೆ ₹32
ಎಮ್‌ಆರ್‌ಪಿ ₹38
ಉಳಿಸಿರಿ ₹6
ಡರ್ಮಿಕೂಲ್ ಪ್ರಿಕ್ಲಿ ಹೀಟ್ 150 g / ನವರತ್ನ ಕೂಲ್ ಟಾಲ್ಕ್ 200 g (ಆಯ್ದ ಪ್ರಕಾರಗಳು)
ಉಳಿಸಿರಿ ₹30
ಎಮ್‌ಆರ್‌ಪಿ ₹145 ರಿಂದ
ನಮ್ಮ ಬೆಲೆ ₹115 ರಿಂದ
ಪಾಂಡ್ಸ್ ಟಾಲ್ಕಮ್ ಪೌಡರ್ 400 g (ಆಯ್ದ ಪ್ರಕಾರಗಳು)
ಉಳಿಸಿರಿ ₹160
ಎಮ್‌ಆರ್‌ಪಿ ₹370 ರಿಂದ
ನಮ್ಮ ಬೆಲೆ ₹210 ರಿಂದ
ಫೇಸ್ ವಾಶ್ (ಜಾಯ್ / ಲ್ಯಾಕ್ಮೆ / ಮಾಮಯೆರ್ಥ್ / ಪೀಯರ್ಸ್ / ಪಾಂಡ್ಸ್) 150 ml ರಿಂದ (ಆಯ್ದ ಪ್ರಕಾರಗಳು)
ಫ್ಲ್ಯಾಟ್ 50% ಕಡಿತ
ಎಮ್‌ಆರ್‌ಪಿ ₹230 ರಿಂದ
ನಮ್ಮ ಬೆಲೆ ₹115 ರಿಂದ
ಸಮ್ಮರ್ ಲೋಷನ್ (ವ್ಯಾಸಲೀನ್ / ನಿವಿಯಾ) 400 ml ರಿಂದ (ಆಯ್ದ ಪ್ರಕಾರಗಳು)
ಫ್ಲ್ಯಾಟ್ 50% ಕಡಿತ
ಎಮ್‌ಆರ್‌ಪಿ ₹475 ರಿಂದ
ನಮ್ಮ ಬೆಲೆ ₹238 ರಿಂದ
ಹೆಡ್ ಆ್ಯಂಡ್ ಶೋಲ್ಡರ್ಸ್ / ಟ್ರೆಸೆಮ್ಮೆ / ಪ್ಯಾಂಟೀನ್ 580 ml ರಿಂದ / ಮೀರಾ ಶ್ಯಾಂಪೂ 340 ml (ಆಯ್ದ ಪ್ರಕಾರಗಳು)
ಫ್ಲ್ಯಾಟ್ 50% ಕಡಿತ
ಎಮ್‌ಆರ್‌ಪಿ ₹345 ರಿಂದ
ನಮ್ಮ ಬೆಲೆ ₹173 ರಿಂದ
ಟಾಟಾ ಗೋಲ್ಡ್ ಲೀಫ್ ಚಹಾ 500 g
ಉಳಿಸಿರಿ ₹60
ಎಮ್‌ಆರ್‌ಪಿ ₹315 ರಿಂದ
ನಮ್ಮ ಬೆಲೆ ₹255 ರಿಂದ
ಲೇಸ್ ಚಿಪ್ಸ್ 90 g (ಆಯ್ದ ಪ್ರಕಾರಗಳು)
ಫ್ಲ್ಯಾಟ್ 33% ಕಡಿತ
ಎಮ್‌ಆರ್‌ಪಿ ₹50 ರಿಂದ
ನಮ್ಮ ಬೆಲೆ ₹34 ರಿಂದ
ಟಾಪ್ ರಾಮೆನ್ / ಚಿಂಗ್ಸ್ ಸೀಕ್ರೆಟ್ / ಸನ್‌ಫೀಸ್ಟ್ ಯಿಪ್ಪೀ! ಮ್ಯಾಜಿಕ್ ಮಸಾಲಾ ನೂಡಲ್ಸ್ 240 g ರಿಂದ (ಆಯ್ದ ಪ್ರಕಾರಗಳು)
ಫ್ಲ್ಯಾಟ್ 33% ಕಡಿತ
ಎಮ್‌ಆರ್‌ಪಿ ₹80 ರಿಂದ
ನಮ್ಮ ಬೆಲೆ ₹54 ರಿಂದ
ಫಾರ್ಚೂನ್ ರಿಫೈನ್ಡ್ ರೈಸ್ ಬ್ರಾನ್ ಹೆಲ್ದಿ ಆಯಿಲ್ 3 L + ಇಂಡಿಯಾ ಗೇಟ್ ರೆಗ್ಯುಲರ್ ಚಾಯ್ಸ್ ಬಾಸ್ಮತಿ ಅಕ್ಕಿ 5 kg
ನಮ್ಮ ಬೆಲೆ ₹725
ಎಮ್‌ಆರ್‌ಪಿ ₹1000
ಉಳಿಸಿರಿ ₹275
ಗುಡ್ ಲೈಫ್ ಸಕ್ಕರೆ S 5 kg
ನಮ್ಮ ಬೆಲೆ ₹209 (₹41.8 /kg)
ಎಮ್‌ಆರ್‌ಪಿ ₹300
ಉಳಿಸಿರಿ ₹91
ಗುಡ್ ಲೈಫ್ ಡೈಲಿ ರೈಸ್ 26 kg
ನಮ್ಮ ಬೆಲೆ ₹1325 (₹50.96 /kg)
ಎಮ್‌ಆರ್‌ಪಿ ₹1800
ಉಳಿಸಿರಿ ₹475
ಆಶೀರ್ವಾದ ಸುಪೀರಿಯರ್ ಎಂಪಿ ಅಟ್ಟಾ 5 kg
ನಮ್ಮ ಬೆಲೆ ₹281
ಎಮ್‌ಆರ್‌ಪಿ ₹329
ಉಳಿಸಿರಿ ₹48
ಚಕ್ಕಿ ಆಟಾ 5 kg
ನಮ್ಮ ಬೆಲೆ ₹189
ಎಮ್‌ಆರ್‌ಪಿ ₹270
ಉಳಿಸಿರಿ ₹81
ಬೇಸನ್ / ಸೂಜಿ ರವೆ / ಮೈದಾ 500 g / 1 kg
ಫ್ಲ್ಯಾಟ್ 50% ಕಡಿತ
ಎಮ್‌ಆರ್‌ಪಿ ₹49 ರಿಂದ
ನಮ್ಮ ಬೆಲೆ ₹25 ರಿಂದ
ಪಾರ್ಥ್ ಜ್ಯಾಗರಿ 950 g
ನಮ್ಮ ಬೆಲೆ ₹64
ಎಮ್‌ಆರ್‌ಪಿ ₹90
ಉಳಿಸಿರಿ ₹26
ಗುಡ್ ಲೈಫ್ ರೈಸ್ ಬ್ರಾನ್ ಆಯಿಲ್ / ಸಫೋಲಾ ಆ್ಯಕ್ಟಿವ್ ಆಯಿಲ್ 1 L
ನಮ್ಮ ಬೆಲೆ ₹99/ ₹109
ಎಮ್‌ಆರ್‌ಪಿ ₹150 / ₹160
ಉಳಿಸಿರಿ ₹51 / ₹51
ನಂದಿನಿ ಶುದ್ಧ ತುಪ್ಪ 1 L
ನಮ್ಮ ಬೆಲೆ ₹599
ಎಮ್‌ಆರ್‌ಪಿ ₹630
ಉಳಿಸಿರಿ ₹31
ಗುಡ್ ಲೈಫ್ / ನೇಚರ್ಸ್ ಚಾಯ್ಸ್ ಮಿಕ್ಸ್ಡ್ ಡ್ರೈ ಫ್ರೂಟ್ಸ್ 400 g
ನಮ್ಮ ಬೆಲೆ ₹199
ಎಮ್‌ಆರ್‌ಪಿ ₹260
ಉಳಿಸಿರಿ ₹61
ನಟ್ ಹೌಸ್ ರೈಸಿನ್ಸ್ ಸೂಪರ್ / ವಿಟ್ಟಲ್ ಬಾಲಾಜಿ ಸೂಪರ್ ವ್ಯಾಲ್ಯೂ ಕ್ಯಾಶಿವ್ 500 g
ನಮ್ಮ ಬೆಲೆ ₹99/ ₹299
ಎಮ್‌ಆರ್‌ಪಿ ₹199 / ₹449
ಉಳಿಸಿರಿ ₹100 / ₹150
ಈಸ್ಟರ್ನ್ ಮಸಾಲೆಗಳ ಶ್ರೇಣಿ
ಫ್ಲ್ಯಾಟ್ 33% ಕಡಿತ
ಎಮ್‌ಆರ್‌ಪಿ ಮೇಲೆ
POLYSET ASIAN
ಪ್ಲಾಸ್ಟಿಕ್ ಫ್ರಿಜ್ ಬಾಟಲ್ 2 ಪೀಸ್‌ಗಳ ಸೆಟ್
ನಮ್ಮ ಬೆಲೆ ₹99
ಎಮ್‌ಆರ್‌ಪಿ ₹199
ಬೊರೊಸಿಲಿಕೇಟ್ ಗಾಜಿನ ಬಾಟಲ್ (500 ml / 1000 ml)
ನಮ್ಮ ಬೆಲೆ ₹149 ರಿಂದ
ಎಮ್‌ಆರ್‌ಪಿ ₹275 ರಿಂದ
LUCKYGLASS THAILAND
ಮಲ್ಟಿಪರ್ಪಸ್ ಗಾಜಿನ ಮಗ್
ನಮ್ಮ ಬೆಲೆ ₹59
ಎಮ್‌ಆರ್‌ಪಿ ₹149
YERA Ocean SANJEEV KAPOOR ROXX
ಗಾಜಿನ ಟಂಬ್ಲರ್ (6 ಸೆಟ್)
ನಮ್ಮ ಬೆಲೆ ₹99 ರಿಂದ
ಎಮ್‌ಆರ್‌ಪಿ ₹230 ರಿಂದ
HAPPY LIVING
ಟೆರ್ರಿ ಬಾತ್ ಟವೆಲ್
ನಮ್ಮ ಬೆಲೆ ₹199 ರಿಂದ
ಎಮ್‌ಆರ್‌ಪಿ ₹699 ರಿಂದ

ಶನಿವಾರ, ಏಪ್ರಿಲ್ 6, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಅಭಿಮಾನ

ಸಿಎಸ್‌ಕೆ ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳ ನಡುವಿನ ಐಪಿಎಲ್ ಪಂದ್ಯದ ವೇಳೆ ಎಂ.ಎಸ್.ಧೋನಿ ಅವರ ಅಭಿಮಾನಿಯೊಬ್ಬರು ಪೋಸ್ಟರ್ ಹಿಡಿದು ಗಮನ ಸೆಳೆದರು

ಅತ್ಯುತ್ತಮ ಸಿಲ್ಕ್ ಸೀರೆಗಳು
ಈಗ ನಮ್ಮ
ಸಿಲಿಕಾನ್ ಸಿಟಿಯಲ್ಲಿ.
ಯುಗಾದಿ
ಹಬ್ಬದ
ಸಂಭ್ರಮಾಚರಣೆ
ಆರು ಗಜಗಳುಳ್ಳ ಸೀರೆಗಳ ಸೌಂದರ್ಯ ಮತ್ತು
ಸೊಬಗನ್ನು ವೀಕ್ಷಿಸಿ
ಶಾಶ್ವತ ಸಂಪ್ರದಾಯವನ್ನು ಆಹ್ಲಾದಿಸಿ
ಅತಿ ಆಳವಾಗಿ ಬೇರೂರಿದ ಪರಂಪರೆಯನ್ನು ಅನ್ವೇಷಿಸಿ
ವಿಆರ್‌ಕೆ ಹೆರಿಟೇಜ್ ಅನ್ನು ಮತ್ತುಷ್ಟು ಮೆರುಗುಗೊಳಿಸಿ
VRK HERITAGE
VRK
HERITAGE
46ನೇ ಕ್ರಾಸ್, 5ನೇ ಬ್ಲಾಕ್, ಜಯನಗರ,
ಶೆಲ್ ಪೆಟ್ರೋಲ್ ಬಂಕ್ ಪಕ್ಕದಲ್ಲಿ, ಬೆಂಗಳೂರು-560041.
+91 63015 80075
ಬ್ರೈಡಲ್ ಕಾಂಜೀವರಂ | ಡಿಸೈನರ್ ಕಾಂಜೀವರಂ | ಲೈಟ್ ವೇಟ್ ಕಾಂಜೀವರಂ | ಪೈಥಾನಿ
ಪಠಾಣ್ | ಪಟೋಲಾ | ಕೋಟಾ | ಚಂದೇರಿ ಮಹೇಶ್ವರಿ | ಪೊಂದುರು | ಬಂದೇಜ್ ಬನಾರಸ್
ರಾಜ್‌ಕೋಟ್ ಪಟೋಲಾ | ಟಸ್ಸಾರ್ | ಮಟ್ಕಾ | ಆರ್ಗಂಜ | ಇಕ್ಕತ್ | ಕೈಮಗ್ಗದ ಸೀರೆಗಳು.
Follow us on:
doocreative.com

ಶನಿವಾರ, ಏಪ್ರಿಲ್ 6, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 97 | ಪುಟ 30

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಹಬ್ಬಗಳಲ್ಲಿ ಪಾಲ್ಗೊಳ್ಳುವಿಕೆಯ ಸಂಭ್ರಮವಿರಲಿ

ಆಳ-ಅಗಲ
ರಾಜಕಾರಣ: ಕುಟುಂಬವೇ 'ವ್ಯಾಕರಣ'

ರಿಯಲ್ ಎಸ್ಟೇಟ್ ಷೇರು ಮೌಲ್ಯ ಏರಿಕೆ 14

'ಬಾಲ ರಾಮ'ನ ಪ್ರಭಾವಳಿಯಲ್ಲಿ ದಾಖಲೆಯ ಕನಸು 13

ಸೆನ್ಸೆಕ್ಸ್	ನಿಫ್ಟಿ	₹/$
74,248 ▲	22,513 ▲	83.31 ▲

ಮೀಸಲಾತಿ ಮಿತಿ ರದ್ದತಿಗೆ ತಿದ್ದುಪಡಿ, ಕನಿಷ್ಠ ಕೂಲಿ ₹400ಕ್ಕೆ ಏರಿಕೆ ಸೇರಿ ಹಲವು ಭರವಸೆಗಳು

'ಭಾರತ' ಗೆಲ್ಲಲು 'ಕೈ' ನ್ಯಾಯಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದೆರಡು ಲೋಕಸಭಾ ಚುನಾವಣೆಗಳಲ್ಲಿ ಎರಡಂಕಿ ಗಳಿಸಲು ಏದುಸಿರು ಬಿಟ್ಟಿದ್ದ ಕಾಂಗ್ರೆಸ್ ಪಕ್ಷವು ಈ ಸಲ ಮೂರಂಕಿಗೆ ತಲುಪುವ ಕನಸು ಹೊತ್ತು 'ನ್ಯಾಯ ಪತ್ರ'ವನ್ನು ಶುಕ್ರವಾರ ಬಿಡುಗಡೆ ಮಾಡಿದೆ.

ಮೀಸಲಾತಿಯ ಶೇ 50 ಮಿತಿ ತೆಗೆಯಲು ಸಾಂವಿಧಾನಿಕ ತಿದ್ದುಪಡಿ, ಆರ್ಥಿಕವಾಗಿ ಹಿಂದುಳಿದವರ ಶೇ 10 ಮೀಸಲಾತಿಯು ಎಲ್ಲ ಜಾತಿಗಳಿಗೆ ವಿಸ್ತರಣೆ, ಕನಿಷ್ಠ ಕೂಲಿ ₹400ಕ್ಕೆ ಏರಿಕೆ, ವಿದ್ಯಾರ್ಥಿಗಳ ಸಾಲ ಮನ್ನಾ, ಸಾರ್ವಜನಿಕ ವಲಯದಲ್ಲಿ ಗುತ್ತಿಗೆ ಉದ್ಯೋಗ ರದ್ದುಪಡಿಸುವಂತಹ ಆಮೂಲಾಗ್ರ ಕ್ರಮಗಳನ್ನು ಕೈಗೊಳ್ಳುವುದಾಗಿ ಭರವಸೆ ನೀಡಿದೆ.

ಪ್ರಣಾಳಿಕೆಯನ್ನು ಸೋನಿಯಾ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಹಾಗೂ ರಾಹುಲ್ ಗಾಂಧಿ ಬಿಡುಗಡೆ ಮಾಡಿದರು

ತನ್ನ ಪ್ರಣಾಳಿಕೆಗೆ ನ್ಯಾಯ ಪತ್ರ ಎಂದು ಹೆಸರಿಟ್ಟಿರುವ ಕಾಂಗ್ರೆಸ್, 25 ಗ್ಯಾರಂಟಿಗಳನ್ನು ಘೋಷಿಸಿದೆ. ಐದು ಅಂಶಗಳ ಮೇಲೆ ಗಮನ ಕೇಂದ್ರೀಕರಿಸಿ ಭರಪೂರ ಭರವಸೆಗಳನ್ನು ನೀಡಿದೆ. 'ಪಂಚ ನ್ಯಾಯಗಳು' ಅಥವಾ 'ನ್ಯಾಯದ ಸ್ತಂಭಗಳು' ಮೂಲಕ ಯುವಜನರು, ಕೃಷಿಕರು, ಮಹಿಳೆಯರು, ಕಾರ್ಮಿಕರು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸಿ ವೇಗದ ಬೆಳವಣಿಗೆ, ಸಮಾನ ಅಭಿವೃದ್ಧಿ ಹಾಗೂ ಎಲ್ಲರಿಗೂ ನ್ಯಾಯ ಒದಗಿಸುವತ್ತ ಗಮನ ಹರಿಸಿದೆ.

8ನೇ ಪುಟ ನೋಡಿ

ಜಾತಿ ಗಣತಿಯಿಂದ ಮಹಾಲಕ್ಷ್ಮಿ ತನಕ

- ರಾಷ್ಟ್ರವ್ಯಾಪಿ ಸಾಮಾಜಿಕ– ಆರ್ಥಿಕ ಮತ್ತು ಜಾತಿ ಗಣತಿ
- ಆರ್ಥಿಕವಾಗಿ ದುರ್ಬಲ ವರ್ಗದವರಿಗೆ ನೀಡುತ್ತಿರುವ ಶೇ 10 ಮೀಸಲಾತಿ ಎಲ್ಲ ಜಾತಿ ಹಾಗೂ ಸಮುದಾಯಗಳಿಗೆ ವಿಸ್ತರಣೆ
- ಕೇಂದ್ರ ಸರ್ಕಾರದ ವಿವಿಧ ಇಲಾಖೆಗಳ 30 ಲಕ್ಷ ಖಾಲಿ ಹುದ್ದೆಗಳ ಭರ್ತಿ
- ರಾಜಸ್ಥಾನದ ಮಾದರಿಯಲ್ಲಿ ₹25 ಲಕ್ಷದ ವರೆಗೆ ನಗದು ರಹಿತ ವಿಮಾ ಯೋಜನೆ ದೇಶದಾದ್ಯಂತ ಜಾರಿ
- ಅಗ್ನಿಪಥ ಯೋಜನೆ ರದ್ದು
- ಮಹಾಲಕ್ಷ್ಮಿ ಯೋಜನೆಯ ಮೂಲಕ ಪ್ರತಿ ಬಡ ಕುಟುಂಬಕ್ಕೆ ವಾರ್ಷಿಕ ₹1 ಲಕ್ಷ ನೆರವು
- 25 ವರ್ಷದೊಳಗಿನ ಪದವೀಧರರು ಹಾಗೂ ಡಿಪ್ಲೊಮಾದಾರರಿಗೆ ಒಂದು ವರ್ಷ ₹1 ಲಕ್ಷ 'ಶಿಷ್ಯ ವೇತನ'. ಅದಕ್ಕಾಗಿ ಕಾಯ್ದೆ ಜಾರಿ
- ರೈತರ ಸಾಲ ಮನ್ನಾ ಹಾಗೂ ಎಂಎಸ್‌ಪಿಯ ಕಾನೂನುಬದ್ಧ ಗ್ಯಾರಂಟಿ
- ಕೇಂದ್ರ ಸರ್ಕಾರದ ಉದ್ಯೋಗದಲ್ಲಿ ಮಹಿಳೆಯರಿಗೆ ಶೇ 50 ಮೀಸಲಾತಿ
- ಉಚಿತ ಆರೋಗ್ಯ ವ್ಯವಸ್ಥೆ

> ಪ್ರಣಾಳಿಕೆಯನ್ನು ಪ್ರತಿಯೊಬ್ಬರೂ ಸೂಕ್ಷ್ಮವಾಗಿ ಗಮನಿಸಬೇಕು. ಅದರಲ್ಲಿ ನಮ್ಮ ದೇಶದ 'ಶಾಂದಾರ್ ತಸ್ವೀರ್"ಅನ್ನು (ಸುಂದರ ಚಿತ್ರ) ನೀವು ನೋಡಬಹುದು
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

> ನಮ್ಮ ಪ್ರಣಾಳಿಕೆಯು ಜನರ ಧ್ವನಿಯನ್ನು ಪ್ರತಿನಿಧಿಸುತ್ತದೆ. ಜನರ ಅಭಿಪ್ರಾಯಗಳು ಮತ್ತು ಅವರ ಸಲಹೆಗಳನ್ನು ಗಣನೆಗೆ ತೆಗೆದುಕೊಂಡು ಸಿದ್ಧಪಡಿಸಲಾಗಿದೆ
> **ರಾಹುಲ್ ಗಾಂಧಿ,** ಕಾಂಗ್ರೆಸ್ ನಾಯಕ

> ಕಾಂಗ್ರೆಸ್ ಪ್ರಣಾಳಿಕೆಯು ಸುಳ್ಳಿನ ಕಂತೆಯಾಗಿದೆ. ಮತದಾರರಲ್ಲಿ ಗೊಂದಲ ಮೂಡಿಸಲು ಇದನ್ನು ಬಿಡುಗಡೆ ಮಾಡಲಾಗಿದೆ
> **ಸುಧಾಂಶು ತ್ರಿವೇದಿ,** ಬಿಜೆಪಿ ರಾಷ್ಟ್ರೀಯ ವಕ್ತಾರ

ಚಿನಕುರಳಿ

ಪ್ರಕಾಶ್ ಶೆಟ್ಟಿ

ಶಾಖಾಘಾತ : ನಿರ್ವಹಣೆಗೆ ಸಿದ್ಧತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ತಾಪಮಾನ ಹೆಚ್ಚುತ್ತಿದೆ. ಶಾಖಾಘಾತ ಸೇರಿದಂತೆ ಯಾವುದೇ ಪರಿಸ್ಥಿತಿ ಎದುರಿಸಲು ಸನ್ನದ್ಧವಾಗಿರಬೇಕು' ಎಂದು ಆರೋಗ್ಯ ಇಲಾಖೆಯು ಅಧಿಕಾರಿಗಳಿಗೆ ಸೂಚಿಸಿದೆ.

ಬಿಸಿಲು ಹೆಚ್ಚಳಕ್ಕೆ ಸಂಬಂಧಿಸಿದ ಅನಾರೋಗ್ಯ ಪ್ರಕರಣ ನಿರ್ವಹಿಸಲು 'ಶಾಖಾಘಾತ ನಿರ್ವಹಣಾ ಕೊಠಡಿ' ಆರಂಭಿಸಲಾಗಿದೆ. ಚಿಕಿತ್ಸೆಗೆ ಜಿಲ್ಲಾ ಆಸ್ಪತ್ರೆಗಳಲ್ಲಿ ತಲಾ ಐದು, ತಾಲ್ಲೂಕು ಆಸ್ಪತ್ರೆಗಳಲ್ಲಿ ತಲಾ ಎರಡು ಹಾಸಿಗೆಗಳನ್ನು ಮೀಸಲು ಇಡಲಾಗಿದೆ.

'ಬಾಗಲಕೋಟೆ, ಕಲಬುರಗಿಯಲ್ಲಿ ತಲಾ ಒಬ್ಬರು ಶಾಖಾಘಾತದಿಂದ ಮೃತಪಟ್ಟಿದ್ದಾರೆಂದು ಶಂಕಿಸಲಾಗಿತ್ತು. ಇಬ್ಬರು ಬೇರೆ ಕಾಯಿಲೆಯಿಂದ ಮೃತಪಟ್ಟಿರುವುದಾಗಿ ಆರೋಗ್ಯ ಇಲಾಖೆ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ. ರಾಜ್ಯದಲ್ಲಿ ಶಾಖಾಘಾತದಿಂದ ಯಾವುದೇ ಸಾವು ಸಂಭವಿಸಿಲ್ಲ. ಶಾಖಾಘಾತಕ್ಕೆ ಸಂಬಂಧಿಸಿದ ಪ್ರಕರಣಗಳು ಕಂಡು ಬಂದರೆ ಕೇಂದ್ರ ಸರ್ಕಾರ ನೀಡಿರುವ ಸೂಚನೆಗಳನ್ನು ಪಾಲಿಸುವಂತೆ ತಿಳಿಸಲಾಗಿದೆ' ಎಂದು ಆರೋಗ್ಯ ಇಲಾಖೆ ಆಯುಕ್ತ ಡಿ.ರಂದೀಪ್ ತಿಳಿಸಿದರು.

8ನೇ ಪುಟ ನೋಡಿ

ಗರಿಷ್ಠ ತಾಪಮಾನ (ಡಿಗ್ರಿ ಸೆಲ್ಸಿಯಸ್‌ನಲ್ಲಿ) ದಾಖಲಾದ ಜಿಲ್ಲೆಗಳು*

42.1ಕ್ಕಿಂತ ಅಧಿಕ	ರಾಯಚೂರು, ಕಲಬುರಗಿ, ಯಾದಗಿರಿ, ವಿಜಯಪುರ, ಬಳ್ಳಾರಿ, ಬಾಗಲಕೋಟೆ, ಬೆಳಗಾವಿ, ಬೀದರ್, ಕೊಪ್ಪಳ, ಗದಗ, ತುಮಕೂರು, ಉತ್ತರ ಕನ್ನಡ, ಮೈಸೂರು
40.1 ರಿಂದ 42	ವಿಜಯನಗರ, ಶಿವಮೊಗ್ಗ, ಚಿಕ್ಕಬಳ್ಳಾಪುರ, ಚಾಮರಾಜನಗರ, ಚಿತ್ರದುರ್ಗ, ಚಿಕ್ಕಮಗಳೂರು, ರಾಮನಗರ, ಮಂಡ್ಯ, ಬೆಂಗಳೂರು ನಗರ ಹಾಗೂ ಗ್ರಾಮಾಂತರ, ಹಾವೇರಿ, ಧಾರವಾಡ, ದಾವಣಗೆರೆ
38.1ರಿಂದ 40	ದಕ್ಷಿಣ ಕನ್ನಡ, ಹಾಸನ, ಉಡುಪಿ, ಕೋಲಾರ
36.1 ರಿಂದ 38	ಕೊಡಗು

*ಏ.5ರ ಬೆಳಿಗ್ಗೆ 8ರಿಂದ ಮಧ್ಯಾಹ್ನ 3.30ರ ವರೆಗಿನ ಉಷ್ಣಾಂಶ

(ಆಧಾರ: ಕರ್ನಾಟಕ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ)

ವಾರದಲ್ಲಿ ವರದಿ ನೀಡಲು ಜಲಮಂಡಳಿ ಅಧ್ಯಕ್ಷ ಡಾ. ರಾಮ್ ಪ್ರಸಾತ್ ಮನೋಹರ್ ಸೂಚನೆ

ಅನಧಿಕೃತ ಸಂಪರ್ಕ: ಪಿ.ಜಿ. ವಿರುದ್ಧ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ ನೀರಿನ ಸಂಪರ್ಕವನ್ನು ಅನಧಿಕೃತವಾಗಿ ಹೊಂದಿರುವ ಪೇಯಿಂಗ್ ಗೆಸ್ಟ್ (ಪಿಜಿ) ಕಟ್ಟಡಗಳ ವಿರುದ್ಧ ಕ್ರಮ ಕೈಗೊಂಡು, ವಾರದೊಳಗೆ ವರದಿ ಸಲ್ಲಿಸುವಂತೆ ಬೆಂಗಳೂರು ಜಲಮಂಡಳಿ ಅಧ್ಯಕ್ಷ ಡಾ. ರಾಮ್‌ಪ್ರಸಾತ್ ಮನೋಹರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಶುಕ್ರವಾರ ನಡೆದ ನೇರ ಫೋನ್ ಇನ್ ಕಾರ್ಯಕ್ರಮದಲ್ಲಿ ಕಾಡುಗೋಡಿ ನಿವಾಸಿಯೊಬ್ಬರು ಪಿಜಿಗಳು ಅನಧಿಕೃತವಾಗಿ ನೀರಿನ ಸಂಪರ್ಕ ಪಡೆದಿರುವುದಾಗಿ ತಿಳಿಸಿದರು. ಅಂಬೇಡ್ಕರ್ ನಗರದಲ್ಲಿ ಕಾವೇರಿ ನೀರಿನ ಸಂಪರ್ಕ, ಒಳಚರಂಡಿ ಸಂಪರ್ಕವನ್ನು ಅನಧಿಕೃತವಾಗಿ ಪಡೆದಿರುವ 43 ಮಂದಿ, ಪಿಜಿಗಳನ್ನು ನಡೆಸುತ್ತಿದ್ದಾರೆ ಎಂದು ದೂರಿದರು.

ಇದಕ್ಕೆ ಸ್ಪಂದಿಸಿದ ಜಲಮಂಡಳಿ ಅಧ್ಯಕ್ಷರು, 'ನಗರದ ಹಲವು ಭಾಗಗಳಿಂದ ದೂರುಗಳು ಬರುತ್ತಿವೆ. ವಾಣಿಜ್ಯ ಉದ್ದೇಶದ ಸಂಪರ್ಕ ಪಡೆದುಕೊಂಡು ಪಿಜಿಗಳನ್ನು ನಡೆಸುವುದಕ್ಕೆ ಯಾವುದೇ ಸಮಸ್ಯೆ ಇಲ್ಲ. ಆದರೆ, ಅನಧಿಕೃತವಾಗಿ ಸಂಪರ್ಕ ಪಡೆದುಕೊಳ್ಳುವುದು, ಆ ಪ್ರದೇಶಗಳಲ್ಲಿ ವಾಣಿಜ್ಯ ಚಟುವಟಿಕೆಗಳನ್ನು ನಡೆಸುವುದು ಸರಿಯಲ್ಲ. ಈ ಬಗ್ಗೆ ಅಧಿಕಾರಿಗಳು ಕೂಡಲೇ ಕಾರ್ಯಾಚರಣೆ ನಡೆಸಿ, ಕ್ರಮ ಕೈಗೊಂಡ ವರದಿಯನ್ನು ಒಂದು ವಾರದಲ್ಲಿ ನೀಡಬೇಕು' ಎಂದು ಸೂಚಿಸಿದರು.

ಫೋನ್ ಇನ್ ಕಾರ್ಯಕ್ರಮದಲ್ಲಿ ದಾಖಲಾದ ದೂರುಗಳ ಸಮಸ್ಯೆಗಳನ್ನು ಈಡೇರಿಸಲು ಅಧಿಕಾರಿಗಳು ಕೂಡಲೇ ಕ್ರಮ ಕೈಗೊಳ್ಳಬೇಕು. ಸಾರ್ವಜನಿಕ ಸಂಪರ್ಕಾಧಿಕಾರಿ ದೂರುಗಳನ್ನು ಲಿಖಿತ ರೂಪದಲ್ಲಿ ಸಂಬಂಧಪಟ್ಟ ಮುಖ್ಯ ಎಂಜಿನಿಯರ್‌ಗೆ ರವಾನಿಸಬೇಕು. ಕ್ರಮ ಕೈಗೊಂಡ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಮುಂದಿನ ವಾರದೊಳಗೆ ವರದಿಯನ್ನು ಸಲ್ಲಿಸಬೇಕು ಎಂದರು.

ಮಾಗಡಿ ರಸ್ತೆ ಹಾರೋಹಳ್ಳಿ ಬಳಿಯ ತುಂಗಾಭದ್ರಾ ಬಡಾವಣೆ ನಿವಾಸಿ ವಿದ್ಯಾ, 'ಜಲಮಂಡಳಿಯ ಕೊಳವೆ ಬಾವಿಯಲ್ಲಿ ನೀರು ಕಡಿಮೆ ಪ್ರಮಾಣದಲ್ಲಿ ಬರುತ್ತಿದೆ. ಇನ್ನಷ್ಟು ಆಳಕ್ಕೆ ಕೊರೆಯಿಸಿದಲ್ಲಿ ನೀರಿನ ಪ್ರಮಾಣ ಹೆಚ್ಚಿಗೆಯಾಗುತ್ತದೆ' ಎಂದು ಹೇಳಿದರು. ಇದರ ಬಗ್ಗೆ ಕ್ರಮ ಕೈಗೊಳ್ಳಲು ಅಧಿಕಾರಿಗಳಿಗೆ ಸೂಚಿಸಿದರು.

ವಿಲ್ಸನ್ ಗಾರ್ಡ್ ಬಳಿಯ ಬಿಟಿಎಸ್ ರಸ್ತೆಯ ಬಳಿ ಜಲಮಂಡಳಿ ಪೈಪ್‌ನಿಂದ ನೀರು ಸೋರಿಕೆಯಾಗುತ್ತಿದೆ ಎಂದು ವೀಣಾ ಎಂಬುವರು ದೂರು ನೀಡಿದರು.

5ನೇ ಹಂತ: ಪೊಲೀಸರೊಂದಿಗೆ ಚರ್ಚೆ

'ಕಾವೇರಿ 5ನೇ ಹಂತದ ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಲು ಜಲಮಂಡಳಿಗೆ ಅಗತ್ಯ ಸಹಕಾರ ನೀಡುವುದಾಗಿ ಬೆಂಗಳೂರು ಸಂಚಾರ ಪೊಲೀಸರು ಭರವಸೆ ನೀಡಿದ್ದಾರೆ' ಎಂದು ರಾಮ್‌ಪ್ರಸಾತ್ ಮನೋಹರ್ ತಿಳಿಸಿದರು.

ಬೆಂಗಳೂರು ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್ ಅವರೊಂದಿಗೆ ಸಭೆ ನಡೆಸಿದ್ದು, ನಗರದ ವಿವಿಧ ಭಾಗಗಳಲ್ಲಿ ನಡೆಯುತ್ತಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಲು ಸಂಚಾರ ಪೊಲೀಸರು ನೆರವು ನೀಡಲಿದ್ದಾರೆ. ರಸ್ತೆಗಳಲ್ಲಿ ಕಾಮಗಾರಿಗಳಿಗೆ ತಡೆಯಾಗದಂತೆ ಕ್ರಮ ಕೈಗೊಳ್ಳಲಿದ್ದಾರೆ ಎಂದರು.

ಏಪ್ರಿಲ್ ಅಂತ್ಯಕ್ಕೆ ಪೈಪ್‌ಲೈನ್ ಅಳವಡಿಕೆ ಕಾರ್ಯವನ್ನು ಪೂರ್ಣಗೊಳಿಸು-ವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ತುಂಗಭದ್ರಾ ಬಡಾವಣೆಯಲ್ಲಿ ಕೊಳವೆಬಾವಿಯನ್ನು ಮತ್ತಷ್ಟು ಆಳಕ್ಕೆ ಕೊರೆದು, ಜಲಮಂಡಳಿ ಸಿಬ್ಬಂದಿ ಹೆಚ್ಚಿನ ಪೈಪ್ ಅಳವಡಿಸಿದರು

Range	65 OLED TV	55 LED TV	Side-by-Side Refrigerator	Frost Free Refrigerator	Front Load Washing Machine	Microwave Oven	Air Conditioner
Discount (up to)	₹98,160	₹19,000	₹41,010	₹25,000	₹10,000	₹5,000	20%
Exchange Bonus (up to)	₹5,000	₹3,000	₹5,000	₹3,000	₹3,000	₹2,000	₹4,000
Instant Cash Back (up to)	₹12,500	₹7,000	₹9,000	₹6,000	₹7,000	₹2,000	₹3,000
Gift / Combi Benefits worth (up to)	₹8,000	₹5,000	₹2,500	₹2,000	₹2,000	₹2,000	₹5,200#
Total Harshotsava Benefits (up to)	₹1,23,660	₹34,000	₹57,510	₹36,000	₹22,000	₹11,000	₹12,200

ಸುದ್ದಿ 2 ನಿಮಿಷ

ರಿಲಯನ್ಸ್‌ನಿಂದ ರಿಯಾಯಿತಿ ಮಾರಾಟ ಇಂದಿನಿಂದ

ಬೆಂಗಳೂರು: ರಿಲಯನ್ಸ್ ಡಿಜಿಟಲ್‌ನಿಂದ ಏಪ್ರಿಲ್ 6ರಿಂದ 15ರವರೆಗೆ 'ಡಿಜಿಟಲ್ ಡಿಸ್ಕೌಂಟ್ ಸೇಲ್' ಆರಂಭಿಸಲಾಗಿದೆ.

ರಿಲಯನ್ಸ್ ಡಿಜಿಟಲ್ ಸ್ಟೋರ್ ಮತ್ತು ಮೈ ಜಿಯೊ ಸ್ಟೋರ್‌ಗಳಲ್ಲಿ ಗ್ರಾಹಕರಿಗೆ ಈ ಸೌಲಭ್ಯ ದೊರೆಯಲಿದೆ. ಪ್ರಮುಖ ಬ್ಯಾಂಕ್‌ನ ಕಾರ್ಡ್‌ಗಳ ಮೇಲೆ ಶೇ 10ರಷ್ಟು ರಿಯಾಯಿತಿ ಸೌಲಭ್ಯ ಪಡೆಯಬಹುದಾಗಿದೆ ಅಥವಾ ಸಾಲಗಳ ಮೇಲೆ ₹15 ಸಾವಿರದವರೆಗೆ ಕ್ಯಾಶ್ ಬ್ಯಾಕ್ ಪಡೆಯಲು ಅವಕಾಶ ಕಲ್ಪಿಸಲಾಗಿದೆ ಎಂದು ಕಂಪನಿ ತಿಳಿಸಿದೆ.

ಅಲ್ಲದೆ, ಗ್ರಾಹಕರು ತಮ್ಮ ನೆಚ್ಚಿನ ಎಲೆಕ್ಟ್ರಾನಿಕ್ಸ್ ಉಪಕರಣಗಳ ಮೇಲೆ ಆಕರ್ಷಕ ರಿಯಾಯಿತಿಯನ್ನೂ ಪಡೆಯಬಹುದಾಗಿದೆ ಎಂದು ತಿಳಿಸಿದೆ.

ಕೆನರಾ ಬ್ಯಾಂಕ್‌ನಿಂದ ಹೊಸ ಯೋಜನೆ ಪ್ರಕಟ

ಬೆಂಗಳೂರು: ಸರ್ಕಾರಿ ಸ್ವಾಮ್ಯದ ಕೆನರಾ ಬ್ಯಾಂಕ್ ತನ್ನ ಗ್ರಾಹಕರಿಗೆ ಹೆಚ್ಚಿನ ಅನುಕೂಲ ಕಲ್ಪಿಸಲು ಹೊಸ ಯೋಜನೆಗಳನ್ನು ಪ್ರಕಟಿಸಿದೆ.

ನಗರದಲ್ಲಿರುವ ಬ್ಯಾಂಕ್‌ನ ಪ್ರಧಾನ ಕಚೇರಿಯಲ್ಲಿ ಇತ್ತೀಚೆಗೆ ನಡೆದ ಸಮಾರಂಭದಲ್ಲಿ ಆರೋಗ್ಯಕ್ಕೆ ಮೀಸಲಾದ ಕೆನರಾ ಹೀಲ್ ಸಾಲ, ಕೆನರಾ ಏಂಜೆಲ್, ಕ್ಯಾನ್ಸರ್ ಕೇರ್ ಪಾಲಿಸಿ, ವೈಯಕ್ತಿಕ ಸಾಲ, ಕೆನರಾ ರೆಡಿಕ್ಯಾಶ್ ಸೇರಿದಂತೆ ವಿವಿಧ ಯೋಜನೆಗಳಿಗೆ ಚಾಲನೆ ನೀಡಲಾಯಿತು.

ಜೊತೆಗೆ ಬಳಕೆದಾರರಿಗೆ ಕೆನರಾ ಯುಪಿಐ ಸೇವೆ, ಸಿಬ್ಬಂದಿಗೆ ಎಚ್‌ಆರ್‌ಎಂಎಸ್ ಮೊಬೈಲ್ ಅಪ್ಲಿಕೇಷನ್ ಅನ್ನು ಅನಾವರಣಗೊಳಿಸಲಾಯಿತು.

ರಿಸರ್ವ್ ಬ್ಯಾಂಕ್‌ನ ಇನ್ನೋವೇಷನ್ ಹಬ್‌ನ ಸಿಇಒ ರಾಜೇಶ್ ಬನ್ಸಾಲ್ ಅವರು 'ಕೆನರಾ ಎಸ್‌ಎಚ್‌ಜಿ ಇ-ಮನಿ' ಹೆಸರಿನ ಡಿಜಿಟಲ್ ಎಸ್‌ಎಚ್‌ಜಿ ಯೋಜನೆಗೆ ಚಾಲನೆ ನೀಡಿದರು. ಈ ಕುರಿತ ಪತ್ರವನ್ನು ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಕೆ. ಸತ್ಯನಾರಾಯಣ ರಾಜು ಅವರೊಂದಿಗೆ ವಿನಿಮಯ ಮಾಡಿಕೊಂಡರು.

ಬ್ಯಾಂಕ್‌ನ ಕಾರ್ಯ ನಿರ್ವಾಹಕ ನಿರ್ದೇಶಕರಾದ ದೇಬಶಿಶ್ ಮುಖರ್ಜಿ, ಅಶೋಕ್ ಚಂದ್ರ, ಹರ್ದೀಪ್ ಸಿಂಗ್ ಅಹ್ಲುವಾಲಿಯಾ, ಭವೇಂದ್ರ ಕುಮಾರ್ ಹಾಜರಿದ್ದರು.

'ಮಹಿಳೆಗೆ ಕಾಲರಾ ದೃಢಪಟ್ಟಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಲ್ಲೇಶ್ವರದ 27 ವರ್ಷ ವಯಸ್ಸಿನ ಮಹಿಳೆಯೊಬ್ಬರು ಕಾಲರಾ ಲಕ್ಷಣಗಳೊಂದಿಗೆ ಖಾಸಗಿ ಆಸ್ಪತ್ರೆಯಲ್ಲಿ ಮಾರ್ಚ್ 30ರಂದು ದಾಖಲಾಗಿದ್ದರು. ವೈದ್ಯಕೀಯ ವರದಿ ಬಂದಿದ್ದು ಕಾಲರಾ ಇಲ್ಲದಿರುವುದು ದೃಢಪಟ್ಟಿದೆ ಎಂದು ಆರೋಗ್ಯ ಇಲಾಖೆ ಆಯುಕ್ತ ರಂದೀಪ್ ಅವರು ತಿಳಿಸಿದರು.

'ಮಹಿಳೆ ವಾಸವಿದ್ದ ಪಿ.ಜಿಯಲ್ಲಿ 32 ಮಹಿಳೆಯರು ಇದ್ದಾರೆ. ಇವರ್‍ಯಾರಿಗೂ ತೊಂದರೆ ಕಾಣಿಸಿಕೊಂಡಿಲ್ಲ' ಎಂದು ಶುಕ್ರವಾರ ಮಾಹಿತಿ ನೀಡಿದರು.

'ಖಾಸಗಿ ಆಸ್ಪತ್ರೆಯ ವೈದ್ಯರ ಪ್ರಕಾರ, ಮಹಿಳೆಯಲ್ಲಿ ಕಾಲರಾ ಲಕ್ಷಣಗಳು ಕಂಡು ಬಂದಿವೆ. ಈ ಕುರಿತು ಪ್ರಾಥಮಿಕ ಮಾಹಿತಿಯನ್ನು ಹತ್ತಿರದ ನಗರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ತಿಳಿಸಿರುತ್ತಾರೆ. ಆರಂಭಿಕ ಹಂತದ ಪರೀಕ್ಷೆಗಳಲ್ಲಿ ಕಾಲರಾ ಇರುವ ಬಗ್ಗೆ ಪಾಸಿಟಿವ್ ವರದಿ ಬಂದಿದ್ದು, ನಂತರ ಪ್ರಯೋಗಾಲಯದ ಪರೀಕ್ಷೆಯಲ್ಲಿ (ಮಲ ಮಾದರಿ ಪರೀಕ್ಷೆ) ನೆಗೆಟಿವ್ ವರದಿ ಬಂದಿರುತ್ತದೆ. ಮಹಿಳೆಯು ಇತ್ತೀಚಿನ ದಿನಗಳಲ್ಲಿ ಯಾವುದೇ ರೀತಿಯ ಪ್ರಯಾಣ, ಪೀಡಿತ ಪ್ರದೇಶಗಳಿಗೆ ಭೇಟಿ ಹಾಗೂ ಹೊರಗಿನ ಆಹಾರ ಸೇವನೆ ಮಾಡಿರುವುದಿಲ್ಲ' ಎಂದು ಬಿಬಿಎಂಪಿ ಆರೋಗ್ಯಾಧಿಕಾರಿ ತಿಳಿಸಿದ್ದಾರೆ.

ಮಹಿಳೆಯು ವಾಸವಾಗಿರುವ ಸ್ಥಳದಿಂದ ಸುತ್ತಮುತ್ತಲಿನ 165 ಮನೆಗಳಿಗೆ ಭೇಟಿ ನೀಡಿದ್ದ ಪಾಲಿಕೆಯ ಆರೋಗ್ಯ ತಂಡ ಸಮೀಕ್ಷೆ ನಡೆಸಿ, ಸಾರ್ವಜನಿಕರಿಗೆ ರೋಗ ಹರಡುವ ವಿಧಾನಗಳು, ನೈರ್ಮಲ್ಯದ ಪ್ರಾಮುಖ್ಯ, ಶುದ್ಧ ನೀರಿನ ಬಳಕೆ, ಕೈಗಳನ್ನು ಸ್ವಚ್ಛಗೊಳಿಸುವ ಬಗ್ಗೆ ಅರಿವು ಮೂಡಿಸಿ ಆರೋಗ್ಯ ಶಿಕ್ಷಣ ನೀಡಿದೆ. ಇಲ್ಲಿನ ನಿವಾಸಿಗಳಲ್ಲಿ ಕಾಲರಾ ರೋಗದ ಲಕ್ಷಣಗಳು ವರದಿ ಆಗಿಲ್ಲ.

ನೀರಿನ 10 ಮಾದರಿಗಳನ್ನು ಸೋಂಕಿನ ಶಂಕಿತ ಪ್ರದೇಶದಿಂದ ಸಂಗ್ರಹಿಸಿ ಪರೀಕ್ಷೆಗಾಗಿ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ರೋಗ ಪ್ರಸರಣ ತಡೆಗಟ್ಟುವುದಕ್ಕಾಗಿ ವಿಧಾನಸಭಾ ಕ್ಷೇತ್ರವಾರು ಕ್ಷಿಪ್ರ ಪ್ರತಿಕ್ರಿಯೆ ತಂಡವನ್ನು ರಚಿಸಲು ಸಂಬಂಧಪಟ್ಟ ಎಲ್ಲ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಮುಖ್ಯ ಆರೋಗ್ಯಾಧಿಕಾರಿ ಡಾ. ಸೈಯದ್ ಸಿರಾಜುದ್ದೀನ್ ಮದನಿ ತಿಳಿಸಿದ್ದಾರೆ.

'ಪಾಲಿಕೆ ವ್ಯಾಪ್ತಿಯ ಎಲ್ಲ ಖಾಸಗಿ ಆಸ್ಪತ್ರೆ, ಲ್ಯಾಬ್‌ಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಸಮುದಾಯ ಆರೋಗ್ಯ ಕೇಂದ್ರ, ತಾಲ್ಲೂಕು ಆಸ್ಪತ್ರೆ, ಜನರಲ್ ಆಸ್ಪತ್ರೆ, ವೈದ್ಯಕೀಯ ಶಿಕ್ಷಣ ಅಡಿಯಲ್ಲಿ ಬರುವ ಆಸ್ಪತ್ರೆಗಳು ಶಂಕಿತ ಪ್ರಕರಣಗಳು ವರದಿಯಾದಲ್ಲಿ ಸರ್ಕಾರ ನಿಗದಿಪಡಿಸಿರುವ ಐಎಚ್‌ಐಪಿ ತಂತ್ರಾಂಶದಲ್ಲಿ ಕಡ್ಡಾಯವಾಗಿ ವರದಿ ಮಾಡುವಂತೆ ಸೂಚಿಸಲಾಗಿದೆ ಎಂದು ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ವಿಕಾಸ್ ಕಿಶೋರ್ ಸುರಳ್ಕರ್ ಮಾಹಿತಿ ನೀಡಿದ್ದಾರೆ.

ರೂಪಾ, ನಿಂಗರಾಜ ಚಿತ್ತಣ್ಣರಿಗೆ ಪ್ರಕಾಶಕರ ಸಂಘದ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ರೂಪಾ

ನಿಂಗರಾಜ ಚಿತ್ತಣ್ಣ

ಬೆಂಗಳೂರು: ಕರ್ನಾಟಕ ಪ್ರಕಾಶಕರ ಸಂಘ ನೀಡುವ 2023ನೇ ಸಾಲಿನ 'ಎಂ.ಗೋಪಾಲಕೃಷ್ಣ ಅಡಿಗ ಪುಸ್ತಕ ಪರಿಚಾರಕ ಪ್ರಶಸ್ತಿ'ಗೆ ಮೈಸೂರಿನ ಚಿಂತನ ಚಿತ್ತಾರ ಪ್ರಕಾಶನದ ನಿಂಗರಾಜ ಚಿತ್ತಣ್ಣ, 'ನಂಜನಗೂಡು ತಿರುಮಲಾಂಬ ಪ್ರಶಸ್ತಿ'ಗೆ ರೂಪಾ ಮತ್ತೀಕೆರೆ ಆಯ್ಕೆ ಆಗಿದ್ದಾರೆ.

ಪ್ರಶಸ್ತಿಯು ತಲಾ ₹15 ಸಾವಿರ ನಗದು ಹಾಗೂ ಫಲಕ ಒಳಗೊಂಡಿದೆ.

ಇದೇ 23ರಂದು ಬೆಂಗಳೂರಿನ ಬಿಎಂಶ್ರೀ ಪ್ರತಿಷ್ಠಾನದ ಎಂ.ವಿ.ಸಿ. ಸಭಾಂಗಣದಲ್ಲಿ ನಡೆಯಲಿರುವ 'ವಿಶ್ವ ಪುಸ್ತಕ ದಿನ' ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘದ ಜಂಟಿ ಕಾರ್ಯದರ್ಶಿ ಸೃಷ್ಟಿ ನಾಗೇಶ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾ.ರಾ. ಗೋವಿಂದು, ಪ್ರವೀಣ್ ಕುಮಾರ್ ಶೆಟ್ಟಿಗೆ 'ಕುವೆಂಪು ಸಿರಿಗನ್ನಡ' ಪ್ರಶಸ್ತಿ

ಸಾ.ರಾ. ಗೋವಿಂದು


ಪ್ರವೀಣ್ ಕುಮಾರ್ ಶೆಟ್ಟಿ

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ 2024ರ 'ಕುವೆಂಪು ಸಿರಿಗನ್ನಡ ದತ್ತಿ' ಪ್ರಶಸ್ತಿಗೆ ಕನ್ನಡ ಹೋರಾಟಗಾರರಾದ ಸಾ.ರಾ.ಗೋವಿಂದು ಮತ್ತು ಪ್ರವೀಣ್ ಕುಮಾರ್ ಶೆಟ್ಟಿಯವರನ್ನು ಆಯ್ಕೆ ಮಾಡಲಾಗಿದೆ.

ಸಾ.ರಾ. ಗೋವಿಂದು ಚಲನಚಿತ್ರ ರಂಗದಲ್ಲಿಯೂ ಸಕ್ರಿಯವಾಗಿದ್ದರು. 18ಕ್ಕೂ ಹೆಚ್ಚು ಚಿತ್ರಗಳನ್ನು ನಿರ್ಮಿಸಿದ್ದಾರೆ. ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷರಾಗಿ, ರಾಜ್‌ಕುಮಾರ್ ಅಭಿಮಾನಿಗಳ ಸಂಘದ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಿದ್ದಾರೆ. ಗೋಕಾಕ್ ಚಳವಳಿಯಲ್ಲಿ ಸಕ್ರಿಯರಾಗಿ-ದ್ದರು. ಪ್ರವೀಣ್ ಕುಮಾರ್ ಶೆಟ್ಟಿ ಕನ್ನಡ ಪರ ಹೋರಾಟಗಳಲ್ಲಿ ಸಕ್ರಿಯರಾಗಿದ್ದು, ಕನ್ನಡ ರಕ್ಷಣಾ ವೇದಿಕೆ ಪ್ರವೀಣ್ ಶೆಟ್ಟಿ ಬಣದ ಅಧ್ಯಕ್ಷರಾಗಿದ್ದಾರೆ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಮಾರುಕಟ್ಟೆಗೆ ಬಾರದ ಜನ • ವಹಿವಾಟಿಗೆ ಹೊಡೆತ ನೀಡಿದ ಲೋಕಸಭಾ ಚುನಾವಣೆ

ಬಿಸಿಲ ಧಗೆ: ವ್ಯಾಪಾರಕ್ಕೆ ತಟ್ಟಿದ ಬಿಸಿ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: ದಿನದಿಂದ ದಿನಕ್ಕೆ ಏರುತ್ತಿರುವ ಬಿಸಿಲಿನ ಧಗೆ. ಮನೆಯಿಂದ ಹೊರಗೆ ಬಾರದ ಜನ. ಗ್ರಾಹಕರು ಇಲ್ಲದೇ ಭಣಗುಡುತ್ತಿರುವ ಮಾರುಕಟ್ಟೆಗಳು. ವ್ಯಾಪಾರ ತಗ್ಗಿದ್ದರಿಂದ ಆರ್ಥಿಕ ನಷ್ಟ ಅನುಭವಿಸುತ್ತಿರುವ ಮಳಿಗೆಗಳ ಮಾಲೀಕರು...

ನಗರದಲ್ಲಿ ಬಿಸಿಲಿನ ಪ್ರಮಾಣ ಹೆಚ್ಚಾಗಿದ್ದರಿಂದ ಜನರು ಮಾರುಕಟ್ಟೆಯತ್ತ ಸುಳಿಯುತ್ತಿಲ್ಲ. ಇದರಿಂದಾಗಿ ವ್ಯಾಪಾರ–ವಹಿವಾಟು ಶೇ 50 ರಿಂದ ಶೇ 70ರಷ್ಟು ಕುಸಿದಿದ್ದು, ವ್ಯಾಪಾರಿಗಳು ಗ್ರಾಹಕರಿಗಾಗಿ ಚಾತಕ ಪಕ್ಷಿಯಂತೆ ಕಾಯುತ್ತಿರುವ ದೃಶ್ಯ ಸಾಮಾನ್ಯವಾಗಿವೆ.

ಚಿಕ್ಕಪೇಟೆಯ ಬಿವಿಕೆ ಅಯ್ಯಂಗಾರ್ ರಸ್ತೆ, ಅವೆನ್ಯೂ ರಸ್ತೆ, ನಗರ್ತಪೇಟೆ, ಎಸ್‌.ಪಿ. ರಸ್ತೆ, ಜಯನಗರ, ಮಲ್ಲೇಶ್ವರ, ಗಾಂಧಿನಗರ, ಮೆಜೆಸ್ಟಿಕ್‌, ಕೋರಮಂಗಲ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಸಾಮಾನ್ಯ ದಿನಗಳಲ್ಲಿ ಗ್ರಾಹಕರ ಸಂಖ್ಯೆ ಹೆಚ್ಚಿರುತ್ತದೆ. ಇದೀಗ ಬಿಸಿಲಿನ ಧಗೆ ಇರುವುದರಿಂದ ಬೆಳಿಗ್ಗೆ 10 ಗಂಟೆಯಿಂದ ಸಂಜೆ 6 ಗಂಟೆಯವರೆಗೂ ಈ ಮಾರುಕಟ್ಟೆಗಳಲ್ಲಿ ಗ್ರಾಹಕರ ಸಂಖ್ಯೆ ಕ್ಷೀಣಿಸಿದೆ.

ಬಟ್ಟೆ ಅಂಗಡಿ, ಆಭರಣ ಮಳಿಗೆ, ಎಲೆಕ್ಟ್ರಾನಿಕ್ಸ್‌ ವಸ್ತುಗಳು, ಅಲಂಕಾರಿಕ ವಸ್ತುಗಳು ಹಾಗೂ ಇತರೆ ಮಳಿಗೆಗಳಿಗೆ ಗ್ರಾಹಕರು ಭೇಟಿ ನೀಡುವ ಪ್ರಮಾಣ ಶೇ 90ರಷ್ಟು ಕಡಿಮಯಾಗಿದೆ. ಮಾರುಕಟ್ಟೆ ಪ್ರದೇಶದಲ್ಲಿರುವ ಹೋಟೆಲ್‌, ಐಸ್‌ಕ್ರೀಂ, ಜ್ಯೂಸ್‌ ಹಾಗೂ ತಂಪು ಪಾನೀಯ ಮಳಿಗೆಗಳಲ್ಲಿ ವ್ಯಾಪಾರವಿದೆ.

ಕಲಾಸಿಪಾಳ್ಯದಲ್ಲಿ ಕೊಡೆಯ ನೆರಳಿನಲ್ಲಿ ತರಕಾರಿ ಮಾರುತ್ತಿದ್ದ ಮಹಿಳೆ

ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಮುಖ್ಯಾಂಶಗಳು

- ಮಾರುಕಟ್ಟೆಯಲ್ಲಿ ಗ್ರಾಹಕರ ಕೊರತೆ
- ರಿಯಾಯಿತಿ ಘೋಷಿಸಿದರೂ ಖರೀದಿದಾರರಿಲ್ಲ
- ಯುಗಾದಿ ಹಬ್ಬದ ವಹಿವಾಟು ಕ್ಷೀಣ

‘ಪ್ರತಿ ವರ್ಷಕ್ಕಿಂತ ಈ ವರ್ಷ ಬಿಸಿಲಿನ ಧಗೆ ಹೆಚ್ಚಿದೆ. ಬೆಳಿಗ್ಗೆಯಿಂದ ಸಂಜೆಯವರೆಗೂ ಗ್ರಾಹಕರೇ ಕಾಣುತ್ತಿಲ್ಲ. ವ್ಯಾಪಾರದ ಮೇಲೆ ಪರಿಣಾಮ ಬೀರಿದೆ’ ಎಂದು ಅವೆನ್ಯೂ ರಸ್ತೆಯ ವ್ಯಾಪಾರಿಗಳ ಒಕ್ಕೂಟದ ಉಪಾಧ್ಯಕ್ಷ ಕಿಶೋರ್ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

‘ಅವೆನ್ಯೂ ರಸ್ತೆ, ಚಿಕ್ಕಪೇಟೆ ಹಾಗೂ ಸುತ್ತಮುತ್ತ ಮಾರುಕಟ್ಟೆಗಳು ಹೆಚ್ಚಿವೆ. ಆದರೆ, ಬಿಸಿಲು ಇರುವುದರಿಂದ ಗ್ರಾಹಕರು ಕುಟುಂಬ ಸಮೇತ ಮಾರು-ಕಟ್ಟೆಯತ್ತ ಬರಲು ಮನಸ್ಸು ಮಾಡುತ್ತಿಲ್ಲ. ನಮ್ಮ ವ್ಯಾಪಾರ ಶೇ 70ರಷ್ಟು ಕುಸಿತವಾಗಿದೆ’ ಎಂದು ಹೇಳಿದರು.

ಹೊಸ ಬಟ್ಟೆ ಬಂದರೂ ಗ್ರಾಹಕರಿಲ್ಲ: ಯುಗಾದಿ ಹಬ್ಬಕ್ಕೆ ದಿನಗಣನೆ ಶುರುವಾಗಿದೆ. ಹೊಸ ಬಟ್ಟೆ ಖರೀದಿ ಜೋರಾಗುವ ಸಮಯವಿದು. ಆದರೆ, ಬಿಸಿಲಿನ ಧಗೆ ಹಬ್ಬದ ಖರೀದಿ ಮೇಲೂ ಪರಿಣಾಮ ಬೀರಿದೆ. ಚಿಕ್ಕಪೇಟೆ, ಶ್ರೀರಾಮಪುರದ ರಾಮಚಂದ್ರಾಪುರ, ಮಲ್ಲೇಶ್ವರ ಹಾಗೂ ಸುತ್ತಮುತ್ತಲಿನ ಬಟ್ಟೆ ಅಂಗಡಿಗಳಲ್ಲಿಯೂ ಗ್ರಾಹಕರ ಸಂಖ್ಯೆ ತೀರಾ ಕಡಿಮೆಯಾಗಿದೆ.

‘ತರಹೇವಾರಿ ವಿನ್ಯಾಸದ ಬಟ್ಟೆಗಳು ಮಾರುಕಟ್ಟೆಗೆ ಬಂದಿವೆ. ಬೆಲೆಯಲ್ಲೂ ರಿಯಾಯಿತಿ ನೀಡಲಾಗುತ್ತಿದೆ. ಆದರೆ, ಗ್ರಾಹಕರು ಮಾತ್ರ ಅಂಗಡಿಗೆ ಬರುತ್ತಿಲ್ಲ. ಬೆಳಿಗ್ಗೆಯಿಂದ ಸಂಜೆಯವರೆಗೆ ಕಾದರೂ ಐವರು ಗ್ರಾಹಕರು ಬಂದರೆ ಹೆಚ್ಚು’ ಎಂದು ರಾಮಚಂದ್ರಾಪುರದ ಬಟ್ಟೆ ವ್ಯಾಪಾರಿ ಮದನ್ ಹೇಳಿದರು.

‘ಬಡವರು, ಮಧ್ಯಮ ವರ್ಗದ ಜನರು ಬಟ್ಟೆ ಖರೀದಿಸಲು ಹೆಚ್ಚಾಗಿ ರಾಮಚಂದ್ರಾಪುರಕ್ಕೆ ಬರುತ್ತಾರೆ. ಆದರೆ, ಮಾರ್ಚ್ ಹಾಗೂ ಏಪ್ರಿಲ್‌ನಲ್ಲಿ ಗ್ರಾಹಕರ ಸಂಖ್ಯೆ ಕಡಿಮೆಯಾಗಿದೆ. ಅಂದುಕೊಂಡಷ್ಟು ವ್ಯಾಪಾರ ಆಗುತ್ತಿಲ್ಲ. ಮಳಿಗೆಗೆ ಬಾಡಿಗೆ ನೀಡುವಷ್ಟು ಹಣ ಸಹ ಬರುತ್ತಿಲ್ಲ’ ಎಂದು ತಿಳಿಸಿದರು.

ವ್ಯಾಪಾರಕ್ಕೆ ಹೊಡೆತ ಕೊಟ್ಟ ಚುನಾವಣೆ: ಲೋಕಸಭಾ ಚುನಾವಣೆ ಪ್ರಕ್ರಿಯೆ ಆರಂಭವಾಗಿದ್ದು, ನೀತಿ ಸಂಹಿತೆ ಜಾರಿಯಾಗಿದೆ. ₹ 50 ಸಾವಿರಕ್ಕಿಂತ ಹೆಚ್ಚು ಹಣವನ್ನು ದಾಖಲೆ ಇಲ್ಲದೇ ಕೊಂಡೊಯ್ಯದಂತೆ ಚುನಾವಣೆ ಆಯೋಗ ಮಿತಿ ಹೇರಿದೆ. ಇದರಿಂದಾಗಿಯೂ ವ್ಯಾಪಾರದ ಮೇಲೆ ಹೊಡೆತ ಬಿದ್ದಿದೆ.

‘ಯುಗಾದಿ ಹಬ್ಬವಿರುವುದ ರಿಂದ ಮನೆ ಮಂದಿಯೆಲ್ಲ ಸಾಮೂಹಿಕವಾಗಿ ಬಟ್ಟೆ ಹಾಗೂ ಚಿನ್ನಾಭರಣ ಖರೀದಿಸುತ್ತಾರೆ. ಈ ಸಂದರ್ಭದಲ್ಲಿ ಬಹುತೇಕರು ನಗದು ತರುತ್ತಾರೆ. ಚುನಾವಣೆ ಇರುವುದರಿಂದ, ಅಧಿಕಾರಿಗಳು ನಗದು ಜಪ್ತಿ ಮಾಡಬಹುದು ? ನಾನಾ ಪ್ರಶ್ನೆಗಳನ್ನು ಕೇಳಿ ಕಿರಿಕಿರಿಯನ್ನುಂಟು ಮಾಡಬಹುದು ? ಎಂಬ ಕಾರಣಕ್ಕೆ ಗ್ರಾಹಕರು ಮಾರುಕಟ್ಟೆಗೆ ಬರುತ್ತಿಲ್ಲ’ ಎಂದು ಬಿವಿಕೆ ಅಯ್ಯಂಗಾರ್ ರಸ್ತೆಯ ಚಿನ್ನಾಭರಣ ವ್ಯಾಪಾರಿ ಚರಣ್ ಹೇಳಿದರು.

ಅವೆನ್ಯೂ ರಸ್ತೆಯ ವ್ಯಾಪಾರಿಗಳ ಒಕ್ಕೂಟದ ಉಪಾಧ್ಯಕ್ಷ ಕಿಶೋರ್ ಕುಮಾರ್, ‘ಬಿಸಿಲು ಜೊತೆಯಲ್ಲಿ ಚುನಾವಣೆಯೂ ನಮ್ಮ ವ್ಯಾಪಾರಕ್ಕೆ ಹೊಡೆತ ನೀಡಿದೆ. ನಗದು ಮಿತಿ ಇರುವುದರಿಂದ ಮಾರುಕಟ್ಟೆಗೆ ಬರಲು ಜನರು ಹೆದರುತ್ತಿದ್ದಾರೆ’ ಎಂದರು.

ಬೀದಿ ಬದಿ ವ್ಯಾಪಾರಕ್ಕೂ ಬಿಸಿ: ನಗರದಲ್ಲಿ ಬೀದಿಬದಿ ವ್ಯಾಪಾರಕ್ಕೂ ಧಗೆಯ ಬಿಸಿ ತಟ್ಟಿದೆ. ದಿನದ ದುಡಿಮೆ ನಂಬಿ ಬದುಕುತ್ತಿರುವ ಬೀದಿಬದಿ ವ್ಯಾಪಾರಿಗಳು ಬಿಸಿಲಿನಲ್ಲಿ ಎಂದಿನಂತೆ ವ್ಯಾಪಾರ ಮಾಡುತ್ತಿದ್ದಾರೆ. ಆದರೆ, ಗ್ರಾಹಕರು ಬರುತ್ತಿಲ್ಲ. ಇದರಿಂದಾಗಿ ದುಡಿಮೆಯೂ ಕಡಿಮೆಯಾಗಿದೆ ಎಂದು ವ್ಯಾಪಾರಿಗಳು ಅಳಲು ತೋಡಿಕೊಂಡರು.

ತಂಪು ಪಾನೀಯಕ್ಕೆ ಬೇಡಿಕೆ

ನಗರದ ವಸತಿ ಪ್ರದೇಶಗಳಲ್ಲಿರುವ ಐಸ್‌ಕ್ರೀಂ, ಜ್ಯೂಸ್ ಹಾಗೂ ತಂಪು ಪಾನೀಯ ಮಳಿಗೆಗಳಲ್ಲಿ ವ್ಯಾಪಾರ ಜೋರಾಗಿದೆ. ಎಳನೀರು, ಕಲ್ಲಂಗಡಿ, ಕರಬೂಜ ಹಾಗೂ ಇತರೆ ಹಣ್ಣುಗಳಿಗೆ ಬೇಡಿಕೆ ಹೆಚ್ಚಾಗಿದೆ.

‘ಬಿಸಿಲು ಹೆಚ್ಚಿರುವುದರಿಂದ ತಂಪು ಪದಾರ್ಥಗಳನ್ನು ಸೇವಿಸಲು ಜನರು ಇಷ್ಟಪಡುತ್ತಿದ್ದಾರೆ. ಬೆಳಿಗ್ಗೆಯಿಂದ ಸಂಜೆವರೆಗೂ ವ್ಯಾಪಾರ ಆಗುತ್ತಿದೆ. ಐಸ್‌ಕ್ರೀಂ, ತಂಪು ಪಾನೀಯಗಳು ಹೆಚ್ಚು ಮಾರಾಟವಾಗುತ್ತಿವೆ’ ಎಂದು ನ್ಯೂ ಬಿಇಎಲ್ ರಸ್ತೆಯಲ್ಲಿರುವ ಮಳಿಗೆ ಮಾಲೀಕ ಮುನಿರಾಜು ಹೇಳಿದರು.

ಅವಧಿ ವಿಸ್ತರಣೆ

ಬೆಂಗಳೂರು: ಕಂದಾಯ ಇಲಾಖೆಯ 1 ಸಾವಿರ ಗ್ರಾಮ ಆಡಳಿತ ಅಧಿಕಾರಿ ಹುದ್ದೆಗಳ ನೇರ ನೇಮಕಾತಿಯ ಅರ್ಜಿ ಸಲ್ಲಿಕೆ ಪ್ರಕ್ರಿಯೆ ಏ.5ರಿಂದ ಆರಂಭವಾಗಿದೆ. ಅರ್ಜಿ ಸಲ್ಲಿಸಲು ಮೇ 4 ಕೊನೆಯ ದಿನ.

ಹುದ್ದೆಗಳ ನೇಮಕಾತಿಗೆ ಫೆಬ್ರುವರಿಯಲ್ಲಿ ಅಧಿಸೂಚನೆ ಹೊರಡಿಸಿದಾಗ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಅರ್ಜಿ ಸಲ್ಲಿಸಲು ಏ.3ರವರೆಗೆ ಅವಕಾಶ ನೀಡಿತ್ತು. ಆದರೆ, ಆನ್‌ಲೈನ್ ಅರ್ಜಿ ಸಲ್ಲಿಕೆಯಲ್ಲಿನ ತಾಂತ್ರಿಕ ದೋಷಗಳ ಕಾರಣ ಈಗ ಅಂತಿಮ ದಿನಾಂಕವನ್ನು ವಿಸ್ತರಿಸಲಾಗಿದೆ. ಅರ್ಜಿ ಶುಲ್ಕ ಪಾವತಿಗೆ ಮೇ 7ರವರೆಗೆ ಅವಕಾಶ ನೀಡಲಾಗಿದೆ.

ಉತ್ತರ ಪ್ರಕಟ: ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯ (ಕೆ-ಸೆಟ್) ಕೀ ಉತ್ತರಗಳನ್ನು ಕೆಇಎ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗಿದೆ.

‘5, 8, 9ನೇ ತರಗತಿ ಪರೀಕ್ಷೆ ಮೌಲ್ಯಮಾಪನದಲ್ಲಿ ದೋಷ’

ಪ್ರಜಾವಾಣಿ ವಾರ್ತೆ

ಬೆಂಗಳೂರು:2023–24ನೇ ಸಾಲಿನ 5, 8 ಹಾಗೂ 9ನೇ ತರಗತಿ ಸಂಕಲನಾತ್ಮಕ ಮೌಲ್ಯಾಂಕನ (ಎಸ್‌ಎ–2) ಪೂರ್ಣಗೊಂಡಿದ್ದು, ಮೌಲ್ಯಮಾಪನದಲ್ಲಿ ಹಲವು ದೋಷ ಉಳಿದುಕೊಂಡಿವೆ ಎಂದು ಕರ್ನಾಟಕ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಆಡಳಿತ ಮಂಡಳಿ ಪ್ರಧಾನ ಕಾರ್ಯದರ್ಶಿ ಡಿ.ಶಶಿಕುಮಾರ್ ಆರೋಪಿಸಿದ್ದಾರೆ.

ಮೌಲ್ಯಮಾಪನವನ್ನು ತ್ವರಿತವಾಗಿ ಪೂರ್ಣಗೊಳಿಸಲು ಪ್ರಾಥಮಿಕ ಶಾಲಾ ಶಿಕ್ಷಕರಿಂದ ಪ್ರೌಢಶಾಲಾ ವಿದ್ಯಾರ್ಥಿಗಳ ಉತ್ತರ ಪತ್ರಿಕೆ ಮೌಲ್ಯಮಾಪನ ಮಾಡಿಸಲಾಗಿದೆ. ಸರಿ ಉತ್ತರಗಳಿಗೂ ಅಂಕ ಕಡಿತ ಮಾಡಲಾಗಿದೆ. ಕೆಲ ಬಂಡಲ್‌ಗಳ ಉತ್ತರ ಪತ್ರಿಕೆಗಳನ್ನು ಮೌಲ್ಯಮಾಪನವೇ ಮಾಡಿಲ್ಲ. ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಕಡಿಮೆ ಅಂಕಗಳು ಬಂದಿವೆ.

8 ಮತ್ತು 9ನೇ ತರಗತಿ ವಿದ್ಯಾರ್ಥಿಗಳಿಗೆ ಸಾಕಷ್ಟು ಅನ್ಯಾಯವಾಗಿದೆ ಎಂದು ಹಲವು ಶಿಕ್ಷಣ ಸಂಸ್ಥೆಗಳು ಮಾಹಿತಿ ನೀಡಿವೆ ಎಂದಿದ್ದಾರೆ.

‘ಭಾಷಾಂತರ ಅಂತಃಕರಣದಿಂದ ಕೂಡಿರಲಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿಗಳು ಭಾಷಾಂತರವನ್ನು ಅನುಭವ ಮತ್ತು ಅಂತಃಕರಣದಿಂದ ಮಾಡಬೇಕು ಎಂದು ಹಂಪಿ ಕನ್ನಡ ವಿಶ್ವವಿದ್ಯಾಲಯದ ಕುಲಪತಿ ಪರಮಶಿವಮೂರ್ತಿ ಸಲಹೆ ನೀಡಿದರು.

ಇಲ್ಲಿನ ಜೈನ್ ಡೀಮ್ಡ್ ಟು ಬಿ ಯೂನಿವರ್ಸಿಟಿ ಮತ್ತು ಹಂಪಿ ಕನ್ನಡ ವಿಶ್ವವಿದ್ಯಾಲಯದ ಭಾಷಾಂತರ ಅಧ್ಯಯನ ವಿಭಾಗದ ಸಹಯೋಗದಲ್ಲಿ ಭಾಷಾ ನಿಕಾಯದ ಕನ್ನಡ ವಿಭಾಗವು ಶುಕ್ರವಾರ ಹಮ್ಮಿಕೊಂಡಿದ್ದ ಭಾಷಾಂತರ ಕಮ್ಮಟವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಜೈನ್ ವಿಶ್ವವಿದ್ಯಾಲಯದ ಕುಲಪತಿ ರಾಜ್ ಸಿಂಗ್ ಮಾತನಾಡಿ, ‘ಭಾಷಾಂತರದ ನೆಲೆ-ಹಿನ್ನೆಲೆಯ ಅರಿವು ಹೊಂದುವುದು ಮುಖ್ಯ. ನಿಷ್ಠೆ, ಅಭಿವ್ಯಕ್ತಿ, ಸೊಬಗು ಮತ್ತು ಮೂಲ ಭಾಷೆಯ ಪ್ರಭಾವ, ಶೈಲಿ, ಸ್ಪಷ್ಟತೆ ಹಾಗೂ ಭಾಷಾ ವೈಶಿಷ್ಟ್ಯ ಇವುಗಳನ್ನು ಪ್ರಮುಖವಾಗಿ ಗಮನದಲ್ಲಿಟ್ಟುಕೊಂಡು ಅನುವಾದ ಕಾರ್ಯದಲ್ಲಿ ತೊಡಗಬೇಕು. ಆಗ ಮಾತ್ರ ಅನುವಾದಕ್ಕೊಂದು ಅರ್ಥ ಬರುತ್ತದೆ’ ಎಂದು ಹೇಳಿದರು.

ಸಂಸ್ಕೃತಿ ಚಿಂತಕ ಅರವಿಂದ ಮಾಲಗತ್ತಿ ಮಾತನಾಡಿದರು.

ಪ್ರಾಧ್ಯಾಪಕಿ ರಜನಿ ಜಯರಾಮ್ ಅಧ್ಯಕ್ಷತೆ ವಹಿಸಿದ್ದರು. ಭಾಷಾಂತರ ಕಮ್ಮಟದ ನಿರ್ದೇಶಕ ಎ.ಮೋಹನ ಕುಂಟಾರ್, ಸಂಚಾಲಕಿ ರಾಜೇಶ್ವರಿ ವೈ.ಎಂ, ಪ್ರಾಧ್ಯಾಪಕ ರಾಜಕುಮಾರ್ ಬಡಿಗೇರ ಭಾಗವಹಿಸಿದ್ದರು.

ಜೈನ್ ವಿಶ್ವವಿದ್ಯಾಲಯದಲ್ಲಿ ನಡೆದ ಭಾಷಾಂತರ ಕಮ್ಮಟದಲ್ಲಿ ಜೈನ್ ವಿಶ್ವವಿದ್ಯಾಲಯದ ಕುಲಪತಿ ರಾಜ್ ಸಿಂಗ್ ಮತ್ತು ಪ್ರಾಧ್ಯಾಪಕರು ಭಾಗವಹಿಸಿದ್ದರು

ಮಹಾ ಮಂಡಲಕ್ಕೆ ಬಾಲಚಂದ್ರ ಪುನರಾಯ್ಕೆ

ಬೆಳಗಾವಿ: ಅರಬಾವಿ ಶಾಸಕ ಬಾಲಚಂದ್ರ ಜಾರಕಿಹೊಳಿ ರಾಷ್ಟ್ರೀಯ ಸಹಕಾರಿ ಡೇರಿ ಮಹಾ ಮಂಡಲದ (ಎನ್‌ಸಿಡಿಎಫ್‌ಐ) ನಿರ್ದೇಶಕರಾಗಿ ಪುನಃ ಆಯ್ಕೆಯಾಗಿದ್ದಾರೆ.

ಗುಜರಾತ್ ರಾಜ್ಯದ ಆನಂದ್ ನಗರದಲ್ಲಿ ಏ.4ರಂದು ನಡೆದ ಮಹಾ ಮಂಡಲದ ಆಡಳಿತ ಮಂಡಳಿಯ ಚುನಾವಣೆಯಲ್ಲಿ ಬಾಲಚಂದ್ರ ಕರ್ನಾಟಕ ಹಾಲು ಒಕ್ಕೂಟದಿಂದ ಮುಂದಿನ 5 ವರ್ಷಗಳ ಅವಧಿಗೆ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ನಗರದಲ್ಲಿ ಇಂದು

ಕಾವೇರಿ ಆಸ್ಪತ್ರೆ ಎರಡನೇ ಶಾಖೆ ಉದ್ಘಾಟನೆ: ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಉದ್ಘಾಟನೆ: ಸಿದ್ದರಾಮಯ್ಯ, ಆಯೋಜನೆ ಮತ್ತು ಸ್ಥಳ: ಕಾವೇರಿ ಆಸ್ಪತ್ರೆ, ಹಳೇ ಎಚ್‌ಎಎಲ್ ವಿಮಾನ ನಿಲ್ದಾಣ–ವರ್ತೂರು ರಸ್ತೆ, ಮಾರತ್‌ಹಳ್ಳಿ, ಬೆಳಿಗ್ಗೆ 10

ಪದವಿ ಪ್ರದಾನ: ಅತಿಥಿಗಳು: ಎಂ.ಎ. ಶೇಖರ್, ಡಿ. ಹನುಮಂತಯ್ಯ, ಎಲ್. ಶ್ರೀನಿವಾಸ್, ಎಚ್‌.ಸಿ. ಜಯಮುತ್ತು, ವೆಂಕಟರಾಮೇಗೌಡ, ಬಿ. ಕೆಂಚಪ್ಪಗೌಡ, ಸಿ. ದೇವರಾಜ್, ಸಿ.ಎಂ. ಮರೇಗೌಡ, ಯಳುವಳ್ಳಿ ಎನ್. ರಮೇಶ್, ಅಧ್ಯಕ್ಷತೆ: ವಿ. ನಾರಾಯಣಸ್ವಾಮಿ, ಆಯೋಜನೆ: ಕೆಂಪೇಗೌಡ ಇನ್‌ಸ್ಟಿಟ್ಯೂಟ್ ಆಫ್ ಮೆಡಿಕಲ್ ಸೈನ್ಸ್, ಸ್ಥಳ: ಕುವೆಂಪು ಕಲಾಕ್ಷೇತ್ರ, ವಿವಿ ಪುರ, ಬೆಳಿಗ್ಗೆ 10

ಪರಿಸರ ಪ್ರಣಾಳಿಕೆಗಾಗಿ ಬೆಂಗಳೂರು ಸಮಾವೇಶ: ಆಯೋಜನೆ: ಪರಿಸರಕ್ಕಾಗಿ ನಾವು– ಪರಿಸರ ಕಾರ್ಯಕರ್ತರ ಸಂಘಟನೆ, ಸ್ಥಳ: ಬೆಂಗಳೂರು ಸ್ವಾತಂತ್ರ್ಯ ಉದ್ಯಾನ, ಬೆಳಿಗ್ಗೆ 11

ಕೇಂದ್ರದಿಂದ ರಾಜ್ಯಕ್ಕೆ ಬರಬೇಕಿರುವ ಪಾಲು–ಚರ್ಚೆ: ಅತಿಥಿಗಳು: ನಿರ್ಮಲಾ ಸೀತಾರಾಮನ್, ಕೃಷ್ಣ ಬೈರೇಗೌಡ, ಆಯೋಜನೆ: ಜಾಗೃತಿ ಕರ್ನಾಟಕ, ಸ್ಥಳ: ಬಾಪು ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಸಂಜೆ 5

ಕನ್ನಡ ಸಾಹಿತ್ಯ ಮತ್ತು ಪ್ರಜಾಪ್ರಭುತ್ವದ ಆಶಯ–ವಿಚಾರಗೋಷ್ಠಿ: ವಿಷಯ **ಮಂಡನೆ:** ಅಗ್ರಹಾರ ಕೃಷ್ಣಮೂರ್ತಿ, ಎನ್. ಗಾಯತ್ರಿ. ಆಯೋಜನೆ: ಬಂಡಾಯ ಸಾಹಿತ್ಯ ಸಂಘಟನೆ ಬೆಂಗಳೂರು ಜಿಲ್ಲಾ ಘಟಕ, ಸ್ಥಳ: ಬಿಎಂಶ್ರೀ ಪ್ರತಿಷ್ಠಾನ ಸಭಾಂಗಣ, ಎನ್‌.ಆರ್. ಕಾಲೊನಿ, ಸಂಜೆ 5

ಐಐಎಂ ಬೆಂಗಳೂರು–49ನೇ ಘಟಿಕೋತ್ಸವ, ಪಿಎಚ್‌ಡಿ ವಿದ್ಯಾರ್ಥಿಗಳಿಗೆ ಐಐಎಂಬಿ ಅತ್ಯುತ್ತಮ ಸಂಶೋಧನಾ ಪ್ರಶಸ್ತಿ ಪ್ರದಾನ: ಅತಿಥಿ: ಟಿ.ವಿ. ನರೇಂದ್ರನ್, ಆಯೋಜನೆ ಮತ್ತು ಸ್ಥಳ: ಐಐಎಂ, ಬನ್ನೇರುಘಟ್ಟ ರಸ್ತೆ, ಸಂಜೆ 5

‘ಇನ್ ಕ್ವೆಸ್ಟ್ ಆಫ್ ಗುರು’ ಪುಸ್ತಕ ಬಿಡುಗಡೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ಅತಿಥಿಗಳು: ಲೆಫ್ಟಿನೆಂಟ್ ಜನರಲ್‌ಎ. ನಟರಾಜನ್, ಲೆಫ್ಟಿನೆಂಟ್ ಜನರಲ್ ಪಿ.ಜಿ. ಕಾಮತ್, ನ್ಯಾ. ಕೃಷ್ಣಮೂರ್ತಿ, ಮೇಜರ್ ಜನರಲ್ ಜಿ.ಡಿ. ಭಕ್ಷಿ, ಆನಂದ್ ಮ್ಯಾಥ್ಯೂಸ್, ಅಶೋಕ್ ಕಿಣಿ. ಆಯೋಜನೆ: ಥಿಂಕರ್ಸ್ ಫಾರಂ ಕರ್ನಾಟಕ, ಸ್ಥಳ: ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಸಂಜೆ 6

ಭಾರತೀಯ ಅಂತರಿಕ್ಷ ಯಾತ್ರೆಯ ಪ್ರಥಮ ಪ್ರದರ್ಶನ: ಉಪಸ್ಥಿತಿ: ಎ.ಎಸ್. ಕಿರಣ್‌ಕುಮಾರ್, ಆರ್. ಹಟನ್, ಆಯೋಜನೆ ಮತ್ತು ಸ್ಥಳ: ಜವಾಹರ್‌ಲಾಲ್ ನೆಹರೂ ತಾರಾಲಯ, ಟಿ. ಚೌಡಯ್ಯ ರಸ್ತೆ, ಹೈಗ್ರೌಂಡ್ಸ್, ಸಂಜೆ 6

‘ಕಾಯುವ ಕಾಯಕ’ ನಾಟಕ: ಆಯೋಜನೆ: ಅಂತರಂಗ ತಂಡ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ರಾತ್ರಿ 7.15

ಮುಂಬೈ ರೇಸ್

ಟೈಮ್ ಅಂಡ್ ಟೈಡ್ ಗೆಲ್ಲುವ ನಿರೀಕ್ಷೆ

ಜವಾರೆ ಎಸ್ ಪೂನಾವಾಲ ಸ್ಪ್ರಿಂಟರ್ಸ್ ಚಾಲೆಂಜ್ ಶನಿವಾರದ ಮುಂಬೈ ರೇಸ್‌ಗಳ ಪ್ರಧಾನ ರೇಸ್‌ಗಳ ಆಕರ್ಷಣೆಯಾಗಿದ್ದು, ಟೈಮ್ ಅಂಡ್ ಟೈಡ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಸಂಜೆ 4.45ಕ್ಕೆ ಪ್ರಾರಂಭವಾಗಲಿರುದ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಲಿಯೊ ದಿ ಲಯನ್ 9, ಗ್ಯಾಲಪಿಂಗ್ ಗ್ಲೋರಿ 1, ಜರಾಫತ್ 6
2ನೇ ರೇಸ್: ಮಲ್ಟಿವರ್ಸ್ 1, ಮಾರಿಯಾನ 4, ಸ್ಟನ್ನಿಂಗ್ ವಿಶ್ಯುಯಲ್ 5
3ನೇ ರೇಸ್: ಫಾಂಟಾನ 6, ಸ್ಟಾರ್ ಪ್ರಾಸ್ಪೆರಿಟಿ 1, ಎಲ್ ಗ್ರಿಕೊ 4
4ನೇ ರೇಸ್: ಸೆಲೆಸ್ಟಿಯಲ್ 2, ಟರ್ನ್ ಅಂಡ್ ಬರ್ನ್ 4, ಟಚ್ ಆಫ್ ಗೋಲ್ಡ್ 4
5ನೇ ರೇಸ್: ರಾಯಲ್ ಮೈಸೂರು 3, ಮಿಸ್ ಅಮೇರಿಕನ್ ಪೀ 2, ಎಲ್ವೆನಾರ್ 8
6ನೇ ರೇಸ್: ಟೈಮ್ ಅಂಡ್ ಟೈಡ್ 1, ಸೀಝ್ ಕರೇಜಿಯಸ್ 3, ಮ್ಯಾಗಿಲೆಟೊ 2
7ನೇ ರೇಸ್: ಪೋರ್ಟೊಫಿನೊ ಬೇ 2, ಫೈಟಾನ್ 3, ಬಬ್ಲಿಬಾಯ್ 1

ಉತ್ತಮ ಬೆಟ್: ಮಲ್ಟಿವರ್ಸ್

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6



ಲೋಕಸಭಾ ಚುನಾವಣೆ: ಜನಾಕ್ರೋಶಕ್ಕೆ ಆಸ್ಪದವಾಗದಂತೆ ಜಲಮಂಡಳಿ ಕಾರ್ಯ

ಜಲಕ್ಷಾಮ ಆವರಿಸಿದ ಮೇಲೆ ಯುದ್ಧೋಪಾದಿಯ ಕ್ರಮ!

• ಆರ್. ಮಂಜುನಾಥ್

ಮತ ಮಂಥನ

ಬೆಂಗಳೂರು: ನಗರವನ್ನು ಜಲಕ್ಷಾಮ ಆವರಿಸಿದ ಮೇಲೆ, ಜಲಮಂಡಳಿ ಸಮರೋಪಾದಿಯಲ್ಲಿ ಜಲ ಸಂರಕ್ಷಣೆಗೆ ಮುಂದಾಗಿದೆ. ಹೀಗಾಗಿ 'ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ' ಎಂಬ ಮಾತು ಜಲಮಂಡಳಿಯ ಪ್ರಸ್ತುತದ ಕಾರ್ಯವೈಖರಿಗೆ ಪೂರ್ಣಪ್ರಮಾಣದಲ್ಲಿ ಅನ್ವಯವಾಗುತ್ತದೆ..!

ಕಾವೇರಿ ನೀರಿನ ಮೇಲೆಯೇ ಹೆಚ್ಚು ಅವಲಂಬಿತವಾಗಿರುವ ಬೆಂಗಳೂರು ಜಲಮಂಡಳಿ, ಹಿಂದಿನ ವರ್ಷಗಳಲ್ಲಿ ಕೊಳವೆ ಬಾವಿಗಳು ಬತ್ತಿದ್ದರೂ, ಅಂತರ್ಜಲ ಮಟ್ಟ ಕಡಿಮೆಯಾದರೂ ಹೆಚ್ಚು ನಿಗಾವಹಿಸುತ್ತಿರಲಿಲ್ಲ. 110 ಹಳ್ಳಿಗಳಲ್ಲಿ ನೀರಿನ ಸಮಸ್ಯೆಯಾಗಿದೆ ಎಂದರೆ, 'ಅದು ನನ್ನ ಭಾಗದ್ದಲ್ಲ, ಬಿಬಿಎಂಪಿಯದ್ದು' ಎಂದು ಜಾರಿಕೊಳ್ಳುತ್ತಿತ್ತು. ಆದರೆ, ಇದೀಗ ಲೋಕಸಭಾ ಚುನಾವಣೆಯ ಸಂದರ್ಭವಾಗಿರುವುದರಿಂದ 'ಎಲ್ಲ ಸಮಸ್ಯೆಯನ್ನು ತಾನೇ ನಿರ್ವಹಿಸುತ್ತೇನೆ' ಎಂದು ಹೇಳಿಕೊಂಡು ಪ್ರತಿನಿತ್ಯವೂ ಜಲಮಂಡಳಿ ಅಧ್ಯಕ್ಷರೇ ಬೀದಿಗಿಳಿದಿದ್ದಾರೆ. ಹೀಗಾದರೂ, ನೀರಿನ ಸಮಸ್ಯೆ ನಿವಾರಣೆಯಾಗುತ್ತಿರುವುದಕ್ಕೆ ನಾಗರಿಕರಿಗೆ ಸದ್ಯಕ್ಕೆ ಸಂತಸವಾಗಿದೆ.

ಹಿಂದೆಂದೂ ಕಾಣದಂತಹ ಜಲಕ್ಷಾಮ ಈ ಬಾರಿ ನಗರದ ಜನರನ್ನು ಬಾಧಿಸುತ್ತಿದೆ. 2022ರಲ್ಲಿ ಹೆಚ್ಚಿನ ಮಳೆಯಾಗಿದ್ದರಿಂದ 2023ರಲ್ಲಿ ಸಮಸ್ಯೆ ಇರಲಿಲ್ಲ. ಆದರೆ, ಕಳೆದ ವರ್ಷ ಮಳೆಯಾಗದ ಕಾರಣ ಹಾಗೂ ಅಭಿವೃದ್ಧಿಗಾಗಿ ಕೆರೆಗಳಲ್ಲಿನ ನೀರೆಲ್ಲ ಖಾಲಿ ಮಾಡಿದ್ದರಿಂದ ಅಂತರ್ಜಲ ಕುಸಿದಿದೆ. ಈ ವರ್ಷ ಮಾರ್ಚ್‌ನಲ್ಲಿಯೇ ನೀರಿನ ಸಮಸ್ಯೆ ಎದುರಾಯಿತು. ಸಮಸ್ಯೆ ಪರಿಹರಿಸಲು ಜಲಮಂಡಳಿ ಕ್ರಮಗಳನ್ನು ಕೈಗೊಳ್ಳುತ್ತಿದೆ.

ಕೊಳವೆಬಾವಿ ಕೊರೆಸುವುದು, ಟ್ಯಾಂಕರ್‌ನಲ್ಲಿ ನೀರು ಪೂರೈಸುವುದು, ಖಾಸಗಿ ಟ್ಯಾಂಕರ್‌ಗಳಿಗೆ ಬಾಡಿಗೆ ನಿಗದಿ ಮಾಡುವುದು, ನಲ್ಲಿಗಳಿಗೆ ಏರಿಯೇಟರ್, ವಾಹನ- ಉದ್ಯಾನಗಳಿಗೆ ನೀರು ಬಳಕೆ ನಿರ್ಬಂಧಿಸುವ ಕೆಲಸ ಮಾಡತೊಡಗಿದೆ ಜಲಮಂಡಳಿ. ಅಲ್ಲದೆ, ನಿಯಮಗಳನ್ನು ಉಲ್ಲಂಘಿಸುವವರಿಗೆ ದಂಡ ವಿಧಿಸಲಾಗುತ್ತಿದೆ. ಆದರೆ, 'ನಗರದ ಕೇಂದ್ರ ಭಾಗದ ಜನರಿಗೆ ಹಿಂದಿನಂತೆಯೇ ಜುಲೈ ಅಂತ್ಯದವರೆಗೆ ಕಾವೇರಿ ನೀರು ಪೂರೈಸಲಾಗುತ್ತದೆ. ನೀರಿನ ಕೊರತೆ ಇಲ್ಲ' ಎಂದು ಜಲಮಂಡಳಿ ಅಧ್ಯಕ್ಷರೇ ಹೇಳಿದ ಮೇಲೆ ದಂಡ ಏಕೆ ವಿಧಿಸಬೇಕು' ಎಂಬ ಪ್ರಶ್ನೆಯನ್ನೂ ನಾಗರಿಕರು ಕೇಳುತ್ತಿದ್ದಾರೆ.

'ಈ ದಂಡ, ನಿಯಮ, ಕಾಯ್ದೆಗಳೆಲ್ಲ 1964ರಲ್ಲೇ ಜಾರಿಯಾಗಿವೆ. ಅವು ಅನುಷ್ಠಾನವೇ ಆಗಿಲ್ಲ. ಇದೀಗ ಅವುಗಳನ್ನು ಜಾರಿಗೆ ತರಲಾಗಿದೆ. ಅನುಮತಿ ಇಲ್ಲದೆ ಕೊಳವೆಬಾವಿ ಕೊರೆಯಬಾರದು ಎಂಬ ನಿಯಮ ಹತ್ತಾರು ವರ್ಷಗಳಿಂದ ಇದೆ. ಇದೀಗ ಕಾನೂನು ಕ್ರಮದ ಬೆದರಿಕೆ ಹಾಕಲಾಗುತ್ತಿದೆ. ಆದರೂ ಕೊಳವೆಬಾವಿ ಕೊರೆಯುವುದು ನಿಂತಿಲ್ಲ. ಲೋಕಸಭೆ ಚುನಾವಣೆಯ ನಂತರವೂ ಇವೆಲ್ಲ ಕ್ರಮಗಳು ಅನುಷ್ಠಾನದಲ್ಲಿರುತ್ತವೆಯೇ? ಜಿಲ್ಲಾಡಳಿತ ನಿಗದಿಪಡಿಸಿರುವ ದರಕ್ಕೆ ಖಾಸಗಿ ಟ್ಯಾಂಕರ್‌ಗಳು ನೀರು ಪೂರೈಸುತ್ತಿಲ್ಲ. ದೂರು ನೀಡಿದರೆ ಅವರ ಮೇಲೆ ಕ್ರಮವೂ ಆಗುತ್ತಿಲ್ಲ. ಚುನಾವಣೆ ಮುಗಿದ ಮೇಲೆ ಈ ಕಷ್ಟ ಕೇಳೋರ್‍ಯಾರು' ಎಂಬ ಪ್ರಶ್ನೆಯೂ ಉದ್ಭವಿಸಿದೆ.

ಚುನಾವಣೆ ಸಂದರ್ಭವಾಗಿರುವುದರಿಂದ ರಾಜಕೀಯ ಪಕ್ಷಗಳು ನಗರದಲ್ಲಿನ ನೀರಿನ ಸಮಸ್ಯೆಯನ್ನು ಬೊಟ್ಟು ಮಾಡಿ, ಪ್ರಚಾರ, ಅಪಪ್ರಚಾರ ಮಾಡುತ್ತವೆ ಎಂಬ ಮಾಹಿತಿ ಜಲಮಂಡಳಿಗೆ ಇದ್ದೇ ಇದೆ. ಹೀಗಾಗಿಯೇ, ಕಾವೇರಿ 5ನೇ ಹಂತದ ಯೋಜನೆಯಲ್ಲಾಗಿರುವ ವಿಳಂಬವನ್ನು ಮುಚ್ಚಿಕೊಳ್ಳಲು ಕೆರೆಗಳಿಗೆ ಸಂಸ್ಕರಿಸಿದ ನೀರು, ಅಂತರ್ಜಲ ವೃದ್ಧಿ, ನೀರಿನ ಮಿತಬಳಕೆ ಎಂದೆಲ್ಲ ಮಾತನಾಡುತ್ತಿದೆ. ಆದರೆ, ಶೇ 28ರಷ್ಟು ನೀರು ಸೋರಿಕೆಯಾಗುತ್ತಿರುವ ಬಗ್ಗೆ ಕ್ರಮ ಕೈಗೊಳ್ಳುವ ತುರ್ತು ಕೆಲಸ ಮಾತ್ರ ಆಗಿಲ್ಲ. ಇಷ್ಟಾದರೂ, ಸಂಸ್ಕರಿತ ನೀರಿನ ಬಗ್ಗೆ ಇದೀಗ ಇಷ್ಟೊಂದು ಕಾಳಜಿ ವಹಿಸುತ್ತಿರುವ ಜಲಮಂಡಳಿ, ಜನವರಿಯಿಂದಲೇ ಆ ನೀರನ್ನು ಕೆರೆಗಳಿಗೆ ಹರಿಸಿ, ತುಂಬಿಸಿದ್ದರೆ ಈಗ ಕೊಳವೆಬಾವಿಗಳು ಬತ್ತುತ್ತಿರಲಿಲ್ಲ. ಈಗ ಕಾಡುತ್ತಿರುವ ನೀರಿನ ಅಭಾವ, ಸೃಷ್ಟಿಯಾಗಿರುವ 'ಕೃತಕ ಅಭಾವ' ಎರಡೂ ಬಾಧಿಸುತ್ತಿರಲಿಲ್ಲ.

ಟ್ಯಾಂಕರ್‌ಗಳಿಂದ 'ಉಚಿತ ನೀರು' ಪೂರೈಸುತ್ತಿರುವ ಜಲಮಂಡಳಿ

ಮತದಾನದ ನಂತರ ಏನು?

'ಲೋಕಸಭೆ ಚುನಾವಣೆ ಇರುವುದರಿಂದಲೇ ಜಲಮಂಡಳಿ ಷ್ಟೊಂದು ಕಾರ್ಯಗತವಾಗಿದೆ. ಕಾವೇರಿ 5ನೇ ಹಂತದ ಕಾಮಗಾರಿ ನಿರೀಕ್ಷಿತ ವೇಗದಲ್ಲಿ ನಡೆಸಿಲ್ಲ. ಚುನಾವಣೆಯಲ್ಲಿ ನೀರಿನ ಬಗ್ಗೆ ಆರೋಪ ಹೆಚ್ಚಾಗಬಾರದು ಎಂದು ಇಷ್ಟು ಕ್ರಿಯಾಶೀಲವಾಗಿ, ಚಟುವಟಿಕೆಯಿಂದ ಕಾರ್ಯನಿರ್ವಹಿಸುತ್ತಿದೆ. ತಜ್ಞರಿಂದ ಬಹುಮತದ ಒಪ್ಪಿಗೆ ಇಲ್ಲದಿದ್ದರೂ, ಅಂತರ್ಜಲದ ಕೊರತೆ ಇದ್ದರೂ ಇನ್ನೊಂದು ತಿಂಗಳಲ್ಲಿ 300ಕ್ಕೂ ಹೆಚ್ಚು ಕೊಳವೆಬಾವಿಗಳನ್ನು ಕೊರೆಸಲೂ ಜಲಮಂಡಳಿ ಯೋಜನೆ ಹೊಂದಿದೆ. 'ವೇತನ ಕೊಡುವುದಕ್ಕೂ ಜಲಮಂಡಳಿಯಲ್ಲಿ ಹಣವಿಲ್ಲ, ನೀರಿನ ದರ ಏರಿಸಬೇಕು' ಎಂದೆಲ್ಲ ಹೇಳುವ ಸಂದರ್ಭದಲ್ಲಿ ನೂರಾರು ಕೋಟಿ ವೆಚ್ಚ ಮಾಡಲು ಮುಂದಾಗಿರುವುದು ಚುನಾವಣೆಯ ಗಿಮಿಕ್ ಮಾತ್ರ' ಎಂಬ ಆರೋಪವೂ ವ್ಯಕ್ತವಾಗಿದೆ.

'ಮೇ 15ಕ್ಕೆ ಕಾವೇರಿಯಿಂದ 770 ಎಂಎಲ್‌ಡಿ ನೀರು' ಎಂದು ಬಿಂಬಿಸಲಾಗುತ್ತಿದ್ದು, ಚುನಾವಣೆಯ ಮತದಾನ ಮುಗಿದ ಮೇಲೂ ಅದೇ ಗಡುವು ಇರುತ್ತದೆಯೇ' ಎಂದು ರಾಜರಾಜೇಶ್ವರಿನಗರದ ಟಿ.ಇ. ಶ್ರೀನಿವಾಸ್ ಪ್ರಶ್ನಿಸಿದರು.



ಒಳಚರಂಡಿ ತ್ಯಾಜ್ಯದ ಬಗ್ಗೆ ಮಾತಿಲ್ಲ!

'ಸಂಸ್ಕರಿತ ನೀರಿನ ಬಳಕೆ, ನೀರಿನ ಉಳಿಕೆ, ಮಿತವ್ಯಯದ ಬಗ್ಗೆ ಅತಿಹೆಚ್ಚು ಪ್ರಚಾರ ಮಾಡುತ್ತಿರುವ ಜಲಮಂಡಳಿ, ಒಳಚರಂಡಿ ತ್ಯಾಜ್ಯದ ಬಗ್ಗೆ ಮಾತೇ ಆಡುತ್ತಿಲ್ಲ. ನಗರದಲ್ಲಿರುವ ಕೆರೆಗಳು ಮಲಿನಗೊಂಡು ಅಂತರ್ಜಲವೂ ಕಲುಷಿತಗೊಂಡಿರುವುದಕ್ಕೆ ಒಳಚರಂಡಿ ನೀರು ನೇರವಾಗಿ ಕೆರೆಗಳಿಗೆ ಹರಿಯುತ್ತಿರುವುದೇ ಪ್ರಮುಖ ಕಾರಣ ಎಂದು ತಜ್ಞರೇ ಹೇಳುತ್ತಿದ್ದಾರೆ. ಆದರೆ ಇದೀಗ, ಟ್ಯಾಂಕರ್ ನೀರು ಕೊಡಲು, ಸಾವಿರಾರು ಟ್ಯಾಂಕ್ ಅಳವಡಿಸಲು ಯುದ್ಧೋಪಾದಿಯಲ್ಲಿರುವ ಜಲ ಮಂಡಳಿ, ತಜ್ಞರನ್ನು ಜೊತೆಗಿಟ್ಟುಕೊಂಡು ಸಂಸ್ಕರಿಸಿದ ನೀರನ್ನು ಕೆರೆಗಳಿಗೆ ಹರಿಸುತ್ತೇವೆ ಎಂದು ಹೇಳುತ್ತಿದೆ. ಹತ್ತಾರು ವರ್ಷಗಳಿಂದ ಒಳಚರಂಡಿ ನೀರಿನಿಂದ ಅದೇ ಕೆರೆಗಳನ್ನು ಕಲುಷಿತಗೊಳಿಸಿರುವುದಕ್ಕೆ, ಇನ್ನೂ ಮಾಲಿನ್ಯಗೊಳಿಸುತ್ತಿರುವುದಕ್ಕೆ ಜಲ ಮಂಡಳಿಗೆ ದಂಡವೇ ಇಲ್ಲವೇ' ಎಂಬ ಪರಿಸರ ಕಾರ್ಯಕರ್ತ ಗೌಡಯ್ಯ ಪ್ರಶ್ನಿಸಿದರು.

'ಕಾಂಗ್ರೆಸ್‌ಗೆ ಬೆಂಬಲ'

ಬಹಿರಂಗ ಸಮರ ಸಾರಿದ ಬಿಜೆಪಿ ಶಾಸಕ ಸೋಮಶೇಖರ್

ಪ್ರಜಾವಾಣಿ ವಾರ್ತೆ

ಕೆಂಗೇರಿ: ಯಶವಂತಪುರ ಕ್ಷೇತ್ರದ ಬಿಜೆಪಿ ಶಾಸಕ ಎಸ್.ಟಿ.ಸೋಮಶೇಖರ್, ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ಸೂಚಿಸುವ ಮೂಲಕ ಲೋಕಸಭೆ ಚುನಾವಣೆಯಲ್ಲಿ ಬಹಿರಂಗ ಸಮರ ಸಾರಿದ್ದಾರೆ.

ರಾಜ್ಯಸಭೆ, ವಿಧಾನ ಪರಿಷತ್ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸಿದ್ದ ಎಸ್.ಟಿ. ಸೋಮಶೇಖರ್, ಕೆಂಗೇರಿ ಉಪನಗರದಲ್ಲಿ ನಡೆದ ಕಾರ್ಯಕರ್ತರ ಸಭೆಯಲ್ಲಿ ಕಾಂಗ್ರೆಸ್ ಗೆಲುವಿಗೆ ಸಹಕರಿಸುವಂತೆ ತಮ್ಮ ಬೆಂಬಲಿಗರಿಗೆ ಸೂಚಿಸಿದರು.

'ಕ್ಷೇತ್ರದಿಂದ ಕ್ಷೇತ್ರಕ್ಕೆ ಹಾರುವ ವಲಸಿಗರನ್ನು ಹಾಗೂ ಕ್ಷೇತ್ರದಿಂದಲೇ ತಿರಸ್ಕೃತರಾದ ಅಭ್ಯರ್ಥಿಗಳನ್ನು ಒಪ್ಪಿಕೊಳ್ಳಲು ಯಶವಂತಪುರ ಕ್ಷೇತ್ರ ಪುಕ್ಸಟ್ಟೆ ಬಿದ್ದಿದೆಯೇ' ಎಂದು ಆಕ್ರೋಶ ವ್ಯಕ್ತಪಡಿಸಿದರು. ಇದೇ ವೇಳೆ ತಮ್ಮ ಬೆಂಬಲಿಗರ ಮೂಲಕ 'ಗೋ ಬ್ಯಾಕ್ ಶೋಭಾ' ಎಂದು ಘೋಷಣೆಯನ್ನೂ ಕೂಗಿಸಿದರು.

'ನಾನು ಯಾವುದೇ ಪಕ್ಷ ವಿರೋಧಿ ಚಟುವಟಿಕೆಯಲ್ಲಿ ಭಾಗಿಯಾಗಿರಲಿಲ್ಲ. ಕ್ಷೇತ್ರದ ಅಭಿವೃದ್ಧಿಗಾಗಿ ಹಾಗೂ ಅನುದಾನಕ್ಕಾಗಿ ರಾಜ್ಯದ ಮುಖ್ಯಮಂತ್ರಿ ಹಾಗೂ ಉಪ ಮುಖ್ಯಮಂತ್ರಿ ಅವರೊಂದಿಗೆ ಸಮನ್ವಯ ಸಾಧಿಸಿದೆ. ಕುಡಿಯುವ ನೀರು ಹಾಗೂ ಯುಜಿಡಿ ಕಾಮಗಾರಿಗೆ ₹27 ಕೋಟಿಗೂ ಅಧಿಕ ಅನುದಾನ ಪಡೆದಿದ್ದೇನೆ. ಇದನ್ನೇ ಅನುಮಾನದಿಂದ ನೋಡಲಾಯಿತು. ಚುನಾವಣೆಯ ಸಮಯದಲ್ಲಿ ನನ್ನ ಸೋಲಿಗೆ ಬಿಜೆಪಿ ಸ್ಥಳೀಯ ನಾಯಕರೇ ಪ್ರಯತ್ನಿಸಿದರು. ಅವರ ವಿರುದ್ಧ ದೂರು ಸಲ್ಲಿಸಿದರೂ ಕ್ರಮವಾಗಲಿಲ್ಲ. ಸ್ಥಳೀಯ ನಾಯಕರಿಂದಲೇ ಪಕ್ಷ ವಿರೋಧಿ ಚಟುವಟಿಕೆಯಾಗುತ್ತಿದೆ' ಎಂದು ದೂರಿದರು.

'ಸಮ್ಮಿಶ್ರ ಸರ್ಕಾರದ ಅವಧಿಯ ಕಹಿ ಘಟನೆಗಳು ಅಂದು ಕಾಂಗ್ರೆಸ್ ತೊರೆಯುವಂತೆ ಮಾಡಿತು. ಕಾಂಗ್ರೆಸ್‌ಗೆ ರಾಜೀನಾಮೆ ನೀಡಿದ್ದು ನನ್ನ ರಾಜಕೀಯ ಜೀವನದ ಅತಿ ಕೆಟ್ಟ ನಿರ್ಧಾರ. ಪಕ್ಷ ಸೇರ್ಪಡೆಯ ಆರಂಭದಲ್ಲಿ ಬಿಜೆಪಿ ನನಗೆ ಜಾಮೂನು, ಜಿಲೇಬಿ ನೀಡಿ ಸ್ವಾಗತ ನೀಡಿತು. ಕಾಲ ಕಳೆದಂತೆ ವಿಷ ಪ್ರಾಶನದ ಅನುಭವವಾಯಿತು' ಎಂದು ದೂರಿದರು.

'ಸೋಮಶೇಖರ್ ಬೆಂಬಲ ನಿರಾಕರಿಸುವ ಮೂಲಕ ಶೋಭಾ ಕರಂದ್ಲಾಜೆ ಅವರು ಯಶವಂತಪುರ ಕ್ಷೇತ್ರದ ಮತದಾರರಿಗೆ ಅಪಮಾನ ಮಾಡಿದ್ದಾರೆ. ಚುನಾವಣೆಯಲ್ಲಿ ಮತದಾರರು ಅವರಿಗೆ ಸೂಕ್ತ ಉತ್ತರ ನೀಡಬೇಕು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಬೆಂಗಳೂರು ಉತ್ತರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರೊ ಎಂ.ವಿ. ರಾಜೀವ್ ಗೌಡ, ನೆಲಮಂಗಲ ಶಾಸಕ ಶ್ರೀನಿವಾಸ್, ಮುಖಂಡರಾದ ಆರ್ಯ ಶ್ರೀನಿವಾಸ್, ರಾಜಣ್ಣ, ರಾಜ್ ಕುಮಾರ್, ಚಿಕ್ಕರಾಜು ಉಪಸ್ಥಿತರಿದ್ದರು.

ಕಾರ್ಯಕರ್ತರ ಸಭೆಯಲ್ಲಿ ಶಾಸಕ ಎಸ್‌.ಟಿ.ಸೋಮಶೇಖರ್ ಮಾತನಾಡಿದರು

'ಕೈ' ಹಿಡಿದ ಆರ್. ಶಂಕರ್

ಬೆಂಗಳೂರು: ಮಾಜಿ ಸಚಿವ ಆರ್. ಶಂಕರ್ ಶುಕ್ರವಾರ ಬಿಜೆಪಿ ತೊರೆದು ಕಾಂಗ್ರೆಸ್ ಪಕ್ಷ ಸೇರಿದರು. ಹಾವೇರಿ ಜಿಲ್ಲೆಯ ರಾಣೆಬೆನ್ನೂರು ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಅವರ ಹಲವು ಬೆಂಬಲಿಗರೂ ಕಾಂಗ್ರೆಸ್ ಪಕ್ಷ ಸೇರಿದರು.

ಕೆಪಿಸಿಸಿ ಕಚೇರಿಯಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಪಕ್ಷದ ಬಾವುಟ ನೀಡುವ ಮೂಲಕ ಶಂಕರ್ ಮತ್ತು ಅವರ ಬೆಂಬಲಿಗರನ್ನು ಸ್ವಾಗತಿಸಿದರು.

ಶಂಕರ್ 2018ರ ವಿಧಾನಸಭಾ ಚುನಾವಣೆಯಲ್ಲಿ ರಾಣೆಬೆನ್ನೂರು ವಿಧಾನಸಭಾ ಕ್ಷೇತ್ರದಲ್ಲಿ ತಮ್ಮದೇ ನಾಯಕತ್ವದ ಕರ್ನಾಟಕ ಪ್ರಜ್ಞಾವಂತ ಜನತಾ ಪಕ್ಷದಿಂದ ಸ್ಪರ್ಧಿಸಿ ಜಯ ಗಳಿಸಿದ್ದರು. ನಂತರ ತಮ್ಮ ಪಕ್ಷವನ್ನು ಕಾಂಗ್ರೆಸ್‌ನಲ್ಲಿ ವಿಲೀನಗೊಳಿಸಿ, ಜೆಡಿಎಸ್- ಕಾಂಗ್ರೆಸ್ ಸಮ್ಮಿಶ್ರ ಸರ್ಕಾರದಲ್ಲಿ ಸಚಿವರಾಗಿದ್ದರು.

ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಪತನಗೊಳ್ಳುವ ಸಂದರ್ಭದಲ್ಲಿ ಬಿಜೆಪಿಗೆ ಬೆಂಬಲ ಸೂಚಿಸಿ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು. ನಂತರ ನಡೆದ ಉಪ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ನೀಡಿರಲಿಲ್ಲ. ಉಪ ಚುನಾವಣೆ ಬಳಿಕ ಅವರನ್ನು ವಿಧಾನ ಪರಿಷತ್ ಸದಸ್ಯರನ್ನಾಗಿ ಆಯ್ಕೆ ಮಾಡಲಾಗಿತ್ತು.

2023ರ ವಿಧಾನಸಭಾ ಚುನಾವಣೆಯಲ್ಲಿ ರಾಣೆಬೆನ್ನೂರು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಟಿಕೆಟ್ ಕೈತಪ್ಪಿದ ಬಳಿಕ ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿ ಶರದ್ ಪವಾರ್ ನೇತೃತ್ವದ ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ (ಎನ್‌ಸಿಪಿ) ಸೇರಿದ್ದರು. ಎನ್‌ಸಿಪಿಯಿಂದ ವಿಧಾನಸಭಾ ಚುನಾವಣೆಗೆ ಸ್ಪರ್ಧಿಸಿ ಸೋತಿದ್ದರು.

'ವಿಶ್ವನಾಥ್ ಅವಕಾಶವಾದಿ'

ಬೆಂಗಳೂರು: 'ವಿಧಾನ ಪರಿಷತ್‌ನ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್, ಮೈಸೂರು ರಾಜವಂಶಸ್ಥರನ್ನು ಅವಿರೋಧವಾಗಿ ಆಯ್ಕೆ ಮಾಡಿ ಎಂದು ಹಪಹಪಿಸುತ್ತಿರುವುದು ದ್ರಾಕ್ಷಿ ಸಿಗದ ಗುಳ್ಳೆನರಿಯೊಂದು 'ದ್ರಾಕ್ಷಿ ಹುಳಿ' ಎಂದಂತಾಗಿದೆ' ಎಂದು ರಾಮಮನೋಹರ್ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಬಿ.ಎಸ್. ಶಿವಣ್ಣ ಹೇಳಿದ್ದಾರೆ.

'ಅವರಿಗೆ ರಾಜಕೀಯ ಜನ್ಮ ನೀಡಿದ್ದ ದೇವರಾಜ ಅರಸು ಅವರ ಬೆನ್ನಿಗೆ ಚೂರಿ ಹಾಕಿ, ಗುಂಡೂರಾವ್ ಅವರ ಪಾಳಯಕ್ಕೆ ಬಂದಿದ್ದ ವಿಶ್ವನಾಥ್ ಅವರಿಗೆ, ಅರಸು ಅವರು ರಾಜವಂಶದವರು ಎಂದು ತಿಳಿದಿರಲಿಲ್ಲವೇ? ಅವರ ಸಾಮಾಜಿಕ ನ್ಯಾಯದ ಅಭಿವೃದ್ಧಿ ಗೋಚರಿಸಿರಲಿಲ್ಲವೇ' ಎಂದು ಪ್ರಶ್ನಿಸಿದ್ದಾರೆ.

'ವಿಶ್ವನಾಥ್, ಅನುಕೂಲಸಿಂಧು ಹಾಗೂ ಅವಕಾಶವಾದಿ ರಾಜಕಾರಣವನ್ನೇ ಮೈಗೂಡಿಸಿಕೊಂಡಿದ್ದಾರೆ' ಎಂದು ಟೀಕಿಸಿದ್ದಾರೆ.

ಮಾಜಿ ಸಚಿವ ಶಿವಶಂಕರ ರೆಡ್ಡಿ ಜೊತೆ ಮಾತುಕತೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ. ಸಚಿವ ಡಾ.ಎಂ.ಸಿ.ಸುಧಾಕರ್, ಕಾಂಗ್ರೆಸ್ ಜಿಲ್ಲಾ ಅಧ್ಯಕ್ಷ ಕೇಶವರೆಡ್ಡಿ ಇದ್ದರು

ಹಿತಕಾಯುವ ಭರವಸೆ ನೀಡಿದ ಸಿ.ಎಂ

ಪ್ರಜಾವಾಣಿ ವಾರ್ತೆ

ಗೌರಿಬಿದನೂರು: ಮಾಜಿ ಸಚಿವ ಎನ್.ಎಚ್.ಶಿವಶಂಕರ ರೆಡ್ಡಿ ಅವರ ಮುನಿಸನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿಯೂ ಆದ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ತಣಿಸಿದ್ದಾರೆ.

ಶುಕ್ರವಾರ ಬೆಂಗಳೂರಿನಲ್ಲಿ ಸಿ.ಎಂ, ಡಿಸಿಎಂ ಶಿವಶಂಕರ ರೆಡ್ಡಿ ಜೊತೆ ಮಾತುಕತೆ ನಡೆಸಿದರು. ಈ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಮತ್ತು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಕೇಶವರೆಡ್ಡಿ ಸಹ ಇದ್ದರು.

ಶಿವಶಂಕರ ರೆಡ್ಡಿ ಅವರು ಇಲ್ಲಿಯವರೆಗೆ ಲೋಕಸಭೆ ಚುನಾವಣೆಗೆ ಸಂಬಂಧಿಸಿದ ಯಾವುದೇ ಪ್ರಚಾರ ಸಭೆಗಳಲ್ಲಿಯೂ ಪಾಲ್ಗೊಂಡಿಲ್ಲ.

ಈಗ ಗೌರಿಬಿದನೂರಿನ ಸಂತೆ ಮೈದಾನದಲ್ಲಿ ಭಾನುವಾರ ನಡೆಯುವ ಕಾಂಗ್ರೆಸ್ ಕಾರ್ಯಕರ್ತರ ಸಮಾವೇಶದಲ್ಲಿ ಭಾಗಿಯಾಗುವ ಮೂಲಕ ಪಕ್ಷದ ಅಭ್ಯರ್ಥಿ ಪರ ಪ್ರಚಾರ ನಡೆಸಲು ಮುಂದಾಗಿದ್ದಾರೆ.

ಜೊಲ್ಲೆ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದು

ಬೆಂಗಳೂರು: ಕಳೆದ ವಿಧಾನಸಭೆ ಚುನಾವಣೆ ವೇಳೆ ಚುನಾವಣಾ ಅಕ್ರಮ ನಡೆಸಿದ ಆರೋಪದಡಿ ನಿಪ್ಪಾಣಿ ಶಾಸಕಿ ಶಶಿಕಲಾ ಅಣ್ಣಾಸಾಹೇಬ ಜೊಲ್ಲೆ ವಿರುದ್ಧ ದಾಖಲಿಸಲಾಗಿದ್ದ ಕ್ರಿಮಿನಲ್ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ಪ್ರಕರಣ ರದ್ದು ಕೋರಿ ಶಶಿಕಲಾ ಜೊಲ್ಲೆ ಸಲ್ಲಿಸಿದ್ದ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣ'ಗಳ ವಿಶೇಷ ಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಶಶಿಕಲಾ ಜೊಲ್ಲೆ ಪರ ವಾದ ಮಂಡಿಸಿದ ವಕೀಲ ಶಿವರಾಜ್ ಎಸ್.ಬಲ್ಲೊಳ್ಳಿ, 'ಇದೊಂದು ರಾಜಕೀಯ ದುರುದ್ದೇಶದಿಂದ ಕೂಡಿದ ಪ್ರಕರಣ. ಅರ್ಜಿದಾರರ ಏಜೆಂಟ್ ಜೇಬಿನಲ್ಲಿ ₹ 10 ಸಾವಿರ ನಗದು ಇತ್ತು ಎಂಬ ಏಕೈಕ ಕಾರಣಕ್ಕೆ ಈ ಪ್ರಕರಣ ದಾಖಲಿಸಲಾಗಿದೆ. ಇದು ಲಂಚದ ಹಣ ಎಂಬುದನ್ನು ಸಾಬೀತುಪಡಿಸಲು ಯಾವುದೇ ಸಾಕ್ಷ್ಯಗಳಿಲ್ಲ' ಎಂದು ಮನವರಿಕೆ ಮಾಡಿಕೊಟ್ಟರು.ಇದನ್ನು ಮಾನ್ಯ ಮಾಡಿದ ನ್ಯಾಯಪೀಠ ಪ್ರಕರಣ ರದ್ದುಪಡಿಸಿ ಆದೇಶಿಸಿತು.

ಲೋಕಸಭೆ ಚುನಾವಣೆ 2024: ಕಾರ್ಮಿಕ ಪ್ರಣಾಳಿಕೆ ಬಿಡುಗಡೆ

'ಎನ್‌ಡಿಎ ಮಣಿಸಲು ಹೋರಾಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರದಲ್ಲಿ ಕಳೆದ ಹತ್ತು ವರ್ಷದಿಂದ ಬಂಡವಾಳ ಶಾಹಿಗಳನ್ನು ಬೆಂಬಲಿಸುವ ಹಾಗೂ ಕಾರ್ಮಿಕ ವಿರೋಧಿ ಪಕ್ಷವು ಆಡಳಿತದಲ್ಲಿದೆ' ಎಂದು ನಗರದಲ್ಲಿ ಶುಕ್ರವಾರ ನಡೆದ ಸಭೆಯಲ್ಲಿ ಆರೋಪಿಸಿದ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್(ಸಿಐಟಿಯು) ಮುಖಂಡರು, ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಎನ್‌ಡಿಎ ಮಣಿಸಲು ಸಂಘಟಿತ ಹೋರಾಟ ರೂಪಿಸುವ ನಿರ್ಣಯವನ್ನು ಕೈಗೊಂಡರು.

ಇದೇ ವೇಳೆ ಅಗತ್ಯ ವಸ್ತುಗಳ ಬೆಲೆ ಏರಿಕೆ ನಿಯಂತ್ರಣ ಹಾಗೂ ರೈತ ವಿರೋಧಿ ಕೃಷಿ ಕಾನೂನು ವಾಪಸ್ ಪಡೆಯುವುದೂ ಸೇರಿದಂತೆ ಹಲವು ಬೇಡಿಕೆಗಳನ್ನು ಈಡೇರಿಸಬೇಕು ಎಂಬ ಹಕ್ಕೊತ್ತಾಯವನ್ನೂ ಮುಖಂಡರು ಮಂಡಿಸಿದರು.

'ಶ್ರೀಮಂತರ ಮೇಲಿನ ತೆರಿಗೆ ಹೆಚ್ಚಿಸಿ ಬಡವರಿಗೆ ಬದುಕಲು ಅವಕಾಶ ಕಲ್ಪಿಸುವ ನೀತಿಗಳನ್ನು ಜಾರಿಗೆ ತರಬೇಕು. ಎಪಿಎಂಸಿ ವ್ಯವಸ್ಥೆ ಬಲಗೊಳಿಸಬೇಕು. ರಸಗೊಬ್ಬರ ಒಳಗೊಂಡಂತೆ ಕೃಷಿ ಹಿಡುವಳಿಗಳಿಗೆ ಸಬ್ಸಿಡಿ ಕಡಿತಗೊಳಿಸುವ ನೀತಿಗಳನ್ನು ಕೈಬಿಡಬೇಕು' ಎಂದು ಆಗ್ರಹಿಸಲಾಯಿತು.

'ರೈಲ್ವೆ, ವಿದ್ಯುತ್ ಒಳಗೊಂಡಂತೆ ಸಾರ್ವಜನಿಕ ಕ್ಷೇತ್ರಗಳ ಎಲ್ಲ ಸ್ವರೂಪದ ಖಾಸಗೀಕರಣವನ್ನು ಕೈಬಿಡಬೇಕು. ಸಾರ್ವಜನಿಕ ರಂಗದ ಕೈಗಾರಿಕೆ ಹಾಗೂ ಸೇವೆಗಳನ್ನು ಬಲಪಡಿಸಬೇಕು' ಎಂದು ಮುಖಂಡರು ಆಗ್ರಹಿಸಿದರು.

'ಕಾರ್ಮಿಕರಿಗೆ ಕನಿಷ್ಠ ವೇತನವನ್ನು ₹31 ಸಾವಿರಕ್ಕೆ ಏರಿಕೆ ಮಾಡಬೇಕು. ಕಾರ್ಮಿಕರ ಕೌಶಲಕ್ಕೆ ತಕ್ಕಂತೆ ವೇತನ ಹೆಚ್ಚಳ ಮಾಡಬೇಕು. ಕೆಲಸದ ಅವಧಿಯನ್ನು ವಾರಕ್ಕೆ ಗರಿಷ್ಠ 36 ಗಂಟೆಗಳು ಹಾಗೂ ದಿನದ ಪಾಳಿಯನ್ನು 6 ಗಂಟೆಗೆ ಸೀಮಿತಗೊಳಿಸಬೇಕು. ಅಲ್ಲದೇ ಉದ್ಯೋಗದ ಅವಕಾಶಗಳನ್ನು ಸೃಷ್ಟಿಸಲು ಗಮನ ನೀಡಬೇಕು' ಎಂದು ಸಭೆಯು ಒತ್ತಾಯಿಸಿತು.

'ದೀರ್ಘಕಾಲಿಕ ಸ್ವರೂಪದಲ್ಲಿರುವ ಎಲ್ಲ ರೀತಿಯ ಉದ್ಯೋಗಗಳಲ್ಲಿ ಗುತ್ತಿಗೆ ಕಾರ್ಮಿಕ ವ್ಯವಸ್ಥೆ ರದ್ದು ಪಡಿಸಬೇಕು. ಗುತ್ತಿಗೆ, ತಾತ್ಕಾಲಿಕ ಕಾರ್ಮಿಕರ ಸೇವೆ ಕಾಯಂಗೊಳಿಸಲು ತಮಿಳುನಾಡು, ಅಸ್ಸಾಂ ಮಾದರಿಯಲ್ಲಿ ಕಾನೂನು ಜಾರಿಗೆ ತರಬೇಕು' ಎಂದು ಸಭೆ ಕೋರಿತು.

'ಕಾರ್ಮಿಕ ಸಂಘಟನೆಗಳಿಗೆ ಕಡ್ಡಾಯ ಮಾನ್ಯತೆ ನೀಡುವ ಕಾನೂನು ಜಾರಿಗೆ ಬರಬೇಕು. ಇಎಸ್‌ಐ, ಇಪಿಎಫ್, ಗ್ರಾಚ್ಯುಟಿ, ಬೋನಸ್ ಕಾಯ್ದೆಯಲ್ಲಿ ವಿಧಿಸಲಾದ ಎಲ್ಲ ವೇತನ ಮಿತಿ ತೆರವುಗೊಳಿಸಬೇಕು. ಪ್ರತಿ ಜಿಲ್ಲಾಮಟ್ಟದಲ್ಲಿ ಕಾರ್ಮಿಕ ನ್ಯಾಯಾಲಯ ಸ್ಥಾಪಿಸಬೇಕು. ಕೈಗಾರಿಕಾ ವಿವಾದಗಳನ್ನು ನಿರ್ದಿಷ್ಟವಾಗಿ ಕಾಲಮಿತಿ ಒಳಗೆ ಇತ್ಯರ್ಥಗೊಳ್ಳಲು ಸೂಕ್ತ ಕಾನೂನು ತಿದ್ದುಪಡಿಗಾಗಿ ಕ್ರಮ ಕೈಗೊಳ್ಳಬೇಕು' ಎಂದು ಆಗ್ರಹಿಸಿದರು.

ಅಧ್ಯಕ್ಷೆ ಎಸ್.ವರಲಕ್ಷ್ಮಿ ಮಾತನಾಡಿ, 'ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದರೂ ಕೇಂದ್ರ ಸರ್ಕಾರವು ಔದ್ಯೋಗಿಕ ಸುರಕ್ಷತೆ, ಆರೋಗ್ಯ ಮತ್ತು ಕೆಲಸದ ಪರಿಸ್ಥಿತಿಗಳ ಸಂಹಿತೆ-(ಒಎಸ್‌ಎಚ್ ಕೋಡ್)ಯ ಕುರಿತು ಅನಧಿಕೃತವಾಗಿ ಸಭೆ ನಡೆಸಿದೆ. ಕೆಲಸದ ಸ್ಥಳದಲ್ಲಿ ಕಾರ್ಮಿಕರಿಗೆ ಸುರಕ್ಷತೆಯಿತ್ತು. ಅದನ್ನು ವಾಪಸ್ ಪಡೆಯುವ ಷಡ್ಯಂತ್ರ ನಡೆಯುತ್ತಿದೆ. ಇದು ಖಂಡನಾರ್ಹ. ಚುನಾವಣೆ ಹೊತ್ತಿನಲ್ಲೂ ಕಾರ್ಯಾಂಗವು ಬಂಡವಾಳಶಾಹಿಗಳ ಪರವಾಗಿ ಕೆಲಸ ಮಾಡುತ್ತಿದೆ' ಎಂದು ಆಪಾದಿಸಿದರು.

ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ಮುಖಂಡರಾದ ಎಚ್.ಎಸ್. ಸುನಂದಾ, ಕೆ.ಪ್ರಕಾಶ್, ಮಹಾಂತೇಶ್ ಹಾಜರಿದ್ದರು.

ನಗರದಲ್ಲಿ ಶುಕ್ರವಾರ ನಡೆದ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ಸ್ ಸಭೆಯಲ್ಲಿ 'ಲೋಕಸಭೆ ಚುನಾವಣೆ 2024: ಕಾರ್ಮಿಕ ಪ್ರಣಾಳಿಕೆ'ಯನ್ನು ಗಣ್ಯರು ಬಿಡುಗಡೆ ಮಾಡಿದರು.

ಹಕ್ಕೊತ್ತಾಯಗಳು

- ಎಲ್ಲ ಮಾದರಿ ಕಾರ್ಮಿಕರಿಗೂ ವಸತಿ ಯೋಜನೆ ಜಾರಿಗೊಳಿಸಿ
- ವಿಮಾ ಏಜೆಂಟರನ್ನು ಅಸಂಘಟಿತ ಕಾರ್ಮಿಕರೆಂದು ಪರಿಗಣಿಸಿ 'ಕಲ್ಯಾಣ ನಿಧಿ', 'ಪಿಂಚಣಿ ಯೋಜನೆ' ಜಾರಿಗೆ ಆಗ್ರಹ
- ಬೀಡಿ ಕಾರ್ಮಿಕರಿಗೆ ಪರ್ಯಾಯ ಉದ್ಯೋಗ, ಪರಿಹಾರ ಯೋಜನೆ ರೂಪಿಸಿ
- ಉದ್ಯೋಗ ಖಾತ್ರಿ: ದಿನಗೂಲಿ ಮೊತ್ತ ₹700ಕ್ಕೆ ಏರಿಸಿ
- ಉಚಿತ ಶಿಕ್ಷಣ ದೊರೆಯಬೇಕು
- ಎನ್‌ಇಪಿ ನಿಲ್ಲಿಸಬೇಕು

ಬಟ್ಟೆ ವ್ಯಾಪಾರಿಯ ಸೋಗಿನಲ್ಲಿ ಡ್ರಗ್ಸ್ ಮಾರುತ್ತಿದ್ದವನ ಬಂಧನ

₹2 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಟ್ಟೆ ವ್ಯಾಪಾರಿ ಸೋಗಿನಲ್ಲಿ ಡ್ರಗ್ಸ್ ಮಾರುತ್ತಿದ್ದ ಆರೋಪದಡಿ ಸೇಕಾ ಗಿಸಲೈನ್ ಟಾನೊ (33) ಎಂಬಾತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

'ಐವರಿ ಕೋಸ್ಟ್‌ದ ಟಾನೊ, 2022ರಲ್ಲಿ ಬೆಂಗಳೂರಿಗೆ ಬಂದಿದ್ದ. ಹೊಂಗಸಂದ್ರದ ಮನೆಯಲ್ಲಿ ಉಳಿದುಕೊಂಡಿದ್ದ. ಬಟ್ಟೆ ವ್ಯಾಪಾರದ ಸೋಗಿನಲ್ಲಿ ಪರಿಚಯಸ್ಥರಿಗೆ ಡ್ರಗ್ಸ್ ಮಾರುತ್ತಿದ್ದ. ಖಚಿತ ಮಾಹಿತಿ ಮೇರೆಗೆ ದಾಳಿ ಮಾಡಿ ಈತನನ್ನು ಸೆರೆ ಹಿಡಿಯಲಾಗಿದೆ' ಎಂದು ಪೊಲೀಸರು ಹೇಳಿದರು.

'₹ 2 ಕೋಟಿ ಮೌಲ್ಯದ 2 ಕೆ.ಜಿ 24 ಗ್ರಾಂ ತೂಕದ ಎಂಡಿಎಂಎ ಮಾತ್ರೆಗಳು, ಮೊಬೈಲ್ ಹಾಗೂ ತೂಕದ ಯಂತ್ರ ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

ಜಾಮೀನು ಮೇಲೆ ಹೊರಬಂದಿದ್ದ: 'ಮುಂಬೈನಲ್ಲೂ ಆರೋಪಿ ಕೆಲ ತಿಂಗಳು ನೆಲೆಸಿದ್ದ. ಅಲ್ಲಿಯೂ ಬಟ್ಟೆ ವ್ಯಾಪಾರಿ ಎಂಬುದಾಗಿ ಹೇಳಿಕೊಂಡು ಸುತ್ತಾಡುತ್ತಿದ್ದ. ಕೆಲ ಪೆಡ್ಲರ್‌ಗಳ ಜತೆ ಒಡನಾಟ ಇಟ್ಟುಕೊಂಡು, ಅವರಿಂದ ಡ್ರಗ್ಸ್ ಖರೀದಿಸಿ ಮಾರುತ್ತಿದ್ದ' ಎಂದು ಪೊಲೀಸರು ಹೇಳಿದರು.

'ಡ್ರಗ್ಸ್ ಮಾರುತ್ತಿದ್ದ ಸಂದರ್ಭದಲ್ಲಿಯೇ ಶಂಕರಪುರ ಪೊಲೀಸರ ಕೈಗೆ ಆರೋಪಿ ಸಿಕ್ಕಿಬಿದ್ದಿದ್ದ. ಕೆಲ ದಿನ ಜೈಲಿನಲ್ಲಿದ್ದ ಈತ, ಜಾಮೀನು ಮೇಲೆ ಹೊರಬಂದಿದ್ದ. ಪುನಃ ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ' ಎಂದು ತಿಳಿಸಿದರು.

'ಇನ್‌ಸ್ಪೆಕ್ಟರ್, ಎಸಿಪಿ ಜೀಪುಗಳಿಗೆ ಡ್ಯಾಶ್ ಕ್ಯಾಮೆರಾ'

ಬೆಂಗಳೂರು: ಇನ್‌ಸ್ಪೆಕ್ಟರ್, ಎಸಿಪಿ ಹಾಗೂ ಇತರೆ ಪೊಲೀಸರು ಬಳಸುವ ಜೀಪುಗಳಿಗೆ ಡ್ಯಾಶ್ ಕ್ಯಾಮೆರಾ ಅಳವಡಿಸಲು ತೀರ್ಮಾನಿಸಲಾಗಿದ್ದು, ಈ ಬಗ್ಗೆ ಕಮಿಷನರ್ ಬಿ. ದಯಾನಂದ್ ಅವರು ಮಾಹಿತಿ ಹಂಚಿಕೊಂಡಿದ್ದಾರೆ.

ಪೊಲೀಸರ ಹೊಯ್ಸಳ ಗಸ್ತು ವಾಹನಗಳಿಗೆ ಈಗಾಗಲೇ ಡ್ಯಾಶ್ ಕ್ಯಾಮೆರಾ ಅಳವಡಿಸಲಾಗಿದೆ. ಇದಕ್ಕೆ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದರಿಂದ, ಪೊಲೀಸರ ಎಲ್ಲ ಜೀಪುಗಳಿಗೆ ಡ್ಯಾಶ್ ಕ್ಯಾಮೆರಾ ಅಳವಡಿಕೆ ಮಾಡಲು ಕಮಿಷನರ್ ಅವರು ನಿರ್ಧರಿಸಿದ್ದಾರೆ.

'ಪಾರದರ್ಶಕ ಆಡಳಿತ ವ್ಯವಸ್ಥೆ ಜಾರಿಗೊಳಿಸಲು ಜೀಪುಗಳಿಗೆ ಡ್ಯಾಶ್ ಕ್ಯಾಮೆರಾ ಅಳವಡಿಕೆ ಮಾಡಲಾಗುತ್ತಿದೆ. ಜೀಪುಗಳ ಕ್ಯಾಮೆರಾದಲ್ಲಿ ದಾಖಲಾಗುವಂತಹ ಪ್ರತಿ ದೃಶ್ಯಗಳನ್ನು ಕಮಾಂಡ್ ಕೇಂದ್ರದಲ್ಲಿ ವೀಕ್ಷಿಸಬಹುದು. ಯಾರಾದರೂ ಪೊಲೀಸರು ಕರ್ತವ್ಯ ಲೋಪ ಎಸಗಿದರೆ, ಪರಿಶೀಲನೆ ನಡೆಸಿ ಕ್ರಮ ಜರುಗಿಸಲು ಸಾಧ್ಯವಾಗಲಿದೆ' ಎಂದು ಕಮಿಷನರ್ ಹೇಳಿದ್ದಾರೆ.

ಔಷಧಿ ಬೆರೆಸಿದ್ದ ಮಜ್ಜಿಗೆ ಕುಡಿಸಿ ಚಿನ್ನಾಭರಣ ಕಳವು

ಬೆಂಗಳೂರು: ಪೇಯಿಂಗ್ ಗೆಸ್ಟ್ (ಪಿ.ಜಿ) ಕಟ್ಟಡದ ಮಾಲೀಕರೊಬ್ಬರಿಗೆ ಮತ್ತು ಬರುವ ಔಷಧಿ ಬೆರೆಸಿದ್ದ ಮಜ್ಜಿಗೆ ಕುಡಿಸಿ ಚಿನ್ನಾಭರಣ ಕದ್ದಿದ್ದ ಆರೋಪಿ ರಾಜೇಶ್ವರಿ (27) ಎಂಬುವವರನ್ನು ಹಲಸೂರು ಪೊಲೀಸರು ಬಂಧಿಸಿದ್ದಾರೆ.

'ಜೀವನ್‌ಬಿಮಾನಗರ ಬಳಿಯ ಮಲ್ಲೇಶ್ ಪಾಳ್ಯದ ರಾಜೇಶ್ವರಿ, ಪೇಯಿಂಗ್ ಗೆಸ್ಟ್ ಕಟ್ಟಡದಲ್ಲಿಯೇ ಅಡುಗೆ ಕೆಲಸ ಮಾಡಿಕೊಂಡಿದ್ದರು. ಅದೇ ಕಟ್ಟಡದ ಮಾಲೀಕರಾಗಿದ್ದ ಮಹಿಳೆಯ ಚಿನ್ನಾಭರಣ ಕದ್ದಿದ್ದರು. ಈ ಬಗ್ಗೆ ದೂರು ದಾಖಲಾಗುತ್ತಿದ್ದಂತೆ ರಾಜೇಶ್ವರಿ ಅವರನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಬಂಧಿತ ಆರೋಪಿಯಿಂದ ₹7.80 ಲಕ್ಷ ಮೌಲ್ಯದ 130 ಗ್ರಾಂ ತೂಕದ ಚಿನ್ನಾಭರಣ ಜಪ್ತಿ ಮಾಡಲಾಗಿದೆ' ಎಂದರು.

ಚಿನ್ನಾಭರಣ ಮಾರಿದ್ದ ಆರೋಪಿ: 'ಪತಿಯಿಂದ ದೂರವಾಗಿದ್ದ ರಾಜೇಶ್ವರಿ, ಅಡುಗೆ ಕೆಲಸಕ್ಕೆ ಸೇರಿಕೊಂಡಿದ್ದರು. ಪೇಯಿಂಗ್ ಗೆಸ್ಟ್ ಕಟ್ಟಡದ ಮಾಲೀಕರಾದ ಮಹಿಳೆ ಸಹ ರಾಜೇಶ್ವರಿ ಕೆಲಸಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದರು' ಎಂದು ಪೊಲೀಸರು ತಿಳಿಸಿದರು.

'ಮಾಲೀಕರಾದ ಮಹಿಳೆ, ಇತ್ತೀಚೆಗೆ ಸುಸ್ತಾಗಿ ಮಲಗಿದ್ದರು. ಅವರ ಕೈ–ಕಾಲು ಒತ್ತಿದ್ದ ಆರೋಪಿ, ಕುಡಿಯಲು ಮಜ್ಜಿಗೆ ಕೊಟ್ಟಿದ್ದರು. ಮಜ್ಜಿಗೆ ಕುಡಿಯುತ್ತಿದ್ದಂತೆ ಮಹಿಳೆ, ಪ್ರಜ್ಞೆ ತಪ್ಪಿದ್ದರು. ನಂತರ, ಆರೋಪಿ ಚಿನ್ನಾಭರಣ ಕದ್ದುಕೊಂಡು ಮಳಿಗೆಯೊಂದಕ್ಕೆ ಹೋಗಿದ್ದರು. ಆಭರಣಗಳನ್ನು ಮಾರಿ, ಹಣ ಪಡೆದಿದ್ದರು. ಪುನಃ, ಪೇಯಿಂಗ್ ಗೆಸ್ಟ್ ಕಟ್ಟಡಕ್ಕೆ ಬಂದಿದ್ದರು.'

'ಕೆಲ ಹೊತ್ತಿನ ನಂತರ ಮಹಿಳೆ ಎಚ್ಚರಗೊಂಡಿದ್ದರು. ಚಿನ್ನಾಭರಣ ಕಳ್ಳತನವಾಗಿದ್ದು ಗೊತ್ತಾಗಿತ್ತು. ರಾಜೇಶ್ವರಿ ಹಾಗೂ ಇತರರನ್ನು ವಿಚಾರಿಸಿದಾಗ, ತಾವು ಕದ್ದಿಲ್ಲವೆಂದು ಹೇಳಿದ್ದರು. ಬಳಿಕವೇ ಅವರು ಠಾಣೆಗೆ ದೂರು ನೀಡಿದ್ದರು. ತನಿಖೆ ಕೈಗೊಂಡಾಗ, ರಾಜೇಶ್ವರಿ ಮೇಲೆ ಅನುಮಾನ ಬಂದಿತ್ತು. ವಶಕ್ಕೆ ಪಡೆದು ವಿಚಾರಿಸಿದಾಗ, ತಪ್ಪು ಒಪ್ಪಿಕೊಂಡರು' ಎಂದು ಹೇಳಿದರು.

ಕ್ಯಾಷಿಯರ್ ಮೇಲೆ ಹಲ್ಲೆ: ಸಹೋದ್ಯೋಗಿ ಸೇರಿ ಐವರ ಬಂಧನ

ಬೆಂಗಳೂರು: ವೃತ್ತಿ ವೈಷಮ್ಯದಿಂದಾಗಿ ಕಂಪನಿಯೊಂದರ ಕ್ಯಾಷಿಯರ್ ಮೇಲೆ ಹಲ್ಲೆ ಮಾಡಿದ್ದ ಆರೋಪದಡಿ ಸಹೋದ್ಯೋಗಿ ಸೇರಿ ಐವರನ್ನು ಹೆಣ್ಣೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಕಸ್ತೂರಿ ನಗರದ ಉಮಾಶಂಕರ್ ರೆಡ್ಡಿ (37), ಕೆ.ಆರ್. ಪುರ ಟಿ.ಸಿ.ಪಾಳ್ಯದ ಅನುಷ್ ಕ್ಯಾಲ್ವಿನ್ (23), ಮುತ್ತು (19) ಹಾಗೂ ಕಲ್ಯಾಣನಗರದ ವಿನೀಷ್ (26) ಬಂಧಿತರು. ಇವರೆಲ್ಲರೂ ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ಪೊಲೀಸರು ಹೇಳಿದರು.

'ಮಾರ್ಚ್ 31ರಂದು ಸಂಜೆ ಹೆಣ್ಣೂರು ಬಳಿಯ ಹೊರ ವರ್ತುಲ ರಸ್ತೆಯಲ್ಲಿ ವ್ಯಕ್ತಿಯೊಬ್ಬರ ಮೇಲೆ ಮಾರಕಾಸ್ತ್ರಗಳಿಂದ ಹಲ್ಲೆ ಮಾಡಲಾಗಿತ್ತು. ಇದರ ವಿಡಿಯೊ ಚಿತ್ರೀಕರಿಸಿದ್ದ ವ್ಯಕ್ತಿಯೊಬ್ಬರು, ಸಾಮಾಜಿಕ ಮಾಧ್ಯಮಗಳಲ್ಲಿ ಅಪ್‌ಲೋಡ್ ಮಾಡಿದ್ದರು. ವಿಡಿಯೊ ಆಧರಿಸಿ ತನಿಖೆ ಕೈಗೊಂಡು ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ತಿಳಿಸಿದರು.

ಕಂಪನಿ ಕೆಲಸದಲ್ಲಿ ವೈಷಮ್ಯ: 'ಹಲ್ಲೆಗೀಡಾಗಿದ್ದ ವ್ಯಕ್ತಿಯನ್ನು ಪತ್ತೆ ಮಾಡಿ ಹೇಳಿಕೆ ಪಡೆಯಲಾಯಿತು. ಅವರು, ಕಂಪನಿಯೊಂದರಲ್ಲಿ ಕ್ಯಾಷಿಯರ್ ಆಗಿರುವುದು ಗೊತ್ತಾಯಿತು. ಅದೇ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದ ಉಮಾಶಂಕರ್ ರೆಡ್ಡಿ, ದೂರುದಾರರ ಮೇಲೆ ವೃತ್ತಿ ವೈಷಮ್ಯ ಇಟ್ಟುಕೊಂಡಿದ್ದ. ತನ್ನ ಸ್ನೇಹಿತರ ಜೊತೆ ಸೇರಿ ದೂರುದಾರರ ಮೇಲೆ ಹಲ್ಲೆ ಮಾಡಿದ್ದ' ಎಂದು ಪೊಲೀಸರು ಹೇಳಿದರು.

ರಾಮೇಶ್ವರಂ ಕೆಫೆ ಸ್ಫೋಟ: ಎನ್‌ಐಎ ಮಾಹಿತಿ

'ಬಾಂಬ್ ಇಟ್ಟಿದ್ದು ಮುಸಾವೀರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದಿ ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಇರಿಸಿದ್ದು ತೀರ್ಥಹಳ್ಳಿಯ ಮುಸಾವೀರ್ ಹುಸೇನ್ ಶಾಜೀಬ್' ಎಂದು ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಕರಣದ ಬಗ್ಗೆ ಶುಕ್ರವಾರ ಪತ್ರಿಕಾ ಹೇಳಿಕೆ ನೀಡಿರುವ ಅವರು, 'ಮುಸಾವೀರ್ ಬಾಂಬ್ ಇಟ್ಟಿದ್ದ ನೆಂಬುದಕ್ಕೆ ಹಲವು ಪುರಾವೆಗಳು ಸಿಕ್ಕಿವೆ. ಹೀಗಾಗಿ, ಈತನೇ ಬಾಂಬ್ ಸ್ಫೋಟದ ಪ್ರಮುಖ ಆರೋಪಿ ಎಂಬುದು ಗೊತ್ತಾಗಿದೆ' ಎಂದಿದ್ದಾರೆ.

'ಮುಸಾವೀರ್ ಕೃತ್ಯಕ್ಕೆ ಅಬ್ದುಲ್ ಮತೀನ್ ಹೆಚ್ಚು ಸಹಕಾರ ನೀಡಿದ್ದ. ಸಂಚಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದ. ಈತನೇ ಕಚ್ಚಾ ಬಾಂಬ್ (ಐಇಡಿ) ತಯಾರಿಸಿದ್ದನೆಂಬ ಮಾಹಿತಿ ಇದೆ' ಎಂದು ಹೇಳಿದ್ದಾರೆ.

'ಕರ್ನಾಟಕ, ತಮಿಳುನಾಡು ಹಾಗೂ ಉತ್ತರ ಪ್ರದೇಶದ 18 ಸ್ಥಳಗಳಲ್ಲಿ ಇತ್ತೀಚೆಗೆ ಶೋಧ ನಡೆದಿತ್ತು. ಆ ವೇಳೆ ಶಂಕಿತರ ಬಗ್ಗೆ ಹಲವು ಪುರಾವೆಗಳನ್ನು ಸಂಗ್ರಹಿಸಲಾಗಿದೆ. ಶೋಧದ ಬಳಿಕ ಬಂಧಿಸಲಾಗಿದ್ದ ಮುಜಮೀಲ್‌ನನ್ನು ವಿಚಾರಣೆ ನಡೆಸಿದಾಗ, ಹಲವು ಮಾಹಿತಿ ಬಾಯಿಬಿಟ್ಟಿದ್ದಾನೆ' ಎಂದು ತಿಳಿಸಿದರು.

'ಭಯೋತ್ಪಾದಕ ಕೃತ್ಯ: ತನಿಖೆಗೆ ಅಡ್ಡಿ'

'ಇದೊಂದು ಭಯೋತ್ಪಾದಕ ಕೃತ್ಯ. ಪ್ರತಿಯೊಬ್ಬ ಸಾಕ್ಷಿದಾರರ ಗುರುತಿನ ಮಾಹಿತಿ ಗೌಪ್ಯವಾಗಿರುತ್ತದೆ. ಇವರಿಗೆ ಸಂಬಂಧಪಟ್ಟ ಯಾವುದೇ ಮಾಹಿತಿ ಹೊರಗೆ ಬಂದರೆ, ಅಪಾಯ ಹೆಚ್ಚು. ಹೀಗಾಗಿ, ಪರಿಶೀಲನೆ ನಡೆಸದೇ ಯಾವುದೇ ಸುದ್ದಿಗಳನ್ನು ಹರಡಬಾರದು. ಸುಳ್ಳು ಸುದ್ದಿಗಳನ್ನು ಹರಡಿದರೆ, ತನಿಖೆಗೆ ಅಡ್ಡಿಯಾಗುತ್ತದೆ' ಎಂದು ಎನ್‌ಐಎ ಅಧಿಕಾರಿಗಳು ಹೇಳಿದ್ದಾರೆ.

ಮುಸಾವೀರ್

ಅಬ್ದುಲ್ ಮತೀನ್

ಆಪ್ತರಿಗೆ ನೋಟಿಸ್: ಮಾರ್ಚ್ 1ರಂದು ನಡೆದಿದ್ದ ಬಾಂಬ್ ಸ್ಫೋಟ ಪ್ರಕರಣದಲ್ಲಿ ಶಂಕಿತ ಮುಜಮೀಲ್ ಶರೀಫ್‌ನನ್ನು ಎನ್‌ಐಎ ಅಧಿಕಾರಿಗಳು ಈಗಾಗಲೇ ಬಂಧಿಸಿದ್ದಾರೆ. ಬಾಂಬ್ ಇರಿಸಿದ್ದ ಎನ್ನಲಾದ ತೀರ್ಥಹಳ್ಳಿಯ ಮುಸಾವೀರ್ ಹುಸೇನ್ ಶಾಜೀಬ್ ಹಾಗೂ ಅದಕ್ಕೆ ಸಹಕರಿಸಿದ್ದ ಅಬ್ದುಲ್ ಮತೀನ್ ಅಹ್ಮದ್ ತಾಹಾ ತಲೆಮರೆಸಿಕೊಂಡಿದ್ದಾರೆ.

'ಮುಸಾವೀರ್ ಹಾಗೂ ಅಬ್ದುಲ್ ಮತೀನ್ ಆಪ್ತರ ಪಟ್ಟಿ ಸಿದ್ಧಪಡಿಸಲಾಗಿದೆ. ಅವರೆಲ್ಲರನ್ನೂ ವಿಚಾರಣೆ ನಡೆಸಲಾಗುತ್ತಿದೆ' ಎಂದು ಎನ್‌ಐಎ ಮೂಲಗಳು ಹೇಳಿವೆ.

ಆದಾಯ ಮೀರಿ ಆಸ್ತಿ: ಸಿಬಿಐಗೆ ಹೈಕೋರ್ಟ್ ಪ್ರಶ್ನೆ

'ಡಿಕೆಶಿ ವಿರುದ್ಧದ ತನಿಖೆ ಏಕೆ ಪೂರ್ಣಗೊಳಿಸಿಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆದಾಯ ಮೀರಿ ಆಸ್ತಿ ಗಳಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿರುದ್ಧ ಎಫ್‌ಐಆರ್ ದಾಖಲಿಸಿ ನಾಲ್ಕು ವರ್ಷಗಳಾದರೂ ವಿಚಾರಣಾ ನ್ಯಾಯಾಲಯಕ್ಕೆ ಇನ್ನೂ ಏಕೆ ಅಂತಿಮ ವರದಿ ಸಲ್ಲಿಸಿಲ್ಲ' ಎಂದು ಹೈಕೋರ್ಟ್ ಸಿಬಿಐ ಅನ್ನು ಪ್ರಶ್ನಿಸಿದೆ.

ಈ ಪ್ರಕರಣದ ತನಿಖೆಗಾಗಿ ನೀಡಿದ್ದ ಅನುಮತಿ ಹಿಂಪಡೆದ ರಾಜ್ಯ ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಸಿಬಿಐ ಮತ್ತು ಬಿಜೆಪಿ ಶಾಸಕ ಬಸನಗೌಡ ಪಾಟೀಲ ಯತ್ನಾಳ್ ಸಲ್ಲಿಸಿರುವ ಅರ್ಜಿಗಳನ್ನು ನ್ಯಾಯಮೂರ್ತಿ ಕೆ. ಸೋಮಶೇಖರ್ ಮತ್ತು ಉಮೇಶ್ ಎಂ.ಅಡಿಗ ಅವರಿದ್ದ ವಿಭಾಗೀಯ ನ್ಯಾಯಪೀಠ ಶುಕ್ರವಾರ ವಿಚಾರಣೆ ನಡೆಸಿತು. ವಿಚಾರಣೆಯ ವೇಳೆ ನ್ಯಾಯಮೂರ್ತಿ ಅಡಿಗ, 'ಸಿಬಿಐ ಇನ್ನೂ ವಿಚಾರಣೆ ಆರಂಭಿಸಿಲ್ಲವೇ' ಎಂದು ಪ್ರಶ್ನಿಸಿದರು.

ಡಿ.ಕೆ ಶಿವಕುಮಾರ್

ಈ ಮಾತಿಗೆ ದನಿಗೂಡಿಸಿದ ನ್ಯಾಯಮೂರ್ತಿ ಸೋಮಶೇಖರ್ 'ನೀವು ಎಫ್‌ಐಆರ್ ದಾಖಲಿಸಿದ್ದು ಯಾವಾಗ, ಏನು ನೀವಿನ್ನೂ 1860 ಐಪಿಸಿಯಲ್ಲೇ ಇದ್ದೀರಾ' ಎಂದು ಸಿಬಿಐ ಪರ ವಕೀಲ ಪಿ.ಪ್ರಸನ್ನ ಕುಮಾರ್ ಅವರನ್ನು ಪ್ರಶ್ನಿಸಿದರು.

ಇದಕ್ಕೆ ಪ್ರಸನ್ನ ಕುಮಾರ್, '2020ರ ಅಕ್ಟೋಬರ್ 3ರಂದೇ ಎಫ್‌ಐಆರ್ ದಾಖಲಿಸಲಾಗಿದೆ. ಕೋವಿಡ್‌ನಿಂದಾಗಿ ಎರಡು ವರ್ಷ ತನಿಖೆ ನಡೆಸಲು ಆಗಿಲ್ಲ. ಒಂದು ವರ್ಷ ಅರ್ಜಿದಾರರು ಪ್ರಕರಣದ ವಿಚಾರಣೆಗೆ ತಡೆ ಪಡೆದುಕೊಂಡ ಕಾರಣ ಯಾವುದೇ ಪ್ರಗತಿ ಆಗಿಲ್ಲ. ಇಷ್ಟೇ ಅಲ್ಲ, ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳು ಹೈಕೋರ್ಟ್‌ನಲ್ಲಿ ಸಲ್ಲಿಸಿರುವ ರಿಟ್ ಅರ್ಜಿ ಮತ್ತು ಮೇಲ್ಮನವಿ ಹಾಗೂ ಈಗಿನ ಅರ್ಜಿಯೂ ಸೇರಿದರೆ ಆರನೇ ಅರ್ಜಿಯಾಗುತ್ತದೆ. ಹೀಗಾಗಿ, ಪ್ರಕರಣದ ತನಿಖೆಯಲ್ಲಿ ಪ್ರಗತಿಯಾಗಿಲ್ಲ. ಬರೀ ಕೋರ್ಟ್‌ನಲ್ಲೇ ಅಲೆದಾಡಿಸುತ್ತಿದ್ದಾರೆ' ಎಂದು ಆಕ್ಷೇಪಿಸಿದರು.

ದಿನದ ಕಲಾಪ ಮುಕ್ತಾಯಗೊಂಡಿದ್ದರಿಂದ ವಿಚಾರಣೆಯನ್ನು ಇದೇ 18ಕ್ಕೆ ಮುಂದೂಡಲಾಯಿತು. ರಾಜ್ಯ ಸರ್ಕಾರದ ಪರ ವಾಗಿ ವಿಶೇಷ ಪ್ರತಿನಿಧಿಯಾಗಿ ಸುಪ್ರೀಂ ಕೋರ್ಟ್ ಹಿರಿಯ ವಕೀಲರಾದ ಕಪಿಲ್ ಸಿಬಲ್ ಹಾಗೂ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಮತ್ತು ಡಿ.ಕೆ.ಶಿವಕುಮಾರ್ ಪರ ಹಿರಿಯ ವಕೀಲರಾದ ಉದಯ ಹೊಳ್ಳ, ಯತ್ನಾಳ್ ಪರ ವೆಂಕಟೇಶ್ ಪಿ.ದಳವಾಯಿ ಅವರು ಹಾಜರಿದ್ದರು.

ನಗರ್ತಪೇಟೆ ಪ್ರಕರಣ

ಮುಖೇಶ್ ವಿರುದ್ಧವೂ ಎಫ್‌ಐಆರ್ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ನಗರ್ತಪೇಟೆಯ ಜುಮ್ಮಾ ಮಸೀದಿ ರಸ್ತೆಯಲ್ಲಿ ಆಜಾನ್ ವೇಳೆ ಹನುಮಾನ್ ಚಾಲೀಸಾ ಹಾಕಿದ್ದಕ್ಕೆ ನಡೆದಿದ್ದ ಗಲಾಟೆ ಪ್ರಕರಣದಲ್ಲಿ ಮೊಬೈಲ್ ಮಳಿಗೆ ಮಾಲೀಕ ಮುಖೇಶ್ (26) ವಿರುದ್ಧವೂ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಆಜಾನ್ ವೇಳೆ ಹನುಮಾನ್ ಚಾಲೀಸಾ ಹಾಕಿದ್ದಕ್ಕೆ ಆಕ್ಷೇಪಿಸಿದ್ದ ಆರೋಪಿಗಳು, ಮಳಿಗೆಗೆ ನುಗ್ಗಿ ಗಲಾಟೆ ಮಾಡಿದ್ದರು. ನನ್ನ ಕೊಲೆಗೂ ಯತ್ನಿಸಿದ್ದರು' ಎಂದು ಆರೋಪಿಸಿ ಮುಖೇಶ್ ದೂರು ನೀಡಿದ್ದರು. ಇದರ ಬೆನ್ನಲ್ಲೇ ಆರೋಪಿಗಳಾದ ಸುಲೇಮಾನ್, ಶಹನವಾಜ್, ರೋಹಿತ್, ತರುಣ್‌ನನ್ನು ಬಂಧಿಸಲಾಗಿತ್ತು' ಎಂದು ಪೊಲೀಸರು ಹೇಳಿದರು.

'ಪ್ರಕರಣದ ಸಂಬಂಧ ಆರೋಪಿ ಸುಲೇಮಾನ್ ಅವರ ತಾಯಿ ಜಬೀನಾ ಸಹ ದೂರು ನೀಡಿದ್ದರು. ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ದಾಖಲಿಸಿಕೊಂಡು, ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗಿತ್ತು. ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸುವಂತೆ ಸೂಚಿಸಿದೆ. ಹೀಗಾಗಿ, ಆರೋಪಿ ಮುಖೇಶ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಆರೋಪಿಗೆ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು' ಎಂದು ತಿಳಿಸಿದರು.

ದೂರಿನ ವಿವರ: 'ಕೃಷ್ಣ ಟೆಲಿಕಾಂ ಮಳಿಗೆ ಮಾಲೀಕ ಮುಖೇಶ್, 3 – 4 ದಿನಗಳಿಂದ ಧ್ವನಿವರ್ಧಕದಲ್ಲಿ ಜೋರಾಗಿ ಹಾಡು ಹಾಕುತ್ತಿದ್ದ. ಅದನ್ನು ಗಮನಿಸಿದ್ದ ನನ್ನ ಮಗ ಸುಲೇಮಾನ್ ಹಾಗೂ ಸ್ನೇಹಿತರಾದ ಶಹನವಾಜ್, ರೋಹಿತ್, ದಡಿಯಾ ಅಲಿಯಾಸ್ ತರುಣ್, ಮೊಬೈಲ್ ಮಳಿಗೆ ಬಳಿ ಹೋಗಿದ್ದರು' ಎಂದು ತಾಯಿ ಜಬೀನಾ ದೂರಿನಲ್ಲಿ ತಿಳಿಸಿದ್ದಾರೆ.

'ಧ್ವನಿವರ್ಧಕ ಶಬ್ದ ಕಡಿಮೆ ಮಾಡುವಂತೆ ಮಗ ಹಾಗೂ ಇತರರು ಮುಖೇಶ್‌ನನ್ನು ಕೋರಿದ್ದರು. 'ರಂಜಾನ್ ಹಬ್ಬವಿದೆ. ಧ್ವನಿವರ್ಧಕದ ಶಬ್ದ ಜೋರಾಗಿದ್ದರೆ, 3,000 ಜನರಿಗೆ ಪ್ರಾರ್ಥನೆ ಸಲ್ಲಿಸಲು ತೊಂದರೆ ಆಗುತ್ತದೆ' ಎಂದೂ ಸುಲೇಮಾನ್ ಹೇಳಿದ್ದ. ಅಷ್ಟಕ್ಕೆ ಮುಖೇಶ್, ಮಗ ಹಾಗೂ ಇತರರ ಮೇಲೆ ಹಲ್ಲೆ ಮಾಡಿದ್ದಾನೆ' ಎಂದು ಜಬೀನಾ ದೂರಿನಲ್ಲಿ ಹೇಳಿದ್ದಾರೆ.

ಬಸ್‌ನಲ್ಲಿ ಏಕಾಏಕಿ ಹೊಗೆ

ಪ್ರಜಾವಾಣಿ ವಾರ್ತೆ

ರಾಮನಗರ: ತಾಲ್ಲೂಕಿನ ಬಿಡದಿ ರೈಲು ನಿಲ್ದಾಣ ಬಳಿ ಇರುವ ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಡಿಪೊದಲ್ಲಿ ನಿಂತಿದ್ದ ಬಸ್ಸೊಂದರಲ್ಲಿ ಶುಕ್ರವಾರ ಇದ್ದಕ್ಕಿದ್ದಂತೆ ಹೊಗೆ ಕಾಣಿಸಿಕೊಂಡಿದ್ದರಿಂದ ಸ್ಥಳದಲ್ಲಿ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಡಿಪೊದ ಹೊರ ಆವರಣದಲ್ಲಿ ಬಿಸಿಲಿನಲ್ಲಿ ನಿಂತಿದ್ದ ಬಸ್‌ನಲ್ಲಿ ಮಧ್ಯಾಹ್ನ 3.30ರ ಹೊತ್ತಿಗೆ ಎಂಜಿನ್‌ನಲ್ಲಿ ಏಕಾಏಕಿಯಾಗಿ ಕಪ್ಪು ಹೊಗೆ ಕಾಣಿಸಿಕೊಳ್ಳಲಾರಂಭಿಸಿತು. ಇನ್ನೇನು ಬೆಂಕಿ ಹೊತ್ತಿಕೊಳ್ಳಲಿದೆ ಎಂದು ಬಸ್ ಅಕ್ಕಪಕ್ಕದಲ್ಲಿದ್ದವರು ದೂರ ಓಡಿದರು. ಆಗ ತಾಂತ್ರಿಕ ಸಿಬ್ಬಂದಿ ಹೊಗೆ ನಂದಿಸುವ ಪ್ರಯತ್ನ ನಡೆಸಿದರು.

ಬಿಸಿಲಿಗೆ ಎಂಜಿನ್ ಹೆಚ್ಚು ಕಾದಿರುವುದರಿಂದಲೂ ಈ ರೀತಿಯ ಸಮಸ್ಯೆಯಾಗಿರುವ ಸಾಧ್ಯತೆ ಇರಬಹುದು. ಘಟನೆಗೆ ನಿಖರ ಕಾರಣ ಕುರಿತು ಡಿಪೊ ಸಿಬ್ಬಂದಿ ಪರಿಶೀಲನೆ ನಡೆಸುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಬಿಡದಿ ರೈಲು ನಿಲ್ದಾಣದ ಬಳಿ ಇರುವ ಬಿಎಂಟಿಸಿ ಎಲೆಕ್ಟ್ರಿಕ್ ಬಸ್ ಡಿಪೊದಲ್ಲಿದ್ದ ಬಸ್ಸಿನಲ್ಲಿ ಶುಕ್ರವಾರ ಇದ್ದಕ್ಕಿದ್ದಂತೆ ಹೊಗೆ ಕಾಣಿಸಿಕೊಂಡಿತು

₹ 86.50 ಲಕ್ಷ ಮೌಲ್ಯದ ಕೊಕೇನ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇವನಹಳ್ಳಿ ಹಾಗೂ ಚನ್ನಮ್ಮನ ಕೆರೆ ಅಚ್ಚುಕಟ್ಟು ಠಾಣೆ ಪೊಲೀಸರು ಪ್ರತ್ಯೇಕ ಕಾರ್ಯಾಚರಣೆ ನಡೆಸಿ, ₹ 86.50 ಲಕ್ಷ ಮೌಲ್ಯದ ಕೊಕೇನ್ ಜಪ್ತಿ ಮಾಡಿದ್ದಾರೆ.

'ದೇವನಹಳ್ಳಿಯ ಪ್ರಸನ್ನಹಳ್ಳಿ ರಸ್ತೆಯಲ್ಲಿ ಇಬ್ಬರು ಆರೋಪಿಗಳು ಕೊಕೇನ್ ಮಾರುತ್ತಿದ್ದರು. ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ ಆರೋಪಿಗಳನ್ನು ಬಂಧಿಸಲಾಗಿದೆ. ಇವರಿಂದ ₹ 80 ಲಕ್ಷ ಮೌಲ್ಯದ 850 ಗ್ರಾಂ ಕೊಕೇನ್, ಎರಡು ಮೊಬೈಲ್, ತೂಕದ ಯಂತ್ರ, ಬ್ಯಾಗ್ ಹಾಗೂ ಕೊಕೇನ್ ತುಂಬಲು ಬಳಸುವ ಪ್ಲಾಸ್ಟಿಕ್ ಪೊಟ್ಟಣಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಇನ್ನೊಂದು ಪ್ರಕರಣದಲ್ಲಿ ತ್ಯಾಗರಾಜನಗರದ ಬಿಬಿಎಂಪಿ ಆಟದ ಮೈದಾನ ಬಳಿ ವಿದೇಶಿ ಪ್ರಜೆಯೊಬ್ಬನನ್ನು ಬಂಧಿಸಲಾಗಿದೆ. ಈತ, ಕಾಲೇಜು ವಿದ್ಯಾರ್ಥಿಗಳಿಗೆ ಕೊಕೇನ್ ಮಾರುತ್ತಿದ್ದನೆಂದು ಗೊತ್ತಾಗಿದೆ. ಆರೋಪಿಯಿಂದ ₹ 6.50 ಲಕ್ಷ ಮೌಲ್ಯದ 81 ಕೊಕೇನ್ ಹಾಗೂ ₹ 2,200 ನಗದು ಜಪ್ತಿ ಮಾಡಲಾಗಿದೆ' ಎಂದು ತಿಳಿಸಿದರು.

83 ಚಾಲಕರ ವಿರುದ್ಧ ಪ್ರಕರಣ: 'ಚುನಾವಣೆ ನಿಮಿತ್ತ ಚೆಕ್‌ಪೋಸ್ಟ್‌ಗಳಲ್ಲಿ ಕರ್ತವ್ಯದಲ್ಲಿರುವ ಪೊಲೀಸರು, ವಾಹನಗಳ ಚಾಲಕರನ್ನು ತಪಾಸಣೆಗೆ ಒಳಪಡಿಸುತ್ತಿದ್ದು ಮದ್ಯ ಕುಡಿದು ವಾಹನ ಚಲಾಯಿಸುತ್ತಿದ್ದ 83 ಚಾಲಕರ ವಿರುದ್ಧ ಪ್ರಕರಣ ದಾಖಲಿಸಲಾಗಿದೆ' ಎಂದು ಪೊಲೀಸ್ ಕಮಿಷನರ್ ಬಿ. ದಯಾನಂದ್ ಹೇಳಿದರು.

IN THE COURT OF THE CIVIL JUDGE AT KUSHALANAGAR
O. S. No. 51 of 2022
Plaintiffs: H. N. Avvanna and others -V/s-
Defendants : B. D. Rani and others
Notice to Defendants No. 19: Smt. Shilpa, aged 32 years. D/O H. H. Prakash, Wife of Harshvardhan, R/O Kariappa Badavane, Kushalnagar Town and Taluk, Kodagu District. **21. Smt. Meghana,** aged 32 years, D/O H. H. Vijayakumar, Wife of Rajesh, **22. Sri Gagan,** aged 30 years, S/O H. H. Vijayakumar, Both R/O No. 1272, 11th Cross, Near Siddanaganga High School, Chandra Lay Out, 1st stage, 1st phase, Nagarabhavi, Bengalore North, Bengalore-560072.
COURT NOTICE
Whereas the above named plaintiffs have filed above suit against you and others for partition of the family property. That the above case stands posted for your appearance on **29-05-24** Therefore all of you are hereby summoned to appear in person or through an advocate on **29-05-2024 at 11.00 A. M.** before the above said Court and statements if any there against. In default, the matter will be heard and determined in your absence.
Given under my hand and seal of the Court on the 28th day of March, 2024
By Order of the Court
Sd/- Chief Ministerial Officer
Civil Judge and JMFC Court, Kushalanagar
K. S. Venkataramana Rao
Advocate for the Plaintiffs.
Kushalanagar.

ಕಿಡಿಗೇಡಿಗಳಿಂದ ಮರಗಳಿಗೆ ಆ್ಯಸಿಡ್

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ಲಗ್ಗೆರೆಯ ಮುನೇಶ್ವರ ಬಡಾವಣೆಯಲ್ಲಿ ಮೂರು ಹೊಂಗೆ ಮರಗಳಿಗೆ ಕಿಡಿಗೇಡಿಗಳು ಆ್ಯಸಿಡ್ ಹಾಕಿದ್ದಾರೆ.

ದುಷ್ಕರ್ಮಿಗಳು ಹಂತ ಹಂತವಾಗಿ ಮರದ ಬುಡಗಳಿಗೆ(ಬೇರುಗಳಿಗೆ) ರಾತ್ರೋರಾತ್ರಿ ಆ್ಯಸಿಡ್ ಹಾಕುತ್ತಿರುವುದರಿಂದ ಮರಗಳು ಒಣಗುತ್ತಿವೆ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಕೆಲವರು ನಿವೇಶನ, ಮನೆಗಳಿಗೆ ತೊಂದರೆಯಾಗುತ್ತದೆ ಎಂದು ಮರಗಳಿಗೆ ಆ್ಯಸಿಡ್ ಹಾಕುತ್ತಿದ್ದಾರೆ. ಇವರು ಮನುಷ್ಯರಲ್ಲ ಎಂದು ದೂರಿದರು.

ಲಗ್ಗೆರೆ ವಾರ್ಡಿನ ಸುತ್ತಮುತ್ತ ಅನೇಕ ಕಾರ್ಖಾನೆ ಮತ್ತು ಗಾರ್ಮೆಂಟ್ಸ್, ಸಣ್ಣ ಕೈಗಾರಿಕೆಗಳಿಂದ ಈ ವ್ಯಾಪ್ತಿಯ ಎಲ್ಲ ಬಡಾವಣೆಗಳ ಜನರಿಗೆ ಶುದ್ಧ ಗಾಳಿ ಸಿಗಲಿ ಎಂದು ಪಾಲಿಕೆಯ ಸದಸ್ಯರಾಗಿದ್ದ ಮಂಜುಳ ನಾರಾಯಣಸ್ವಾಮಿ ಅವರ ನೇತೃತ್ವದಲ್ಲಿ ಗಿಡ ನೆಡಲಾಗಿತ್ತು. ಅವುಗಳು ಬೆಳೆದು ಮರಗಳಾಗಿವೆ.

ಆ್ಯಸಿಡ್ ಹಾಕಿದ್ದರಿಂದ ಒಣಗಿದ ಮರ

ದುಷ್ಕರ್ಮಿಗಳ ವಿರುದ್ಧ ಕ್ರಮ ಕೈಗೊಳ್ಳಲು ಚಂದ್ರೇಗೌಡ ಆಗ್ರಹಿಸಿದರು. ಘಟನೆ ಬಗ್ಗೆ ದೂರು ದಾಖಲಿಸಿದ್ದು, ದುಷ್ಕರ್ಮಿಗಳನ್ನು ಪತ್ತೆ ಹಚ್ಚಲಾಗುತ್ತಿದೆ ಎಂದು ಬಿಬಿಎಂಪಿ ವಲಯ ವಿಭಾಗದ ಉಪ ಅರಣ್ಯಾಧಿಕಾರಿ ಜಗದೀಶ್ ತಿಳಿಸಿದ್ದಾರೆ.

ಸಿಎಸ್‌ಆರ್ ದೇಣಿಗೆ ವಂಚನೆ ಜಾಲ: ನಾಲ್ವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿಷ್ಠಿತ ಕಂಪನಿಗಳಿಂದ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ದೇಣಿಗೆ ಕೊಡಿಸುವುದಾಗಿ ಹೇಳಿ ಕಮಿಷನ್ ಪಡೆದು ವಂಚಿಸುತ್ತಿದ್ದ ಆರೋಪದಡಿ ಮಹಿಳೆ ಸೇರಿ ನಾಲ್ವರನ್ನು ಹಲಸೂರು ಪೊಲೀಸರು ಬಂಧಿಸಿದ್ದಾರೆ.

'ತಮಿಳುನಾಡಿನ ಸುನೀತಾ (36), ಜಯಕುಮಾರ್ (42), ಗುಜರಾತ್‌ನ ರಾಜೇಂದ್ರ ಹೆಗ್ಡೆ ಹಾಗೂ ಬೆಂಗಳೂರಿನ ಉತ್ತರಹಳ್ಳಿಯ ಜತೀನ್ ಅಗರ್‌ವಾಲ್ (20) ಬಂಧಿತರು. ಹೊರ ರಾಜ್ಯಗಳ ಮತ್ತಷ್ಟು ಮಂದಿ ಕೃತ್ಯದಲ್ಲಿ ಭಾಗಿಯಾಗಿದ್ದು, ಅವರನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಶಂಕರಾನಂದ ಆಶ್ರಮ ಟ್ರಸ್ಟ್ ಸದಸ್ಯರನ್ನು ಸಂಪರ್ಕಿಸಿದ್ದ ಆರೋಪಿಗಳು, ಕಂಪನಿಯೊಂದರ ಸಿಎಸ್‌ಆರ್ ದೇಣಿಗೆ ಕೊಡಿಸುವುದಾಗಿ ಹೇಳಿದ್ದರು. ಆರಂಭದಲ್ಲಿಯೇ ಕಮಿಷನ್ ನೀಡಬೇಕೆಂದು ಹೇಳಿ ₹15 ಲಕ್ಷ ಪಡೆದುಕೊಂಡಿದ್ದರು. ಹಲವು ದಿನಗಳಾದರೂ ದೇಣಿಗೆ ಕೊಡಿಸಿರಲಿಲ್ಲ. ಕಮಿಷನ್ ಹಣವನ್ನೂ ವಾಪಸು ಕೊಟ್ಟಿರಲಿಲ್ಲ. ಬೇಸತ್ತ ಟ್ರಸ್ಟ್ ಸದಸ್ಯರು ಠಾಣೆಗೆ ದೂರು ನೀಡಿದ್ದರು' ಎಂದು ಪೊಲೀಸರು ತಿಳಿಸಿದರು.

ಸುನೀತಾ


ರಾಜೇಂದ್ರ ಹೆಗ್ಡೆ

ಜತೀನ್

ಜಯಕುಮಾರ್

ವ್ಯವಸ್ಥಿತ ಜಾಲ: 'ಆರೋಪಿ ಸುನೀತಾ, ಬಿ.ಎಸ್ಸಿ ಪದವೀಧರೆ. ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದರು. ಜಯಕುಮಾರ್, ಎಂಜಿನಿಯರಿಂಗ್ ಪದವೀಧರ. ರಾಜೇಂದ್ರ ಹೆಗ್ಡೆ, ಹೋಟೆಲ್ ಮಾಲೀಕ. ಇನ್ನೊಬ್ಬ ಆರೋಪಿ ಜತೀನ್ ಅಗರ್‌ವಾಲ್, ಬೆಂಗಳೂರಿನ ಎಂಜಿನಿಯರಿಂಗ್ ಕಾಲೇಜೊಂದರ ವಿದ್ಯಾರ್ಥಿ' ಎಂದು ಪೊಲೀಸರು ಹೇಳಿದರು.

'ಜೆಎಸ್‌ಡಬ್ಲ್ಯು ಸ್ಟೀಲ್, ಆದಿತ್ಯಾ ಬಿರ್ಲಾ, ಅಲ್ಟ್ರಾಟೆಕ್, ಮಹೀಂದ್ರಾ ಹಾಗೂ ಇತರೆ ಕಂಪನಿಗಳ ಹೆಸರಿನಲ್ಲಿ ಆರೋಪಿಗಳು ನಕಲಿ ದಾಖಲೆಗಳನ್ನು ಸೃಷ್ಟಿಸುತ್ತಿದ್ದರು. ತಾವೇ ಕಂಪನಿಯ ನಿರ್ದೇಶಕರು, ವ್ಯವಸ್ಥಾಪಕರು ಎಂಬುದಾಗಿ ಹೇಳಿಕೊಳ್ಳುತ್ತಿದ್ದರು.'

'ಹಲವು ರಾಜ್ಯಗಳಲ್ಲಿ ಮಧ್ಯವರ್ತಿಗಳ ಮೂಲಕ ಟ್ರಸ್ಟ್ ಸದಸ್ಯರನ್ನು ಸಂಪರ್ಕಿಸುತ್ತಿದ್ದ ಆರೋಪಿಗಳು, ನೂರಾರು ಕೋಟಿ ರೂಪಾಯಿ ಸಿಎಸ್‌ಆರ್ ದೇಣಿಗೆ ಕೊಡಿಸುವುದಾಗಿ ಹೇಳುತ್ತಿದ್ದರು. ಅದಕ್ಕೆ ಕೆಲ ಶುಲ್ಕ ಹಾಗೂ ಕಮಿಷನ್ ನೀಡಬೇಕೆಂದು ಹೇಳುತ್ತಿದ್ದರು. ಅದನ್ನು ನಂಬಿ ಹಲವರು ಹಣ ಕೊಟ್ಟಿದ್ದರು. ಇದಾದ ನಂತರ, ಆರೋಪಿಗಳು ನಾಪತ್ತೆಯಾಗುತ್ತಿದ್ದರು' ಎಂದು ತಿಳಿಸಿದರು.

50 ಮಂದಿಗೆ ವಂಚನೆ: 'ಆರೋಪಿಗಳು ತಮ್ಮದೇ ತಂಡ ಕಟ್ಟಿಕೊಂಡು ಹಲವು ವರ್ಷಗಳಿಂದ ಕೃತ್ಯ ಎಸಗುತ್ತಿದ್ದಾರೆ. ಎಂದು ಪೊಲೀಸರು ಹೇಳಿದರು.

₹2 ಕೋಟಿ ಮೌಲ್ಯದ ಮಾದಕ ವಸ್ತು ವಶ

ಬೆಂಗಳೂರು: ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿ ಸಾಗಣೆ ಮಾಡಲಾಗುತ್ತಿದ್ದ, ₹2.03 ಕೋಟಿ ಮೌಲ್ಯದ 6.69 ಕೆ.ಜಿ ಮಾದಕ ವಸ್ತುಗಳನ್ನು ಚೆಕ್‌ಪೋಸ್ಟ್ ಸಿಬ್ಬಂದಿ ಶುಕ್ರವಾರ ಜಪ್ತಿ ಮಾಡಿದ್ದಾರೆ. ₹1.91 ಲಕ್ಷ ಮೌಲ್ಯದ 204 ಲೀಟರ್ ಮದ್ಯ, ₹6.92 ಲಕ್ಷ ನಗದು ಸೇರಿದಂತೆ ₹2.20 ಕೋಟಿಮೌಲ್ಯದ ವಸ್ತು ವಶಪಡಿಸಿಕೊಳ್ಳಲಾಗಿದೆ. ಪೊಲೀಸ್ ಠಾಣೆಯಲ್ಲಿ 5 ಹಾಗೂ ಅಬಕಾರಿ ಇಲಾಖೆಯಲ್ಲಿ 149 ಸೇರಿ ಒಟ್ಟು 154 ಎಫ್‌ಐಆರ್ ದಾಖಲಿಸಲಾಗಿದೆ ಎಂದು ಬಿಬಿಎಂಪಿ ಚುನಾವಣೆ ವಿಭಾಗದ ವಿಶೇಷ ಆಯುಕ್ತರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

OFFICE OF THE DIGP GROUP CENTRE CRPF, YELAHANKA, BENGALURU-560064.
TENDER NOTICE
No. A-II-04/2024-25 GC BLR Bldg. Dated 03/04/2024
Sealed tenders for plucking of fruit from plants inside the CRPF Camp premises at Yelahanka, Bengaluru.
1. Mango -269 Trees, 2. Jack fruit 76 Trees, 3. Tamarind 50 Trees, 4. Chiku - 181 Trees, 5. Jamun -181 Trees, 6. Coconut 53 Trees
Grand Total: 810 Trees.
2. Sealed tender will be opened on 16/04/2024 at 1100 Hrs. Willing Firm/ Contractor can participate in the tender by depositing an earnest money of Rs. 20,000/- only, After the opening of the tender, the responsibility of taking care of the above trees will be of contractor/firm. The DIGP-Cum-Estate officer has reserves the right to cancel the tender without giving any reason.
3. The Tender forms, details of earnest money with terms and conditions may be obtained from Group Centre CRPF Yelahanka, Bengaluru-560064 within 07 days from the date of advertisement
Order By DIGP, GC CRPF BENGALURU

TENDER NOTICE
DoubleTree by Hilton Bengaluru Whitefield (Unit of Kalyani Hospitality Services Private Limited) invites sealed tenders from reliable and established manufacturers and vendors from Bengaluru and around Bengaluru city area on rate contract basis for 12 months commencing from **1st JUNE 2024 to 31ST MAY 2025** for the supply of following:

Sl. No.	Food & Beverage General Items & Services
1	Fresh Vegetables Local
2	English Vegetables
3	Fruits Local & Imported
4	Fresh Milk & Milk Dairy Products
5	Cheeses Local and Imported
6	Frozen Green Peas, Corn & Frozen Veg.
7	Ice Cream
8	Sweets, Savouries, Bread and Pastries Items
9	Local Groceries, Pulses, Spices, Tins & Bottled Items
10	Imp. Groceries and Bakery Ingredients
11	Dry Fruits & Nuts
12	Poultry & Eggs
13	Yogurt, Noodles, Chapati & Other food items.
14	Mutton and Meat Items
15	Fresh Fish & Sea Food
16	Cold Cuts, Frozen Meat & Frozen Sea Food
17	Office Stationery
18	Printing Stationery & Flex printing
19	Cleaning Supplies and Tissue Paper Products

Tender Forms and other particulars can be obtained on payment of **Rs.500/-** each and are available with the Purchase Manager at the hotel **between 10 am to 5 pm.** The last date of submitting the tenders is **25th April 2024.** The tender is subject to:
1. The rates finalized for twelve months will not change under any circumstances.
2. The rates must be inclusive of delivery charges till our receiving premises; GST should be shown separately on the invoices, if applicable.
3. The hotel reserves the right to reject any or all tenders without any reasons whatsoever and no representation shall be entertained on this account.
Sealed tenders must be clearly mentioning on the Envelope the item/Services and be addressed to the Attention of:
Purchase Manager,
DoubleTree by Hilton Bengaluru Whitefield,
Kalyani Platina Tech Park, EPIP Zone, ITPL Main Road, Whitefield, Bengaluru 560037.
Contact details: **Mr. Sathish Reddy** – Purchase Manager
Mobile: +91 6366435028

ಆರ್‌.ಟಿ ನಗರದ ಬಹುಮಹಡಿ ಕಟ್ಟಡದಲ್ಲಿ ಅವಘಡ

ಕಟ್ಟಡದಲ್ಲಿ ಬೆಂಕಿ: 15 ಮಂದಿ ರಕ್ಷಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್‌.ಟಿ. ನಗರದಲ್ಲಿರುವ 'ಶ್ರೀ ವೆಂಕಟೇಶ್ವರ ಮನೋರ್' ನಾಲ್ಕು ಮಹಡಿ ಕಟ್ಟಡದಲ್ಲಿ ಶುಕ್ರವಾರ ಬೆಂಕಿ ಅವಘಡ ಸಂಭವಿಸಿದ್ದು, ದಟ್ಟ ಹೊಗೆಯಿಂದ ಹೊರಗೆ ಬರಲಾಗದೇ ಕಟ್ಟಡದೊಳಗೆ ಸಿಲುಕಿದ್ದ 15 ಮಂದಿಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ಹಾಗೂ ಪೊಲೀಸರು ರಕ್ಷಿಸಿದ್ದಾರೆ.

'80 ಅಡಿ ರಸ್ತೆಯಲ್ಲಿರುವ ಕಟ್ಟಡದ ನೆಲ ಮಹಡಿಯಲ್ಲಿ ಕಾಣಿಸಿಕೊಂಡಿದ್ದ ಬೆಂಕಿ, ಕಟ್ಟಡದ ಇತರೆ ಭಾಗಕ್ಕೂ ಹರಡಿತ್ತು. ದಟ್ಟ ಹೊಗೆಯೂ ಆವರಿಸಿತ್ತು. ಅಗ್ನಿಶಾಮಕ ದಳದ ಸಿಬ್ಬಂದಿ ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದ್ದಾರೆ. ಘಟನೆಯಲ್ಲಿ ಎಲ್ಲರೂ ಸುರಕ್ಷಿತವಾಗಿದ್ದಾರೆ' ಎಂದು ಆರ್‌.ಟಿ.ನಗರ ಠಾಣೆಯ ಪೊಲೀಸರು ಹೇಳಿದರು.

ಆರ್‌.ಟಿ. ನಗರದಲ್ಲಿರುವ 'ಶ್ರೀ ವೆಂಕಟೇಶ್ವರ ಮನೋರ್' ಕಟ್ಟಡದಲ್ಲಿ ಸಿಲುಕಿದ್ದವರನ್ನು ಏಣಿ ಸಹಾಯದಿಂದ ಹೊರಗೆ ಸುರಕ್ಷಿತವಾಗಿ ಕರೆತರಲಾಯಿತು

'ಕಟ್ಟಡದ ನೆಲ ಮಹಡಿಯಲ್ಲಿ 'ಐಡಿಎಸ್ ನೆಕ್ಸ್ಟ್ ಬಿಸಿನೆಸ್ ಸಲ್ಯೂಷನ್ಸ್' ಕಂಪನಿ ಕಚೇರಿ ಇದೆ. ಮೊದಲ ಮಹಡಿಯಲ್ಲಿ ಮಿರಾಕಲ್ ಡ್ರಿಂಕ್ಸ್ ಆಯುರ್ವೇದ ಔಷಧ ಕಂಪನಿ ಇದೆ. ಎರಡು, ಮೂರು ಹಾಗೂ ನಾಲ್ಕನೇ ಮಹಡಿಯಲ್ಲೂ ವಿವಿಧ ಕಂಪನಿಗಳ ಕಚೇರಿಗಳಿವೆ' ಎಂದರು.

ಚಾವಣಿಯಲ್ಲಿ ಕೂಗಾಡಿದ್ದ ನೌಕರರು: 'ಕಟ್ಟಡದಲ್ಲಿರುವ ಕಚೇರಿಯಲ್ಲಿ 50ಕ್ಕೂ ಹೆಚ್ಚು ಮಂದಿ ಕೆಲಸ ಮಾಡುತ್ತಿದ್ದರು. 'ಐಡಿಎಸ್ ನೆಕ್ಸ್ಟ್ ಬಿಸಿನೆಸ್ ಸಲ್ಯೂಷನ್ಸ್' ಕಂಪನಿ ಕಚೇರಿಯಲ್ಲಿ ಮೊದಲಿಗೆ ಬೆಂಕಿ ಕಾಣಿಸಿಕೊಂಡಿತ್ತು. ಕೆಲ ನಿಮಿಷಗಳಲ್ಲಿ ಬೆಂಕಿ ಇತರೆಡೆ ವ್ಯಾಪಿಸಿತ್ತು' ಎಂದು ಮೂಲಗಳು ಹೇಳಿವೆ.

'ಕಟ್ಟಡದಲ್ಲಿ ದಟ್ಟ ಹೊಗೆ ಹೆಚ್ಚಾಗಿತ್ತು. ಮೊದಲ, ಎರಡು, ಮೂರು ಹಾಗೂ ನಾಲ್ಕನೇ ಮಹಡಿಗೂ ಹೊಗೆ ಆವರಿಸಿಕೊಂಡಿತ್ತು. ಕೆಲವರು, ಕಟ್ಟಡದಿಂದ ಹೊರಗೆ ಓಡಿ ಬಂದಿದ್ದರು. ಕಟ್ಟಡದ ಒಳಗಿದ್ದ 15 ನೌಕರರು, ಹೊರಗೆ ಬರಲು ಸಾಧ್ಯವಾಗಲಿಲ್ಲ.'

'ಅಗ್ನಿಶಾಮಕ ದಳದ ಸಿಬ್ಬಂದಿ, ಕಟ್ಟಡದೊಳಗೆ ಹೋಗಿ ಹಲವರನ್ನು ಹೊರಗೆ ಕರೆತಂದರು. ಕೆಲವರು, ಕಟ್ಟಡದ ಚಾವಣಿ ಮೇಲೆ ಹೋಗಿ, ರಕ್ಷಣೆಗಾಗಿ ಕೂಗಾಡುತ್ತಿದ್ದರು. ಅವರನ್ನು ಸಹ ಏಣಿ ಸಹಾಯದಿಂದ ರಕ್ಷಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಶಾರ್ಟ್ ಸರ್ಕೀಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಅನುಮಾನವಿದೆ. ಅವಘಡ ಬಗ್ಗೆ ಹಲವರ ಹೇಳಿಕೆ ಪಡೆಯಲಾಗಿದ್ದು, ತನಿಖೆ ಮುಂದುವರಿಸಲಾಗಿದೆ' ಎಂದು ಹೇಳಿವೆ.

ಬಿಎಂಸಿ: ಅಸ್ವಸ್ಥರಾದ 47 ವಿದ್ಯಾರ್ಥಿನಿಯರು

ಬೆಂಗಳೂರು: ಬೆಂಗಳೂರು ವೈದ್ಯಕೀಯ ಕಾಲೇಜು,ಸಂಶೋಧನಾ ಸಂಸ್ಥೆಯ (ಬಿಎಂಸಿಆರ್‌ಐ) ಬಾಲಕಿಯರ ಹಾಸ್ಟೆಲ್‌ನ 47 ವಿದ್ಯಾರ್ಥಿನಿಯರು ಅಸ್ವಸ್ಥರಾಗಿದ್ದು, ಅವರನ್ನು ಶುಕ್ರವಾರ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಾಲರಾದಿಂದ ವಿದ್ಯಾರ್ಥಿಗಳು ಅಸ್ವಸ್ಥರಾಗಿದ್ದಾರೆ ಎಂದು ಸಹಪಾಠಿಗಳು ಹೇಳಿದ್ದು, ಆಸ್ಪತ್ರೆಯ ಟ್ರಾಮಾ ಕೇರ್ ಸೆಂಟರ್‌ನಲ್ಲಿ 20 ಮಂದಿ, ಎಚ್–ಬ್ಲಾಕ್‌ನಲ್ಲಿ 15 ಹಾಗೂ 4 ಮಂದಿ ಐಸಿಯುನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

'ಎಲ್ಲ ವಿದ್ಯಾರ್ಥಿಗಳು ಭೇದಿ ಹಾಗೂ ನಿರ್ಜಲೀಕರಣದಿಂದ ಬಳಲುತ್ತಿದ್ದಾರೆ. ಎಲ್ಲರ ಆರೋಗ್ಯ ಸ್ಥಿರವಾಗಿದೆ' ಎಂದು ಡೀನ್ ರಮೇಶ್ ಕೃಷ್ಣ ತಿಳಿಸಿದ್ದಾರೆ. 'ಹಾಸ್ಟೆಲ್‌ನಲ್ಲಿ ಕಲುಷಿತ ನೀರು ಸೇವಿಸಿದ್ದರಿಂದ ಕಾಲರಾ ಕಾಣಿಸಿಕೊಂಡಿದೆ' ಎಂದು ಹಾಸ್ಟೆಲ್ ವಿದ್ಯಾರ್ಥಿನಿಯರು ಆರೋಪಿಸಿದ್ದಾರೆ.

'ಎಲ್ಲ ವಿದ್ಯಾರ್ಥಿಗಳ ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ. ವರದಿ ಬಳಿಕ ನಿಖರ ಕಾರಣ ತಿಳಿಯಲಿದೆ. ಅಲ್ಲಿವರೆಗೆ ಹಾಸ್ಟೆಲ್‌ನ ನೀರು ಬಳಸದಂತೆ ತಿಳಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಬೆಂಗಳೂರಿನಲ್ಲೂ ಸುಡಲಿದೆ ಬಿಸಿಲು

ನಗರದಲ್ಲೂ ಮುಂದಿನ ಎರಡು ದಿನಗಳ ಕಾಲ ಸುಡು ಬಿಸಿಲು ಇರಲಿದೆ. ಗರಿಷ್ಠ ಉಷ್ಣಾಂಶ 38ರಿಂದ 39 ಡಿಗ್ರಿ ಸೆಲ್ಸಿಯಸ್ ದಾಟುವ ಸಾಧ್ಯತೆಯಿದೆ.ಬೆಳಿಗ್ಗೆ ಭಾಗಶಃ ಮೋಡ ಕವಿದ ವಾತಾವರಣ ಇರಲಿದ್ದು, ಬಳಿಕ ನಿರ್ಮಲ ಆಕಾಶ ಕಾಣಿಸಲಿದೆ. ನಗರದಲ್ಲಿ ಶುಕ್ರವಾರ ಗರಿಷ್ಠ ಉಷ್ಣಾಂಶ 37 ಹಾಗೂ ದೇವನಹಳ್ಳಿ ವಿಮಾನ ನಿಲ್ದಾಣದ ಸುತ್ತಮುತ್ತ 37.6 ಡಿಗ್ರಿ ಸೆಲ್ಸಿಯಸ್ ದಾಖಲಾಗಿತ್ತು.

❦ ಸುಭಾಷಿತ ❦

ನಮ್ಮನ್ನು ಒಪ್ಪುವವರಿಂದ ನಮಗೆ ಸಾಂತ್ವನ ಸಿಗುತ್ತದೆ, ಆದರೆ ನಮ್ಮನ್ನು ಒಪ್ಪದವರಿಂದ ಮಾತ್ರವಷ್ಟೇ ನಾವು ಬೆಳವಣಿಗೆ ಕಾಣಲು ಸಾಧ್ಯ! —ಬಿಲ್ ಗೇಟ್ಸ್

ಹೆಸರು ಬದಲಿಸುವ ಚೀನಾ ನಡೆ ಸಂಬಂಧ ಕೆಡಿಸುವ ಅಪ್ರಬುದ್ಧ ಹೆಜ್ಜೆ

ಅರುಣಾಚಲ ಪ್ರದೇಶಕ್ಕೆ ಸೇರಿದ ಮೂವತ್ತು ಸ್ಥಳಗಳಿಗೆ ಚೀನಾ ತನ್ನದೇ ಆದ ಹೆಸರು ನೀಡುವ ಕೆಲಸ ಮಾಡಿದೆ. ಆ ದೇಶವು ಇಂತಹ ಕೆಲಸ ಮಾಡುತ್ತಿರುವುದು 2017ರ ನಂತರದಲ್ಲಿ ಇದು ನಾಲ್ಕನೆಯ ಬಾರಿ. ಚೀನಾದ ನಾಗರಿಕ ವ್ಯವಹಾರಗಳ ಸಚಿವಾಲಯವು ಹೆಸರುಗಳನ್ನು ಶಿಷ್ಟಗೊಳಿಸುವ ಪ್ರಕ್ರಿಯೆ ಎಂದು ಇದನ್ನು ಕರೆದುಕೊಂಡಿದೆ. ಭಾರತದ ದೃಷ್ಟಿಯಿಂದ ನೋಡುವುದಾದಲ್ಲಿ, ಈ ಇಡೀ ಪ್ರಕ್ರಿಯೆಯು ಭಾರತಕ್ಕೆ ಸೇರಿದ ಭೂಭಾಗವೊಂದರ ಮೇಲೆ ಚೀನಾ ತನ್ನ ಹಕ್ಕು ಸಾಧಿಸುವುದಕ್ಕೆ ಸಮನಾದುದು. ಚೀನಾ ದೇಶವು ಇಡೀ ಅರುಣಾಚಲ ಪ್ರದೇಶವನ್ನು 'ದಕ್ಷಿಣ ಟಿಬೆಟ್' ಎಂದು ಗುರುತಿಸುತ್ತದೆ. ಚೀನಾದ ನಕಾಶೆಗಳು ಭಾರತಕ್ಕೆ ಸೇರಿರುವ ರಾಜ್ಯವನ್ನು ಚೀನಾದ್ದು ಎಂಬಂತೆ ತೋರಿಸುತ್ತವೆ. ಹೀಗಾಗಿ, ಪ್ರಧಾನಿ ನರೇಂದ್ರ ಮೋದಿ ಅವರು ಅರುಣಾಚಲ ಪ್ರದೇಶಕ್ಕೆ ಭೇಟಿ ನೀಡಿ, ಅಲ್ಲಿ ಸೇಲಾ ಪಾಸ್ ಅಡಿಯಲ್ಲಿ ನಿರ್ಮಿಸಿರುವ ಸೇಲಾ ಸುರಂಗವನ್ನು ಉದ್ಘಾಟಿಸಿದ ನಂತರ ಚೀನಾ ಇಂತಹ ಕೆಲಸ ಮಾಡಿರುವುದು ಆಶ್ಚರ್ಯ ಮೂಡಿಸುವ ಸಂಗತಿಯೇನೂ ಅಲ್ಲ. ಗುವಾಹಟಿ ಮತ್ತು ತವಾಂಗ್ ನಡುವೆ ಸರ್ವಋತು ಸಂಪರ್ಕ ಸಾಧ್ಯವಾಗಬೇಕು ಎಂಬ ಉದ್ದೇಶದಿಂದ ಈ ಸುರಂಗವನ್ನು ನಿರ್ಮಿಸಲಾಗಿದೆ. ಈ ಭಾಗದಲ್ಲಿ ಗಡಿಗಳನ್ನು ಕಾಯುತ್ತಿರುವ ಸೇನೆಯ ಪಾಲಿಗೆ ಈ ಸೇತುವೆಯು ಬಲವರ್ಧಕದಂತೆ ಇದೆ. ಹಾಗೆಯೇ, ಸಾರ್ವಜನಿಕರ ಪಾಲಿಗೂ ಇದು ಅನುಕೂಲಗಳನ್ನು ಕಲ್ಪಿಸಿಕೊಟ್ಟಿದೆ. ಈ ಹಿಂದೆ ಮಾಡಿರುವಂತೆಯೇ ಭಾರತವು ಹೆಸರು ಬದಲಾಯಿಸುವ ಚೀನಾದ ನಡೆಯನ್ನು ಖಂಡಿಸಿದೆ. ಹೊಸ ಹೆಸರುಗಳನ್ನು ಚೀನಾ ಹುಡುಕಿಕೊಂಡಿರುವುದಕ್ಕೆ ಯಾವ ಆಧಾರವೂ ಇಲ್ಲ ಎಂದು ಹೇಳಿದೆ. ಅಲ್ಲದೆ, ಹೆಸರುಗಳನ್ನು ಬದಲಾವಣೆ ಮಾಡಿದ ಮಾತ್ರಕ್ಕೆ ಅವು ಭಾರತದ ಅವಿಭಾಜ್ಯ ಅಂಗಗಳು ಎಂಬ ಸಂಗತಿಯು ಬದಲಾಗುವುದಿಲ್ಲ ಎಂದು ಕೂಡ ಹೇಳಿದೆ. ಹೆಸರು ಬದಲಾವಣೆ ಮಾಡಿದ ಮಾತ್ರಕ್ಕೆ ಅರುಣಾಚಲ ಪ್ರದೇಶವು ಚೀನಾದ ಭಾಗ ಆಗುವುದಿಲ್ಲ ಎಂದು ಕೇಂದ್ರ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಹೇಳಿದ್ದಾರೆ.

ಹಳಸಿದ ಸಂಬಂಧವನ್ನು ಸರಿಪಡಿಸಲು ಎರಡೂ ದೇಶಗಳು ಈಗ ಮುಂದಾಗಬೇಕು

ಭಾರತ ಮತ್ತು ಚೀನಾದ ನಡುವಿನ ಗಡಿ ಸಮಸ್ಯೆಯು ಇತ್ಯರ್ಥ ಕಾಣದೇ ಇರುವುದು ಇಲ್ಲಿ ಸಮಸ್ಯೆಯ ಮೂಲ. ಭಾರತಕ್ಕೆ ಸೇರಿರುವ ಪ್ರದೇಶಗಳನ್ನು ತನ್ನ ದೇಶಕ್ಕೆ ಸೇರಿದವು ಎಂದು ನಕಾಶೆಯಲ್ಲಿ ತೋರಿಸುವ, ಆ ಪ್ರದೇಶಗಳಿಗೆ ತನ್ನದೇ ಆದ ಹೆಸರುಗಳನ್ನು ನೀಡುವ ಕೃತ್ಯದ ಮೂಲಕ ಚೀನಾ ದೇಶವು ತಾನು ಹೇಳಿದಂತೆ ಒಪ್ಪಂದ ಆಗದಿದ್ದರೆ ಒಪ್ಪಂದವೇ ಬೇಡ ಎಂಬಂತೆ ನಡೆದುಕೊಳ್ಳುತ್ತಿದೆ. ಇಂತಹ ಸಂದೇಶವನ್ನು ಚೀನಾ ಮತ್ತೆ ಮತ್ತೆ ರವಾನಿಸುತ್ತಿದೆ. ಉದಾಹರಣೆಗೆ ಹೇಳುವುದಾದರೆ, ಪೂರ್ವ ಲಡಾಖ್‌ನಲ್ಲಿ ಚೀನಾದ ಸೈನಿಕರು 2020ರಲ್ಲಿ ಭಾರತದ ಭೂಪ್ರದೇಶವನ್ನು ಪ್ರವೇಶಿಸಿದ್ದರು. ಅದರ ಪರಿಣಾಮವಾಗಿ, ಮಿಲಿಟರಿ ಕಮಾಂಡರ್‌ಗಳ ಮಟ್ಟದಲ್ಲಿ ಮಾತುಕತೆ ನಡೆದು, ಎರಡೂ ಕಡೆಯ ಸೈನಿಕರು ತೆರಳಲು ಅವಕಾಶ ಇಲ್ಲದ ಬಫರ್ ವಲಯಗಳನ್ನು ಗುರುತಿಸುವ ಕೆಲಸ ಆಯಿತು. ಚೀನಾದ ಸೈನಿಕರು ನುಗ್ಗಿದ್ದ ಪ್ರದೇಶಗಳಲ್ಲಿ ಈ ರೀತಿ ಬಫರ್ ವಲಯಗಳನ್ನು ಗುರುತಿಸಲಾಯಿತು. ಭಾರತದ ಪಾಲಿಗೆ ಇದರ ಅರ್ಥ, 2020ಕ್ಕೂ ಮೊದಲು ಭಾರತದ್ದೇ ಆಗಿದ್ದ ಪ್ರದೇಶಗಳಿಗೆ ಈಗ ಭಾರತದವರೇ ತೆರಳಲು ಸಾಧ್ಯವಾಗುತ್ತಿಲ್ಲ. ಪೂರ್ವ ಲಡಾಖ್‌ನಲ್ಲಿ ಸಮಸ್ಯೆಯನ್ನು ಪರಿಹರಿಸಲಾಗಿದೆ ಎಂದು ಚೀನಾ ಈಗ ಭಾವಿಸಿದೆ. ಹಳಸಿದ ಸಂಬಂಧವನ್ನು ಸರಿಪಡಿಸಲು ಎರಡೂ ದೇಶಗಳು ಈಗ ಮುಂದಾಗಬೇಕಿದೆ.

ಆದರೆ, ಭಾರತಕ್ಕೆ ಸೇರಿರುವ ಪ್ರದೇಶಗಳಿಗೆ ತನ್ನದೇ ಆದ ಹೆಸರುಗಳನ್ನು ನೀಡುವ ಅಪ್ರಬುದ್ಧ ನಡೆಯನ್ನು ಚೀನಾ ಅನುಸರಿಸುವವರೆಗೆ ಇಂತಹ ಮಾತುಕತೆಗಳು ಸಾಧ್ಯವಾಗುವುದಿಲ್ಲ. ಭೂಪ್ರದೇಶಗಳ ಮೇಲೆ ಹಕ್ಕು ಸಾಧಿಸುವಾಗ ಇನ್ನೊಂದು ದೇಶದ ಮೇಲೆ ಹಗೆತನ ಪ್ರದರ್ಶಿಸುವುದಕ್ಕೆ ಚೀನಾ ಹಿಂಜರಿಯುವುದಿಲ್ಲ ಎಂಬುದನ್ನು ತೈವಾನ್ ದೇಶವನ್ನು ಬೆದರಿಸುವ ಚೀನಾದ ನಡೆ ತೋರಿಸಿಕೊಟ್ಟಿದೆ. ಇಂತಹ ನಡೆಗಳು ತಾನು ಸೂಪರ್‌ಪವರ್ ಎಂದು ಭಾವಿಸಿರುವ ಚೀನಾಕ್ಕೆ ತಕ್ಕುದಲ್ಲ. ತನ್ನ ಸರ್ಕಾರಿ ಹೇಳಿಕೆಗಳಲ್ಲಿ 'ಏಕ ಚೀನಾ' ಉಲ್ಲೇಖವನ್ನು ಕೈಬಿಡುವ ಮೂಲಕ ಭಾರತವು ಚೀನಾದ ಆಟಕ್ಕೆ ಉತ್ತರ ನೀಡುವ ಯತ್ನ ಮಾಡಿದೆ. ಜೈಶಂಕರ್ ಅವರು ಈಚೆಗೆ ಚೀನಾ ಭೇಟಿಯ ಸಂದರ್ಭದಲ್ಲಿ, ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾ ಮಾಡುವ ಯಾವುದೇ ಹಗೆತನದ ಕೃತ್ಯಗಳಿಗೆ ಎದುರಾಗಿ ತನ್ನ ಸಾರ್ವಭೌಮತ್ವವನ್ನು ಎತ್ತಿಹಿಡಿಯುವ ಅಧಿಕಾರವು ಫಿಲಿಪ್ಪೀನ್ಸ್ ರಾಷ್ಟ್ರಕ್ಕೆ ಇದೆ ಎಂದು ಹೇಳಿದ್ದಾರೆ. ಅವೇನೇ ಇದ್ದರೂ, ಚುನಾವಣೆಯ ಈ ಹೊತ್ತಿನಲ್ಲಿ ಚೀನಾ ಇರಿಸುತ್ತಿರುವ ಈ ಹೆಜ್ಜೆಗಳು ಭಾರತದ ನಾಯಕತ್ವ ಹಾಗೂ ಭಾರತದ ಮತದಾರರ ಪಾಲಿಗೆ 'ದೇಶದ ಎದುರು ಇರುವ ಗಡಿ ಸಮಸ್ಯೆ ಇದೇ' ಹೊರತು ಈ ಹಿಂದೆಯೇ ಇತ್ಯರ್ಥಗೊಂಡಿರುವ ಕಚ್ಚತೀವು ದ್ವೀಪದ ವಿಷಯ ಅಲ್ಲ (ಅದನ್ನು ಮತಗಳ ಮೇಲೆ ಕಣ್ಣಿಟ್ಟು ಈಗ ಪ್ರಸ್ತಾಪಿಸಲಾಗಿದೆ) ಎಂಬುದನ್ನು ಬಹಳ ಕಠಿಣವಾದ ರೀತಿಯಲ್ಲಿ ನೆನಪಿಸಿಕೊಟ್ಟಿವೆ.

ಸಮಾನತೆಯ ಆಶಯ ಮುನ್ನೆಲೆಗೆ ಬಂದಿದೆಯಾದರೂ 'ಗಂಡಸುತನ'ದ ದೌರ್ಜನ್ಯ ನಿಂತಿಲ್ಲ

ನಮಗೆ ಬೇಕಾದುದು ತಾಯ್ತನ

ವಿಶ್ಲೇಷಣೆ

ಬರಗೂರು ರಾಮಚಂದ್ರಪ್ಪ

ಗಂಡು ಮತ್ತು ಹೆಣ್ಣಿನ ನಡುವೆ ಇರುವ ಲಿಂಗತಾರತಮ್ಯವು ರೂಢಿಗತವಾಗಿ ಬಳಸುವ ಭಾಷೆಯಲ್ಲೂ ಪ್ರಕಟ ಆಗುತ್ತ ಬಂದಿದೆ. ಗಂಡಿನ ಮೇಲುಗೈ ಮಾತಿನ ವರಸೆಗೆ ಒಂದು ಇತಿಹಾಸವೇ ಇದೆ. ಸಮಕಾಲೀನ ಸಂದರ್ಭವು ಮಹಿಳಾಪರ ಚಳವಳಿಗಳನ್ನೂ ಒಳಗೊಂಡಂತೆ ಅನೇಕ ಸಮಾನತಾ ಚಳವಳಿಗಳನ್ನು ಕಂಡಿದ್ದರೂ ಗಂಡಾಳಿಕೆಯ ಭಾಷೆಗೆ ಪೂರ್ಣ ಕಡಿವಾಣ ಹಾಕಲು ಸಾಧ್ಯವಾಗಿಲ್ಲ. ಗಂಡಿನ ಮೇಲಾಳಿಕೆಯ ಮಾತುಗಳು ಸಹಜವೆಂಬಂತೆ ಭೋರ್ಗರೆಯುತ್ತಿವೆ. 'ನಿನಗೆ ಗಂಡಸ್ತನ ಇದ್ರೆ ನನ್ ಎದ್ರಿಗೆ ಬಾ' ಎಂದು ಕೆಲವರು ಸವಾಲು ಹಾಕುತ್ತಾರೆ. 'ನೀನು ಗಂಡಸೇ ಆಗಿದ್ದರೆ ಬಹಿರಂಗ ಚರ್ಚೆಗೆ ಬಾ' ಎಂದು ಆಹ್ವಾನಿಸುತ್ತಾರೆ. ಇಂಥ ಮಾತುಗಳು ಚುನಾವಣೆ ಸಂದರ್ಭದಲ್ಲಿ ಹೆಚ್ಚಾಗುತ್ತವೆ. ಈ ಎಲ್ಲ ಮಾತುಗಳು ಗಂಡಸರು ಮಾತ್ರ ಸಬಲರೆಂದೂ ಹೆಂಗಸರು ದುರ್ಬಲರೆಂದೂ ನಂಬಿದ ಸಾಮಾಜಿಕ ನೆಲೆಯಿಂದ ಹೊರಬರುತ್ತವೆ.

ಕೆಲವು ಪ್ರದೇಶಗಳ ಮಹತ್ವವನ್ನು ಹೇಳುವಾಗ 'ಇದು ಗಂಡು ಮೆಟ್ಟಿದ ನಾಡು' ಎಂಬ ನುಡಿಪ್ರಯೋಗವನ್ನು ಮಾಡಲಾಗುತ್ತದೆ. ಇದು ಹೆಮ್ಮೆಯ ಅಭಿವ್ಯಕ್ತಿಯಾಗಿದ್ದು, ಧೈರ್ಯ ಮತ್ತು ದಿಟ್ಟತನದ ಸಂಕೇತವಾಗಿ 'ಗಂಡು' ಎಂಬ ಪದ ಬಳಕೆಯಾಗುತ್ತದೆ. ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸಿರಾಣಿ ಲಕ್ಷ್ಮಿಬಾಯಿಯಂಥ ಅನೇಕ ಸ್ತ್ರೀಶಕ್ತಿ ಸಂಕೇತಗಳನ್ನು ನಮ್ಮ ದೇಶ ಕಂಡಿದ್ದರೂ 'ಹೆಣ್ಣು ಮೆಟ್ಟಿದ ನಾಡು' ಎಂದು ಯಾವ ಪ್ರದೇಶಕ್ಕೂ ಹೇಳುವುದಿಲ್ಲ. ವೈಯಕ್ತಿಕವಾಗಿ ಇವರ ಶೌರ್ಯ, ಸಾಹಸಗಳನ್ನು ಹೊಗಳಲಾಗುತ್ತದೆಯೇ ವಿನಾ ಪ್ರದೇಶವೊಂದರ ಧೈರ್ಯ ಮತ್ತು ದಿಟ್ಟತನದ 'ದನಿರೂಪಕ'ವಾಗಿ ಪುರುಷವಾಚಕದ ಬಳಕೆಯೇ ರೂಢಿಯಾಗಿಬಿಟ್ಟಿದೆ. ಖಡಕ್ಕಾದ ಪದಗಳ ಪ್ರಯೋಗವನ್ನು ಮುಂದೊಡ್ಡಿ 'ನಮ್ಮದು ಗಂಡು ಭಾಷೆ' ಎಂದು ಬೀಗುವ ಪ್ರವೃತ್ತಿಯೂ ಇದೆ.

'ಗಂಡಸುತನ'ವನ್ನು ಮುನ್ನೆಲೆಗೆ ತಂದು ಸವಾಲೆಸೆಯುವ ಹಸಿಬಿಸಿ ಮಾತುಗಳ 'ರೂಢಿ'ಯು ಬರೀ ಭಾಷೆಯ ಪ್ರಶ್ನೆಯಲ್ಲ. ಇದರ ಹಿಂದೆ ಒಂದು ಇತಿಹಾಸವೇ ಇದೆ ಎಂಬ ನನ್ನ ಆರಂಭದ ಮಾತನ್ನು ಸ್ವಲ್ಪ ವಿಸ್ತರಿಸ ಬಯಸುತ್ತೇನೆ. ಲಿಂಗತಾರತಮ್ಯದ ಭಾಷೆಯ ಬಳಕೆಗೂ ನಾವು ಬದುಕುತ್ತ ಬಂದ ಸಾಮಾಜಿಕ-ಆರ್ಥಿಕ ಸಂದರ್ಭಕ್ಕೂ ಸಂಬಂಧವಿದೆ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಯಾರು ನಿಯಂತ್ರಣ ಸಾಧಿಸುತ್ತಾರೋ ಅವರ ಆಶಯದ ಪರಿಭಾಷೆಯೇ ಪ್ರಚಲಿತವಾಗುತ್ತದೆ. ಪುರುಷರೇ ಕುಟುಂಬದ ಆಸ್ತಿ ಮತ್ತು ಅಧಿಕಾರದ ಪೂರ್ಣ ನಿಯಂತ್ರಕರಾಗುತ್ತಾ ಬಂದ ಇತಿಹಾಸದ ವಾಸ್ತವವನ್ನು ಇಲ್ಲಿ ಗಮನಿಸಬೇಕು.

ಮನುಷ್ಯರ ಆರಂಭಿಕ ಬದುಕಿನಲ್ಲಿ, ಆಸ್ತಿ ಮತ್ತು ಅಧಿಕಾರವನ್ನು ಪುರುಷರಿಗಾಗಲಿ, ಮಹಿಳೆಯರಿಗಾಗಲಿ ಕೊಟ್ಟಿರಲಿಲ್ಲ. ಖಾಸಗಿ ಆಸ್ತಿಯ ಕಲ್ಪನೆಯೇ ಆಗ ಇರಲಿಲ್ಲ. ಅಂದರೆ ಭೂಮಿಯನ್ನೂ ಒಳಗೊಂಡಂತೆ ಯಾವುದೇ ಪ್ರಾಕೃತಿಕ ಸಂಪತ್ತು ಯಾರಿಗೂ ಸೇರಿರಲಿಲ್ಲ ಅಥವಾ ಎಲ್ಲರಿಗೂ ಸೇರಿತ್ತು. ಇಂಥ ಸಾಮಾಜಿಕ-ಆರ್ಥಿಕ ಸನ್ನಿವೇಶಗಳನ್ನು 'ಪ್ರಾಚೀನ ಸಮತಾವಾದ' (ಪ್ರಿಮಿಟಿವ್ ಕಮ್ಯುನಿಸಂ) ಎಂದು ಕೆಲವರು ಕರೆದಿದ್ದಾರೆ. ಇಂಥ ಸನ್ನಿವೇಶದ ಪ್ರಸ್ತಾಪವು ಮಾರ್ಗನ್ ಎಂಬ ಮಾನವ ಶಾಸ್ತ್ರಜ್ಞ ಬರೆದ 'ಏನ್ಷಿಯಂಟ್ ಸೊಸೈಟಿ' ಎಂಬ ಗ್ರಂಥದಲ್ಲೂ ಇದೆ. ಮಾರ್ಗನ್ ಮೊದಲ ಬಾರಿಗೆ 'ಸಂಸ್ಕೃತಿಯು ಸ್ಥಗಿತವಲ್ಲ, ಅದು ಸದಾ ವಿಕಾಸ ಹೊಂದುತ್ತ ಹೋಗುತ್ತದೆ' ಎಂಬ ಸಿದ್ಧಾಂತವನ್ನು ಮಂಡಿಸಿದರು. ಮನುಷ್ಯ ಸಂಸ್ಕೃತಿಯು ಸರಳರೇಖೆಯಂತೆ ವಿಕಾಸ ಹೊಂದುತ್ತ ನಾಗರಿಕತೆಯ ಹಂತ ತಲುಪಿದ್ದನ್ನು ಪ್ರತಿಪಾದಿಸಿದರು.

ಮುಂದೆ ಸ್ಟೀವರ್ಡ್ ಎಂಬ ಮಾನವಶಾಸ್ತ್ರಜ್ಞ, ಸಂಸ್ಕೃತಿ ವಿಕಾಸಕ್ಕೆ ಸಂಬಂಧಿಸಿದಂತೆ ಇನ್ನೊಂದು ಸಿದ್ಧಾಂತವನ್ನು ಮಂಡಿಸಿದರು. ಸಂಸ್ಕೃತಿಯು ಸರಳ ರೇಖೆಯಂತೆ ವಿಕಾಸವಾಗುವುದಿಲ್ಲ, ತಿರುವುಗಳಿಂದ ಕೂಡಿರುತ್ತದೆ ಎಂದು ಪ್ರತಿಪಾದಿಸಿದರು. ಇವರ ಸಿದ್ಧಾಂತದಲ್ಲಿ ಕುಟುಂಬದ ಆಸ್ತಿ ಮತ್ತು ಅಧಿಕಾರವನ್ನು ಪುರುಷರು ನಿಯಂತ್ರಣಕ್ಕೆ ತೆಗೆದುಕೊಂಡಿದ್ದರ ಫಲವಾಗಿ ಹೆಣ್ಣಿನ ಶೀಲದ ಕಲ್ಪನೆ ಮುನ್ನೆಲೆಗೆ ಬಂದ ಸೂಚನೆಯಿದೆ. ಮನುಷ್ಯರ ಆದಿ ಬದುಕಿನಲ್ಲಿ ನಗ್ನತೆಯು ಸಹಜವಾಗಿದ್ದು, ಆನಂತರದ ಹಂತದಲ್ಲಿ ಖಾಸಗಿ ಆಸ್ತಿಯ ಕಲ್ಪನೆ ಮತ್ತು ಪುರುಷ ನಿಯಂತ್ರಣ ಬಂದಾಗ, ಹೆಂಗಸರು ಮೈತುಂಬ ಬಟ್ಟೆ ಧರಿಸುವುದು ಕಡ್ಡಾಯವಾಯಿತೆಂದೂ ಬಹುಪತಿ ಪದ್ಧತಿಗೆ ವಿರೋಧ ವ್ಯಕ್ತವಾಯಿತೆಂದೂ ಸ್ಟೀವರ್ಡ್ ನಿರೂಪಿಸಿದ್ದಾರೆ. ಅಂದರೆ ಗಂಡಾಳಿಕೆಗೂ ಆಸ್ತಿ ಮತ್ತು ಅಧಿಕಾರಕ್ಕೂ ಸಂಬಂಧವುಂಟಾಗಿ, ಅದಕ್ಕನುಗುಣವಾದ ಲಿಂಗತಾರತಮ್ಯದ ಭಾಷೆಯೂ ಬಳಕೆಗೆ ಬಂದಿದೆ. ಅಷ್ಟೇಅಲ್ಲ, ಆಸ್ತಿ ವರ್ಗಾವಣೆಗೂ ಗಂಡು ಸಂತಾನಕ್ಕೂ ಸಂಬಂಧ ಕಲ್ಪಿಸಲಾಗಿದೆ. ಮುಂದೆ ಲಿಂಗತಾರತಮ್ಯದ ಅನಿಷ್ಟ ಪದ್ಧತಿಗಳೂ ಜಾರಿಗೆ ಬಂದಿವೆ. ನಿದರ್ಶನವಾಗಿ ಸತಿಸಹಗಮನ ಪದ್ಧತಿ, ದೇವದಾಸಿ ಪದ್ಧತಿ, ಬೆತ್ತಲೆ ಸೇವೆಯಂಥ ಅಮಾನವೀಯ ಆಚರಣೆಗಳನ್ನು ಉಲ್ಲೇಖಿಸಬಹುದು.

ಸ್ವಾತಂತ್ರ್ಯಪೂರ್ವ ಮತ್ತು ಸ್ವಾತಂತ್ರ್ಯೋತ್ತರ ಭಾರತದಲ್ಲಿ ಅನೇಕ ಸ್ತ್ರೀ ಸುಧಾರಣಾ ಚಳವಳಿಗಳು ನಡೆದಿವೆ. ಮಾನವೀಯ ಮೌಲ್ಯಕ್ಕೆ ಬದ್ಧರಾದ ಪುರುಷರೂ ಸ್ತ್ರೀಪರ ಹೋರಾಟ ಮಾಡಿದ ಒಂದು ಸಾಂಕೇತಿಕ ನಿದರ್ಶನವಾಗಿ ರಾಜಾರಾಮ್ ಮೋಹನರಾಯರು ಸತಿಪದ್ಧತಿಯ ವಿರುದ್ಧ ನಡೆಸಿದ ಆಂದೋಲನವನ್ನು ನೆನೆಯಬಹುದು. ಜಗತ್ತಿನಾದ್ಯಂತ ಮಹಿಳೆಯರ ಮುಂಚೂಣಿಯಲ್ಲೇ ಅನೇಕ ಆಂದೋಲನಗಳು ನಡೆದಿವೆ. ಮಹಿಳೆಯರ ಅಸ್ಮಿತೆ ಹಾಗೂ ಅಸ್ತಿತ್ವವನ್ನು ಸಾದರಪಡಿಸುವ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಇತಿಹಾಸ ಗಮನೀಯವಾಗಿದೆ. 1910ರಲ್ಲಿ ಡೆನ್ಮಾರ್ಕ್‌ನಲ್ಲಿ ನಡೆದ ಅಂತರರಾಷ್ಟ್ರೀಯ ಮಹಿಳಾ ಸಮ್ಮೇಳನದ ಸರ್ವಾಧ್ಯಕ್ಷೆಯಾಗಿದ್ದ ಕ್ಲಾರಾ ಜೆಟ್‌ಕಿನ್ ಅವರು ಪ್ರತಿವರ್ಷ ಮಹಿಳಾ ದಿನವನ್ನು ಆಚರಿಸಬೇಕೆಂಬ ನಿರ್ಣಯವನ್ನು ಮಂಡಿಸಿದರು. 1911ರಲ್ಲಿ ಮಹಿಳೆಯರ ಮತದಾನದ ಹಕ್ಕಿಗಾಗಿ ಚಳವಳಿ ನಡೆದು ಮಾರ್ಚ್ 8ರಂದು ಮಹಿಳಾ ದಿನವನ್ನು ಮೊದಲಿಗೆ ಆಚರಿಸಲಾಯಿತು.

ನಿಜ, ಅಂದಿಗೆ ಹೋಲಿಸಿದರೆ ಇಂದಿನ ದಿನಮಾನಗಳಲ್ಲಿ ಮಹಿಳೆಯರ ಹಕ್ಕಿನ ಪರವಾದ ಸಾಮಾಜಿಕ ವಾತಾವರಣ ಮೂಡುತ್ತಿದೆ. ಮಹಿಳೆಯರ ಪರವಾದ ಹಕ್ಕು ಮಂಡನೆ ಎಂಬುದು ಪುರುಷ ವಿರೋಧವಲ್ಲ, ಮಹಿಳೆಯರ ಸ್ವಾತಂತ್ರ್ಯವನ್ನು ದಮನಿಸುವ ವ್ಯವಸ್ಥೆಯ ವಿರೋಧ ಎಂಬ ಅರಿವೂ ಇದೆ. ಮಹಿಳೆಯರಿಗೆ ಶಿಕ್ಷಣ, ಉದ್ಯೋಗ ಮತ್ತು ರಾಜಕೀಯ ಅವಕಾಶಗಳು ಸಿಗುತ್ತಿವೆ. ಸಮಾನತೆಯ ಆಶಯಗಳು ಮುನ್ನೆಲೆಗೆ ಬಂದಿವೆ. ಆದರೆ 'ಗಂಡಸುತನ'ದ ದೌರ್ಜನ್ಯಗಳು ನಿಂತಿಲ್ಲ, ವಿಕೃತಿಗಳು ವಿನಾಶವಾಗಿಲ್ಲ. ಒಂದು ಮಾಹಿತಿಯ ಪ್ರಕಾರ, ನಮ್ಮ ದೇಶದಲ್ಲಿ ಒಂದು ದಿನಕ್ಕೆ 86 ಅತ್ಯಾಚಾರಗಳು ನಡೆಯುತ್ತಿವೆ ಮತ್ತು ಮೂರು ಅತ್ಯಾಚಾರ ಪ್ರಕರಣಗಳಲ್ಲಿ ಎರಡು ವರದಿಯೇ ಆಗುವುದಿಲ್ಲವೆಂದು ಹೇಳಲಾಗಿದೆ.

ಮಹಿಳೆಯರ ಮೇಲೆ ಮಾತ್ರವಲ್ಲ, ದಲಿತರ ಮೇಲೆ, ಎಲ್ಲ ಜಾತಿಗಳ ಬಡವರ ಮೇಲೂ ದೌರ್ಜನ್ಯಗಳು ನಡೆಯುತ್ತಿವೆ. ಮೊದಲು ಫ್ಯೂಡಲ್ ಪದ್ಧತಿಯ ಗಂಡಾಳಿಕೆ ಮತ್ತು ಈಗ ಬಂಡವಾಳಶಾಹಿ ಪದ್ಧತಿಯ 'ಹೊಸ ಆರ್ಥಿಕ ಗಂಡಾಳಿಕೆ' ಚಾಲ್ತಿಯಲ್ಲಿದೆ. ಇಂಥ ಸನ್ನಿವೇಶದಲ್ಲಿ ನಮಗೆ ಬೇಕಾದ್ದು ಗಂಡಸುತನವಲ್ಲ, ಎಲ್ಲರನ್ನೂ ತನ್ನ ಕಂದಗಳೆಂದು ಕಂಡುಕೊಳ್ಳುವ ತಾಯ್ತನ ಬೇಕು. ತಾಯ್ತನವು ಭಾಷೆಯಲ್ಲೂ ಬರಬೇಕು. ಬದುಕಿನಲ್ಲಿ ಮೊದಲು ಬರಬೇಕು. ತಾಯಿಯು ತನ್ನ ಮಕ್ಕಳಲ್ಲಿ ತಾರತಮ್ಯ ಮಾಡುವುದಿಲ್ಲ. ತಾನು ಜನ್ಮ ಕೊಟ್ಟ ಕಂದಮ್ಮಗಳು ಗಂಡಾಗಲಿ ಹೆಣ್ಣಾಗಲಿ ಸಮಾನ ವಾತ್ಸಲ್ಯದಿಂದ ಕಾಣುವುದು ತಾಯಿ ಗುಣ. ನಮಗಿಂದು ಬೇಕಾದ್ದು ಜಾತಿ, ಧರ್ಮ, ಲಿಂಗ ತಾರತಮ್ಯಗಳಿಲ್ಲದ ಸಾಮಾಜಿಕ- ಆರ್ಥಿಕ ಸಮತೆ ಮತ್ತು ಮಮತೆಯುಳ್ಳ ತಾಯ್ತನದ ಸಮಾಜ.

ನಮ್ಮ ಮನಸ್ಸಿನಲ್ಲಿ ತಾಯ್ತನ, ಮೆದುಳಿನಲ್ಲಿ ಮಗುತನ ಇರಬೇಕು. ಮಗುತನವೆಂದರೆ ಅಹಂಕಾರವಿಲ್ಲದ ಅರಿವಿನ ಆಸಕ್ತಿ, ತಾಯ್ತನವೆಂದರೆ ಸಮಾನತೆ ಮತ್ತು ಸೌಹಾರ್ದ.

ಚುರುಮುರಿ

ಎಲ್ಲವೂ ಲಭ್ಯ

● ಆನಂದ

'ಬೆಂಗಳೂರಿನಲ್ಲಿ ಏನುಂಟು ಏನಿಲ್ಲ?' ಮಡದಿಯ ಪ್ರಶ್ನೆ. 'ಸದ್ಯಕ್ಕೆ ಬಿಸಿಲುಂಟು ನೀರಿಲ್ಲ' ಎಂದೆ.

'ಆದರೆ ಬೇರೆಲ್ಲವೂ ಲಭ್ಯ. ಫಾರ್ ಎಕ್ಸಾಂಪಲ್ ತಂಬುಳಿ'.

'ತಂಬುಳಿ?! ಸೊ ಸಿಂಪಲ್ ಟು ಮೇಕ್. ಅನೇಕ ಮನೆಗಳಲ್ಲಿ ಮಾಡ್ತಾರೆ. ಏನು ಅತಿಶಯ?'

'ಈಗ ಅದು ಆನ್‌ಲೈನ್‌ನಲ್ಲೂ ಲಭ್ಯರೀ' ಎಂದಾಗ ಆಶ್ಚರ್ಯವಾಯಿತು. ಒಲೆ ಹಚ್ಚದೆ ಮಾಡಬಹುದಾದ ಈ ವಿಶಿಷ್ಟ ಆರೋಗ್ಯಕರ ಪದಾರ್ಥ ಈಗ ಮಾರ್ಕೆಟಬಲ್ ಕಮಾಡಿಟಿ!

'ಹೌದೂರಿ, ಬೆಂಗಳೂರಿನಲ್ಲೊಬ್ಬರು 50 ಬಗೆಯ ತಂಬುಳಿಗಳನ್ನು ಮಾರಾಟಕ್ಕೆ ಇರಿಸಿದ್ದಾರೆ. ತಂಪು ಪೇಯದಂತೆ ಲಭ್ಯ'.

'ಮೊನ್ನೆ 'ಸಾಂಬಾರ್ ಬಾಕ್ಸ್' ನೋಡಿದೆ. ಅಲ್ಲಿ 15-20 ಬಗೆಯ ತರಾವರಿ ರೆಡಿಮೇಡ್ ಸಾಂಬಾರ್ ಸಿಗುತ್ತೆ. ಮನೇಲಿ ಅನ್ನ ಮಾಡಿಕೊಂಡು ಇಲ್ಲಿಂದ ಸಾಂಬಾರ್ ಕೊಂಡೊಯ್ದರೆ ಊಟ ಆದಂತೆ'.

'ಸಾಂಬಾರ್ ಬಾಕ್ಸ್‌ನಂತೆ ಯಾರಾದರೂ 'ಅನ್ನ ಗೃಹ' ಅಂತ ತೆರೆದರೆ ಮನೇಲಿ ಅನ್ನ ಮಾಡಿಕೊಳ್ಳೋದೂ ತಪ್ಪುತ್ತೆ. ಆದರೆ ಈ ಅನ್ನ ಗೃಹ ಅಥವಾ ರೈಸ್ ಬಾಕ್ಸ್ ಸಾಂಬಾರ್ ಬಾಕ್ಸ್ ಪಕ್ಕದಲ್ಲೇ ಇದ್ದರೆ ಲಾಜಿಸ್ಟಿಕ್ಸ್ ವರ್ಕ್‌ಔಟ್ ಆಗುತ್ತೆ'.

'ಅನ್ನ ಗೃಹದಲ್ಲಿ ಹುಳಿ ಅಥವಾ ತಂಬುಳಿ ಜತೆ ಕಲಸಿಕೊಂಡು ತಿನ್ನೋದಿಕ್ಕೆ ಬರೀ ವೈಟ್ ರೈಸ್ ಅಂದರೆ ಪ್ಲೇನ್ ರೈಸ್ ಇದ್ದರೆ ಸಾಲದು. ಯೆಲ್ಲೋ ರೈಸ್ ಜತೆಗೆ...'

'ಯೆಲ್ಲೊ ರೈಸ್..?'

'ಚಿತ್ರಾನ್ನ, ಲೆಮನ್ ರೈಸ್, ಅದರೊಟ್ಟಿಗೆ ಜೀರಾ ರೈಸ್, ಪಲಾವ್, ಬಿರಿಯಾನಿ ಹೀಗೆ ರೈಸ್ ವೆರೈಟಿ ಮಾರಾಟಕ್ಕಿಟ್ಟರೆ ಅಡುಗೆ ಮಾಡೋದಿಕ್ಕೆ ಬೇಜಾರಾದಾಗಲೆಲ್ಲ ಇಲ್ಲಿಂದ ತರಬಹುದು'.

'ತರೋದೆ? ತರಿಸಬಹುದು ತರೋದಲ್ಲ. ಅದೇನೋ ಸ್ವಿಗ್ಗೀನೋ ಸುಗ್ಗೀನೋ, ಜೊಮಾಟೋನೋ ಟೊಮಾಟೋನೋ ಇದೆಯಲ್ಲ ಹೋಂ ಡೆಲಿವರೀಗೆ'.

'ನಮ್ಮ ಕಾಲದಲ್ಲಿ ಇವೇನೂ ಇರಲಿಲ್ಲ. ನಾವೇ ಬೇಯಿಸಿಕೋಬೇಕಿತ್ತು ನೋಡು'.

'ಆರ್ಡರ್ ಮಾಡೋದಿಕ್ಕೆ ದುಡ್ಡೂ ಇರಲಿಲ್ಲವಲ್ಲ ಆಗ'!

ದಿನದ ಟ್ವೀಟ್

ಯಶಸ್ವಿ ಕಾರ್ಯಾಚರಣೆಯ ಫಲ

ಸಾತ್ವಿಕ್ ಆಟವಾಡುತ್ತಿರುವುದನ್ನು ನೋಡುವಾಗ ಸಿಗುವ ಆನಂದಕ್ಕೆ ಬೆಲೆಕಟ್ಟಲಾಗದು! ಅಮೂಲ್ಯ ಜೀವವನ್ನು ಉಳಿಸಲು ಹಗಲು ರಾತ್ರಿ ದುಡಿದ ಎಲ್ಲರೂ ಪ್ರಶಂಸಾರ್ಹರು. ಎಲ್ಲರ ಕೈಗಳೂ ಒಗ್ಗೂಡಿದರೆ ಹಲವು ಸಾಧನೆಗಳು ಕಾರ್ಯರೂಪಕ್ಕೆ ಬರುತ್ತವೆ.

(ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನಲ್ಲಿ ಕೊಳವೆಬಾವಿಗೆ ಬಿದ್ದು, ರಕ್ಷಣಾ ಕಾರ್ಯಾಚರಣೆಯ ಯಶಸ್ಸಿನಿಂದ ಬದುಕಿಬಂದಿರುವ ಮಗು ಸಾತ್ವಿಕ್ ಚೇತರಿಸಿಕೊಂಡು ಆಟವಾಡುತ್ತಿರುವ ವಿಡಿಯೊ ತುಣುಕಿಗೆ ಪ್ರತಿಕ್ರಿಯೆ)

ಮಣಿವಣ್ಣನ್ ಪಿ., ಐಎಎಸ್ ಅಧಿಕಾರಿ

ಕಿಡಿನುಡಿ

6 ವರ್ಷಗಳ ಜೈಲುವಾಸದ ಬಳಿಕ ಕೊನೆಗೂ ಶೋಮಾ ಸೇನ್ ಅವರಿಗೆ ಜಾಮೀನು ದೊರೆತಿದೆ. ಭೀಮಾ ಕೋರೆಗಾಂವ್ ಪ್ರಕರಣದಲ್ಲಿ ಸುಧಾ ಭಾರದ್ವಾಜ್, ವರ್ನಾನ್ ಗೊನ್ಸಾಲ್ವೆಸ್, ಅರುಣ್ ಫೆರೇರ, ವರವರ ರಾವ್ ಮತ್ತು ಮಹೇಶ್ ರಾವುತ್ ಅವರ ನಂತರ ಜಾಮೀನು ಪಡೆದಿರುವ 6ನೇ ವ್ಯಕ್ತಿ ಇವರಾಗಿದ್ದಾರೆ. ಇದು, ಪ್ರಕರಣದ ಬಗ್ಗೆ ಬಹಳಷ್ಟನ್ನು ಹೇಳುತ್ತದೆ.

ಕೌಶಿಕ್ ರಾಜ್, ಕವಿ, ಪತ್ರಕರ್ತ

25 ವರ್ಷಗಳ ಹಿಂದೆ

ಮಂಗಳವಾರ, 6-4-1999

● **ಎಐಎಡಿಎಂಕೆ ಸಚಿವರು ಸಂಪುಟದಿಂದ ಹೊರಕ್ಕೆ: ಕೇಂದ್ರ ಸರ್ಕಾರ ಬಿಕ್ಕಟ್ಟಿನಲ್ಲಿ**

ಚೆನ್ನೈ, ಏ. 5 (ಪಿಟಿಐ)– ತಮ್ಮ ಪಕ್ಷದ ಇಬ್ಬರು ಸಚಿವರನ್ನು ಕೇಂದ್ರದ ಅಟಲ್ ಬಿಹಾರಿ ವಾಜಪೇಯಿ ಅವರ ಸಂಪುಟದಿಂದ ಹಿಂದಕ್ಕೆ ಕರೆಸಿಕೊಳ್ಳಲು ತೀರ್ಮಾನಿಸುವ ಮೂಲಕ ಎಐಎಡಿಎಂಕೆ ಪಕ್ಷವು ಸರ್ಕಾರದ ಜತೆಗಿನ ಸಂಬಂಧ ತೊರೆದು, ಕೇಂದ್ರದಲ್ಲಿ ಪರ್ಯಾಯ ಸರ್ಕಾರ ರಚನೆಗೆ ಪ್ರಯತ್ನ ನಡೆಸುವ ತೀರ್ಮಾನವನ್ನು ಪ್ರಕಟಿಸಿದೆ.

ಎಐಎಡಿಎಂಕೆಯ ಮೂರು ಪ್ರಮುಖ ಬೇಡಿಕೆಗಳನ್ನು ಕೇಂದ್ರ ಸಚಿವ ಸಂಪುಟ ತಿರಸ್ಕರಿಸಿದ್ದರ ಹಿನ್ನೆಲೆಯಲ್ಲಿ ಸಂಪುಟದಿಂದ ತಮ್ಮ ಇಬ್ಬರು ಸಚಿವರನ್ನು ವಾಪಸು ಕರೆಸಿಕೊಳ್ಳಲು ಪಕ್ಷದ ನಾಯಕಿ ಜಯಲಲಿತಾ ಅವರು ನಿರ್ಧರಿಸಿದರು.

ಸಂಪುಟದಲ್ಲಿರುವ ಇಬ್ಬರು ಸಚಿವರಾದ ತಂಬಿದೊರೈ ಮತ್ತು ಜನಾರ್ದನನ್ ಅವರು ನಾಳೆ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವರು ಎಂದು ಅವರು ಇಂದು ರಾತ್ರಿ ಪ್ರಕಟಿಸಿದ್ದಾರೆ.

● **ಪ್ರತ್ಯೇಕ ರಾಜ್ಯ ಬೇಡಿಕೆ ಮಾತೃದ್ರೋಹ: ಪಟೇಲ್**

ಚಿಕ್ಕಮಗಳೂರು, ಏ. 5– ಪ್ರತ್ಯೇಕ ಉತ್ತರ ಕರ್ನಾಟಕ ರಾಜ್ಯ ಬೇಡಿಕೆಯನ್ನು ತಳ್ಳಿಹಾಕಿದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು 'ರಾಜ್ಯ ಒಡೆಯೋದೂ ಇಲ್ಲ, ಒಡೆಯಲು ಬಿಡೋದೂ ಇಲ್ಲ' ಎಂದು ಸ್ಪಷ್ಟಪಡಿಸಿದರು.

ಇಂದು ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಾ ಅವರು ಈ ವಿಷಯ ತಿಳಿಸಿ, ಪ್ರತ್ಯೇಕ ರಾಜ್ಯಕ್ಕಾಗಿ ಹೋರಾಡುವುದು ಮಾತೃದ್ರೋಹ ಎಂದರು.

ಪ್ರತ್ಯೇಕ ರಾಜ್ಯ ಬೇಡಿಕೆಯನ್ನು ಜನರು ನೋಡಿಕೊಳ್ಳುತ್ತಾರೆ. ಅವರೇ ಪಾಠ ಕಲಿಸುತ್ತಾರೆ. ಬೇರೆ ಕೆಲಸ ಇಲ್ಲವೇ ಈ ಬೇಡಿಕೆ ಇಡುವವರಿಗೆ ಎಂದು ಅವರು ಪ್ರಶ್ನಿಸಿದರು.

50 ವರ್ಷಗಳ ಹಿಂದೆ

ಶನಿವಾರ, 6-4-1974

● **ಮುಷ್ಕರ ಅಕ್ರಮ: ಸರ್ಕಾರಿ ನೌಕರರಿಗೆ ಅರಸು ಎಚ್ಚರಿಕೆ**

ಬೆಂಗಳೂರು, ಏ. 5– ರಾಜ್ಯ ಸರ್ಕಾರಿ ನೌಕರರು ಅಖಿಲ ಭಾರತ ಕಾರ್ಯಕ್ರಮದಂತೆ ಏಪ್ರಿಲ್ 9ರಂದು ಮುಷ್ಕರ ಹೂಡುವುದು ಅಕ್ರಮವಾಗುವುದಲ್ಲದೇ ಶಿಸ್ತಿನ ಕ್ರಮಗಳನ್ನು ಎದುರಿಸಬೇಕಾಗುವುದೆಂದು ಮುಖ್ಯಮಂತ್ರಿ ಶ್ರೀ ಡಿ. ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ಎಚ್ಚರಿಕೆ ನೀಡಿದರು.

ಮುಷ್ಕರದ ಬಗ್ಗೆ ಶ್ರೀ ಕೋಣಂದೂರು ಲಿಂಗಪ್ಪ ಅವರು ಪ್ರಶ್ನೋತ್ತರವಾದ ನಂತರ ಮುಖ್ಯಮಂತ್ರಿಗಳ ಗಮನ ಸೆಳೆದರು.

ಆಹಾರ ಬೆಲೆಗಳನ್ನು ಇಳಿಸುವುದು, ವೇತನ ಭತ್ಯೆಗಳ ಪರಿಷ್ಕರಣೆ ಮುಂತಾದ ಬೇಡಿಕೆಗಳ ಬಗ್ಗೆ ಇಂದು ಸಂಜೆ ಸಭೆ ನಡೆಯುವುದು ತಮಗೆ ಗೊತ್ತಿದೆಯೆಂದು ಮುಖ್ಯಮಂತ್ರಿ ತಿಳಿಸಿ 'ಸಭೆ, ಮುಷ್ಕರಗಳಿಂದ ಸಮಸ್ಯೆ ಪರಿಹಾರವಾಗುವುದಿಲ್ಲ' ಎಂದರು.

ನೌಕರರ ಬೇಡಿಕೆಗಳ ಬಗ್ಗೆ ಮಾನ್ಯ ಸದಸ್ಯರಷ್ಟೇ ಸರ್ಕಾರಕ್ಕೂ ಸಹಾನುಭೂತಿಯಿದೆ. ಆದರೆ, ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ ನೌಕರರ ವೇತನ ಭತ್ಯೆಗಳನ್ನು ಪರಿಷ್ಕರಿಸುತ್ತಿರುವುದು ತಾರತಮ್ಯಕ್ಕೆ ಅವಕಾಶ ಆಗಿದೆಯೆಂದು ಶ್ರೀ ಅರಸು ಹೇಳಿದರು.

ಸಂಗತ

ಇನ್‌ಬಾಕ್ಸ್‌ನಲ್ಲಿ ನೀರಿಟ್ಟು ಹಕ್ಕಿಯ ಮರೆತರು!

ಹಕ್ಕಿಗಳಿಗೆ ನೀರಿಡಿ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಸ್ಟೇಟಸ್ ಹಾಕುವ ಬದಲು, ನಿಜವಾಗಿಯೂ ಅವುಗಳಿಗೆ ಒಂದು ಹಿಡಿ ಕಾಳು, ಒಂದು ಬೊಗಸೆ ನೀರು ಇಟ್ಟರೆ ಸಾಕು

● ಸದಾಶಿವ್ ಸೊರಟೂರು

ಬಾಲ್ಕನಿ ಮೇಲೆ, ಕಿಟಕಿಯ ಬಳಿ ನೀರು ತುಂಬಿಟ್ಟ ಬಟ್ಟಲುಗಳ ಚಿತ್ರಗಳು ಫೇಸ್‌ಬುಕ್ ಪುಟಗಳಲ್ಲಿ, ವಾಟ್ಸ್‌ಆ್ಯಪ್ ಸ್ಟೇಟಸ್‌ಗಳಲ್ಲಿ ಈ ನಡುವೆ ತುಂಬಾ ಹೆಚ್ಚಾಗಿವೆ. ಅಲ್ಲಿ ನೀರು ಕುಡಿಯುತ್ತಾ ಕುಳಿತ ಪಕ್ಷಿಗಳ ಕೆಳಗೆ ಒಂದು ಘೋಷಣೆ 'ಬೇಸಿಗೆ, ತುಂಬಾ ಬಿಸಿಲು, ನೀರಿಲ್ಲ... ಹಕ್ಕಿಗಳಿಗೆ ನೀರಿಡಿ. ಇದು ನಮ್ಮ ಜವಾಬ್ದಾರಿ. ಅವುಗಳಿಗೂ ಹಕ್ಕಿದೆ'. ಹೀಗೆ ಚೆಂದದ ಐದಾರು ಸಾಲುಗಳು. ಸಮಾಜ ಎಷ್ಟೊಂದು ಸಭ್ಯವಾಗಿದೆ ಅನಿಸುತ್ತದೆ. ಅಂತೂ ನಮ್ಮ ಜನರಿಗೆ ಒಂದು ಕನಿಷ್ಠಮಟ್ಟದ ಪ್ರಜ್ಞೆಯಾದರೂ ಬಂತಲ್ಲ ಎಂಬ ಸಂತಸ.

ಹಕ್ಕಿಗಳು ನೀರು ಕುಡಿಯುವ ಸೊಬಗು ನೋಡಲು ಖುಷಿಯಿಂದ ಆಚೆ ಬಂದು ತಿರುಗಾಡಿದರೆ ನಿಜಕ್ಕೂ ಆಶ್ಚರ್ಯ. ನೀರು ತುಂಬಿದ ಬಟ್ಟಲು ದುರ್ಲಭ. ಬಾಯಾರಿದ ಹಕ್ಕಿಗಳ ಸೋತ ಮುಖ.

'ಹಕ್ಕಿಗಳಿಗೆ ನೀರಿಡಿ' ಎಂಬ ಒಂದು ಸಂದೇಶ ಇನ್‌ಬಾಕ್ಸಿಗೆ ಬರುತ್ತದೆ ಇಲ್ಲವೇ ಫೋಟೊ ಬರುತ್ತದೆ. ನಾವು ಅದನ್ನು ಹತ್ತಾರು ಗುಂಪುಗಳಿಗೆ ಕಳುಹಿಸಿ, ಸ್ಟೇಟಸ್‌ಗೆ ಹಾಕಿ ಒಂದು ವಿಚಿತ್ರ ಅಹಂನಲ್ಲಿ ಬೀಗುತ್ತೇವೆ. ಹಕ್ಕಿಗಳಿಗೆ ನಾವೇನೋ ತುಂಬಾ ಒಳ್ಳೆಯದು ಮಾಡಿದೆವು ಎಂಬಂತೆ ಎದೆ ಉಬ್ಬುತ್ತದೆ.

ಸಮಸ್ಯೆ ಇರುವುದು ಎಲ್ಲಿ? ಚಿಂತನೆಗಳಲ್ಲೇ? ಅಲ್ಲ. ಅದು ಧಾರಾಳವಾಗಿ ಸಿಗುತ್ತದೆ. ಒಳ್ಳೆಯ ವಿಚಾರಗಳು ಬೆಟ್ಟದಷ್ಟಿವೆ. ಅತ್ಯುತ್ತಮ ಸಲಹೆಗಳ ಮಹಾಪೂರವೇ ಹರಿಯುತ್ತದೆ. ಉತ್ತಮ ಭಾಷಣಗಳಿಂದ ಬಾಯಿ ಒಣಗುತ್ತದೆ. ಅನುಭವ, ಅನುಭಾವ ಎಲ್ಲವೂ ಇವೆ ಇಲ್ಲಿ ಯಥೇಚ್ಛವಾಗಿ.

ಮೊಬೈಲ್ ತೆರೆದು ಕೂತರೆ ರಾಶಿಗಟ್ಟಲೆ ಒಳ್ಳೆಯ ವಿಚಾರಗಳು ನಮಗೆ ಬಂದು ಬೀಳುತ್ತವೆ. ನಿಜವಾದ ಸಮಸ್ಯೆ ಇರುವುದು ಅವುಗಳ ಅನುಷ್ಠಾನದಲ್ಲಿ, ವಿಚಾರವನ್ನು ಬದುಕಾಗಿಸುವುದರಲ್ಲಿ. ಒಂದು ಸ್ಟೇಟಸ್ ಹಾಕುವ ಬದಲು ಒಂದು ಹಿಡಿ ಕಾಳು, ಒಂದು ಬೊಗಸೆ ನೀರು ಇಟ್ಟಿದ್ದರೆ ಸಾಕಿತ್ತು. ಆದರೆ ಹಕ್ಕಿಗಳು ಲೈಕ್ ಬಟನ್ ಒತ್ತುವುದಿಲ್ಲ. ಅವು ನಾವು ಕೊಟ್ಟ ನೀರು, ಆಹಾರದ ವಿಷಯವನ್ನು ಹತ್ತಾರು ಕಡೆ ಶೇರ್ ಮಾಡುವುದಿಲ್ಲ. ಆ ಹಕ್ಕಿಗಳು ಕಮೆಂಟ್ ಕೂಡ ಮಾಡುವುದಿಲ್ಲ. ಅದಕ್ಕಾಗಿ ನಮ್ಮಲ್ಲಿ ಹೆಚ್ಚಿನ ಜನ ನೀರು ಇಡುವುದಿಲ್ಲ.

ನಾವು ಸಾಮಾಜಿಕ ಜಾಲತಾಣಗಳಲ್ಲಿ ಅನೇಕ ಬಾರಿ ನಮ್ಮ ವಿಚಾರವನ್ನು ಹಾಕುವುದು ಸಾಮಾಜಿಕ ಬದ್ಧತೆಗಿಂತ ನಾವೆಷ್ಟು ಬುದ್ಧಿವಂತರು ಎಂಬುದನ್ನು ತೋರಿಸಿಕೊಳ್ಳುವುದಕ್ಕೇನೋ ಎಂದು ಅನಿಸುತ್ತದೆ. ನನಗೆಷ್ಟು ಲೈಕ್ ಬರಬಹುದು, ಎಷ್ಟು ಕಮೆಂಟ್ ಬರಬಹುದು, ಈ ಪೋಸ್ಟ್ ಎಷ್ಟು ಶೇರ್ ಆಗಬಹುದು ಎಂಬ ಕುತೂಹಲವೇ ಪ್ರಧಾನವಾಗಿರುತ್ತದೆ. ಸಾಮಾಜಿಕ ಜಾಲತಾಣದಲ್ಲಿ ಮುಳುಗಿಹೋದಾಗ ಈ ಸಮಾಜ, ಈ ಜಗತ್ತು ಎಷ್ಟೊಂದು ಸಭ್ಯವಾಗಿವೆ ಅನಿಸುತ್ತದೆ. ಅದರಿಂದ ಆಚೆ ಬಂದಾಗಲೇ ಅಸಭ್ಯತೆಯ ದರ್ಶನವಾಗುವುದು.

ಮೊಬೈಲ್, ಅದಕ್ಕೊಂದಿಷ್ಟು ಇಂಟರ್ನೆಟ್ ಇದ್ದರೆ ಸಾಕು ವಾಟ್ಸ್‌ಆ್ಯಪ್, ಫೇಸ್‌ಬುಕ್, ಟ್ವಿಟರ್, ಇನ್‌ಸ್ಟಾಗ್ರಾಂನಲ್ಲಿ ಒಂದು ಖಾತೆ ಕಾಯಂ. ಕ್ಷಣಮಾತ್ರದಲ್ಲಿ ಅವನೊಬ್ಬ ಜ್ಞಾನಿಯಾಗುತ್ತಾನೆ. ಅನುಭವಿ, ಸಮಾಜ ಸುಧಾರಕ, ಪರಿಸರಪ್ರೇಮಿ, ಮಾರ್ಗದರ್ಶಕ, ತತ್ವಜ್ಞಾನಿಯಾಗುತ್ತಾನೆ. ದೊಡ್ಡ ದೊಡ್ಡ ಹೇಳಿಕೆಗಳನ್ನು ಕೊಡಲು ಶುರು ಮಾಡುತ್ತಾನೆ. ಸ್ಟೇಟಸ್‌ಗಳು, ಟೈಮ್‌ಲೈನ್‌ಗಳು ಒಳ್ಳೆಯ ವಿಚಾರಗಳಿಂದ ತುಂಬಿ ಹೋಗುತ್ತವೆ.

'ಜಗತ್ತಿನ ಎಲ್ಲಾ ಒಳ್ಳೆಯ ವಿಚಾರಗಳನ್ನು ಈಗಾಗಲೇ ಹೇಳಿ ಆಗಿದೆ, ಉಳಿದಿರುವುದು ಅವನ್ನು ಅನುಸರಿಸುವ ವಿಚಾರ ಮಾತ್ರ' ಎನ್ನುತ್ತಾರೆ ದಾರ್ಶನಿಕರು. ಎಲ್ಲರೂ ಹೇಳುವವರೇ ಆದರೆ ಅದರಂತೆ ನಡೆಯುವವರು ಯಾರು? 'ಉದಾತ್ತ ಚಿಂತನೆಗಳು ನಮಗೆ ಎಲ್ಲ ಕಡೆಯಿಂದಲೂ ಬರಲಿ' ಎಂಬ ಮಾತಿದೆ. ಈಗ ಕಾಲಿಟ್ಟ ಕಡೆಯಲ್ಲೆಲ್ಲ ಉದಾತ್ತ ಚಿಂತನೆಗಳೇ. ಅವುಗಳಿಗೆ ಬರ ಎಂಬುದೇ ಇಲ್ಲ. ಹಾಗೆ ನೋಡಿದರೆ ಕೈಗೆ, ಕಾಲಿಗೆ ಸಿಗುವ ಉದಾತ್ತ ಚಿಂತನೆಗಳಿಂದ ಸಮಾಜ ಈಗ ಹೆಚ್ಚು ಸುಧಾರಿಸಬೇಕಿತ್ತು. ಆದರೆ ಮೊದಲಿಗಿಂತ ಹೆಚ್ಚು ದಾರಿತಪ್ಪಿರುವುದು ಕಣ್ಣ ಮುಂದೆ ಸ್ಪಷ್ಟವಿದೆ. 'ಆಡದೆ ಮಾಡುವವ ರೂಢಿಯೊಳಗುತ್ತಮನು, ಆಡಿ ಮಾಡುವವ ಮಧ್ಯಮನು, ಆಡಿಯೂ ಮಾಡದವ ಅಧಮನು' ಎನ್ನುತ್ತಾನೆ ಸರ್ವಜ್ಞ.

ಹೆಣ್ಣಿನ ಬಗ್ಗೆ ಗೌರವಪೂರ್ಣವಾಗಿ ಕವಿತೆ ಬರೆದವನು ತಾನು ಕೆಲಸಕ್ಕೆ ಹೋಗುವಾಗ ಹೆಂಡತಿಯನ್ನು ಒಳಗೆ ಬಿಟ್ಟು ಬೀಗ ಜಡಿದು ನಡೆದು ಹೋಗಿರುತ್ತಾನೆ. ಗಿಡ ನೆಡುವ ಕಾರ್ಯಕ್ರಮಕ್ಕೆ ಅತಿಥಿಯಾಗಿ ಬಂದವನ ಮನೆ ತುಂಬಾ ಮರದಿಂದ ಮಾಡಿದ ವಸ್ತುಗಳೇ ಇರುತ್ತವೆ. ಸರ್ಕಾರಿ ಶಾಲೆ ಬಗ್ಗೆ ಪೋಸ್ಟ್ ಬರೆಯುವವನ ಮಕ್ಕಳು ಖಾಸಗಿ ಶಾಲೆಯಲ್ಲಿ ಓದುತ್ತಿರುತ್ತಾರೆ. ಹಣ ಮುಖ್ಯವಲ್ಲ ಅಂದವನ ಬ್ಯಾಂಕ್ ಬ್ಯಾಲೆನ್ಸ್ ತುಂಬಿ ತುಳುಕುತ್ತಿರುತ್ತದೆ. ನೋಡಿ, ಬದುಕಿನ ಈ ವಿರೋಧಾಭಾಸಗಳನ್ನು!

ಒಂದು ನೆನಪಿರಲಿ, ಕೃತಿಯಿಂದ ಹುಟ್ಟಿದ ಮಾತಿಗೆ ಶಕ್ತಿ ಜಾಸ್ತಿ. ಹತ್ತಾರು ಬಟ್ಟಲುಗಳಲ್ಲಿ ನೀರಿಟ್ಟು ಅದನ್ನು ಹತ್ತು ಜನಕ್ಕೆ ಹೇಳಿದರೆ ಖಂಡಿತ ಅವರಲ್ಲಿ ಐದು ಜನರಾದರೂ ನೀರಿಡುತ್ತಾರೆ. ನೀವು ನೀರು ಇಡದೆ ನೂರು ಪೋಸ್ಟ್ ಹಾಕಿದರೂ ಒಬ್ಬರೂ ಬಟ್ಟಲಿನಲ್ಲಿ ನೀರು ತುಂಬಿ ಇಡುವುದಿಲ್ಲ. ಅದು ಕೃತಿಯಿಂದ ಹುಟ್ಟಿದ ಮಾತಿಗಿರುವ ಶಕ್ತಿ. ವಚನಕಾರರ ವಚನಗಳು ಸಮಾಜದ ಪರಿವರ್ತನೆಗೆ ಕಾರಣವಾದದ್ದು ಇದೇ ಕಾರಣಕ್ಕೆ. ವಚನಗಳು ಕೃತಿಯಿಂದ ಹುಟ್ಟಿದವು. ಅವರು ನಡೆಯಿಂದ ನುಡಿ ಕಂಡುಕೊಂಡರು. ಅವು ಬರೀ ಮಾತುಗಳಲ್ಲ.

ಬದುಕು ಮಾತಾಗದೇ ಕೃತಿಯಾಗಬೇಕು. ಅದು ಎಂದು ಸಾಧ್ಯವಾಗುವುದೋ ಪ್ರವಾಹದಂತೆ ಹರಿಯುತ್ತಿರುವ ಸುಳ್ಳುಸುಳ್ಳೇ ಒಳ್ಳೆಯ ಮಾತು ಎನಿಸಿಕೊಳ್ಳುತ್ತಿರುವ ಭರದಲ್ಲಿ...

ವಾಚಕರ ವಾಣಿ

ಚೀನಾವನ್ನು ಹಿಮ್ಮೆಟ್ಟಿಸಬೇಕಿದೆ

ಅರುಣಾಚಲಕ್ಕೆ ಝಂಗ್ನಾನ್ ಎಂದು ನಾಮಕರಣ ಮಾಡಿರುವ ಚೀನಾ, ಅಲ್ಲಿನ 30 ಸ್ಥಳಗಳಿಗೆ ತನ್ನದೇ ಹೆಸರುಗಳನ್ನಿಟ್ಟಿರುವ ನಾಲ್ಕನೇ ಪಟ್ಟಿಯನ್ನು ಬಿಡುಗಡೆ ಮಾಡಿದ್ದು, ಅವು ಮೇ 1ರಿಂದ ಜಾರಿಗೆ ಬರಲಿರುವುದು (ಪ್ರ.ವಾ., ಏ. 2) ಕಳವಳಕಾರಿ ಸಂಗತಿ. ಚೀನಾ ಹಿಂದಿನಿಂದಲೂ ಈ ರೀತಿ ತಂಟೆ ತಕರಾರು ಮಾಡುತ್ತಿದ್ದರೂ ಭಾರತ ಕಠಿಣ ಕ್ರಮ ಕೈಗೊಂಡು ಆ ದೇಶಕ್ಕೆ ಬಿಸಿ ಮುಟ್ಟಿಸಿದ ನಿದರ್ಶನಗಳಿಲ್ಲ. ಇದಕ್ಕೆ ಕಾರಣ, ಚೀನಾದ ಸೇನೆ ಬಲಿಷ್ಠವಾಗಿರುವುದು. ಇಷ್ಟೇ ಅಲ್ಲದೆ ಚೀನಾವು ನಮ್ಮ ನೆರೆಹೊರೆಯ ಪಾಕಿಸ್ತಾನ, ಶ್ರೀಲಂಕಾ, ನೇಪಾಳ, ಮಾಲ್ದೀವ್ಸ್, ಭೂತಾನ್ ದೇಶಗಳಿಗೆ ಹಣಕಾಸು ನೆರವು ನೀಡಿ ಅವುಗಳನ್ನು ತನ್ನ ಹಿಡಿತದಲ್ಲಿ ಇಟ್ಟುಕೊಂಡಿದೆ. ಹೊರದೇಶಗಳಲ್ಲಿ ತನ್ನ ಸೇನಾ ನೆಲೆಗಳನ್ನು ಸ್ಥಾಪಿಸಿ ಭಾರತವನ್ನು ಕಟ್ಟಿಹಾಕಲು ಯತ್ನಿಸುತ್ತಿರುವುದು ಗುಟ್ಟಿನ ಸಂಗತಿಯೇನಲ್ಲ.

ಚೀನಾ ಈ ಮೂಲಕ ಜಾಗತಿಕವಾಗಿಯೂ ಹಿಡಿತ ಸಾಧಿಸುತ್ತಿರುವುದು ಕಳವಳಕಾರಿ ಸಂಗತಿ. ಆದ್ದರಿಂದ ಭಾರತವು ಇದನ್ನು ಕಡೆಗಣಿಸದೆ ಅಮೆರಿಕ, ರಷ್ಯಾದ ಸಹಕಾರ ಪಡೆದು ಚೀನಾವನ್ನು ಹಿಮ್ಮೆಟ್ಟಿಸುವ ಪ್ರಯತ್ನ ಮಾಡಲಿ. ಚೀನಾದಂತೆ ಜಾಗತಿಕವಾಗಿ ತಾಂತ್ರಿಕ ಅಭಿವೃದ್ಧಿ ಹೊಂದುವ ಕಡೆ ಗಮನಹರಿಸಲಿ.

ಮುಳ್ಳೂರು ಪ್ರಕಾಶ್, ಮೈಸೂರು

ಪರೀಕ್ಷೆಯು 'ಅಗ್ನಿಪರೀಕ್ಷೆ' ಆಗದಿರಲಿ

ಎಸ್‌ಎಸ್‌ಎಲ್‌ಸಿ, ಪಿಯುಸಿ, ಪದವಿಯಂತಹ ಪರೀಕ್ಷೆಗಳು ಸಾಮಾನ್ಯವಾಗಿ ಬೇಸಿಗೆಯಲ್ಲಿಯೇ ನಡೆಯುತ್ತವೆ. ವರ್ಷದಿಂದ ವರ್ಷಕ್ಕೆ ಬೇಸಿಗೆಯಲ್ಲಿ ಉಷ್ಣತೆಯ ಪ್ರಮಾಣ ಏರುತ್ತಲೇ ಇರುವುದು ಎಲ್ಲರೂ ಬಲ್ಲ ಸಂಗತಿ. ಕಲ್ಯಾಣ ಕರ್ನಾಟಕ ಪ್ರದೇಶದಲ್ಲಂತೂ ಹೇಳತೀರದು. ಪರೀಕ್ಷಾ ಕೋಣೆಯಲ್ಲಿ ಸರಿಯಾದ ಫ್ಯಾನಿನ ವ್ಯವಸ್ಥೆ ಇರುವುದಿಲ್ಲ. ಒಂದೇ ಕೋಣೆಯಲ್ಲಿ ಎರಡು ಬ್ಲಾಕ್‌ಗಳನ್ನು ಮಾಡಲಾಗಿರುತ್ತದೆ. ಯಾವುದೋ ಒಂದು ಕಡೆ ಫ್ಯಾನ್ ಇರುತ್ತದೆ. ವಿದ್ಯುತ್ ಕೈಕೊಟ್ಟರಂತೂ ಮುಗಿಯಿತು!

ಪರೀಕ್ಷೆ ಬರೆಯುತ್ತಿರುವ ನನ್ನ ಮಗಳು ಹೇಳುವ ಪ್ರಕಾರ, ಬರೆಯುವ ಕೈ ಬೆವರಿ ಉತ್ತರ ಪತ್ರಿಕೆಯ ಪುಟ ಒದ್ದೆಯಾಗಿ ಅದರ ಮೇಲೆ ಅಕ್ಷರಗಳು ಸರಿಯಾಗಿ ಮೂಡುವುದಿಲ್ಲವಂತೆ. ಮೊದಲೇ ಆತಂಕ, ಗಾಬರಿಯಿಂದ ಬರೆಯುವ ಮಕ್ಕಳಿಗೆ ಹವಾಮಾನವೂ ಪ್ರತಿಕೂಲವಾದರೆ ಅವರ ಮನಃಸ್ಥಿತಿ ಹೇಗಿರಬಹುದು? ಬಿರು ಬಿಸಿಲಿನಲ್ಲಿಯೇ ಹೋಗಿ ಬರಬೇಕು! ಪರೀಕ್ಷೆಗಳು 'ಅಗ್ನಿಪರೀಕ್ಷೆ'ಗಳಾಗಬಾರದಲ್ಲವೇ? ಜನವರಿ ಇಲ್ಲವೇ ಫೆಬ್ರುವರಿಯಲ್ಲಿ ಪರೀಕ್ಷೆಗಳು ನಡೆಯುವಂತೆ ಶೈಕ್ಷಣಿಕ ವರ್ಷವನ್ನೇ ಬದಲಾಯಿಸುವ ದಿಸೆಯಲ್ಲಿ ಸರ್ಕಾರ ಗಂಭೀರ ಚಿಂತನೆ ನಡೆಸಬೇಕು.

ಶಿವಕುಮಾರ ಬಂಡೋಳಿ, ಹುಣಸಗಿ

ಚುನಾವಣೆ: ಬರೀ ಉಳ್ಳವರ ಆಟ?

ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಿದವರ ಆಸ್ತಿಪಾಸ್ತಿ, ನಗದು, ಬೆಳ್ಳಿ ಬಂಗಾರ, ಹೂಡಿಕೆಗಳನ್ನು ನೋಡಿದಾಗ, ಈ ದೇಶದಲ್ಲಿ ಚುನಾವಣೆಯು ಬರೀ ಉಳ್ಳವರು ಮತ್ತು ದೊಡ್ಡವರ ಆಟ ಎನ್ನುವುದು ಇನ್ನೊಮ್ಮೆ ಸಾಬೀತಾದಂತೆ ಆಗಿದೆ. ಜನಸಾಮಾನ್ಯರಿಗೆ ಈ ಚುನಾವಣೆಗಳಲ್ಲಿ ಸ್ಪರ್ಧಿಸುವುದು ಬರೀ ಕನಸಿನ ಮಾತು ಎನ್ನುವುದು ದೃಢಪಟ್ಟಿದೆ. ಲೋಕಸಭೆಗೆ ಸ್ಪರ್ಧಿಸುವಷ್ಟು ಹಣ ತಮ್ಮಲ್ಲಿ ಇಲ್ಲದಿರುವುದರಿಂದ ತಾವು ಸ್ಪರ್ಧಿಸುವುದಿಲ್ಲ ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೇಳಿರುವುದರಲ್ಲಿ ಸತ್ಯ ಇದೆ ಎನಿಸುತ್ತದೆ. ಚುನಾವಣೆ ಎಂದರೆ ದುಡ್ಡಿದ್ದವರು ದುಡ್ಡು ಹಾಕಿ ದುಡ್ಡು ಮಾಡುವ ವ್ಯಾಪಾರ ಎನ್ನುವ ಟೀಕೆಯಲ್ಲಿ ಅರ್ಥ ಕಾಣುತ್ತಿದೆ.

ರಮಾನಂದ ಶರ್ಮಾ, ಬೆಂಗಳೂರು

ಒಡಕಿನಲ್ಲಿ ಕೆಡುಕಿದೆ, ಅರಿತರೆ ಸುಖವಿದೆ

ಸಮಾಜಕ್ಕೆ ಮಹಿಳಾ ಶಕ್ತಿಯ ಪ್ರಾಮುಖ್ಯ, ಅವರ ಸಾಧನೆಗಳು, ಪ್ರತಿದಿನ ಸಮಾಜದಲ್ಲಿ ಎದುರಿಸುತ್ತಿರುವ ಸಮಸ್ಯೆಗಳು ಹಾಗೂ ಜಗತ್ತು ಸ್ಪಂದಿಸಬೇಕಿರುವ ಅಗತ್ಯವನ್ನು ಮನದಟ್ಟು ಮಾಡಿ, 'ಸ್ತ್ರೀ ಸಂವೇದನಾಶೀಲ' ಸಮಾಜವನ್ನು ಕಟ್ಟುವ ಉದ್ದೇಶದಿಂದ ಆಚರಿಸುತ್ತಿರುವ 'ಮಹಿಳಾ ದಿನಾಚರಣೆ' ನಿಜಕ್ಕೂ ಅರ್ಥಪೂರ್ಣ. ಅದರಲ್ಲೂ, ಔಪಚಾರಿಕವಾಗಿ ಆಚರಿಸುವ ಸಂಘ ಸಂಸ್ಥೆಗಳಿಗಿಂತ, ಇತ್ತೀಚೆಗೆ ಚಿಕ್ಕಪುಟ್ಟ ಹಳ್ಳಿಗಳಲ್ಲೂ ಮಹಿಳೆಯರೆಲ್ಲರೂ ಒಗ್ಗೂಡಿ, ಚಿಂತನೆ, ಉಪನ್ಯಾಸ, ಹಾಡು, ನಾಟಕದಂತಹ ಕಾರ್ಯಗಳ ಮೂಲಕ ಚೊಕ್ಕವಾಗಿ ಈ ದಿನವನ್ನು ಆಚರಿಸುತ್ತಿರುವುದನ್ನು ಮಹಿಳೆಯರ ಸ್ವಾವಲಂಬನೆ, ಸಶಕ್ತೀಕರಣದ ದ್ಯೋತಕವಾಗಿ ಕಾಣಬಹುದು. ಆದರೆ, ಕೆಲವು ಕಡೆ ಮಹಿಳೆಯರು ಪ್ರತ್ಯೇಕವಾಗಿ ಜಾತಿ, ಪಂಗಡಗಳ ಆಧಾರದ ಮೇಲೆ 'ವಿಪ್ರ ಮಹಿಳಾ ದಿನಾಚರಣೆ', 'ಗೌಡ ಮಹಿಳೆಯರ ದಿನಾಚರಣೆ', 'ಲಿಂಗಾಯತ ಮಹಿಳೆಯರ ದಿನಾಚರಣೆ' ಎಂದೆಲ್ಲ ಪ್ರತ್ಯೇಕವಾಗಿ ಮಹಿಳಾ ದಿನಾಚರಣೆಯಲ್ಲಿ ತೊಡಗುವುದು ಪತ್ರಿಕೆಗಳಲ್ಲಿ ವರದಿಯಾಗಿದೆ. ಇದು ಸರಿಯಲ್ಲ. ಮಹಿಳಾ ದಿನಾಚರಣೆಯ ಬಹುಮುಖ್ಯ ಉದ್ದೇಶವೇ ಯಾವುದೇ ಜಾತಿ, ಧರ್ಮ, ಪಂಗಡದ ಭೇದವಿಲ್ಲದೆ ಆಚರಣೆಯಲ್ಲಿ ಮಹಿಳೆಯರೆಲ್ಲರೂ ಒಗ್ಗಟ್ಟಾಗಲಿ ಎಂದು. ಮಹಿಳೆಯರು ಎದುರಿಸುತ್ತಿರುವ ಸಮಸ್ಯೆ, ಚಿಕ್ಕಪುಟ್ಟ ಭಿನ್ನತೆಗಳನ್ನು ಹೊರತುಪಡಿಸಿದರೆ ಸವಾಲುಗಳು ಹೆಚ್ಚು ಕಡಿಮೆ ಸಮಾನ ರೂಪದವೇ ಆಗಿರುತ್ತವೆ.

ಈ ರೀತಿ ತಮ್ಮ ತಮ್ಮಲ್ಲೇ ಒಡಕು ಮೂಡಿಸಿಕೊಂಡು ಪ್ರತ್ಯೇಕವಾಗಿ ಆಚರಿಸಿಕೊಂಡರೆ ಸಮಾಜಕ್ಕೆ ತಲುಪುವ ಸಂದೇಶವೇನು? ಆಚರಣೆಯ ಉದ್ದೇಶ ಎಲ್ಲಿ ಈಡೇರುತ್ತದೆ? ಬದಲಿಗೆ, ಈ ಬೆಳವಣಿಗೆಯು ಮಹಿಳೆಯರನ್ನು ಗುಂಪುಗುಂಪುಗಳಾಗಿ ಛಿದ್ರಗೊಳಿಸಿ ತಮ್ಮ ಹಿತಾಸಕ್ತಿಗಳನ್ನು ಪೂರೈಸಿಕೊಳ್ಳಲು ತೊಡಕಾಗುತ್ತದೆ. ಚುನಾವಣೆಗಳು ಹತ್ತಿರವಿರುವ ಈ ಸಂದರ್ಭದಲ್ಲಿ ಜಾತಿ, ಧರ್ಮದ ಆದಾರದ ಮೇಲೆ ರಾಜಕೀಯ ಮಾಡುತ್ತಿರುವ ರಾಜಕೀಯ ಪಕ್ಷಗಳ 'ವೋಟ್ ಬ್ಯಾಂಕ್' ಭದ್ರಪಡಿಸಿದಂತೆ ಆಗುತ್ತದೆ. ಆಳುವವರ 'ಒಡೆದಾಳುವ ನೀತಿ'ಗೆ ಬಲಿಪಶುಗಳಾಗಬೇಕಾಗುತ್ತದೆ. ಈ ದಿಸೆಯಲ್ಲಿ ಸ್ತ್ರೀಯರು ಎಚ್ಚರ ವಹಿಸಬೇಕು.

ಆನಂದ ಎನ್.ಎಲ್., ಅಜ್ಜಂಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ರಾಜಕಾರಣ: ಕುಟುಂಬವೇ 'ವ್ಯಾಕರಣ'

ಕುಟುಂಬ ರಾಜಕಾರಣ

16 ಕ್ಷೇತ್ರಗಳಲ್ಲಿ ಕಾಂಗ್ರೆಸ್ ನಾಯಕರ ಕುಟುಂಬದವರೇ ಕಣದಲ್ಲಿದ್ದಾರೆ

9 ಕ್ಷೇತ್ರಗಳಲ್ಲಿ ಬಿಜೆಪಿ ನಾಯಕರ ಕುಟುಂಬದವರೇ ಕಣದಲ್ಲಿದ್ದಾರೆ

3 ಕ್ಷೇತ್ರಗಳಲ್ಲಿ ಜೆಡಿಎಸ್ ನಾಯಕರ ಕುಟುಂಬದವರೇ ಕಣದಲ್ಲಿದ್ದಾರೆ

ಪ್ರಜಾ ಮತ ಜನತಂತ್ರದ ಹಬ್ಬ

ಲೋಕಸಭಾ ಚುನಾವಣೆ - 2024

● ಚಂದ್ರಹಾಸ ಹಿರೇಮಳಲಿ

ದೇಶವನ್ನು ಹಲವು ದಶಕ ಮುನ್ನಡೆಸಿದ್ದ ಕಾಂಗ್ರೆಸ್ ವಿರುದ್ಧ ಪ್ರತಿಪಕ್ಷಗಳು 'ಕುಟುಂಬ ರಾಜಕಾರಣ'ದ ಅಸ್ತ್ರವನ್ನು ಪರಿಣಾಮಕಾರಿಯಾಗಿ ಬಳಸುತ್ತಾ ಬಂದಿವೆ. ವಿರೋಧದ ಧ್ವನಿಗೆ ಹಲವು ಚುನಾವಣೆಗಳಲ್ಲಿ 'ಮತ' ಫಸಲೂ ಸಿಕ್ಕಿದ್ದಿದೆ. 'ಕುಟುಂಬ ರಾಜಕಾರಣ' ಎನ್ನುವುದು ಎಲ್ಲ ಪಕ್ಷಗಳಿಗೂ ಅಂಟಿಕೊಂಡಿದೆ. ಎಲ್ಲ ರಾಜಕೀಯ ಪಕ್ಷಗಳು ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಸಚಿವರು, ಶಾಸಕರು, ಮಾಜಿ ಜನಪ್ರತಿನಿಧಿಗಳ ಕುಟುಂಬದ ಸದಸ್ಯರಿಗೇ ಮಣೆ ಹಾಕಿವೆ.

ಪ್ರಧಾನಿ ನರೇಂದ್ರ ಮೋದಿಯವರಂತೂ ಕುಟುಂಬ ರಾಜಕಾರಣದ ಕಡು ವಿರೋಧಿ. ವಂಶವಾದ, ಪರಿವಾರ ರಾಜಕಾರಣದ ಬಗ್ಗೆ ಕಿಡಿ ಕಾರುತ್ತಲೇ ಬಂದಿದ್ದಾರೆ. ಕರ್ನಾಟಕದಲ್ಲಿ ಈ ಜಾಡ್ಯ 'ಕಮಲ'ವನ್ನೂ ಆವರಿಸಿದೆ. ಆದರೆ ಅದರ ಬಗ್ಗೆ ಮೋದಿಯವರು ಈವರೆಗೆ ಮಾತನಾಡಿದ್ದಿಲ್ಲ.

ದೇವೇಗೌಡರ ಕುಟುಂಬ ರಾಜಕಾರಣವನ್ನೂ ಮೋದಿ ಮತ್ತು ಬಿಜೆಪಿಯವರು ವಿರೋಧಿಸುತ್ತಲೇ ಬಂದಿದ್ದರು. ಈ ಬಾರಿ, ಅವರ ಜತೆಗೆ ಮೈತ್ರಿ ಕುದುರಿಸಿದ್ದಾರೆ. ಬಿಜೆಪಿ ಜತೆಗಿನ ಮೈತ್ರಿಯ ಫಲವಾಗಿ ದೊರೆತ ಮೂರು ಕ್ಷೇತ್ರಗಳ ಪೈಕಿ ಜೆಡಿಎಸ್ ಎರಡರಲ್ಲಿ ಒಂದೇ ಕುಟುಂಬದ ಇಬ್ಬರನ್ನು ಕಣಕ್ಕೆ ಇಳಿಸಿದೆ. ದೇವೇಗೌಡರ ಅಳಿಯ (ಪುತ್ರಿಯ ಪತಿ) ಡಾ.ಸಿ.ಎನ್. ಮಂಜುನಾಥ್ ಬಿಜೆಪಿ ಟಿಕೆಟ್ ಪಡೆದು ಬೆಂಗಳೂರು ಗ್ರಾಮಾಂತರದಿಂದ ಸ್ಪರ್ಧಿಸಿದ್ದಾರೆ.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸಹೋದರ ಡಿ.ಕೆ. ಸುರೇಶ್ ಈ ಬಾರಿಯೂ ಬೆಂಗಳೂರು ಗ್ರಾಮಾಂತರದಿಂದ ಕಣಕ್ಕೆ ಇಳಿದಿದ್ದಾರೆ. ಶಿವಮೊಗ್ಗದಲ್ಲಿ ಇಬ್ಬರು ಮಾಜಿ ಮುಖ್ಯಮಂತ್ರಿಗಳ ಮಕ್ಕಳು ಪರಸ್ಪರ ಸೆಣಸುತ್ತಿದ್ದಾರೆ. ಹಾವೇರಿಯಲ್ಲಿ ಮಾಜಿ ಮುಖ್ಯಮಂತ್ರಿ ಪುತ್ರರೂ ಆದ, ಮಾಜಿ ಮುಖ್ಯಮಂತ್ರಿ ಕಣದಲ್ಲಿ ಇದ್ದಾರೆ. ಕಲಬುರಗಿ ಕ್ಷೇತ್ರದಿಂದ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅಳಿಯನನ್ನು ಕಣಕ್ಕೆ ಇಳಿಸಲಾಗಿದೆ. ಸಿದ್ದರಾಮಯ್ಯ ಸಂಪುಟದ ಆರು ಸಚಿವರ ಮಗ–ಮಗಳಿಗೆ, ಒಬ್ಬ ಸಚಿವರ ಪತ್ನಿಗೆ ಟಿಕೆಟ್ ನೀಡಲಾಗಿದೆ.



ಬಿಜೆಪಿ

ಎಲ್.ಎ. ರವಿ ಸುಬ್ರಹ್ಮಣ್ಯ (ಬಸವನಗುಡಿ ಶಾಸಕ)
ತೇಜಸ್ವಿ ಸೂರ್ಯ (ಅಣ್ಣನ ಮಗ–ಬೆಂಗಳೂರು ದಕ್ಷಿಣ ಅಭ್ಯರ್ಥಿ)

ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ (ಮಾಜಿ ಸಂಸದ)
ಯದುವೀರ ಒಡೆಯರ್ (ಪುತ್ರ–ಮೈಸೂರು–ಕೊಡಗು ಅಭ್ಯರ್ಥಿ)

ಎಸ್.ಆರ್. ಬೊಮ್ಮಾಯಿ (ಮಾಜಿ ಮುಖ್ಯಮಂತ್ರಿ)
ಬಸವರಾಜ ಬೊಮ್ಮಾಯಿ (ಪುತ್ರ–ಹಾವೇರಿ ಅಭ್ಯರ್ಥಿ)

ಶಶಿಕಲಾ ಜೊಲ್ಲೆ (ಶಾಸಕಿ)
ಅಣ್ಣಾ ಸಾಹೇಬ ಜೊಲ್ಲೆ (ಪತಿ, ಹಾಲಿ ಸಂಸದ–ಚಿಕ್ಕೋಡಿ ಅಭ್ಯರ್ಥಿ)

ಕೆ. ಶರಣಪ್ಪ (ಮಾಜಿ ಶಾಸಕ)
ಬಸವರಾಜ ಕ್ಯಾವಟೂರ್ (ಪುತ್ರ–ಕೊಪ್ಪಳ ಅಭ್ಯರ್ಥಿ)

ಕಾಂಗ್ರೆಸ್

ರಾಮಲಿಂಗಾ ರೆಡ್ಡಿ (ಸಚಿವ)
ಸೌಮ್ಯಾ ರೆಡ್ಡಿ (ಪುತ್ರಿ–ಬೆಂಗಳೂರು ದಕ್ಷಿಣ ಅಭ್ಯರ್ಥಿ)

ಎಂ.ವಿ. ವೆಂಕಟಪ್ಪ (ಮಾಜಿ ವಿಧಾನಸಭಾಧ್ಯಕ್ಷ)
ಎಂ.ವಿ. ರಾಜೀವ್ ಗೌಡ (ಪುತ್ರ–ಬೆಂಗಳೂರು ಉತ್ತರ ಅಭ್ಯರ್ಥಿ)

ಕೆ. ರೆಹಮಾನ್ ಖಾನ್ (ಮಾಜಿ ಕೇಂದ್ರ ಸಚಿವ)
ಮನ್ಸೂರ್ ಅಲಿಖಾನ್ (ಪುತ್ರ–ಬೆಂಗಳೂರು ಕೇಂದ್ರ ಅಭ್ಯರ್ಥಿ)

ಎಂ.ಆರ್. ಸೀತಾರಾಮ್ (ವಿಧಾನ ಪರಿಷತ್ ಸದಸ್ಯ)
ರಕ್ಷಾ ರಾಮಯ್ಯ (ಪುತ್ರ–ಚಿಕ್ಕಬಳ್ಳಾಪುರ ಅಭ್ಯರ್ಥಿ)

ಎಚ್.ಸಿ. ಮಹದೇವಪ್ಪ (ಸಚಿವ)
ಸುನಿಲ್ ಬೋಸ್ (ಪುತ್ರ–ಚಾಮರಾಜನಗರ ಅಭ್ಯರ್ಥಿ)

ಜಿ.ಎಸ್. ಗಡ್ಡದೇವರ ಮಠ (ಮಾಜಿ ಶಾಸಕ)
ಆನಂದ ಗಡ್ಡದೇವರ ಮಠ (ಪುತ್ರ–ಹಾವೇರಿ ಅಭ್ಯರ್ಥಿ)

ರಾಘವೇಂದ್ರ ಹಿಟ್ನಾಳ್ (ಶಾಸಕ)
ರಾಜಶೇಖರ ಹಿಟ್ನಾಳ್ (ಸಹೋದರ–ಕೊಪ್ಪಳ ಅಭ್ಯರ್ಥಿ)

ಶಿವಾನಂದ ಪಾಟೀಲ (ಸಚಿವ)
ಸಂಯುಕ್ತಾ ಪಾಟೀಲ (ಪುತ್ರಿ–ಬಾಗಲಕೋಟೆ ಅಭ್ಯರ್ಥಿ)

ವಾಮಾಚಾರವೇ 'ಅವತಾರ ಪುರುಷ'ನ ಜೀವಾಳ!

'ಅವತಾರ ಪುರುಷ 2–ತ್ರಿಶಂಕು ಪಯಣ' (ಕನ್ನಡ)

- ನಿರ್ಮಾಣ: ಪುಷ್ಕರ ಮಲ್ಲಿಕಾರ್ಜುನಯ್ಯ
- ನಿರ್ದೇಶನ: ಸಿಂಪಲ್ ಸುನಿ
- ತಾರಾಗಣ: ಶರಣ್, ಆಶಿಕಾ ರಂಗನಾಥ್, ಸಾಯಿಕುಮಾರ್, ಸುಧಾರಾಣಿ, ಭವ್ಯಾ, ಸಾಧು ಕೋಕಿಲ, ಶ್ರೀನಗರ ಕಿಟ್ಟಿ, ಅಶುತೋಷ್ ರಾಣಾ, ಬಾಲಾಜಿ ಮನೋಹರ್

ನಾವು ನೋಡಿದ ಸಿನಿಮಾ

ನಿರ್ದೇಶಕ ಸಿಂಪಲ್ ಸುನಿ ಅವರ ಹೊಸ ಪ್ರಯೋಗದಂತೆ 'ಅವತಾರ ಪುರುಷ–ಅಷ್ಟದಿಗ್ಬಂಧನ ಮಂಡಲಕ' ಎರಡು ವರ್ಷಗಳ ಹಿಂದೆ ತೆರೆಕಂಡಿತ್ತು. ಈ ಸಿನಿಮಾದ ಮುಂದುವರಿದ ಭಾಗವೇ 'ಅವತಾರ ಪುರುಷ–ತ್ರಿಶಂಕು ಪಯಣ'. ಮೊದಲ ಭಾಗದಲ್ಲಿ ಪೌರಾಣಿಕ ಕಥೆಯ ಎಳೆ ಹಿಡಿದು ಮಾಟ, ಮಂತ್ರ, ವಾಮಾಚಾರವೆಂಬ ಅಗ್ನಿಗೆ ಹಾಸ್ಯದ ಕಲ್ಲುಪ್ಪು ಹಾಕಿ ಸಿಡಿಸಿದ್ದ ಸುನಿ, ಎರಡನೇ ಭಾಗದಲ್ಲಿ ಕಥೆಗೆ ಪೂರ್ಣ-ವಿರಾಮವಿಡುವುದಕ್ಕೆ ಪ್ರಾಮುಖ್ಯತೆ ನೀಡಿದ್ದಾರೆ. ಊಹಿಸಿದಂತೆ ಇಲ್ಲಿ ಹಾಸ್ಯ ಕಡಿಮೆಯಿದ್ದು, ಮಾಟ, ವಾಮಾಚಾರವೇ ತೆರೆ ತುಂಬಿಕೊಂಡಿದೆ.

ಮೊದಲ ಭಾಗದಲ್ಲಿ, ಜೂನಿಯರ್ ಆರ್ಟಿಸ್ಟ್ ಆಗಿದ್ದ ಅನಿಲ(ಶರಣ್), ರಾಮ ಜೊಯೀಸ್(ಸಾಯಿಕುಮಾರ್) ಹಾಗೂ ಸುಶೀಲ(ಭವ್ಯಾ) ದಂಪತಿಯ ಮಗನಾಗಿ ನಟಿಸುತ್ತಿರುತ್ತಾನೆ. ರಾಮ ಜೋಯೀಸರ ನಿಜವಾದ ಪುತ್ರ 'ಕರ್ಣ'(ಶ್ರೀನಗರ ಕಿಟ್ಟಿ) ಕುಮಾರನಾಗಿ ಮನೆಗೆ ಬಂದ ನಂತರ ಅನಿಲ ಮನೆಯಿಂದ ಹೊರಬೀಳುತ್ತಾನೆ.

ಕ್ಲೈಮ್ಯಾಕ್ಸ್‌ನಲ್ಲಿ 'ಅನಿಲ' ಒಬ್ಬ ಮಾಟಗಾರ ಎನ್ನುವುದು ತಿಳಿಯುತ್ತದೆ. ರಾಮ ಜೋಯೀಸರ ಮನೆಯಲ್ಲಿ ಅಷ್ಟ-ದಿಗ್ಬಂಧನ ಹಾಕಿ ಇಟ್ಟಿದ್ದ ತ್ರಿಶಂಕು ಮಣಿ ಪಡೆಯಲು 'ಕುಮಾರ' ನಡೆಸುವ ಮಂತ್ರ–ತಂತ್ರಗಳಿಂದ ಎರಡನೇ ಭಾಗದ ಕಥೆ ಆರಂಭವಾಗುತ್ತದೆ. ಇಲ್ಲಿ ಅನಿಲ ಹೇಗೆ ಮಾಟಗಾರನಾದ, ಮಂತ್ರ–ತಂತ್ರಗಳನ್ನು ಕಲಿಸುವ ಬಿಸ್ತಾಕ್ಕೆ ಹೇಗೆ ಸೇರಿದ, ಅಲ್ಲಿ ಬಿಸ್ತಾದ ದೊರೆ ದಾರಕ-ನಿಗೆ(ಅಶುತೋಷ್ ರಾಣಾ) ಆತ ಮಾಡಿದ್ದೇನು, ರಾಮ ಜೋಯೀಸರ ಮನೆಯಲ್ಲಿ ಇರುವ ತ್ರಿಶಂಕು ಮಣಿಗೂ ಅನಿಲನಿಗೂ ಇರುವ ಸಂಬಂಧವೇನು, ದಾರಕ ತ್ರಿಶಂಕು ಮಣಿ ಪಡೆಯುತ್ತಾನೆಯೇ ಎನ್ನುವುದನ್ನು ಎರಡನೇ ಭಾಗದಲ್ಲಿ ತೋರಿಸಲಾಗಿದೆ.

'ಮನರಂಜನೆಗಾಗಿಯಷ್ಟೇ ಈ ದೃಶ್ಯಗಳು. ಮೂಢನಂಬಿಕೆ–ವಾಮಾಚಾರ ಪ್ರಚೋದಿಸುವ ಉದ್ದೇಶ ಚಿತ್ರಕ್ಕೆ ಇಲ್ಲ' ಎನ್ನುವುದನ್ನು ನಿರ್ದೇಶಕರು ಪದೇ ಪದೇ ತೋರಿಸಿದ್ದಾರೆ. ಸಿನಿಮಾದ ಬಹುತೇಕ ಭಾಗದಲ್ಲಿ ವಾಮಾಚಾರದ ದೃಶ್ಯಗಳು ತುಂಬಿಕೊಂಡಿವೆ. ಈ ವಿಷಯವೇ ಎರಡನೇ ಭಾಗದ ಜೀವಾಳವಾಗಿರುವ ಕಾರಣ ಅದಕ್ಕೆ ಪ್ರಾಮುಖ್ಯತೆ ನೀಡಲಾಗಿದೆ. ಎರಡನೇ ಭಾಗದಲ್ಲಿ ವಿಎಫ್‌ಎಕ್ಸ್ ಹೆಚ್ಚಿನ ಪ್ರಮಾಣದಲ್ಲಿದೆ. ಕ್ಲೈಮ್ಯಾಕ್ಸ್ ಹಂತ ತಲುಪುತ್ತಾ ವಿಎಫ್‌ಎಕ್ಸ್ ಬಹಳ ಕೃತಕವಾಗಿದೆ. ಅಲ್ಲಿಯವರೆಗಿನ ದೃಶ್ಯಗಳ ನೈಜತೆಯನ್ನು ಇದು ಹಳಿತಪ್ಪಿಸಿದೆ. ಕೆಲವು ದೃಶ್ಯಗಳನ್ನು, ಸಂಭಾಷಣೆ-ಗಳನ್ನು ಕೊನೆಯ ಕ್ಷಣದಲ್ಲಿ ಸೇರಿಸಿರುವುದು ಸ್ಪಷ್ಟವಾಗಿ ತಿಳಿಯುತ್ತದೆ. 'ರ‍್ಯಾಪ್' ಹಾಡು ಅನಗತ್ಯ ಜೋಡಣೆ. ಮೊದಲನೇ ಭಾಗದ ಕಥೆಯ ಝಲಕ್‌ಗಳನ್ನು ನಿರ್ದೇಶಕರು ಅಳವಡಿಸಿದ್ದಾರೆ.

ಶರಣ್ ಇಲ್ಲಿ ತಮ್ಮ ಎಂದಿನ ಛಾಪು ಬದಿಗಿರಿಸಿ ನಟಿಸಿದ್ದಾರೆ. ಅಲ್ಲಲ್ಲಿ ನಗಿಸುತ್ತಾರೆ. ಸಂಭಾಷಣೆ, ಹಾವಭಾವಗಳ ಮೂಲಕ ಶರಣ್ ಜೀವಿಸಿದ್ದಾರೆ. ಶ್ರೀನಗರ ಕಿಟ್ಟಿ ಭಿನ್ನವಾದ ಶೈಲಿಯಲ್ಲಿ ಹಿಡಿಸುತ್ತಾರೆ. ಮೊದಲ ಭಾಗದಲ್ಲಿ ಹೆಚ್ಚು ತೆರೆಯಲ್ಲಿ ಕಾಣಿಸಿಕೊಂಡ ಆಶಿಕಾಗೆ ಇಲ್ಲಿ ತೆರೆ ಅವಧಿ ಕಡಿಮೆ. ಪಾತ್ರದೊಳಗೆ 'ಅನಿಲ'ನ ಕಾಲೆಳೆಯುತ್ತಾ, ಭಾವನಾತ್ಮಕ ದೃಶ್ಯಗಳಲ್ಲಿ ತಮ್ಮ ಪಾತ್ರಕ್ಕೆ ನ್ಯಾಯ ಒದಗಿಸಿದ್ದಾರೆ. ಸಾಯಿಕುಮಾರ್, ಭವ್ಯಾ, ಸುಧಾರಾಣಿ, ಅಶುತೋಷ್ ರಾಣಾ ತಮ್ಮ ತಮ್ಮ ಪಾತ್ರಗಳನ್ನು ನಿಭಾಯಿಸಿದ್ದಾರೆ. ಸಿಂಪಲ್ ಸುನಿ ಈ ಸಿನಿಮಾದೊಳಗೆ ತಮ್ಮ ಕಾಲನ್ನು ತಾವೇ ಎಳೆದುಕೊಳ್ಳುತ್ತಾ, ತಮ್ಮ ಮುಂದಿನ ಪ್ರಾಜೆಕ್ಟ್ ಅನ್ನೂ ಸಿನಿಮಾದೊಳಗೇ ಘೋಷಿಸಿದ್ದಾರೆ. 'ಮೋಡ ಕವಿದ ವಾತಾವರಣ'ದಲ್ಲಿ ಸುನಿ ಪ್ರೇಕ್ಷಕರೆದುರಿಗೆ ಬರಲಿದ್ದಾರೆ.

ಪದಬಂಧ 5643

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಲವ ಮೊದಲಿರುವುದಕ್ಕೇ ಈ ಹುರುಪು! (5)
3.ಕುಲದ ಕೊನೆಗೆ ಸೇರಿರುವ ಗುಂಪು! (3)
5.ಕರಾರು ಮಾಡಿಯೇ ನಿಖರವಾದುದ್ದನ್ನು ಹೇಳಿ! (5)
7.ಕಟ ಕಟ ಶಬ್ದ ಮಾಡುತ್ತಿರುವ ಬಂಡಿ (3)
9.ವಿಸ್ತಾರವಾದ ಜಾಗ (3)
11.ಕೊಡದಂತಿರುವ ದೊಡ್ಡ ಪಾತ್ರೆ (3)
13.ಯುದ್ಧದ ಕೇಸರಿಯಿದು (5)
15.ಅಚ್ಚು ಮಾಡುವುದು (3)
16.ಬಾಗಿಲನ್ನು ಕಾಯುವವನೀತ (5)

ಮೇಲಿಂದ ಕೆಳಕ್ಕೆ

1.ರಾಮನ ಮಗ ಹಿಡಿದಿರುವುದು ಬಹುಸ್ವಲ್ಪ! (4)
2.ಯುಕ್ತಾಯುಕ್ತ ವಿಚಾರ (3)
4.ಕುಕ್ಕುತ್ತಲೇ ಮಾಡಿದ ಒತ್ತಾಸೆ (3)
6.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)
8.ವಿಷ್ಣುವಿನ ಕೊನೆಯ ಅವತಾರ (2)
9.ಬರದಲ್ಲಿ ಅಸಂಸ್ಕೃತ ಕಾಣಿಸುತ್ತಿರುವನಲ್ಲಾ! (3)
10.ಏಳು ದಿನಗಳ ಅವಧಿ (2)
12.ವಿಮರ್ಶೆಯನ್ನು ಮಾಡುವವನು (4)
13.ಕಡಲು ಇಲ್ಲಿ ಕಾಣುತ್ತಿದೆ (3)
14.ಅರಳೆಯ ಸಮೀಪ! (3)



5642ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪರಿತಾಪ 3.ಕೂಚಂಭಟ್ಟ
4.ಮಾದಕ 5.ರಾಮಾಯಣ
7.ಷರಬತ್ತು 9.ಮತದಾನ
11.ತರಗತಿ 12.ವಜೀರ
14.ಪರಂಧಾಮ 15.ಮಹಾದ್ವಾರ

ಮೇಲಿಂದ ಕೆಳಕ್ಕೆ:
1.ಪಕ್ಷ 2.ಪರಿಮಾಣ
3.ಕೂಲಂಕಷ 6.ಮಾರುತ
8.ಬಳಗ 10.ನವಸುಮ
11.ತರತಮ 3.ಸ್ತರ

ಸುಡೊಕು 6028

	4				7			
8			1			2		7
		3		8	4		5	
3		6						
	8			1				5
1		4	3		8		6	
	7			6				
2		8	4		3			1
				2		8	9	6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6027 ಸುಡೊಕು

3	6	7	8	2	9	5	4	1
5	9	4	1	6	7	8	2	3
1	2	8	5	4	3	6	9	7
8	4	1	6	3	2	7	5	9
6	3	5	9	7	8	2	1	4
9	7	2	4	5	1	3	8	6
7	5	3	2	9	4	1	6	8
4	8	6	7	1	5	9	3	2
2	1	9	3	8	6	4	7	5

ಗುಂಡಣ್ಣ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶನಿವಾರ ಏಪ್ರಿಲ್ 6, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣ ದ್ವಾದಶಿ ಗಂ. 10-20 ನಕ್ಷತ್ರ: ಶತಭಿಷ ಗಂ. 15-40 ಯೋಗ: ಶುಭ ಗಂ. 06-15 ನಂತರ ಶುಕ್ಲ (ಶುಕ್ರ) ಗಂ. 26-20, ಮೀನ ಮಾಸದ 23 ನೇ ದಿನ, ಮಳೆನಕ್ಷತ್ರ: ರೇವತಿ 2.
ರಾಹುಕಾಲ : ಬೆಳಿಗ್ಗೆ 09-00 - 10-30
ಸೂರ್ಯೋದಯ : 06-26 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 26 ರಂಜಾನ್
ದಿನ ವಿಶೇಷ : ಮಹಾ ವಾರುಣಿ . ಅದೃಷ್ಟ ಸಂಖ್ಯೆ : 5, 3

ಮೇಷ: ಸ್ವಂತ ಪ್ರಯತ್ನದಿಂದ ನಿಮಗೆ ಪ್ರತಿಷ್ಠಿತ ಸಂಸ್ಥೆಯೊಂದರಲ್ಲಿ ಕಾರ್ಯ-ನಿರ್ವಹಿಸುವ ಸದವಕಾಶ ಈ ದಿನ ಪ್ರಾಪ್ತಿ. ಸಕಾರಾತ್ಮಕ ನಡವಳಿಕೆಗಳಿಂದಾಗಿ ಲಾಭ ಕಂಡುಕೊಳ್ಳಲಿದ್ದೀರಿ.

ವೃಷಭ: ಕಬ್ಬಿಣದ ಕೆಲಸ ಮಾಡುವವರಿಗೆ ಅಧಿಕ ದೇಹಾಯಾಸವಾಗುವ ಸಂಭವವಿದೆ. ಸರ್ಕಾರಿ ನೌಕರರಿಗೆ ಇತರೆ ಕಾರ್ಯಗಳಿಂದ ಅಧಿಕವಾದ ಒತ್ತಡ ಉಂಟಾಗಬಹುದು. ಗಮನವಿಟ್ಟು ಕೆಲಸ ಮಾಡಿದರೆ ಯಶಸ್ಸು ಸಾಧಿಸುವಿರಿ.

ಮಿಥುನ: ಗುರು ಹಿರಿಯರ ಸಲಹೆ-ಸೂಚನೆಗಳಿಗೆ ಬೆಲೆ ಕೊಟ್ಟು ಕೆಲಸದಲ್ಲಿ ಮುಂದುವರಿಯುವುದು ಉತ್ತಮ. ಕುಟುಂಬದ ವಿಷಯಗಳನ್ನು ಮನೆಯವರೊಂದಿಗೆ ಚರ್ಚಿಸಿ. ವಿವಾದಾಸ್ಪದ ವಿಷಯಗಳ ಕಡೆ ಗಮನ ಕೊಡಬೇಡಿ.

ಕರ್ಕಾಟಕ: ಆರೋಗ್ಯದಲ್ಲಿ ಉತ್ತಮ ಚೇತರಿಕೆ ಕಂಡುಬಂದು ಮಾರ್ಗದ-ರ್ಶಿಗಳ ಮಾತಿನಂತೆ ಧಾರ್ಮಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿರಿ. ತಾಮ್ರದ ವಸ್ತುವಿನಿಂದ ಅಥವಾ ಅದರ ಮಾರಾಟದಿಂದ ಲಾಭವಿದೆ.

ಸಿಂಹ: ತೋಟದ ಬೆಳೆಗಳಿಂದ ಉತ್ತಮ ಆದಾಯದೊಂದಿಗೆ ಮುಂದಿನ ಬೆಳೆಯ ವಿಸ್ತರಣೆಯ ಬಗ್ಗೆ ಯೋಚನೆ ನಡೆಸುವಿರಿ. ಮಕ್ಕಳ ಬೆಳವಣಿಗೆಗೆ ಚಿಕಿತ್ಸೆ ಬೇಕಾಗಬಹುದು. ಜೀರ್ಣಾಂಗ ಸಮಸ್ಯೆ ಕಾಡಬಹುದು.

ಕನ್ಯಾ: ಮೇಲಧಿಕಾರಿಯ ಮೃದು ವರ್ತನೆಯಿಂದ ಸರ್ಕಾರದ ಕೆಲಸ ಕಾರ್ಯಗಳಲ್ಲಿ ತೃಪ್ತಿಯುಂಟಾಗಿ, ಯಶಸ್ವಿಯಾಗಿ ಸಂಪೂರ್ಣಗೊಳ್ಳುವುದು. ಬಂಧು ಮಿತ್ರರ ನೆರವು ಸಿಗಲಿದೆ.

ತುಲಾ: ಅಭಿವೃದ್ಧಿಯನ್ನು ಸಹಿಸಲಾಗದ ಜನರ ಮಧ್ಯದಲ್ಲಿ ಜೀವನ ನಡೆಸ-ಬೇಕಾಗುತ್ತದೆ. ಕೃಷಿಗೆ ಹೆಚ್ಚಿನ ಬಂಡವಾಳ ಹೂಡುವಂತೆ ಮಗನಿಂದ ಒತ್ತಾಯ ಹೆಚ್ಚಲಿದೆ. ದಾಂಪತ್ಯ ಜೀವನ ಸುಖಮಯವಾಗಿರುತ್ತದೆ.

ವೃಶ್ಚಿಕ: ಬಹುಕಾಲ ನೆನಪಿನಲ್ಲಿ ಉಳಿಯುವಂಥ ಮಧುರ ಘಟನೆ ಜೀವನದಲ್ಲಿ ನಡೆಯಲಿದೆ. ಧರ್ಮ ಕಾರ್ಯಗಳಿಗಾಗಿ ಧನ ವಿನಿಯೋಗಿಸುವ ಬಗ್ಗೆ ಯೋಚಿಸಿ. ಬುದ್ಧಿವಂತಿಕೆಯಿಂದ ಬದುಕಬೇಕಾದ ದಿನ.

ಧನು: ಸಹೋದರರೊಂದಿಗಿನ ಮನಸ್ತಾಪ ಮುಕ್ತವಾದ ಮಾತುಕತೆಯಿಂದಾಗಿ ದೂರಾಗುವುದು. ನಿಲುವು ಸ್ಪಷ್ಟಪಡಿಸಿಕೊಂಡಲ್ಲಿ ಗೆಲುವು ನಿಮ್ಮದಾಗುವುದು. ಮಾಡಿದ ಪಾಪ ತೊಳೆಯುವುದು.

ಮಕರ: ಹಿತಶತ್ರುಗಳಿಂದ ಪೀಡೆಯು ಹೆಚ್ಚಾಗಿ ಗುರಿಯ ಮಾರ್ಗಕ್ಕೆ ಅಡ್ಡಗಲ್ಲಾಗುವರು. ಸ್ನೇಹಿತರೊಬ್ಬರ ಆರೋಗ್ಯ ವಿಚಾರಿಸಲು ಆಸ್ಪತ್ರೆಗೆ ಹೋಗುವ ಸಂಭವ ಬರಬಹುದು. ನಿಯಮ ಪಾಲನೆ ಮಾಡುವುದನ್ನು ಅಭ್ಯಾಸ ಮಾಡಿ.

ಕುಂಭ: ಕೈಗೊಳ್ಳುವ ವಿಶೇಷ ಹಾಗೂ ಮುಖ್ಯವಾದ ಕೆಲಸದ ಮುಕ್ತಾಯದ ಹಂತ ವಿಳಂಬವಾಗುತ್ತದೆ. ಸತ್ಯಾಸತ್ಯತೆಗಳನ್ನು ಅರಿಯುವ ಬಗ್ಗೆ ಹೆಚ್ಚಿನ ಗಮನವಿರಲಿ. ಕಪ್ಪು ಬಣ್ಣ ಶುಭ ತರಲಿದೆ.

ಮೀನ: ಹೊಸ ಕಟ್ಟಡ ನಿರ್ಮಾಣ ಕಾರ್ಯಗಳ ಒಪ್ಪಂದದ ಏರ್ಪಟ್ಟು ಬಹಳ ಸಂತೋಷವಾಗುವುದು. ಈ ದಿನ ನಿಮಗೆ ಮಾರ್ಗದರ್ಶನಕ್ಕೆ ಕೊರತೆ ಇರುವುದಿಲ್ಲ. ಮನೆಯಲ್ಲಿ ಹಣಕಾಸಿನ ವಿಷಯದಲ್ಲಿ ಚರ್ಚೆ ನಡೆಸುವಿರಿ.

ಎಲ್ಗಾರ್ ಪರಿಷತ್ ಪ್ರಕರಣ ಶೋಮಾಗೆ ಜಾಮೀನು



ನವದೆಹಲಿ (ಪಿಟಿಐ): ಎಲ್ಗಾರ್ ಪರಿಷತ್ – ಮಾವೋವಾದಿ ಸಂಪರ್ಕಕ್ಕೆ ಸಂಬಂಧಿಸಿದ ಪ್ರಕರಣದಲ್ಲಿ ಬಂಧಿಸಲಾಗಿದ್ದ ಹೋರಾಟಗಾರ್ತಿ ಶೋಮಾ ಕಾಂತಿ ಸೇನ್ ಅವರಿಗೆ ಸುಪ್ರೀಂ ಕೋರ್ಟ್ ಶುಕ್ರವಾರ ಜಾಮೀನು ಮಂಜೂರು ಮಾಡಿತು.

ವಿಶೇಷ ಕೋರ್ಟ್ ಸೂಕ್ತ ಮತ್ತು ಸರಿಯಾದುದು ಎಂದು ಪರಿಗಣಿಸುವ ಷರತ್ತುಗಳಿಗೆ ಅನ್ವಯಿಸಿ ಶೋಮಾ ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಬಹುದು ಎಂದು ನ್ಯಾಯಮೂರ್ತಿಗಳಾದ ಅನಿರುದ್ಧ ಬೋಸ್, ಆಗಸ್ಟೀನ್ ಜಾರ್ಜ್ ಮಸಿಹ್ ಅವರಿದ್ದ ಪೀಠವು ಆದೇಶಿಸಿತು.

ಶೋಮಾ ಕಾಂತಿ ಸೇನ್ ಅವರು ಇಂಗ್ಲಿಷ್ ಸಾಹಿತ್ಯದ ಪ್ರೊಫೆಸರ್ ಆಗಿದ್ದು, ಮಹಿಳಾ ಹಕ್ಕುಗಳ ಹೋರಾಟಗಾರ್ತಿ ಆಗಿದ್ದಾರೆ. ಅವರನ್ನು 2018ರ ಜೂನ್ 6ರಂದು ಬಂಧಿಸಲಾಗಿತ್ತು.

ವಿಶೇಷ ಕೋರ್ಟ್‌ನ ಅನುಮತಿ ಇಲ್ಲದೇ ಶೋಮಾ ಅವರು ಮಹಾರಾಷ್ಟ್ರ ರಾಜ್ಯದಿಂದ ಹೊರಗೆ ಹೋಗಬಾರದು ಎಂಬುದು ಷರತ್ತಿನ ಭಾಗವಾಗಿದೆ. ಜಾಮೀನು ಅವಧಿಯಲ್ಲಿ ತಾನು ವಾಸಿಸುವ ಸ್ಥಳದ ವಿಳಾಸವನ್ನು ಎನ್‌ಐಎ ನೀಡಬೇಕು. ಈ ಅವಧಿಯಲ್ಲಿ ಒಂದು ಮೊಬೈಲ್ ಫೋನ್ ಸಂಖ್ಯೆ ಮಾತ್ರ ಬಳಸಬಹುದು, ಅದರ ಮಾಹಿತಿಯನ್ನೂ ತನಿಖಾಧಿಕಾರಿಗೆ ನೀಡಬೇಕು ಎಂದು ಪೀಠ ಸೂಚಿಸಿತು.

ಅರ್ಜಿದಾರರು ಬಳಸುವ ಸಂಖ್ಯೆಯು ಮೊಬೈಲ್ ಫೋನ್ ಜಿಪಿಎಸ್ ಸೌಲಭ್ಯ ಹೊಂದಿರಬೇಕು. ದಿನದ 24 ಗಂಟೆ ಸಕ್ರಿಯವಾಗಿರಬೇಕು. ಲೋಕೇಷನ್ ಸ್ಟೇಟಸ್ ಕಾರ್ಯಾಚರಣೆಯಲ್ಲಿರಬೇಕು. ನಿರ್ದಿಷ್ಟ ಸ್ಥಳ ತಿಳಿಯಲು ಆಗುವಂತೆ ಈ ಮೊಬೈಲ್ ಸಂಖ್ಯೆಯನ್ನು ತನಿಖಾಧಿಕಾರಿಯ ಮೊಬೈಲ್ ಸಂಖ್ಯೆ ಜೊತೆಗೆ ಜೋಡಿಸಬೇಕು. ತನ್ನ ವಾಸ ಪ್ರದೇಶದ ಠಾಣೆಗೆ ವರದಿ ಮಾಡಿಕೊಳ್ಳಬಹುದು ಎಂದು ಪೀಠ ಹೇಳಿತು.

2017ರ ಡಿಸೆಂಬರ್ 31ರಂದು ಪುಣೆಯ ಶನಿವಾರ ವಾಡಾದಲ್ಲಿ ನಡೆದಿದ್ದ ಎಲ್ಗಾರ್ ಪರಿಷತ್ ಸಮ್ಮೇಳನದಲ್ಲಿ ಪ್ರಚೋದನಕಾರಿ ಭಾಷಣ ಮಾಡಿದ್ದರು. ಇದರ ಪರಿಣಾಮ ಮಾರನೇ ದಿನ ನಗರ ಹೊರವಲಯದ ಕೋರೆಗಾಂವ್-ಭೀಮಾ ಯುದ್ಧ ಸ್ಮಾರಕದ ಬಳಿ ಹಿಂಸೆಗೆ ಕಾರಣವಾಗಿತ್ತು ಎಂದು ಪೊಲೀಸರು ಆರೋಪಿಸಿದ್ದು, ಈ ಪ್ರಕರಣದ ಸಂಬಂಧ ಶೋಮಾ ಅವರನ್ನು ಬಂಧಿಸಲಾಗಿತ್ತು.

ಉಲ್ಲೇಖಿತ ಸಮ್ಮೇಳನಕ್ಕೆ ಮಾವೋವಾದಿಗಳ ಬೆಂಬಲವಿತ್ತು ಎಂದು ಪೊಲೀಸರು ಆರೋಪಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು 12ಕ್ಕೂ ಹೆಚ್ಚು ಕಾರ್ಯಕರ್ತರನ್ನು ಬಂಧಿಸಿದ್ದರು. ಬಳಿಕ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ಒಪ್ಪಿಸಲಾಗಿತ್ತು.

ಮದರಸಾ ಮಂಡಳಿ ಅಸಿಂಧು ಹೈಕೋರ್ಟ್‌ನ ಆದೇಶಕ್ಕೆ ತಡೆ

ನವದೆಹಲಿ (ಪಿಟಿಐ): ಉತ್ತರಪ್ರದೇಶದ 'ಮದರಸಾ ಶಿಕ್ಷಣ ಮಂಡಳಿ ಕಾಯ್ದೆ 2004' ಅಸಾಂವಿಧಾನಿಕ ಎಂದು ಘೋಷಿಸಿ ಅಲಹಾಬಾದ್ ಹೈಕೋರ್ಟ್ ನೀಡಿದ್ದ ಆದೇಶಕ್ಕೆ ಸುಪ್ರೀಂ ಕೋರ್ಟ್ ಶುಕ್ರವಾರ ತಡೆಯಾಜ್ಞೆಯನ್ನು ನೀಡಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ನೇತೃತ್ವದ ಮೂವರು ಸದಸ್ಯರ ಸಮಿತಿಯು ಈ ಸಂಬಂಧ ಕೇಂದ್ರ ಸರ್ಕಾರ, ಉತ್ತರ ಪ್ರದೇಶ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿತು.

ಮದರಸಾಗಳ ನಿರ್ವಹಣೆ ಮಂಡಳಿಯ ಉದ್ದೇಶವಾಗಿದೆ. ಅದರ ಸ್ಥಾಪನೆಯೇ ಜಾತ್ಯತೀತ ತತ್ವಗಳ ಉಲ್ಲಂಘನೆ ಎಂಬ ಹೈಕೋರ್ಟ್‌ನ ಅಭಿಪ್ರಾಯ ಮೇಲ್ನೋಟಕ್ಕೆ ಸರಿಯಲ್ಲ ಎಂದು ಪೀಠ ಹೇಳಿತು. ನ್ಯಾಯಮೂರ್ತಿಗಳಾದ ಜೆ.ಬಿ.ಪಾರ್ದೀವಾಲಾ, ಮನೋಜ್ ಮಿಶ್ರಾ ಪೀಠದ ಇತರ ಸದಸ್ಯರಾಗಿದ್ದಾರೆ.

ರಾಜೀನಾಮೆ ಹಿಂದೆಯೇ ಚುನಾವಣೆಗೆ ಸ್ಪರ್ಧೆ: ವಿಚಾರಣೆಗೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): ಸರ್ಕಾರಿ ನೌಕರರು ನಿವೃತ್ತಿ ಅಥವಾ ಹುದ್ದೆಗೆ ರಾಜೀನಾಮೆಯನ್ನು ನೀಡಿದ ತಕ್ಷಣವೇ ಚುನಾವಣೆಗೆ ಸ್ಪರ್ಧಿಸದಂತೆ ನಿರ್ಬಂಧಿಸುವ ಚುನಾವಣಾ ಆಯೋಗದ ಶಿಫಾರಸು ಜಾರಿಗೆ ನಿರ್ದೇಶನ ನೀಡಬೇಕು ಎಂದು ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆಗೆ ಸುಪ್ರೀಂ ಕೋರ್ಟ್ ನಿರಾಕರಿಸಿತು.

ಅರ್ಜಿ ಹಿಂಪಡೆಯಬೇಕು ಹಾಗೂ ಸಂಬಂಧಿಸಿದ ಪ್ರಾಧಿಕಾರಕ್ಕೇ ಈ ಬಗ್ಗೆ ಮನವಿ ಸಲ್ಲಿಸಬಹುದು ಎಂದೂ ಕೋರ್ಟ್ ಮಾಜಿ ಸಂಸದ ಅರ್ಜಿದಾರ ಜಿ.ವಿ. ಹರ್ಷ ಅವರಿಗೆ ಶುಕ್ರವಾರ ಸೂಚಿಸಿತು.

ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್, ಸಂದೀಪ್ ಮೆಹ್ತಾ ಅವರಿದ್ದ ಪೀಠ ಈ ಸೂಚನೆ ನೀಡಿತು. ಅರ್ಜಿದಾರರು 2004ರಿಂದ 2014ರವರೆಗೆ ಲೋಕಸಭೆಯ ಸದಸ್ಯರಾಗಿದ್ದರು.

ಸರ್ಕಾರಿ ನೌಕರರು ಸೇವಾ ನಿವೃತ್ತಿ ಅಥವಾ ಹುದ್ದೆಗೆ ರಾಜೀನಾಮೆ ಹಿಂದೆಯೇ ಶಾಸನಸಭೆಗೆ ಸ್ಪಂದಿಸದಂತೆ ನಿರ್ಬಂಧಿಸಬೇಕು ಹಾಗೂ ಸ್ಪರ್ಧೆಗೆ ಕಾಲಮಿತಿ ನಿಗದಿಸಬೇಕು ಎಂದು ಚುನಾವಣಾ ಆಯೋಗ 2012ರಲ್ಲಿ ಶಿಫಾರಸು ಮಾಡಿತ್ತು. ನಾಗರಿಕ ಸೇವಾ ಸುಧಾರಣಾ ಸಮಿತಿ 2004ರ ಜುಲೈನಲ್ಲಿ ನೀಡಿದ್ದ ವರದಿಯಲ್ಲೂ ಇದೇ ಅಭಿಪ್ರಾಯ ವ್ಯಕ್ತಪಡಿಸಿತ್ತು.

ಈ ಶಿಫಾರಸು ಜಾರಿಗೆ ನಿರ್ದೇಶನ ನೀಡಬೇಕು ಎಂದು ಕೋರಿ ಅರ್ಜಿದಾರರು ಅರ್ಜಿ ಸಲ್ಲಿಸಿದ್ದರು. ವಕೀಲ ಶ್ರಾವಣ್ ಕುಮಾರ್ ಕರಣಂ ಅವರ ಮೂಲಕ ಅರ್ಜಿಯನ್ನು ಸಲ್ಲಿಸಲಾಗಿತ್ತು.

'ಈ ವರದಿ 2012ಕ್ಕೆ ಸಂಬಂಧಿಸಿದ್ದು, ಅರ್ಜಿ ಹಿಂಪಡೆಯುವಿರೋ, ವಾದ ಮುಂದುವರಿಸುವಿರೋ' ಎಂಬ ಪೀಠದ ಪ್ರಶ್ನೆಗೆ, 'ಅರ್ಜಿ ಹಿಂಪಡೆಯುತ್ತೇವೆ' ಎಂದು ಅರ್ಜಿದಾರರ ಪರ ವಕೀಲರು ಹೇಳಿದರು.

ವಿ.ವಿಗಳು 'ಮಿನಿ ಸಂದೇಶ್‌ಖಾಲಿ'ಗಳಾಗಿವೆ ಪಶ್ಚಿಮ ಬಂಗಾಳ ರಾಜ್ಯಪಾಲ ಬೋಸ್



ಆನಂದ ಬೋಸ್

ಕೋಲ್ಕತ್ತ (ಪಿಟಿಐ): 'ಪಶ್ಚಿಮ ಬಂಗಾಳದ ವಿಶ್ವವಿದ್ಯಾಲಯಗಳ ಆವರಣಗಳು ಮಿನಿ ಸಂದೇಶ್‌ಖಾಲಿಗಳಾಗಿ ಮಾರ್ಪಟ್ಟಿವೆ' ಎಂದಿರುವ ರಾಜ್ಯಪಾಲ ಸಿ.ವಿ. ಆನಂದ ಬೋಸ್ ಅವರು, ವಿಶ್ವವಿದ್ಯಾಲಯಗಳಲ್ಲಿನ ಭ್ರಷ್ಟಾಚಾರ, ಹಿಂಸಾಚಾರ, ಚುನಾವಣಾ ಪ್ರಚಾರ ಮತ್ತು ರಾಜಕೀಯ ಉದ್ದೇಶಗಳಿಗೆ ಬಳಕೆ, ದುರ್ಬಳಕೆ ಕುರಿತು ನ್ಯಾಯಾಂಗ ತನಿಖೆಗೆ ಆದೇಶಿಸಿದ್ದಾರೆ ಎಂದು ರಾಜಭವನದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಸರ್ಕಾರಿ ವಿಶ್ವವಿದ್ಯಾಲಯಗಳ ಕುಲಾಧಿಪತಿಯೂ ಆಗಿರುವ ಬೋಸ್ ಅವರು, ಈ ಕುರಿತು ಪರಿಶೀಲಿಸಲು ಸುಪ್ರೀಂ ಕೋರ್ಟ್ ಅಥವಾ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯ ನೇತೃತ್ವದಲ್ಲಿ ಏಕವ್ಯಕ್ತಿ ಆಯೋಗವನ್ನು ರಚಿಸಲಿದ್ದಾರೆ ಎಂದು ಅವರು ಹೇಳಿದ್ದಾರೆ.

ಗೌರ್ ಬಂಗಾ ವಿಶ್ವವಿದ್ಯಾಲಯದ ಆವರಣದಲ್ಲಿ ಮಾರ್ಚ್ 30ರಂದು ಶಿಕ್ಷಣ ಸಚಿವ ಬ್ರತ್ಯಾ ಬಸು ಅವರು ಟಿಎಂಸಿ ನಾಯಕರ ಜತೆಗೆ ಸಭೆ ನಡೆಸಿದ ಬಳಿಕ, ಅವರನ್ನು ಸಂಪುಟದಿಂದ ವಜಾಗೊಳಿಸುವಂತೆ ರಾಜ್ಯಪಾಲರು ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ್ದರು. ಅದರ ಬೆನ್ನಲ್ಲೇ ನ್ಯಾಯಾಂಗ ತನಿಖೆಗೂ ಆದೇಶಿಸಿದ್ದಾರೆ.

'ನನ್ನನ್ನು ಸಂಪುಟದಿಂದ ವಜಾಗೊಳಿಸುವಂತೆ ರಾಜ್ಯಪಾಲರು ಶಿಫಾರಸು ಮಾಡಿರುವುದನ್ನು ಗಮನಿಸಿದರೆ ನಗು ಬರುತ್ತದೆ. ರಾಜ್ಯಪಾಲರು ತಮ್ಮ ಸಾಂವಿಧಾನಿಕ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡಿದ್ದಾರೆ ಮತ್ತು ಅವರು ತಮ್ಮ ರಾಜಕೀಯ ಗುರುತನ್ನು ಸಾಬೀತುಪಡಿಸಿದ್ದಾರೆ' ಎಂದು ಶಿಕ್ಷಣ ಸಚಿವ ಬಸು ಅವರು ಪ್ರತಿಕ್ರಿಯಿಸಿದ್ದಾರೆ.

'ಸಂಸ್ಥೆಯ ಆವರಣದಲ್ಲಿ ಸಭೆ ನಡೆಸುವ ಮೂಲಕ ಬಸು ಅವರು ವಿಶ್ವವಿದ್ಯಾಲಯ ವ್ಯವಸ್ಥೆಗೆ ಕಳಂಕ ತಂದಿದ್ದಾರೆ. ಅಲ್ಲದೆ ಚುನಾವಣಾ ಮಾದರಿ ನೀತಿ ಸಂಹಿತೆಯನ್ನು ಉದ್ದೇಶಪೂರ್ವಕವಾಗಿ ಉಲ್ಲಂಘಿಸಿದ್ದಾರೆ' ಎಂದು ರಾಜ್ಯಪಾಲರು ಆರೋಪಿಸಿದ್ದರು.

ರಾಜ್ಯಪಾಲರ ನಡೆಯನ್ನು ಟಿಎಂಸಿ ಪರ ಶಿಕ್ಷಣತಜ್ಞರ ವೇದಿಕೆಯು ತೀವ್ರವಾಗಿ ಖಂಡಿಸಿದೆ.

ತೋಟಗಾರಿಕೆ ಇಲಾಖೆ

ತೋಟಗಾರಿಕೆ ಉಪ ನಿರ್ದೇಶಕರ ಕಛೇರಿ,

ಜಿಲ್ಲಾ ಪಂಚಾಯತ್, ತುಮಕೂರು

ಫೋ:0816–2275189 ಇ ಮೇಲ್: ddhtmk@gmail.com

ಸಂ.ತೋ.ಉ.ನಿ/ಜಿಪಂತು/ವಿನಿ3/20/2016–17 ದಿನಾಂಕ: 02.04.2024

ಟೆಂಡರ್ ಪ್ರಕಟಣೆ

ತೋಟಗಾರಿಕೆ ಉಪ ನಿರ್ದೇಶಕರು (ಜಿ.ಪಂ) ತುಮಕೂರು ರವರ ಕಛೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕರಾಗಿ ಸೇವೆಯಲ್ಲಿದ್ದ ಶ್ರೀ.ಉಮೇಶ್.ಟಿ.ಎನ್ ಇವರು ದಿನಾಂಕ: 02–12–2023 ರಿಂದ ಇದುವರೆವಿಗೂ ಕಛೇರಿ ಕರ್ತವ್ಯಕ್ಕೆ ಸುಧೀರ್ಘವಾಗಿ ಅನದೀಕೃತ ಗೈರು ಹಾಜರಾಗಿದ್ದು, ಕಛೇರಿ ಕರ್ತವ್ಯಕ್ಕೆ ಹಾಜರಾಗಲು ಹಾಗೂ ಸದರಿ ಗೈರು ಹಾಜರಿಗೆ ವಿವರಣೆ ನೀಡಲು ಸೂಚಿಸಿ ಈಗಾಗಲೇ ಮೂರು ನೋಟೀಸ್‌ಗಳನ್ನು ನಿಮ್ಮ ಸೇವಾ ಪುಸ್ತಕದಲ್ಲಿನ ವಿಳಾಸಕ್ಕೆ ಕಳುಹಿಸಿ ಕೊಡಲಾಗಿತ್ತು, ಈ ಎಲ್ಲಾ ನೋಟೀಸ್‌ಗಳನ್ನು ತಾವು ಸ್ವೀಕರಿಸಿರುವುದಿಲ್ಲ. ಮುಂದುವರೆದು, ಕೂಡಲೇ ಕಛೇರಿ ಕರ್ತವ್ಯಕ್ಕೆ ಹಾಜರಾಗಲು ಹಾಗೂ ಸದರಿ ಗೈರು ಹಾಜರಿಯ ಕುರಿತು ವಿವರಣೆ ನೀಡಲು ಅಂತಿಮವಾಗಿ ಈ ಮೂಲಕ ನಿಮ್ಮ ಗಮನಕ್ಕೆ ತರಲಾಗಿದೆ.

ಸಹಿ/–ತೋಟಗಾರಿಕೆ ಉಪ ನಿರ್ದೇಶಕರು,
(ಜಿ.ಪಂ) ತುಮಕೂರು.

DIPR/TUM/1/KSMCA/2024-25

ಪ್ರಾದೇಶಿಕ ಆಯುಕ್ತರವರ ಕಚೇರಿ, ಕಂದಾಯ ಇಲಾಖೆ, ಬೆಂಗಳೂರು ವಿಭಾಗ
ಮತ್ತು ನೋಡಲ್ ಅಧಿಕಾರಿ, ಪದನಿಮಿತ್ತ ಕಾರ್ಯದರ್ಶಿ (ಆರ್ಥಿಕ ಅಪರಾಧಗಳು), ಬೆಂಗಳೂರು

ಬಿಎಂಟಿಸಿ ಬಿಲ್ಡಿಂಗ್, 2ನೇ ಮಹಡಿ, ಶಾಂತಿನಗರ, ಕೆ.ಎಚ್ ರಸ್ತೆ, ಬೆಂಗಳೂರು–560027

ಸ್ಥಿರಾಸ್ತಿಯ ಇ–ಹರಾಜಿಗೆ ಆಹ್ವಾನ / ಸೂಚನೆ

Pursuant to attachment of Immovable properties by the Government under the provisions of the Karnataka Protection of Interest of Depositors in Financial Establishments Act. 2004(KPIDFE Act) and pursuant to the absolute attachment order by the Hon'ble Special Court the Competent Authority and Additional Regional Commissioner, Office of the Regional Commissioner, Bengaluru division is issuing notice for e-auction of the immovable property through e-auction on 'as is where is and whatever there is basis'.

The intending bidders will be required to furnish Earnest Money Deposit (EMD) (as mentioned against each auction in the e-portal provided by the Service Provider/Karnataka Public Procurement Portal only).

ಸ್ಥಿರ ಆಸ್ತಿಯ ಸಂಕ್ಷಿಪ್ತ ವಿವರಣೆ

ಕ್ರ. ಸಂ.	ಸ್ವತ್ತಿನ ವಿವರ					ಕನಿಷ್ಠ ಬೆಲೆ (ರೂ.)	ಇರಿಮ್‌ಡಿ (ರೂ)	ಬಿಡ್ ಹೆಚ್ಚಳ ಮೌಲ್ಯ(ರೂ)	Clear Title
	ತಾಲ್ಲೂಕು	ಹೋಬಳಿ	ಗ್ರಾಮ	ಸೈಟ್/ಖಾತಾ ಸಂಖ್ಯೆ	ಅಳತೆ(ಚ.ಅಡಿ)				
1.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	20/489	1200	12,00,000	24,000	6,000	ಖಾತಾ ಸರ್ಕಾರವು ನೇಮಿಸಿದ ಸಕ್ಷಮ ಪ್ರಾಧಿಕಾರ ಮತ್ತು ಹರಾಜು ಪ್ರಾಧಿಕಾರದ ಹೆಸರಿನಲ್ಲಿ ದಾಖಲಾಗಿರುತ್ತದೆ.
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
2.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	21/490	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
3.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	12/481	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
4.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	11/480	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
5.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	18/487	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
6.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	19/488	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
7.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	4/473	893.20	8,93,200	18,000	5,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
8.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	2/471	1053.20	10,53,200	21,000	5,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
9.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	1/470	858.96	8,58,960	18,000	5,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
10.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	5/474	782.38	7,82,380	16,000	5,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
11.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	3/472	973.20	9,73,200	20,000	5,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
12.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	6/475	1879.72	18,79,720	38,000	10,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
13.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	7/476	1063.70	10,63,700	22,000	5,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
14.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	35/504	1290	12,90,000	26,000	7,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
15.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	36/505	1290	12,90,000	26,000	7,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
16.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	31/500	1591	15,91,000	32,000	8,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
17.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	34/503	1290	12,90,000	26,000	7,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
18.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	30/499	816.65	8,16,650	17,000	4,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
19.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	26/495	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
20.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	65/534	1500	15,00,000	30,000	8,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
21.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	71/540	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
22.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	58/527	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
23.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	81/550	1600	16,00,000	32,000	8,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
24.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	52/521	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
25.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	97/566	1500	15,00,000	30,000	8,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
26.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	84/553	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
27.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	96/565	1500	15,00,000	30,000	8,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
28.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	98/567	1500	15,00,000	30,000	8,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
29.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	88/557	1500	15,00,000	30,000	8,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
30.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	108/577	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
31.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	95/564	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
32.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	92/561	2120	21,20,000	43,000	10,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								

Continued.....

ನೇತಾಜಿ ದೇಶದ ಪ್ರಥಮ ಪ್ರಧಾನಿ ಎಂದ ಕಂಗನಾ

ನವದೆಹಲಿ: ಬಾಲಿವುಡ್ ನಟಿ ಹಾಗೂ ಹಿಮಾಚಲ ಪ್ರದೇಶದ ಮಂಡಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕಂಗನಾ ರನೌತ್ ಅವರು ಭಾರತದ ಮೊದಲ ಪ್ರಧಾನಿ 'ನೇತಾಜಿ ಸುಭಾಷ್ ಚಂದ್ರ ಬೋಸ್' ಎಂದು ಹೇಳುವ ಮೂಲಕ ಚರ್ಚೆಗೆ ಗ್ರಾಸವಾಗಿದ್ದಾರೆ.

ಮಾಧ್ಯಮ ಕಾರ್ಯಕ್ರಮವೊಂದರಲ್ಲಿ ಅವರು, 'ಭಾರತದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅಲ್ಲ, ಸುಭಾಷ್ ಚಂದ್ರ ಬೋಸ್' ಎಂದು ಹೇಳಿರುವುದನ್ನು 'ಎನ್‌ಡಿಟಿವಿ' ವರದಿ ಮಾಡಿದೆ.

'ನನ್ನ ಪ್ರಕಾರ, ಸುಭಾಷ್ ಚಂದ್ರ ಬೋಸ್ ಅವರು ದೇಶದ ಮೊದಲ ಪ್ರಧಾನಿ ಎಂದು ಕಂಗನಾ ಹೇಳಿದರು. ಕೂಡಲೇ ನಿರೂಪಕಿ, ಬೋಸ್ ಭಾರತದ ಮೊದಲ ಪ್ರಧಾನಿ ಅಲ್ಲ ಎಂದು ನೆನಪಿಸಿದರು. ತಕ್ಷಣ ಎಚ್ಚೆತ್ತ ಕಂಗನಾ, ಬೋಸ್ ಅವರು ಪ್ರಧಾನಿ ಆಗಿರಲಿಲ್ಲ ಹೌದು, ಆದರೆ ಏಕೆ? ಅವರು ಎಲ್ಲಿಗೆ ಹೋದರು? ಅವರು ಹೇಗೆ ಕಣ್ಮರೆಯಾದರು' ಎಂದು ಪ್ರಶ್ನಿಸಿದರು.

KEA

ಕರ್ನಾಟಕ ಸರ್ಕಾರ

ಕರ್ನಾಟಕ ಪರೀಕ್ಷಾ ಪ್ರಾಧಿಕಾರ

ಸಂಪಿಗೆ ರಸ್ತೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560 012. ದೂರವಾಣಿ: 080–23 460 460 (5 ಲೈನ್‌ಗಳು)
ಇ–ಮೇಲ್: keauthority-ka@nic.in ವೆಬ್‌ಸೈಟ್: http://kea.kar.nic.in

ಸಂಖ್ಯೆ: ಇಡಿ/ಕೆಇಎ/ಆಡಳಿತ/ಸಿ.ಆರ್–04/2024 ದಿನಾಂಕ: 04–04–2024

ಅಧಿಸೂಚನೆ

ಡಿಪ್ಲೊಮಾ ಅಭ್ಯರ್ಥಿಗಳಿಗೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ಪ್ರವೇಶಕ್ಕೆ ಡಿಪ್ಲೊಮ ಸಾಮಾನ್ಯ ಪ್ರವೇಶ ಪರೀಕ್ಷೆ–2024
(ವೃತ್ತಿಪರ ಡಿಪ್ಲೊಮ ಪದವೀಧರ (working professionals) ಅಭ್ಯರ್ಥಿಗಳೂ ಸೇರಿದಂತೆ)

1. ಸರ್ಕಾರದ ಆದೇಶ ಸಂಖ್ಯೆ ಇಡಿ 88 ಡಿಟಿಇ 2022 ಬೆಂಗಳೂರು ದಿನಾಂಕ 14–07–2022 ಅನ್ವಯ ಮೂರು ವರ್ಷಗಳ ಡಿಪ್ಲೊಮ ಇಂಜಿನಿಯರಿಂಗ್ ಕೋರ್ಸುಗಳಲ್ಲಿ ವ್ಯಾಸಂಗ ಮಾಡಿ ಅರ್ಹತೆಯನ್ನು ಪಡೆದಿರುವ ಅಭ್ಯರ್ಥಿಗಳು ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ ಇಂಜಿನಿಯರಿಂಗ್ ಕೋರ್ಸ್‌ಗಳಿಗೆ ನೇರವಾಗಿ ಯಾವುದೇ ಇಂಜಿನಿಯರಿಂಗ್ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಲು ಆದೇಶಿಸಿದೆ.
2. ಮುಂದುವರಿದು ಸರ್ಕಾರವು ತನ್ನ ಪತ್ರ ಸಂಖ್ಯೆ ಇಡಿ 137 ಡಿಟಿಇ 2023 ಬೆಂಗಳೂರು ದಿನಾಂಕ 12–12–2023 ರಲ್ಲಿ, ವೃತ್ತಿಪರ ಡಿಪ್ಲೊಮ ಪದವೀಧರ (working professional) ಅಭ್ಯರ್ಥಿಗಳಿಗೆ ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷ / 3ನೇ ಸೆಮಿಸ್ಟರ್ ಇಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶಾತಿ ನೀಡಲು ಆದೇಶಿಸಿದೆ. (ನೀಡಲಾಗುವ ಸೀಟ್ ಮ್ಯಾಟ್ರಿಕ್ಸ್ ನೀಡಿಕೆಗೆ ಒಳಪಟ್ಟು).
3. ಸರ್ಕಾರದ ಆದೇಶದ ಅನ್ವಯ 2024–25ನೇ ಸಾಲಿಗೆ ಪ್ರಾಧಿಕಾರವು ಲ್ಯಾಟರಲ್ ಎಂಟ್ರಿ ಮೂಲಕ 2ನೇ ವರ್ಷದ ಅಥವಾ 3ನೇ ಸೆಮಿಸ್ಟರ್‌ನ **"ಇಂಜಿನಿಯರಿಂಗ್ ಕಾಲೇಜುಗಳ"** ಪ್ರವೇಶಾತಿಗೆ ಅರ್ಹ ಡಿಪ್ಲೊಮ ಅಭ್ಯರ್ಥಿಗಳಿಂದ ಹಾಗು ಆಸಕ್ತಿಯುಳ್ಳ ವೃತ್ತಿಪರ ಡಿಪ್ಲೊಮ ಪದವೀಧರ (working professional) ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.
4. ಎಲ್ಲಾ ಅಭ್ಯರ್ಥಿಗಳು, ಲ್ಯಾಟರಲ್ ಎಂಟ್ರಿ ಮೂಲಕ ಇಂಜಿನಿಯರಿಂಗ್ ಕೋರ್ಸ್‌ಗಳ ಪ್ರವೇಶಕ್ಕೆ ಅರ್ಹತೆ ಪಡೆಯಲು, ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ನಡೆಸುವ 2024ರ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕು. ವೃತ್ತಿಪರ ಡಿಪ್ಲೊಮ ಪದವೀಧರ (working professional) ಅಭ್ಯರ್ಥಿಗಳೂ ಸಹ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಬೇಕು.
5. ಆರ್ಕಿಟೆಕ್ಚರ್ ಪ್ರವೇಶಕ್ಕೆ ಕೌನ್ಸಿಲ್ ಆಫ್ ಆರ್ಕಿಟೆಕ್ಚರ್ ನವರು ನಡೆಸಿದ NATA-2024 ಪರೀಕ್ಷೆಗೆ ಹಾಜರಾಗಿ valid NATA score ಅನ್ನು ಹೊಂದಿರಬೇಕು ಮತ್ತು ಕಡ್ಡಾಯವಾಗಿ ಆನ್ ಲೈನ್ ಮೂಲಕ ನೊಂದಣಿ ಮಾಡಿ ಅರ್ಜಿ ಸಲ್ಲಿಸಿ ಶುಲ್ಕವನ್ನು ಪಾವತಿಸಬೇಕು.
6. ವೃತ್ತಿಪರ ಡಿಪ್ಲೊಮ ಪದವೀಧರ (working professional) ಅಭ್ಯರ್ಥಿಗಳಿಗೆ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶವು ಸರ್ಕಾರವು ನೀಡುವ ಸೀಟ್ ಮ್ಯಾಟ್ರಿಕ್ಸ್‌ಗೆ ಒಳಪಟ್ಟಿರುತ್ತದೆ.
7. **ಶೈಕ್ಷಣಿಕ ವಿದ್ಯಾರ್ಹತೆ:** ಮೇಲಿನ ಎಲ್ಲಾ ಕೋರ್ಸ್‌ಗಳ ಪ್ರವೇಶಕ್ಕೆ ವಿವರವಾದ ಅರ್ಹತೆಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್ **http://kea.kar.nic.in** ನಲ್ಲಿ ಪ್ರಕಟಿಸಲಾಗಿದೆ. ಅಭ್ಯರ್ಥಿಗಳು, ಯಾವುದೇ ಕೋರ್ಸಿಗೆ ಅರ್ಜಿ ಸಲ್ಲಿಸುವ ಮೊದಲು ಅರ್ಹತಾ ವಿವರವನ್ನು ಪರಿಶೀಲಿಸಲು ಕೋರಲಾಗಿದೆ.
8. **ಪಠ್ಯಕ್ರಮ:** ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ನಿರ್ದೇಶನಾಲಯದಿಂದ ನೀಡಿರುವ ಡಿಸಿಇಟಿ–2024ರ ಪರೀಕ್ಷೆಯ ಪಠ್ಯಕ್ರಮಗಳನ್ನು ಪ್ರಾಧಿಕಾರದ ವೆಬ್‌ಸೈಟಿನಲ್ಲಿ ಅಭ್ಯರ್ಥಿಗಳ ಮಾಹಿತಿಗಾಗಿ ಪ್ರಕಟಿಸಲಾಗಿದೆ. (ಎಲ್ಲಾ ಡಿಪ್ಲೊಮ ವಿಭಾಗಗಳಿಗೆ ಸಾಮಾನ್ಯವಾದದು).

i.	ನೊಂದಣಿ ಹಾಗು ಆನ್‌ಲೈನ್ ಮೂಲಕ ಅರ್ಜಿ (application-cum-verification module) ಸಲ್ಲಿಸಲು ಪ್ರಾರಂಭಿಕ ದಿನಾಂಕ	20–04–2024 ಬೆ. 11.00 ರಿಂದ
ii.	ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	03–05–2024 ರಾತ್ರಿ 11.59 ರ ವರೆಗೆ
iii.	ಶುಲ್ಕವನ್ನು ಪಾವತಿ ಮಾಡಲು ಕೊನೆಯ ದಿನಾಂಕ	06–05–2024 ಸಂಜೆ 6.00 ರವರೆಗೆ
iv.	ಡಿಸಿಇಟಿ–2024ಕ್ಕೆ ಪ್ರವೇಶ ಪತ್ರವನ್ನು ಪ್ರಾಧಿಕಾರದ ವೆಬ್‌ಸೈಟಿನಿಂದ ಡೌನ್‌ಲೋಡ್ ಮಾಡುವುದು.	ನಂತರ ತಿಳಿಸಲಾಗುವುದು

ಸೂಚನೆ:

- ಆನ್‌ಲೈನ್ ಅರ್ಜಿ ಸಲ್ಲಿಸುವಿಕೆಯನ್ನು application-cum-verification module ಆಗಿ ಸಿದ್ದಪಡಿಸಲಾಗಿದೆ. ಅಭ್ಯರ್ಥಿಗಳು ದಾಖಲಿಸುವ ವಿವರಗಳನ್ನು ಅಂದರೆ, ಶಾಲೆಗಳ ವ್ಯಾಸಂಗ, ಕನ್ನಡ ಮಾಧ್ಯಮ, ಜಾತಿ, ಆದಾಯ ಮುಂತಾದ ವಿವರಗಳನ್ನು SATS ಹಾಗು ಕಂದಾಯ ಇಲಾಖೆಯ ವೆಬ್‌ಸರ್ವೀಸ್ ಮುಖಾಂತರ ಆನ್‌ಲೈನ್ ಮೂಲಕವೇ ಪರಿಶೀಲಿಸಲಾಗುವುದು. ಭೌತಿಕವಾಗಿ ದಾಖಲೆಗಳ ಪರಿಶೀಲನೆ ಇರುವುದಿಲ್ಲ.
- ಅಭ್ಯರ್ಥಿಗಳು ಆನ್ ಲೈನ್ ಮೂಲಕ ಡಿಪ್ಲೊಮ ಸಿಇಟಿ–2024ಕ್ಕೆ ದಾಖಲಿಸಿದ ಎಲ್ಲಾ ಮಾಹಿತಿಗಳನ್ನು ಅಂತಿಮ ಎಂದು ಪರಿಗಣಿಸಲಾಗುತ್ತದೆ ಮತ್ತು ಈ ಮಾಹಿತಿಯೇ ಮುಂದಿನ ಎಲ್ಲಾ ಪ್ರಕ್ರಿಯೆಗಳಿಗೆ ಆಧಾರವಾಗಿರುತ್ತದೆ ಹಾಗೂ ಯಾವುದೇ ಕಾರಣಕ್ಕೂ ದಾಖಲಿಸಿದ ಮಾಹಿತಿಯನ್ನು ಬದಲಾಯಿಸಲು ಅವಕಾಶವಿರುವುದಿಲ್ಲ.
- **ಡಿಪ್ಲೊಮಾ ಸಿಇಟಿ–2024 ರ ಅರ್ಜಿ ನಮೂನೆಯಲ್ಲಿ ಜಾತಿ / ವರ್ಗ ಮತ್ತು ವಾರ್ಷಿಕ ಆದಾಯದ ಬಗ್ಗೆ ಒದಗಿಸಿರುವ ಮಾಹಿತಿಯು ವಿದ್ಯಾರ್ಥಿಗಳಿಗೆ ರ್‍ಯಾಂಕ್ ನೀಡುವುದಕ್ಕೆ / ಸೀಟು ಆಯ್ಕೆ ಮಾಡುವುದಕ್ಕೆ ಪರಿಗಣಿಸಲಾಗುವುದು ಮತ್ತು ಯಾವುದೇ ಕಾರಣಕ್ಕೂ ಬದಲಾಯಿಸಲು ಅವಕಾಶವಿರುವುದಿಲ್ಲ.**

2024 ರ ಡಿಪ್ಲೊಮಾ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು ಆನ್‌ಲೈನ್ ಮೂಲಕ ನಡೆಸುವ ವಿಧಾನ, ಪರೀಕ್ಷಾ ದಿನಾಂಕ ಮತ್ತು ವೇಳಾಪಟ್ಟಿಯನ್ನು ನಂತರ ಪ್ರಕಟಿಸಲಾಗುವುದು.

ವಿ.ಸೂ. ಹೆಚ್ಚಿನ ಮಾಹಿತಿಗಾಗಿ ಪ್ರಾಧಿಕಾರದ ವೆಬ್‌ಸೈಟ್ **http://kea.kar.nic.in**ಗೆ ಭೇಟಿ ನೀಡಲು ಸೂಚಿಸಿದೆ.

ಸಹಿ/–
ಕಾರ್ಯನಿರ್ವಾಹಕ ನಿರ್ದೇಶಕರು

ವಾಸಾಸಂಇ/ವಾಪ್ರ/05/2024–25

ರಾಜ್ಯಶಾಸ್ತ್ರ: ಬಾಬರಿ ಮಸೀದಿ ಧ್ವಂಸ, ಗುಜರಾತ್ ಗಲಭೆ ಪ್ರಸ್ತಾಪಕ್ಕೆ ಎನ್‌ಸಿಇಆರ್‌ಟಿ ಕೊಕ್

11, 12ನೇ ತರಗತಿ ಪಠ್ಯದಲ್ಲಿ ಬದಲಾವಣೆ

ನವದೆಹಲಿ(ಪಿಟಿಐ): ಅಯೋಧ್ಯೆಯಲ್ಲಿನ ಬಾಬರಿ ಮಸೀದಿ ಧ್ವಂಸ, ಗುಜರಾತ್ ಗಲಭೆ ವೇಳೆ ಮುಸ್ಲಿಮರ ಹತ್ಯೆ ಸೇರಿದಂತೆ ಹಲವು ವಿಷಯಗಳಿಗೆ ಸಂಬಂಧಿಸಿದ ಪ್ರಸ್ತಾಪವನ್ನು ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ), ಪಠ್ಯಪುಸ್ತಕಗಳಿಂದ ಕೈಬಿಟ್ಟಿದೆ.

11 ಮತ್ತು 12ನೇ ತರಗತಿಯ ರಾಜ್ಯಶಾಸ್ತ್ರ ಪಠ್ಯಪುಸ್ತಕಗಳಲ್ಲಿ ಈ ಬದಲಾವಣೆಗಳನ್ನು ಮಾಡಲಾಗಿದೆ. ಪಠ್ಯಪುಸ್ತಕಗಳಲ್ಲಿನ ಹಲವು ಅಂಶಗಳಿಗೆ ಕತ್ತರಿ ಪ್ರಯೋಗ ಮಾಡಲಾಗಿದೆ.

ಕೆಲ ವಿಷಯಗಳ ಪ್ರಸ್ತಾಪ ಕೈಬಿಟ್ಟಿರುವ ಕುರಿತು ಯಾವುದೇ ಪ್ರತಿಕ್ರಿಯೆ ನೀಡದ ಎನ್‌ಸಿಇಆರ್‌ಟಿ ಅಧಿಕಾರಿಗಳು, ಕೆಲವು ಅಂಶಗಳಿಗೆ ಕತ್ತರಿ ಹಾಕಿರುವುದು ಪಠ್ಯಪುಸ್ತಕಗಳ ಪರಿಷ್ಕರಣೆಯ ಭಾಗವಾಗಿದೆ ಎಂದು ಹೇಳಿದ್ದಾರೆ.

'ನೂತನ ಪಠ್ಯಕ್ರಮ ಚೌಕಟ್ಟು (ಎನ್‌ಸಿಎಫ್) ಪ್ರಕಾರ ನಡೆಸಲಾಗುವ ನೂತನ ಪಠ್ಯಪುಸ್ತಕಗಳ ರಚನೆಗೂ ಈ ಕ್ರಮಕ್ಕೂ ಸಂಬಂಧ ಇಲ್ಲ' ಎಂದಿದ್ದಾರೆ.

'ರಾಜಕೀಯ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಗಮನದಲ್ಲಿಟ್ಟುಕೊಂಡು, ರಾಮ ಜನ್ಮಭೂಮಿ ಚಳವಳಿಗೆ ಸಂಬಂಧಿಸಿದ ಪ್ರಸ್ತಾಪವನ್ನು ಸರಿಪಡಿಸಲಾಗಿದೆ' ಎಂದು ಪಠ್ಯಪುಸ್ತಕಗಳಲ್ಲಿನ ಈ ಬದಲಾವಣೆಗಳಿಗೆ ಸಂಬಂಧಿಸಿ ಎನ್‌ಸಿಇಆರ್‌ಟಿಯ ಪಠ್ಯಕ್ರಮ ರಚನಾ ಸಮಿತಿ ಸಿದ್ಧಪಡಿಸಿರುವ ದಾಖಲೆಯು ಹೇಳುತ್ತದೆ.

11ನೇ ತರಗತಿ ಪಠ್ಯಪುಸ್ತಕದಲ್ಲಿರುವ 'ಜಾತ್ಯತೀತತೆ' ಎಂಬ 8ನೇ ಅಧ್ಯಾಯದಲ್ಲಿ, ಈ ಮೊದಲು 'ಗುಜರಾತ್‌ನಲ್ಲಿ 2002ರಲ್ಲಿ ನಡೆದ ಗೋಧ್ರೋತ್ತರ ಗಲಭೆಗಳಲ್ಲಿ ಸಾವಿರಕ್ಕೂ ಹೆಚ್ಚು ಜನರನ್ನು, ಬಹುತೇಕ ಮುಸ್ಲಿಮರನ್ನು ಹತ್ಯೆ ಮಾಡಲಾಯಿತು' ಎಂದಿತ್ತು.

ಇದನ್ನು, '2002ರಲ್ಲಿ ಗುಜರಾತ್‌ನಲ್ಲಿ ಸಂಭವಿಸಿದ ಗೋಧ್ರೋತ್ತರ ಗಲಭೆಗಳಲ್ಲಿ ಸಾವಿರಕ್ಕೂ ಹೆಚ್ಚು ಜನರನ್ನು ಹತ್ಯೆ ಮಾಡಲಾಯಿತು' ಎಂದು ಬದಲಾಯಿಸಲಾಗಿದೆ.

'ಯಾವುದೇ ಗಲಭೆಗಳಲ್ಲಿ, ಯಾವುದೇ ಒಂದು ಸಮುದಾಯ ಬದಲು, ಎಲ್ಲ ಸಮುದಾಯಗಳ ಜನರು ತೊಂದರೆ ಅನುಭವಿಸುತ್ತಾರೆ' ಎಂಬುದೇ ಈ ಬದಲಾವಣೆ ಹಿಂದಿರುವ ತರ್ಕ ಎಂದು ಎನ್‌ಸಿಇಆರ್‌ಟಿ ಹೇಳಿದೆ.

'ಭಾರತದ ರಾಜಕಾರಣದಲ್ಲಿ ಇತ್ತೀಚಿನ ಬೆಳವಣಿಗೆಗಳು' ಎಂಬ 8ನೇ ಅಧ್ಯಾಯದಲ್ಲಿ ಇದ್ದ 'ಅಯೋಧ್ಯೆಯ ಧ್ವಂಸ' ಎಂಬ ಪ್ರಸ್ತಾಪವನ್ನು ಕೈಬಿಡಲಾಗಿದೆ.

'ರಾಜಕೀಯ ಸ್ಥಿತ್ಯಂತರದಲ್ಲಿ ರಾಮ ಜನ್ಮಭೂಮಿ ಚಳವಳಿ ಹಾಗೂ ಅಯೋಧ್ಯೆ ಧ್ವಂಸದ ಪಾತ್ರ' ಎಂಬ ಪಾಠವನ್ನು 'ರಾಮ ಜನ್ಮಭೂಮಿ ಚಳವಳಿ ನಡೆದು ಬಂದ ದಾರಿ' ಎಂಬುದಾಗಿ ಬದಲಾಯಿಸಲಾಗಿದೆ.

ಇದೇ ಪಾಠದಲ್ಲಿದ್ದ ಬಾಬರಿ ಮಸೀದಿ ಹಾಗೂ ಹಿಂದುತ್ವ ರಾಜಕಾರಣ ಎಂಬ ವಿಷಯಗಳನ್ನು ಕೈಬಿಡಲಾಗಿದೆ. 'ಪ್ರಜಾಸತ್ತಾತ್ಮಕ ಹಕ್ಕುಗಳು' ಎಂಬ 5ನೇ ಅಧ್ಯಾಯದಲ್ಲಿ ಗುಜರಾತ್ ಗಲಭೆಗಳಿಗೆ ಸಂಬಂಧಿಸಿದ ಅಂಶವನ್ನು ಕೈಬಿಡಲಾಗಿದೆ.

ಪಿಒಕೆ ಅಲ್ಲ, ಪಿಒಜೆಕೆ...

ಪಾಕಿಸ್ತಾನ ಆಕ್ರಮಿತ ಕಾಶ್ಮೀರ ಕುರಿತ ಪಾಠದಲ್ಲಿ ಈ ಮೊದಲು, 'ಈ ಪ್ರದೇಶವನ್ನು ಕಾನೂನು ಬಾಹಿರವಾಗಿ ಆಕ್ರಮಿಸಿಕೊಳ್ಳಲಾಗಿದೆ. ಪಾಕಿಸ್ತಾನವು ಈ ಪ್ರದೇಶವನ್ನು ಆಜಾದ್ ಪಾಕಿಸ್ತಾನ ಎಂಬುದಾಗಿ ಹೇಳುತ್ತದೆ' ಎಂದಿತ್ತು.

ಈ ಅಂಶವನ್ನು,'ಭಾರತದ ಈ ಪ್ರದೇಶವನ್ನು ಪಾಕಿಸ್ತಾನ ಕಾನೂನುಬಾಹಿರವಾಗಿ ತನ್ನ ವಶಕ್ಕೆ ತೆಗೆದುಕೊಂಡಿದೆ. ಇದನ್ನು ಪಾಕಿಸ್ತಾನ ಆಕ್ರಮಿತ ಜಮ್ಮು ಮತ್ತು ಕಾಶ್ಮೀರ (ಪಿಒಜೆಕೆ) ಎನ್ನಲಾಗುತ್ತದೆ' ಎಂದು ಬದಲಾಯಿಸಲಾಗಿದೆ.

'ಜಮ್ಮು ಮತ್ತು ಕಾಶ್ಮೀರಕ್ಕೆ ಸಂಬಂಧಿಸಿ ದಂತೆ ಭಾರತ ಸರ್ಕಾರ ತಳೆದಿರುವ ಇತ್ತೀಚಿನ ನಿಲುವಿನ ಆಧಾರಕ್ಕೆ ತಕ್ಕಂತೆಯೇ ಈ ಪಾಠದಲ್ಲಿ ಬದಲಾವಣೆ ಮಾಡಲಾಗಿದೆ' ಎಂದು ಎನ್‌ಸಿಇಆರ್‌ಟಿ ಹೇಳಿದೆ.

ಸಹಿಗೆ ಒತ್ತಡ: ಮಣಿಪುರ ಕುರಿತ ಪಾಠದಲ್ಲಿ ಈ ಮೊದಲು, 'ಮಣಿಪುರವನ್ನು ಭಾರತದಲ್ಲಿ ವಿಲೀನಗೊಳಿಸುವುದಕ್ಕೆ ಸಂಬಂಧಿಸಿದ ಒಪ್ಪಂದಕ್ಕೆ 1949ರ ಸೆಪ್ಟೆಂಬರ್‌ನಲ್ಲಿ ಸಹಿ ಹಾಕಲಾಯಿತು. ಈ ಕುರಿತು ಮಹಾರಾಜನ ಮೇಲೆ ಒತ್ತಡ ಹೇರಿ, ಸಹಿ ಹಾಕುವಂತೆ ಮಾಡುವಲ್ಲಿ ಭಾರತ ಸರ್ಕಾರ ಯಶಸ್ವಿಯಾಗಿತ್ತು. ಈ ಉದ್ದೇಶ ಸಾಧನೆಗಾಗಿ ಮಣಿಪುರದ ಚುನಾಯಿತ ಪ್ರತಿನಿಧಿಗಳೊಂದಿಗೆ ಸಮಾಲೋಚನೆ ನಡೆಸಿರಲಿಲ್ಲ. ಇದು ಮಣಿಪುರ ಜನರಲ್ಲಿ ಆಕ್ರೋಶ ಮತ್ತು ತಿರಸ್ಕಾರ ಭಾವನೆ ಮೂಡಲು ಕಾರಣವಾಯಿತು. ಅದರ ಪರಿಣಾಮವನ್ನು ಈಗಲೂ ಕಾಣಬಹುದಾಗಿದೆ' ಎಂದು ಇತ್ತು.

ಈಗ ಈ ಅಂಶವನ್ನು ಪರಿಷ್ಕರಿಸಲಾಗಿದೆ. 'ಮಣಿಪುರವನ್ನು ಭಾರತದೊಂದಿಗೆ ವಿಲೀನಗೊಳಿಸುವ ಸಂಬಂಧ 1949ರ ಸೆಪ್ಟೆಂಬರ್‌ನಲ್ಲಿ ಒಪ್ಪಂದಕ್ಕೆ ಸಹಿ ಹಾಕುವಂತೆ ಮಣಿಪುರ ಮಹಾರಾಜನನ್ನು ಮನವೊಲಿಸುವಲ್ಲಿ ಭಾರತ ಸರ್ಕಾರ ಯಶಸ್ವಿಯಾಯಿತು' ಎಂದು ಬದಲಾಯಿಸಲಾಗಿದೆ.

ಸಚಿವೆ ಆತಿಶಿಗೆ ಚುನಾವಣಾ ಆಯೋಗ ನೋಟಿಸ್

ಆತಿಶಿ

ನವದೆಹಲಿ (ಪಿಟಿಐ): 'ಪಕ್ಷಕ್ಕೆ ಸೇರುವಂತೆ ಬಿಜೆಪಿಯು ನನ್ನ ಆಪ್ತರ ಮೂಲಕ ಸಂಪರ್ಕಿಸಿದೆ' ಎಂದು ಆರೋಪಿಸಿದ್ದ ಎಎಪಿ ನಾಯಕಿ, ದೆಹಲಿಯ ಸಚಿವೆ ಆತಿಶಿ ಅವರಿಗೆ ಚುನಾವಣಾ ಆಯೋಗ ಶುಕ್ರವಾರ ಶೋಕಾಸ್ ನೋಟಿಸ್ ಜಾರಿಗೊಳಿಸಿದೆ. ತಮ್ಮ ಆರೋಪಕ್ಕೆ ಸಂಬಂಧಿಸಿದಂತೆ ಆಧಾರ ಸಹಿತ ಮಾಹಿತಿ ನೀಡುವಂತೆ ಆಯೋಗ ನೋಟಿಸ್‌ನಲ್ಲಿ ತಿಳಿಸಿದೆ.

ಆತಿಶಿ ಹೇಳಿಕೆಯ ಬೆನ್ನಲ್ಲೇ, ಅವರು 'ಸುಳ್ಳು ಹೇಳಿಕೆ'ಗಳನ್ನು ನೀಡಿದ್ದಾರೆ ಎಂದು ಪ್ರತಿಪಾದಿಸಿದ್ದ ಬಿಜೆಪಿಯು ಈ ಕುರಿತು ಚುನಾವಣಾ ಆಯೋಗಕ್ಕೆ ದೂರು ನೀಡಿತ್ತು.

ನೋಟಿಸ್‌ನಲ್ಲಿ ಏನಿದೆ: 'ನೀವು ರಾಷ್ಟ್ರ ರಾಜಧಾನಿ ಪ್ರದೇಶದ ಸರ್ಕಾರದ ಸಚಿವರು ಮತ್ತು ರಾಷ್ಟ್ರೀಯ ಪಕ್ಷದ ನಾಯಕಿಯಾಗಿದ್ದೀರಿ. ನಾಯಕರು ನೀಡುವ ಹೇಳಿಕೆಗಳು ಮತದಾರರ ಮೇಲೆ ಪರಿಣಾಮ ಬೀರುತ್ತದೆ' ಎಂದು ಆಯೋಗವು ನೋಟಿಸ್‌ನಲ್ಲಿ ಹೇಳಿದೆ.

'ನೀವು ನೀಡುವ ಹೇಳಿಕೆಗಳು ವಾಸ್ತವದಿಂದ ಕೂಡಿರಬೇಕು ಎಂದು ಆಯೋಗ ನಿರೀಕ್ಷಿಸುತ್ತದೆ. ನಿಮ್ಮ ಹೇಳಿಕೆಗಳ ಸತ್ಯಾಸತ್ಯತೆಯನ್ನು ಯಾರಾದರೂ ಪ್ರಶ್ನಿಸಿದಾಗ, ನೀವು ನಿಮ್ಮ ಹೇಳಿಕೆಗಳಿಗೆ ಸಂಬಂಧಿಸಿದ ಆಧಾರಗಳನ್ನು ಹೊಂದಿರಬೇಕಾಗುತ್ತದೆ' ಎಂದು ಅದು ತಿಳಿಸಿದೆ.

ಮಾದರಿ ನೀತಿ ಸಂಹಿತೆಯಡಿ ಇದನ್ನು ಪರಿಶೀಲಿಸಲಾಗುತ್ತಿದೆ ಎಂದು ನೋಟಿಸ್‌ನಲ್ಲಿ ಉಲ್ಲೇಖಿಸಿರುವ ಆಯೋಗವು, ಸೋಮವಾರ ಮಧ್ಯಾಹ್ನದೊಳಗೆ ಪ್ರತಿಕ್ರಿಯೆ ನೀಡುವಂತೆ ಸಚಿವೆ ಆತಿಶಿ ಅವರಿಗೆ ಸೂಚಿಸಿದೆ.

ಏಪ್ರಿಲ್ 2ರಂದು ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದ ಆತಿಶಿ ಅವರು, 'ರಾಜಕೀಯ ಭವಿಷ್ಯ ಉತ್ತಮಪಡಿಸಿಕೊಳ್ಳಲು ಬಿಜೆಪಿ ಪಕ್ಷಕ್ಕೆ ಸೇರಿ ಇಲ್ಲವೇ ತಿಂಗಳೊಳಗೆ ಜಾರಿ ನಿರ್ದೇಶನಾಲಯ ದಿಂದ ಬಂಧನ ಎದುರಿಸಲು ಸಿದ್ಧರಾಗಿರಿ ಎಂದು ಬಿಜೆಪಿಯು ನನ್ನನ್ನು ಸಂಪರ್ಕಿಸಿದೆ' ಎಂದು ಆರೋಪಿಸಿದ್ದರು.

'ಬಿಜೆಪಿಯ ಅಂಗಸಂಸ್ಥೆಯೇ?'

ಚುನಾವಣಾ ಆಯೋಗದ ನೋಟಿಸ್ ಸ್ವೀಕರಿಸಿದ ಬೆನ್ನಲ್ಲೇ ವಾಗ್ದಾಳಿ ನಡೆಸಿದ ಆತಿಶಿ, 'ಚುನಾವಣಾ ಆಯೋಗವೇನು ಬಿಜೆಪಿಯ ಅಂಗಸಂಸ್ಥೆಯೇ' ಎಂದು ಪ್ರಶ್ನಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಆಯೋಗವು ನನಗೆ ಇ-ಮೇಲ್ ಮೂಲಕ ನೋಟಿಸ್ ಕಳುಹಿಸಿದೆ. ಆದರೆ ಅದಕ್ಕೂ ಒಂದು ಗಂಟೆ ಮುನ್ನವೇ ಅದು ಬಿಜೆಪಿಯಿಂದ ಮಾಧ್ಯಮಗಳಿಗೆ ಸೋರಿಕೆಯಾಗಿದೆ' ಎಂದು ಆರೋಪಿಸಿದರು.

ದೆಹಲಿ ಮುಖ್ಯಮಂತ್ರಿ ಕೇಜ್ರಿವಾಲ್ ಅವರನ್ನು ಬಂಧಿಸಿದಾಗ ಮತ್ತು ಚುನಾವಣೆಗೂ ಮುನ್ನ ಕಾಂಗ್ರೆಸ್‌ನ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಿದಾಗ ಚುನಾವಣಾ ಆಯೋಗವು ಸಂಬಂಧಿಸಿದ ಏಜೆನ್ಸಿಗಳಿಗೆ ಏಕೆ ನೋಟಿಸ್‌ಗಳನ್ನು ನೀಡಲಿಲ್ಲ ಎಂದು ಅವರು ಪ್ರಶ್ನಿಸಿದರು.

ಬಿಜೆಪಿ ಆಕ್ಷೇಪಾರ್ಹ ಹೋರ್ಡಿಂಗ್ ಮತ್ತು ಪೋಸ್ಟರ್‌ಗಳಿಗೆ ಸಂಬಂಧಿಸಿದಂತೆ ಎಎಪಿ ಚುನಾವಣಾ ಆಯೋಗಕ್ಕೆ ಹಲವು ಪತ್ರಗಳನ್ನು ಬರೆದಿದೆ. ಆದರೆ, ಅವುಗಳ ಮೇಲೆ ಯಾವುದೇ ಕ್ರಮವನ್ನು ಆಯೋಗ ಕೈಗೊಂಡಿಲ್ಲ ಎಂದು ಅವರು ಕೇಳಿದರು.

ನೋಟಿಸ್‌ಗೆ ಉತ್ತರಿಸುವುದಾಗಿ ಹೇಳಿದ ಆತಿಶಿ ಅವರು, ಇದೇ ವೇಳೆ ಮುಕ್ತ ಮತ್ತು ನ್ಯಾಯಸಮ್ಮತ ಚುನಾವಣೆ ನಡೆಸುವಲ್ಲಿ ತಟಸ್ಥ ಮತ್ತು ಪಕ್ಷಾತೀತ ಧೋರಣೆಯನ್ನು ಹೊಂದಿರಬೇಕಾಗುತ್ತದೆ ಎಂಬುದನ್ನು ಆಯೋಗಕ್ಕೆ ನೆನಪಿಸುವುದಾಗಿ ಹೇಳಿದರು.

ಕೇಜ್ರಿವಾಲ್‌ಗೆ ವಿಶೇಷ ಸವಲತ್ತು ಕೊಡಲಾಗದು: ಇ.ಡಿ

ನವದೆಹಲಿ(ಪಿಟಿಐ): 'ಜೈಲಿನಲ್ಲಿದ್ದುಕೊಂಡೇ ಸರ್ಕಾರವನ್ನು ಮುನ್ನಡೆಸಲು ಬಯಸುತ್ತಾರೆ ಎಂಬ ಕಾರಣಕ್ಕೆ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ವಿಶೇಷ ಸವಲತ್ತುಗಳನ್ನು ನೀಡಲು ಆಗುವುದಿಲ್ಲ' ಎಂದು ಜಾರಿ ನಿರ್ದೇಶನಾಲಯ (ಇ.ಡಿ) ಇಲ್ಲಿನ ನ್ಯಾಯಾಲಯಕ್ಕೆ ಶುಕ್ರವಾರ ತಿಳಿಸಿದೆ.

ತನ್ನ ವಕೀಲರೊಂದಿಗೆ ಸಮಾಲೋಚನೆ ನಡೆಸುವುದಕ್ಕಾಗಿ ಹೆಚ್ಚು ಸಮಯ ನೀಡುವಂತೆ ಕೋರಿ ಕೇಜ್ರಿವಾಲ್ ಅವರು ಸಲ್ಲಿಸಿರುವ ಅರ್ಜಿ ವಿಚಾರಣೆ ವೇಳೆ, ಜಾರಿ ನಿರ್ದೇಶನಾಲಯ ಈ ವಾದ ಮಂಡಿಸಿತು. ಅಲ್ಲದೇ, ಹೆಚ್ಚು ಸಮಯ ನೀಡುವಂತೆ ಕೋರಿ ಕೇಜ್ರಿವಾಲ್ ಸಲ್ಲಿಸಿದ ಅರ್ಜಿಗೆ ವಿರೋಧ ವ್ಯಕ್ತಪಡಿಸಿತು.

ಸಿಬಿಐ ಮತ್ತು ಇ.ಡಿ ಪ್ರಕರಣಗಳಿಗೆ ಸಂಬಂಧಿಸಿದ ವಿಶೇಷ ನ್ಯಾಯಾಧೀಶೆ ಕಾವೇರಿ ಬವೇಜಾ ಅವರು ಅರ್ಜಿ ವಿಚಾರಣೆ ನಡೆಸಿ, ಸೋಮವಾರಕ್ಕೆ ಆದೇಶವನ್ನು ಕಾಯ್ದಿರಿಸಿದ್ದಾರೆ.

ವಿಚಾರಣೆ ವೇಳೆ, ಕೇಜ್ರಿವಾಲ್ ಪರ ಹಾಜರಿದ್ದ ವಕೀಲ, 'ನನ್ನ ಕಕ್ಷಿದಾರರ ವಿರುದ್ಧ ಹಲವು ಪ್ರಕರಣಗಳಿವೆ. ಯಾವುದೇ ವ್ಯಕ್ತಿಗೆ, ಈ ಪ್ರಕರಣಗಳನ್ನು ಅರ್ಥ ಮಾಡಿಕೊಂಡು, ಸೂಚನೆ ನೀಡಲು ವಾರಕ್ಕೆ ಒಂದು ಗಂಟೆ ಸಮಯ ಸಾಕಾಗುವುದಿಲ್ಲ. ವಾರಕ್ಕೆ 5–6 ಬಾರಿ ವಕೀಲರ ಭೇಟಿಗೆ ಅವಕಾಶ ನೀಡಬೇಕು' ಎಂದು ತಿಳಿಸಿದರು.

ಈ ಮನವಿಗೆ ವಿರೋಧ ವ್ಯಕ್ತಪಡಿಸಿದ ಇ.ಡಿ, ಇದು ಜೈಲು ಕೈಪಿಡಿಗೆ ವಿರುದ್ಧವಾದುದು ಎಂದು ಹೇಳಿತು.

'ಕಾನೂನು ಸಲಹೆ ಪಡೆಯುವುದಕ್ಕಾಗಿ ವಕೀಲರ ಭೇಟಿಯ ಸವಲತ್ತನ್ನು ಕೇಜ್ರಿವಾಲ್ ಅವರು ಸಮಾಲೋಚನೆ ಬದಲು ಅನ್ಯ ಉದ್ದೇಶಗಳಿಗೆ ಬಳಸಿಕೊಳ್ಳುತ್ತಿದ್ದಾರೆ' ಎಂದು ಇ.ಡಿ ಪರ ವಕೀಲರು ಆರೋಪಿಸಿದರು. ಇ.ಡಿ ವಾದವನ್ನು ಕೇಜ್ರಿವಾಲ್ ಪರ ವಕೀಲರು ವಿರೋಧಿಸಿದರು.

'ಎಎಪಿ ಒಗ್ಗಟ್ಟಾಗಿರಿಸಲು ಸುನೀತಾ ಅತ್ಯುತ್ತಮ ವ್ಯಕ್ತಿ'

ನವದೆಹಲಿ (ಪಿಟಿಐ): 'ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಪತ್ನಿ ಸುನೀತಾ ಅವರು ಈಗಿನ ಸಂದರ್ಭದಲ್ಲಿ ಪಕ್ಷವನ್ನು ಒಗ್ಗಟ್ಟಾಗಿ ಇರಿಸಲು ಇರುವ ಅತ್ಯುತ್ತಮ ವ್ಯಕ್ತಿ' ಎಂದು ಎಎಪಿ ನಾಯಕ, ದೆಹಲಿ ಸಚಿವ ಸೌರಭ್ ಭಾರದ್ವಾಜ್ ಹೇಳಿದ್ದಾರೆ.

'ಸುನೀತಾ ಉಪಸ್ಥಿತಿಯು ಎಎಪಿ ಕಾರ್ಯಕರ್ತರ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದೆ' ಎಂದೂ ಅವರು ಸುದ್ದಿ ಸಂಸ್ಥೆಗೆ ಪ್ರತಿಕ್ರಿಯಿಸಿದ್ದಾರೆ.

'ಸುನೀತಾ ಅವರು ತನ್ನನ್ನು, ಪ್ರಸ್ತುತ ಜೈಲಿನಲ್ಲಿರುವ ಮುಖ್ಯಮಂತ್ರಿ ಅವರ ಸಂದೇಶಕಾರರು ಎಂದೇ ಹೇಳಿಕೊಂಡಿದ್ದಾರೆ. ಪಕ್ಷದ ಕಾರ್ಯಕರ್ತರ ಬೆಂಬಲ ಮತ್ತು ಉನ್ನತ ನಾಯಕತ್ವದ ನಡುವಿನ ಭಾವನಾತ್ಮಕ ಸಂಪರ್ಕವನ್ನು ಒಟ್ಟಿಗೆ ಇರಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದ್ದಾರೆ' ಎಂದು ಅವರು ಹೇಳಿದ್ದಾರೆ.

ಕ್ರ. ಸಂ.	ಸ್ವತ್ತಿನ ವಿವರ					ಕನಿಷ್ಠ ಬೆಲೆ (ರೂ.)	ಇಎಮ್‌ಡಿ (ರೂ)	ಬಿಡ್ ಹೆಚ್ಚಳ ಮೌಲ್ಯ(ರೂ)	Clear Title
	ತಾಲ್ಲೂಕು	ಹೋಬಳಿ	ಗ್ರಾಮ	ಸೈಟ್/ಖಾತಾ ಸಂಖ್ಯೆ	ಅಳತೆ(ಚ.ಅಡಿ)				
33.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	91/560	2250	22,50,000	45,000	12,000	ಖಾತಾ ಸರ್ಕಾರವು ನೇಮಿಸಿದ ಸಕ್ಷಮ ಪ್ರಾಧಿಕಾರ ಮತ್ತು ಹರಾಜು ಪ್ರಾಧಿಕಾರದ ಹೆಸರಿನಲ್ಲಿ ದಾಖಲಾಗಿರುತ್ತದೆ.
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
34.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	100/569	1290	12,90,000	26,000	7,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
35.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	89/558	1500	15,00,000	30,000	8,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
36.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	111/580	1392	13,92,000	28,000	7,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
37.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	101/570	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
38.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	99/568	2650	26,50,000	53,000	14,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
39.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	82/551	1525.17	15,25,170	31,000	8,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
40.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	60/529	2145.50	21,45,500	43,000	11,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
41.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	59/528	935.20	9,35,200	20,000	5,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
42.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	103/572	1440	14,40,000	30,000	8,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
43.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	87/556	844	8,44,000	18,000	5,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
44.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	107/576	1200	12,00,000	24,000	6,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								
45.	ಚಿಕ್ಕಬಳ್ಳಾಪುರ	ನಂದಿ	ಅಮಾನಿಗೋಪಾಲಕೃಷ್ಣಕೆರೆ	104/573	1392	13,92,000	28,000	7,000	
	Google Location: **https://maps.app.goo.gl/17CuotEgtSgnPdFy5** Latitude and Longitude: 13°25'06.7"N 77°46'22.5"E								

ಪ್ರೀ–ಬಿಡ್ ಸಭೆಯ ದಿನಾಂಕ, ಸಮಯ ಮತ್ತು ಸ್ಥಳ.	ತಪಾಸಣೆಯ ದಿನಾಂಕ ಮತ್ತು ಸಮಯ.	ಬಿಡ್‌ಗಳ ಸಲ್ಲಿಕೆ ಮತ್ತು ಇಎಮ್‌ಡಿ ಸಲ್ಲಿಕೆಯ ಕೊನೆಯ ದಿನಾಂಕ	ಇ–ಹರಾಜಿನ ದಿನಾಂಕ ಮತ್ತು ಸಮಯ
24th April 2024, 3 pm to 4 pm Place: Office of the Regional Commissioner, 2nd floor, BMTC Building, KH road, Shantinagar, Bengaluru-560027.	**23rd April 2024 11:00am to 5:00pm**	**29th April 2024 Until 5pm**	**3rd May2024 11:00 am to 1:00 pm**

ನೋಂದಣಿ ಮತ್ತು ಆನ್‌ಲೈನ್ ಹರಾಜಿಗಾಗಿ, **https://kppp.karnataka.gov.in** ಗೆ ಲಾಗಿನ್ ಮಾಡಬಹುದು. (ಹೆಲ್ಪ್‌ಡೆಸ್ಕ್ ಸಂಖ್ಯೆ: 080–46010000, 080–68948777) ಹರಾಜಿಗೆ ಸಂಬಂಧಿಸಿದ ಮಾಹಿತಿಯ ಅಗತ್ಯವಿರುವ ಆಸಕ್ತ ಬಿಡ್‌ದಾರರು ಹೆಚ್ಚುವರಿ ಪ್ರಾದೇಶಿಕ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿಯನ್ನು ಸಂಪರ್ಕಿಸಬಹುದು., 2ನೇ ಮಹಡಿ, ಬಿಎಂಟಿಸಿ ಕಟ್ಟಡ, ಕೆಎಚ್ ರಸ್ತೆ, ಶಾಂತಿನಗರ, ಬೆಂಗಳೂರು–560027, ಇ–ಮೇಲ್ ಐಡಿ: **arckauction@gmail.com** ಅಥವಾ ಸಂಪರ್ಕ ಸಂಖ್ಯೆ: 7760275682.

ಸ್ಥಳ: ಬೆಂಗಳೂರು.
ದಿನಾಂಕ: 06–04–2024.

ಸಹಿ/– ಹೆಚ್ಚುವರಿ ಪ್ರಾದೇಶಿಕ ಆಯುಕ್ತರು ಮತ್ತು ಸಕ್ಷಮ ಪ್ರಾಧಿಕಾರ ಪ್ರಾದೇಶಿಕ ಆಯುಕ್ತರ ಕಚೇರಿ, ಬೆಂಗಳೂರು ವಿಭಾಗ, ಬೆಂಗಳೂರು.

DIPR/CP/07/ZEN/2024-25

ಕವಿತಾ ವಿಚಾರಣೆಗೆ ಅನುಮತಿ

ಕೆ. ಕವಿತಾ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಪ್ರಕರಣದಲ್ಲಿ ಬಂಧಿತರಾಗಿರುವ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರನ್ನು ತಿಹಾರ್ ಜೈಲಿನಲ್ಲಿ ವಿಚಾರಣೆ ನಡೆಸಲು ಇಲ್ಲಿನ ನ್ಯಾಯಾಲಯ ಸಿಬಿಐಗೆ ಶುಕ್ರವಾರ ಅನುಮತಿ ನೀಡಿದೆ.

ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಕವಿತಾ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ) ಮಾರ್ಚ್ 15ರಂದು ಬಂಧಿಸಿತ್ತು.

ನ್ಯಾಯಾಂಗ ಬಂಧನದಲ್ಲಿರುವ ಕವಿತಾ ಅವರನ್ನು ವಿಚಾರಣೆಗೆ ಒಳಪಡಿಸಲು ಅನುಮತಿ ಕೋರಿ ಸಿಬಿಐ ಅರ್ಜಿ ಸಲ್ಲಿಸಿತ್ತು. ಇ.ಡಿ ಮತ್ತು ಸಿಬಿಐ ಪ್ರಕರಣಗಳ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ಸಿಬಿಐ ಅನುಮತಿ ನೀಡಿ ಆದೇಶಿಸಿದರು.

ಇಫ್ತಾರ್... ರಂಜಾನ್ ಅಂಗವಾಗಿ ದೆಹಲಿಯ ಜಾಮಾ ಮಸೀದಿಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಇಫ್ತಾರ್ ಕೂಟದಲ್ಲಿ ಮುಸ್ಲಿಂ ಬಾಲಕಿಯರು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

'ಪತ್ನಿ ಪದೇ ಪದೇ ಪತಿಯ ಮನೆ ತ್ಯಜಿಸುವುದು ಮಾನಸಿಕ ಕ್ರೌರ್ಯ'

ಹೈಕೋರ್ಟ್ ಸುದ್ದಿ

ನವದೆಹಲಿ (ಪಿಟಿಐ): ಪತಿಯ ಯಾವುದೇ ತಪ್ಪಿಲ್ಲದಿದ್ದರೂ, ಪತ್ನಿಯು ಪದೇ ಪದೇ ತನ್ನ ಪತಿಯ ಮನೆ ಬಿಟ್ಟು ಹೋಗುವುದನ್ನು ಮಾನಸಿಕ ಕ್ರೌರ್ಯ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

'ಪರಸ್ಪರ ಬೆಂಬಲ, ಭಕ್ತಿ ಮತ್ತು ನಿಷ್ಠೆಯ ಫಲವತ್ತಾದ ಮಣ್ಣಿನಲ್ಲಿ ವಿವಾಹವು ಅರಳುತ್ತದೆ ಮತ್ತು ದೂರ, ಪರಿತ್ಯಕ್ತತೆಯು ಈ ಬಂಧವನ್ನು ಸರಿಪಡಿಸಲಾಗದಷ್ಟು ಮುರಿಯುತ್ತದೆ' ಎಂದು ನ್ಯಾಯಮೂರ್ತಿಗಳಾದ ಸುರೇಶ್ ಕುಮಾರ್ ಕೈಟ್, ನೀನಾ ಬನ್ಸಾಲ್ ಕೃಷ್ಣ ಅವರಿದ್ದ ಪೀಠ ವಿವರಿಸಿದೆ.

ಪತ್ನಿಯ ಪರಿತ್ಯಕ್ತ ಮನಸ್ಥಿತಿಯನ್ನು ಗಮನಿಸಿದ ಪೀಠವು ಪತಿಗೆ ವಿಚ್ಛೇದನಕ್ಕೆ ಅನುಮತಿಸಿ ತೀರ್ಪು ನೀಡಿದೆ.

ವಿಚ್ಛೇದನ ನೀಡಲು ನಿರಾಕರಿಸಿದ್ದ ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಪತಿಯು ಹೈಕೋರ್ಟ್‌ನಲ್ಲಿ ಮೇಲ್ಮನವಿ ಸಲ್ಲಿಸಿದ್ದರು.

19 ವರ್ಷಗಳ ದಾಂಪತ್ಯ ಜೀವನದಲ್ಲಿ ಪತ್ನಿಯು ಏಳು ಬಾರಿ ಪತಿಯಿಂದ ದೀರ್ಘಕಾಲ ದೂರ ಇದ್ದಾರೆ. ಅವರು ಪ್ರತಿ ಬಾರಿಯೂ 3ರಿಂದ 10 ತಿಂಗಳವರೆಗೆ ಪತಿಯನ್ನು ತೊರೆದಿದ್ದಾರೆ ಎಂಬುದನ್ನು ಪೀಠ ಗಮನಿಸಿದೆ.

ದೀರ್ಘಕಾಲ ಪ್ರತ್ಯೇಕವಾಗಿ ಇರುವುದು ವೈವಾಹಿಕ ಸಂಬಂಧವನ್ನು ಸರಿಪಡಿಸಲಾಗದ ಸ್ಥಿತಿಗೆ ತಳ್ಳುತ್ತದೆ. ಇದು ಮಾನಸಿಕ ಕ್ರೌರ್ಯವನ್ನೂ ರೂಪಿಸುತ್ತದೆ. ಸಹಬಾಳ್ವೆ ಮತ್ತು ವೈವಾಹಿಕ ಸಂಬಂಧಗಳನ್ನು ನಿಲ್ಲಿಸುವುದು ಅಥವಾ ವಂಚಿಸುವುದು ಸಹ ಕ್ರೌರ್ಯವೇ ಆಗಿದೆ ಎಂದು ಪೀಠ ಹೇಳಿದೆ.

ಪತಿಯ ಮನೆಗೆ ಮರಳಲು ಯಾವುದೇ ಗಂಭೀರ ರಾಜಿ ಪ್ರಯತ್ನಗಳನ್ನು ಮಾಡದ ಕಾರಣ ಪತ್ನಿಯು ವೈವಾಹಿಕ ಸಂಬಂಧದಲ್ಲಿ ಮುಂದುವರಿಯುವ ಉದ್ದೇಶ ಹೊಂದಿಲ್ಲ ಎಂಬುದನ್ನೂ ಗಮನಿಸಿರುವುದಾಗಿ ಪೀಠ ಹೇಳಿದೆ.

ಹೀಗಾಗಿ ಪತಿಯು ವಿಚ್ಛೇದನ ಪಡೆಯಲು ಅರ್ಹರಾಗಿದ್ದಾರೆ ಎಂದ ಪೀಠವು, ಕೌಟುಂಬಿಕ ನ್ಯಾಯಾಲಯದ ಆದೇಶವನ್ನು ರದ್ದುಪಡಿಸಿ, ವಿಚ್ಛೇದನಕ್ಕೆ ಅನುಮತಿಸಿ ತೀರ್ಪು ನೀಡಿದೆ.

ಪ್ರಜಾ ಮತ

'ರಾಜಕಾರಣಕ್ಕೆ ಮಠಾಧಿಪತಿಗಳ ಪ್ರವೇಶ ಅನಿವಾರ್ಯ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಈವರೆಗೆ ರಾಜಕಾರಣಿಗಳಿಗೆ ಮಾರ್ಗದರ್ಶನ ಮಾಡುತ್ತಿದ್ದೆವು. ವ್ಯವಸ್ಥೆ ಅಸ್ತವ್ಯಸ್ತಗೊಂಡಾಗ ಮಠಾಧಿಪತಿಗಳು ರಾಜಕೀಯ ಪ್ರವೇಶಿಸುವುದು ಅನಿವಾರ್ಯ. ಯಾರೋ ಹೇಳಿಕೊಟ್ಟಿದ್ದರೆ, ನನ್ನ ನಿಲುವು ಇಷ್ಟು ಗಟ್ಟಿಯಾಗಿ ಇರುತ್ತಿರಲಿಲ್ಲ' ಎಂದು ಶಿರಹಟ್ಟಿ ಮಠದ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

'ನನ್ನನ್ನು ಎಲ್ಲ ಪಕ್ಷಗಳ ಪ್ರಮುಖರು ಸಂಪರ್ಕಿಸಿದ್ದಾರೆ. ಯಾರ ಒತ್ತಡಕ್ಕೂ ನಾನು ಬಗ್ಗಲ್ಲ. ನಾನು ತೆಗೆದುಕೊಳ್ಳುವ ನಿರ್ಣಯ ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಪರಿಣಾಮ ಬೀರುತ್ತದೆ' ಎಂದು ಅವರು ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

'ಕೆಲ ಮಠಾಧಿಪತಿಗಳು ಒತ್ತಡಕ್ಕೆ ಒಳಗಾಗಿದ್ದು, ಅವರನ್ನು ದುರ್ಬಳಕೆ ಮಾಡಲಾಗಿದೆ. ಕೆಲವು ಲಿಂಗಾಯತ ಮುಖಂಡರು ನನ್ನ ವಿರುದ್ಧ ಮಾತಾಡುವಂತೆ ಮಾಡಿದ್ದಾರೆ. ಲಿಂಗಾಯತರ ವಿರುದ್ಧ ಅದೇ ಸಮಾಜದವರನ್ನು ಎತ್ತಿ ಕಟ್ಟಲಾಗಿದೆ' ಎಂದು ಆರೋಪಿಸಿದರು.



ಸಾಮಾಜಿಕ ಜಾಲತಾಣದಲ್ಲಿ ಮಠಾಧಿಪತಿಗಳು ರಾಜಕಾರಣಕ್ಕೆ ಬರಬಾರದೆಂದು ಪ್ರಲ್ಹಾದ ಜೋಶಿ ಅಭಿಮಾನಿಗಳು ಹೇಳುತ್ತಿದ್ದಾರೆಯೇ ಹೊರತು, ಪ್ರಜ್ಞಾವಂತರು ಹೇಳಿಲ್ಲ
ದಿಂಗಾಲೇಶ್ವರ ಸ್ವಾಮೀಜಿ, ಶಿರಹಟ್ಟಿ ಮಠ

'ಧಾರವಾಡ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಪ್ರಲ್ಹಾದ ಜೋಶಿ ಬದಲಾಗಬೇಕು ಎಂಬ ನಿಲುವಿನಲ್ಲಿ ಯಾವುದೇ ಬದಲಾವಣೆ ಇಲ್ಲ. ಈಶ್ವರಪ್ಪ ನಂತಹ ಮುಖಂಡರನ್ನೇ ಬಿಜೆಪಿ ನಿರ್ಲಕ್ಷ್ಯ ಮಾಡಿದೆ. ಅಲ್ಪಸಂಖ್ಯಾತರ ಓಲೈಕೆ ಮಾಡಿ, ಬಹುಸಂಖ್ಯಾತರನ್ನು ನಿರ್ಲಕ್ಷ್ಯ ಮಾಡುವುದು ರಾಷ್ಟ್ರೀಯ ಪಕ್ಷಕ್ಕೆ ಶೋಭೆ ಅಲ್ಲ' ಎಂದರು.

ಮತದಾರರಿಗೆ 'ಜಾಗೃತ ನಾಗರಿಕರು ಕರ್ನಾಟಕ' ಸಂಘಟನೆ ಮನವಿ

'ಕೋಮುವಾದಿಗಳ ಸೋಲಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ ಜನರು ವಿವೇಚನೆಯಿಂದ ಮತ ಚಲಾಯಿಸಬೇಕು. ಕೋಮುವಾದಿಗಳನ್ನು ಸೋಲಿಸಬೇಕು ಎಂದು 'ಜಾಗೃತ ನಾಗರಿಕರು ಕರ್ನಾಟಕ' ಸಂಘಟನೆಯು ಮನವಿ ಮಾಡಿದೆ.

ದೇಶದ ರಾಜಕಾರಣ ತುಂಬಿ ತುಳುಕುತ್ತಿರುವ ಈ ಹೊತ್ತಿನಲ್ಲಿ ಪ್ರಜಾಪ್ರಭುತ್ವ ಮತ್ತು ಸಂವಿಧಾನ ಅಪಾಯದ ಸ್ಥಿತಿಯಲ್ಲಿವೆ. ಬಹುತ್ವ ಭಾರತದ ಸೌಹಾರ್ದಕ್ಕೆ ಧಕ್ಕೆ ಬಂದಿದೆ. ಧರ್ಮ, ಭಾಷೆ, ಜಾತಿಗಳ ಹೆಸರಿನಲ್ಲಿ ಸಮಾಜ ಒಡೆಯಲಾಗುತ್ತಿದೆ ಎಂದು ಹೇಳಿದೆ.

'ಈ ಬಾರಿಯ ಲೋಕಸಭೆ ಚುನಾವಣೆಯು ಪ್ರಜಾಪ್ರಭುತ್ವ, ಸಂವಿಧಾನದ ಅಳಿವು, ಉಳಿವಿನ ಚುನಾವಣೆ' ಎಂದು 'ಜಾಗೃತ ನಾಗರಿಕರು ಕರ್ನಾಟಕ' ಸಂಘಟನೆಯ ಕೆ.ಮರುಳಸಿದ್ದಪ್ಪ, ಜಿ.ರಾಮಕೃಷ್ಣ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಮುಖ್ಯಾಂಶಗಳು
- ವಿವೇಚನೆಯಿಂದ ಮತ ಚಲಾಯಿಸಿ
- ಅಪಾಯದ ಸ್ಥಿತಿಯಲ್ಲಿ ಪ್ರಜಾಪ್ರಭುತ್ವ ಮತ್ತು ಸಂವಿಧಾನ
- ಜಾತಿ ಧರ್ಮ ಹೆಸರಿನಲ್ಲಿ ಸಮಾಜದಲ್ಲಿ ಒಡಕು

'ಜಾತಿ, ಹಣ, ಹೆಂಡ ಮುಂತಾದ ಆಮಿಷಗಳಿಗೆ ಬಲಿಯಾಗದೇ ದೇಶದ ಭವಿಷ್ಯವನ್ನು, ಪ್ರಗತಿಯ ವಿಚಾರಗಳನ್ನು ಗಮನದಲ್ಲಿ ಇಟ್ಟುಕೊಂಡು ಮತ ಹಕ್ಕು ಚಲಾಯಿಸಬೇಕು. ಬಡವರಿಗೆ ಸೌಲಭ್ಯ ಒದಗಿಸುವುದನ್ನೇ ಪ್ರಧಾನಿ ನರೇಂದ್ರ ಮೋದಿ ಗೇಲಿ ಮಾಡಿದ್ದಾರೆ. ಗೋದಾಮುಗಳಲ್ಲಿ ಧಾನ್ಯ ಕೊಳೆಯುತ್ತಿದ್ದಾಗಲೂ ಅನ್ನಭಾಗ್ಯ ಯೋಜನೆಯಡಿ ವಿತರಿಸಲು ರಾಜ್ಯ ಸರ್ಕಾರಕ್ಕೆ ಅಕ್ಕಿ ಖರೀದಿ ಮಾಡಲೂ ಅವಕಾಶ ನೀಡಲಿಲ್ಲ. ಇಂಥ ಅನ್ನ ಕಂಟಕರನ್ನು ಮತದಾರರು ತಿರಸ್ಕರಿಸಬೇಕು' ಎಂದು ಹೇಳಿದರು.

'ನಮ್ಮ ರಾಜ್ಯದ ತೆರಿಗೆ ಪಾಲು, ನಮಗೆ ಬರಬೇಕು. ಇದು, ನಮ್ಮ ಹಕ್ಕು. ಜಿದ್ದಿನ ರಾಜಕಾರಣದಲ್ಲಿ ನಮ್ಮ ಹಕ್ಕನ್ನು ಕಿತ್ತುಕೊಳ್ಳುತ್ತಿರುವವರ ವಿರುದ್ಧ ನಾವು ನಿಲ್ಲಬೇಕು. ದೇಶದ ರೈತರ ಬೆನ್ನು ಮೂಳೆ ಮುರಿಯುವ ಕರಾಳ ಕೃಷಿ ಕಾನೂನು ತಂದಾಗ ಅದನ್ನು ವಿರೋಧಿಸಿ ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ ರೈತರ ಮೇಲೆ ದಬ್ಬಾಳಿಕೆ, ದಾಳಿಗಳನ್ನು ಕೇಂದ್ರ ಸರ್ಕಾರ ಮಾಡಿತ್ತು. ಇಂಥವರು ಮತ್ತೆ ಅಧಿಕಾರಕ್ಕೆ ಬಂದರೆ ಉಣ್ಣುವ ಅನ್ನಕ್ಕೂ ತತ್ವಾರವಾಗಲಿದೆ' ಎಂದು ಸಂಘಟನೆಯ ಸದಸ್ಯರಾದ ಎಸ್.ಜಿ. ಸಿದ್ದರಾಮಯ್ಯ, ಜಾಣಗೆರೆ ವೆಂಕಟರಾಮಯ್ಯ ಆತಂಕ ವ್ಯಕ್ತಪಡಿಸಿದರು.

'ಬೇಟಿ ಬಚಾವೋ, ಬೇಟಿ ಪಢಾವೋ ಎಂದವರು ಮಣಿಪುರದಲ್ಲಿ ಮಹಿಳೆಯರನ್ನು ಬೆತ್ತಲೆಗೊಳಿಸಿ ಲೈಂಗಿಕ ದೌರ್ಜನ್ಯ ಎಸಗಿದರೂ, ಕೊಲೆ ಮಾಡಿದರೂ ಸುಮ್ಮನಿದ್ದರು. ಕುಸ್ತಿಪಟುಗಳ ಮೇಲೆ ಬಿಜೆಪಿಯ ಸಂಸದರಿಂದಲೇ ಅತ್ಯಾಚಾರ ನಡೆದ ಆರೋಪ ಬಂದಾಗಲೂ ಮಹಿಳಾ ಕುಸ್ತಿಪಟುಗಳನ್ನು ರಕ್ಷಿಸಲಿಲ್ಲ. ಚುನಾವಣಾ ಬಾಂಡ್ ಎಂಬ ಬ್ರಹ್ಮಾಂಡ ಭ್ರಷ್ಟಾಚಾರದಲ್ಲಿ ತೊಡಗಿರುವ ಬಿಜೆಪಿಯನ್ನು ಸೋಲಿಸಬೇಕು ಎಂದು ವಿಮಲಾ ಕೆ.ಎಸ್. ಅವರು ಮನವಿ ಮಾಡಿದರು.

'ಜಾಗೃತ ನಾಗರಿಕರು ಕರ್ನಾಟಕ' ಸಂಘಟನೆಯ ರುದ್ರಪ್ಪ ಹನಗವಾಡಿ, ಬಿ. ಶ್ರೀಪಾದ ಭಟ್, ವಸುಂಧರಾ ಭೂಪತಿ, ಟಿ. ಸುರೇಂದ್ರ ರಾವ್, ಬಂಜಗೆರೆ ಜಯಪ್ರಕಾಶ್, ದಿನೇಶ್ ಅಮಿನ್ ಮಟ್ಟು ಅವರು ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

'ಕುರ್ಚಿ ಭದ್ರಪಡಿಸಿಕೊಳ್ಳಲು ಕಾಂಗ್ರೆಸ್ ಸಚಿವರ ಓಡಾಟ'

ಹಾವೇರಿ: 'ಜನರ ಕೆಲಸ ಮಾಡಲು ಕಾಂಗ್ರೆಸ್ ಸರ್ಕಾರದಲ್ಲಿ ಸಮಯವಿಲ್ಲ. ಸಚಿವರು ತಮ್ಮ ಕುರ್ಚಿ ಭದ್ರಪಡಿಸಿಕೊಳ್ಳಲು ಓಡಾಡುತ್ತಿದ್ದಾರೆ. ನರೇಂದ್ರ ಮೋದಿ ಮತ್ತೆ ಪ್ರಧಾನಿಯಾಗಿ ಆಯ್ಕೆಯಾದ ಬಳಿಕ ರಾಜ್ಯದಲ್ಲಿನ ಕಾಂಗ್ರೆಸ್ ಸರ್ಕಾರ ಪತನವಾಗಲಿದೆ. 6 ತಿಂಗಳು ಅಥವಾ ವರ್ಷದಲ್ಲಿ ರಾಜ್ಯದಲ್ಲಿ ವಿಧಾನಸಭೆ ಚುನಾವಣೆ ನಡೆಯಲಿದೆ' ಎಂದು ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಹೇಳಿದರು.

ಹಾನಗಲ್ ತಾಲ್ಲೂಕಿನ ಬೊಮ್ಮನಹಳ್ಳಿ ಗ್ರಾಮದಲ್ಲಿ ಶುಕ್ರವಾರ ಬಿಜೆಪಿ ಕಾರ್ಯಕರ್ತರೊಡನೆ ಏರ್ಪಡಿಸಿದ್ದ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್‌ನಲ್ಲಿ ಕೆಲವು ಸಚಿವರಿಗೆ ಲೋಕಸಭಾ ಚುನಾವಣೆ ನಿರ್ಣಾಯಕವಾಗಿದೆ. ಏಕೆಂದರೆ, ಐದು ಗ್ಯಾರಂಟಿಗಳ ಜೊತೆ ಸೋಲಿನ ಗ್ಯಾರಂಟಿ ಕೂಡ ಇತ್ತು. ಈ ಕಾಂಗ್ರೆಸ್ ಸರ್ಕಾರ ಬಂದಾಗಿನಿಂದಲೂ ಬರಗಾಲ, ಭ್ರಷ್ಟಾಚಾರ, ಶೂನ್ಯ ಅಭಿವೃದ್ಧಿ ಗ್ಯಾರಂಟಿ' ಎಂದರು.

'ಸಿದ್ದರಾಮಯ್ಯನವರ ಆಡಳಿತಕ್ಕೂ ಅವರ ಅನುಭವಕ್ಕೂ ಬಹಳ ವ್ಯತ್ಯಾಸವಿದೆ. ಈ 10 ತಿಂಗಳಲ್ಲಿ ಅವರು ಎಂಥ ಕೆಟ್ಟ ಆಡಳಿತ ನೀಡಿದ್ದಾರೆ ಎಂಬುದು ಜನರಿಗೆ ಗೊತ್ತು' ಎಂದರು.

ಸೌಜನ್ಯಾ ಹೋರಾಟ ಸಮಿತಿಯಿಂದ 'ನೋಟಾ' ಅಭಿಯಾನ

ಮಂಗಳೂರು: ರಾಜಕೀಯ ಪಕ್ಷಗಳಿಗೆ ಎಚ್ಚರಿಕೆಯ ಗಂಟೆ ನೀಡುವ ಜೊತೆಗೆ ದೇಶದ ಗಮನ ಸೆಳೆಯುವ ಉದ್ದೇಶದಿಂದ ಲೋಕಸಭಾ ಚುನಾವಣೆಯಲ್ಲಿ 'ನೋಟಾ'ಕ್ಕೆ ಮತ ಹಾಕಲು ಸೌಜನ್ಯಾ ಪರ ಹೋರಾಟಗಾರರು ಜಾಗೃತಿ ಅಭಿಯಾನ ಪ್ರಾರಂಭಿಸಿದ್ದಾರೆ ಎಂದು ಹೋರಾಟ ಸಮಿತಿ ಮುಖಂಡ ಗಿರೀಶ್ ಮಟ್ಟೆಣ್ಣವರ್ ಹೇಳಿದರು.

ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಳ್ತಂಗಡಿ ತಾಲ್ಲೂಕಿನಲ್ಲಿ ನಡೆದ ಸೌಜನ್ಯಾ ಎಂಬ ಯುವತಿಯ ಹತ್ಯೆ ಪ್ರಕರಣದ ಮರು ತನಿಖೆ ನಡೆಸಿ ನ್ಯಾಯ ಒದಗಿಸುವಂತೆ 11 ವರ್ಷಗಳಿಂದ ಹೋರಾಟ ನಡೆಸುತ್ತಿದ್ದರೂ, ಪ್ರಮುಖ ರಾಜಕೀಯ ಪಕ್ಷಗಳಿಂದ ಸ್ಪಂದನೆ ಸಿಕ್ಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಗ್ರಾಮ ಮಟ್ಟದಲ್ಲಿ ಸಭೆ ಹಮ್ಮಿಕೊಂಡು ಜನಜಾಗೃತಿ ಅಭಿಯಾನ ನಡೆಸಲಾಗುತ್ತಿದೆ' ಎಂದರು. ನೋಟಾ ಅಭಿಯಾನದ ಬೇಡಿಕೆಗಳನ್ನು ಏ.7ರಂದು ಪ್ರಣಾಳಿಕೆ ರೂಪದಲ್ಲಿ ಬಿಡುಗಡೆ ಮಾಡಲಾಗುವುದು. ಏ.24ರಂದು ಸುಳ್ಯದಲ್ಲಿ ಲೋಕಸಭಾ ಕ್ಷೇತ್ರ ಮಟ್ಟದ ನೋಟಾ ಜನಜಾಗೃತಿ ಸಭೆ ಆಯೋಜಿಸಲಾಗಿದೆ ಎಂದು ಹೇಳಿದರು.

ಪರಿಸರ ಪ್ರಣಾಳಿಕೆ ಬಿಡುಗಡೆ ಇಂದು

ಬೆಂಗಳೂರು: 'ಪರಿಸರಕ್ಕಾಗಿ ನಾವು' ಸಂಘಟನೆ ವತಿಯಿಂದ ಇದೇ 6ರಂದು 'ಪರಿಸರ ಪ್ರಣಾಳಿಕೆಗಾಗಿ ಬೆಂಗಳೂರು ಸಮಾವೇಶ'ವನ್ನು ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಪರಿಸರ ಕಾರ್ಯಕರ್ತ ನಾಗೇಶ ಹೆಗಡೆ ಮಾಹಿತಿ ನೀಡಿದರು.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿವಿಧ ರಾಜಕೀಯ ಪಕ್ಷಗಳು ಮತದಾರರನ್ನು ಸೆಳೆಯಲು ಆಕರ್ಷಕ ಭರವಸೆಗಳನ್ನು ಹೊಂದಿರುವ ಪ್ರಣಾಳಿಕೆಗಳನ್ನು ಸಿದ್ಧಪಡಿಸುತ್ತಿವೆ. ಆದರೆ, ಈ ಬಾರಿ ಪರಿಸ್ಥಿತಿ ಎಂದಿನಂತಿಲ್ಲ. ನಾವೆಲ್ಲ ಒಂದು ಮಹಾ ಪರಿಸರ ಬಿಕ್ಕಟ್ಟಿನ ಅತ್ಯಂತ ಸಂದಿಗ್ಧ ಪರಿಸ್ಥಿತಿಯಲ್ಲಿ ಇದ್ದೇವೆ. ಆದ್ದರಿಂದ, ಎಲ್ಲ ಪಕ್ಷಗಳು ಪರಿಸರ ಸಂರಕ್ಷಣೆಯ ವಿಚಾರಗಳನ್ನು ತಮ್ಮ ಪ್ರಣಾಳಿಕೆಗಳಲ್ಲಿ ಸೇರಿಸಬೇಕು' ಎಂದು ಒತ್ತಾಯಿಸಿದರು.

'ಹವಾಮಾನ ಬದಲಾವಣೆ ಮತ್ತು ಪರಿಸರ ಸಂರಕ್ಷಣೆಯ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಬೇಕು. ಇಲ್ಲದಿದ್ದರೆ ಮತ್ತೆಂದೂ ಸರಿಪಡಿಸಲು ಸಾಧ್ಯವಾಗದ ಪರಿಸರ ಸಮಸ್ಯೆ ಎದುರಿಸಬೇಕಾಗುತ್ತದೆ' ಎಂದು ಎಚ್ಚರಿಸಿದರು.

ಚುನಾವಣೆಯಲ್ಲಿ ಭಾಗವಹಿಸುವ ಎಲ್ಲ ಪಕ್ಷಗಳು, ಪಕ್ಷ ಬೇಧ ಮರೆತು ಪ್ರಣಾಳಿಕೆಗಳಲ್ಲಿ ಪರಿಸರ ತುರ್ತು ಎದುರಿಸುವ ವಿಚಾರಗಳನ್ನು ಆದ್ಯತೆಯ ಮೇರೆಗೆ ಸೇರಿಸಿಕೊಳ್ಳಬೇಕು' ಎಂದರು.

ವರಿಷ್ಠರು ನೀಡುವ ಜವಾಬ್ದಾರಿ ನಿರ್ವಹಣೆ: ಪಕ್ಷ ಸೇರ್ಪಡೆ ಬಳಿಕ ಹೇಳಿಕೆ

ಬಿಜೆಪಿಯಿಂದ ಮೋಸ ಆಗಿಲ್ಲ: ಸುಮಲತಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಿಜೆಪಿಯಿಂದ ನನಗೆ ಮೋಸ ಆಗಿಲ್ಲ. ಮೋಸ ಆಗಿದ್ದರೆ ನಾನು ಅದೇ ಪಕ್ಷವನ್ನು ಏಕೆ ಸೇರುತ್ತಿದ್ದೆ' ಎಂದು ಮಂಡ್ಯ ಸಂಸದೆ ಸುಮಲತಾ ಅಂಬರೀಷ್ ಅವರು ಪ್ರಶ್ನಿಸಿದರು.

ಬಿಜೆಪಿಗೆ ಸೇರ್ಪಡೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ದೇಶದ ಅಭ್ಯುದಯಕ್ಕಾಗಿ ಹಗಲಿರುಳೆನ್ನದೇ ಶ್ರಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರಿಂದ ಪ್ರೇರಣೆಗೊಂಡು ಅವರ ಕೈ ಬಲಪಡಿಸಲು ಬಿಜೆಪಿಗೆ ಸೇರಿದ್ದೇನೆ' ಎಂದರು.

'ಬಿಜೆಪಿಯಲ್ಲಿ ಎಲ್ಲರೂ ಕಾರ್ಯಕರ್ತರೇ. ವರಿಷ್ಠರು ಯಾವ ಜವಾಬ್ದಾರಿ ಕೊಡುತ್ತಾರೋ ಅದನ್ನು ನಿರ್ವಹಿಸುತ್ತೇನೆ. ಆ ಬಗ್ಗೆ ನಾಯಕರು ತೀರ್ಮಾನಿಸುತ್ತಾರೆ' ಎಂದರು.

ಮಂಡ್ಯ ಸಂಸದೆ ಸುಮಲತಾ, ಕೊಪ್ಪಳದ ಮಾಜಿ ಸಂಸದ ಎಸ್‌.ಶಿವರಾಮೇಗೌಡ ಬಿಜೆಪಿ ಸೇರಿದರು. ಈ ಸಂದರ್ಭದಲ್ಲಿ ಸಂಸದ ಡಿ.ವಿ.ಸದಾನಂದಗೌಡ, ಬಿಜೆಪಿ ರಾಜ್ಯ ಉಸ್ತುವಾರಿ ರಾಧಾಮೋಹನ್ ದಾಸ್ ಅಗರವಾಲ್, ಬಿ.ವೈ.ಯಡಿಯೂರಪ್ಪ ಮತ್ತು ಬಿ.ವೈ.ವಿಜಯೇಂದ್ರ ಅವರು ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

'ಪುತ್ರ ಅಭಿಷೇಕ್ ಅಂಬರೀಷ್ ಸಿನಿಮಾ ರಂಗದಲ್ಲಿಯೇ ಮುಂದುವರೆಯುತ್ತಾರೆ. ಸದ್ಯಕ್ಕೆ ರಾಜಕೀಯಕ್ಕೆ ಬರುವುದಿಲ್ಲ. ಚಿತ್ರನಟರಾದ ದರ್ಶನ್, ಯಶ್ ಬೆಂಬಲ ಸದ್ಯಕ್ಕೆ ಅಪ್ರಸ್ತುತ. ಪಕ್ಷಕ್ಕಿಂತ ನಿಮ್ಮ ನಿರ್ಧಾರ ಮುಖ್ಯ ಎಂದು ಅವರು ನನಗೆ ತಿಳಿಸಿದ್ದಾರೆ' ಎಂದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ, 'ನರೇಂದ್ರ ಮೋದಿ ಅವರ ನಾಯಕತ್ವವನ್ನು ಇಡೀ ದೇಶವೇ ಮೆಚ್ಚುತ್ತಿದೆ. 400 ಸ್ಥಾನ ಗೆಲ್ಲಬೇಕು ಎಂಬ ಅಪೇಕ್ಷೆ ಮೋದಿ ಅವರದು ಮಾತ್ರವಲ್ಲ, ಜನಸಾಮಾನ್ಯರದು ಆಗಿದೆ' ಎಂದು ಹೇಳಿದರು.

ಸುಮಲತಾ ಅಲ್ಲದೇ, ಕೊಪ್ಪಳ ಕ್ಷೇತ್ರದ ಮಾಜಿ ಸಂಸದ ಎಸ್. ಶಿವರಾಮೇಗೌಡ, ವಿಜಯಪುರ ಜಿಲ್ಲೆ ಯುವ ನಾಯಕ, ಸಚಿವ ಶಿವಾನಂದ ಪಾಟೀಲರ ಕುಟುಂಬದ ಹರ್ಷಗೌಡ ಶಿವಶರಣ ಪಾಟೀಲ, ಮಾಜಿ ಕ್ರಿಕೆಟ್ ಪಟು ದೊಡ್ಡಗಣೇಶ್ ಬಿಜೆಪಿಗೆ ಸೇರಿದರು.

ರಾಹುಕಾಲ ಮುಗಿದ ಬಳಿಕ ಸೇರ್ಪಡೆ

ಸುಮಲತಾ ಅವರ ಸೇರ್ಪಡೆ ಬೆಳಿಗ್ಗೆ 11.30 ಕ್ಕೆ ನಡೆಯಬೇಕಿತ್ತು. ಆದರೆ ಸುಮಲತಾ ಬರೋಬ್ಬರಿ ಒಂದು ಗಂಟೆ ತಡವಾಗಿ ಕಾರ್ಯಕ್ರಮಕ್ಕೆ ಬಂದರು. ಇದಕ್ಕೆ ಮುಖ್ಯ ಕಾರಣವೆಂದರೆ, ಬೆಳಿಗ್ಗೆ 10.30 ರಿಂದ ರಾಹುಕಾಲ ಆರಂಭವಾಗಿತ್ತು. ಪಕ್ಷದ ಎಲ್ಲ ಹಿರಿಯ ನಾಯಕರು ಕಚೇರಿಗೆ ಬಂದು ಕುಳಿತಿದ್ದರೂ ಸುಮಲತಾ ಬಂದಿರಲಿಲ್ಲ. ರಾಹುಕಾಲ ಮುಗಿದ ಬಳಿಕ ಕಚೇರಿಗೆ ಬಂದರು ಎಂದು ಮೂಲಗಳು ತಿಳಿಸಿವೆ.

ಶಾಖಾಘಾತ: ನಿರ್ವಹಣೆಗೆ ಸಿದ್ಧತೆ

ಒಂದನೇ ಪುಟದಿಂದ...

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ ಶಾಖಾಘಾತಕ್ಕೆ ಸಂಬಂಧಿಸಿದಂತೆ 521 ಪ್ರಕರಣಗಳು ಇದುವರೆಗೂ ವರದಿಯಾಗಿವೆ. ಈ ರೀತಿಯ ಪ್ರಕರಣಗಳಲ್ಲಿ ಹೆಚ್ಚಿನ ನಿಗಾ ವಹಿಸಲು ಇಲಾಖೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ತಾಪಮಾನ ಹೆಚ್ಚಳದಿಂದ ಅಗ್ನಿ ಅವಘಡಗಳು ಸಂಭವಿಸುವ ಸಾಧ್ಯತೆಯಿದೆ. ಅಗ್ನಿ ಅವಘಡಗಳಿಗೆ ಚಿಕಿತ್ಸೆ ನೀಡಲು ಸನ್ನದ್ಧವಾಗಿರುವಂತೆ ಆಸ್ಪತ್ರೆಗಳಿಗೆ ಸೂಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

ರಾಜ್ಯದಲ್ಲಿ ಏಪ್ರಿಲ್ 4ರ ವರೆಗೆ ಒಟ್ಟು ಆರು (ಬಿಬಿಎಂಪಿ ವ್ಯಾಪ್ತಿಯಲ್ಲಿ 3, ಬೆಂಗಳೂರು ನಗರ 1, ರಾಮನಗರ 1) ಕಾಲರಾ ಪ್ರಕರಣಗಳು ದೃಢಪಟ್ಟಿವೆ. ಮಾರ್ಚ್‌ನಲ್ಲೇ ಐದು ಪ್ರಕರಣಗಳು ವರದಿಯಾಗಿವೆ. ಹಿಂದಿನ ಮೂರು ವರ್ಷಗಳ ಮೊದಲ ತ್ರೈಮಾಸಿಕದ ಅಂಕಿ–ಅಂಶಗಳಿಗೆ ಹೋಲಿಸಿದರೆ ವಾಂತಿ–ಭೇದಿ, ಕಾಲರಾ ಪ್ರಕರಣಗಳಲ್ಲಿ ಯಾವುದೇ ಏರಿಕೆಯಾಗಿಲ್ಲ. ಬೇಸಿಗೆ ಕಾಲದಲ್ಲಿ ನೀರಿನ ಅಭಾವ ಹಾಗೂ ತಾಪಮಾನ ಹೆಚ್ಚಳ ಕಾರಣದಿಂದ ಅತಿಸಾರ, ಕಾಲರಾ, ವಾಂತಿ– ಭೇದಿ ಲಕ್ಷಣಗಳು ಕಾಣಿಸಿಕೊಳ್ಳಬಹುದು. ಇಂತಹ ಪ್ರಕರಣಗಳು ವರದಿಯಾದರೆ ಚಿಕಿತ್ಸೆಗೆ ಆಸ್ಪತ್ರೆಯಲ್ಲಿ ಅಗತ್ಯ ಔಷಧ ದಾಸ್ತಾನಿದೆ' ಎಂದು ಮಾಹಿತಿ ನೀಡಿದರು.

'ಭಾರತ' ಗೆಲ್ಲಲು 'ಕೈ' ನ್ಯಾಯಪತ್ರ

ಒಂದನೇ ಪುಟದಿಂದ...

ಕಾಂಗ್ರೆಸ್ ಕೇಂದ್ರ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮಾಜಿ ಅಧ್ಯಕ್ಷರಾದ ಸೋನಿಯಾ ಗಾಂಧಿ ಹಾಗೂ ರಾಹುಲ್ ಗಾಂಧಿ ಅವರು 48 ಪುಟಗಳ ಪ್ರಣಾಳಿಕೆಯನ್ನು ಬಿಡುಗಡೆ ಮಾಡಿದರು.

ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್ ಹಾಗೂ ಪ್ರಣಾಳಿಕೆ ಸಮಿತಿಯ ಅಧ್ಯಕ್ಷ ಪಿ.ಚಿದಂಬರಂ ಹಾಜರಿದ್ದರು. ಈ ಹಿಂದೆ ರಾಹುಲ್ ಗಾಂಧಿ ಅವರ 'ಭಾರತ್ ಜೋಡೊ ನ್ಯಾಯ ಯಾತ್ರೆ' ಸಂದರ್ಭದಲ್ಲಿ ಘೋಷಿಸಿದ ಗ್ಯಾರಂಟಿಗಳು ಸಹ ಪ್ರಣಾಳಿಕೆಯ ಭಾಗವಾಗಿವೆ.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರದ ಹತ್ತು ವರ್ಷಗಳ ಆಡಳಿತದ ವಿರುದ್ಧ ದೋಷಾರೋಪಣೆ ಹೊರಿಸಿರುವ 'ಕೈ' ಪಾಳಯ, ಅಧಿಕಾರಕ್ಕೆ ಬಂದ ಬಳಿಕ ಪಕ್ಷಕೈಗೊಳ್ಳಲಿರುವ ಸುಧಾರಣಾ ಕ್ರಮಗಳನ್ನು ಪ್ರಣಾಳಿಕೆಯಲ್ಲಿ ತಿಳಿಸಿದೆ. 'ಇದು ರೈತರು, ಕಾರ್ಮಿಕರು, ಮಹಿಳೆಯರು, ಯುವಕರು, ಬಡವರು ಮತ್ತು ವಂಚಿತ ವರ್ಗಗಳಿಗೆ ಅಭಿವೃದ್ಧಿಯ ಬಾಗಿಲು ತೆರೆಯಲಿದೆ' ಎಂದು ಖರ್ಗೆ ಪ್ರತಿಪಾದಿಸಿದರು.

ಬಿಜೆಪಿಯ ನೆಚ್ಚಿನ ಯೋಜನೆಯಾದ 'ಒಂದು ರಾಷ್ಟ್ರ– ಒಂದು ಚುನಾವಣೆ'ಯನ್ನು ಕಾಂಗ್ರೆಸ್ ತಿರಸ್ಕರಿಸಿದೆ. ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಸಂವಿಧಾನ ಮತ್ತು ಸಂಸದೀಯ ಪ್ರಜಾಪ್ರಭುತ್ವದ ಸಂಪ್ರದಾಯಗಳಿಗೆ ಅನುಗುಣವಾಗಿ ಚುನಾವಣೆಗಳನ್ನು ನಡೆಸಲಾಗುತ್ತದೆ ಎಂದು ಕಾಂಗ್ರೆಸ್ ಹೇಳಿದೆ. ಜನಪ್ರತಿನಿಧಿಗಳ ಪಕ್ಷಾಂತರ ಪ್ರವೃತ್ತಿಗೆ ಕಡಿವಾಣ ಹಾಕಲು ಇತರ ಪಕ್ಷಗಳಿಗೆ ಪಕ್ಷಾಂತರ ಮಾಡುವ ಶಾಸಕರನ್ನು ಸ್ವಯಂಚಾಲಿತವಾಗಿ ಅನರ್ಹಗೊಳಿಸಲು ಸಂವಿಧಾನಕ್ಕೆ ತಿದ್ದುಪಡಿ ತರುವುದಾಗಿ ಕಾಂಗ್ರೆಸ್ ಅಭಯ ನೀಡಿದೆ.

ಪ್ರಣಾಳಿಕೆಯಲ್ಲಿ ವಿವರಿಸಿರುವ ಆರ್ಥಿಕ ತತ್ವವು 'ಕೆಲಸ, ಸಂಪತ್ತು ಮತ್ತು ಕಲ್ಯಾಣ'ವನ್ನು ಆಧರಿಸಿದೆ. ಇದು ಉದ್ಯೋಗ ಒದಗಿಸುವುದು, ಸಂಪತ್ತು ಸೃಷ್ಟಿ ಹಾಗೂ ಕಲ್ಯಾಣ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಗಮನ ಕೇಂದ್ರೀಕರಿಸಿದೆ.

'ನ್ಯಾಯಪತ್ರವು ಜನರಿಗೆ ಭಯದಿಂದ ಮುಕ್ತಿ, ಆಹಾರ ಮತ್ತು ಉಡುಪು, ಪ್ರೀತಿ, ವಿವಾಹ, ಪ್ರಯಾಣ ಮತ್ತು ದೇಶದ ಯಾವುದೇ ಭಾಗದಲ್ಲಿ ನೆಲೆಸುವಂತಹ ವೈಯಕ್ತಿಕ ಆಯ್ಕೆಗಳಲ್ಲಿ ಹಸ್ತಕ್ಷೇಪ ಮಾಡುವುದಿಲ್ಲ ಎಂಬ ವಾಗ್ದಾನ ನೀಡುತ್ತದೆ' ಎಂದಿದೆ.

ವಿರೋಧ ಪಕ್ಷಗಳ ನಾಯಕರ ಮೇಲೆ ಕೇಂದ್ರ ತನಿಖಾ ಸಂಸ್ಥೆಗಳು ಮುಗಿ ಬಿದ್ದಿರುವುದನ್ನು ಬಿಜೆಪಿ ಪ್ರಾಯೋಜಿತ ಎಂದು ಬಣ್ಣಿಸಿರುವ ಪಕ್ಷವು, ಕಾನೂನಿನ ದುರ್ಬಳಕೆ, ಅನಿಯಂತ್ರಿತ ಶೋಧಗಳು, ನಿರಂಕುಶ ಬಂಧನಗಳನ್ನು ಕೊನೆಗೊಳಿಸುವುದಾಗಿ ಅಭಯ ನೀಡಿದೆ.

ನ್ಯಾಯಾಧೀಶರು, ಸರ್ಕಾರದ ಕಾರ್ಯದರ್ಶಿಗಳು, ಉನ್ನತ ಶ್ರೇಣಿಯ ಪೊಲೀಸ್ ಅಧಿಕಾರಿಗಳು, ಕಾನೂನು ಅಧಿಕಾರಿಗಳು, ಕಂಪನಿಗಳ ನಿರ್ದೇಶಕ ಹುದ್ದೆಗಳಲ್ಲಿ ಹೆಚ್ಚಿನ ಸಂಖ್ಯೆಯ ಮಹಿಳೆಯರ ನೇಮಿಸುವ ಭರವಸೆ ನೀಡಿದೆ. ಸಂಸದೀಯ ಪರಿಶೀಲನೆ ಹಾಗೂ ಚರ್ಚೆಯಿಲ್ಲದೆ ಬಿಜೆಪಿ ಸರ್ಕಾರ ಜಾರಿಗೊಳಿಸಿದ ಎಲ್ಲ 'ಜನವಿರೋಧಿ' ಕಾನೂನುಗಳನ್ನು ಆಮೂಲಾಗ್ರವಾಗಿ ಪರಿಶೀಲನೆ ನಡೆಸಿ ಬದಲಾಯಿಸಲಾಗುವುದು ಎಂದು ಪಕ್ಷ ತಿಳಿಸಿದೆ.

ಪ್ರಣಾಳಿಕೆಯಲ್ಲಿರುವ ಹಲವಾರು ವಾಗ್ದಾನಗಳು 'ಉದಯಪುರ ಚಿಂತನ ಶಿಬಿರ– 2022' ಹಾಗೂ 'ರಾಯಪುರ ಸಭೆ– 2023'ರ ನಂತರ ಪಕ್ಷ ತೆಗೆದುಕೊಂಡ ನಿರ್ಣಯಗಳು ಹಾಗೂ ಘೋಷಣೆಗಳ ಪುನರಾವರ್ತನೆಯಾಗಿದೆ.

ಪೌರತ್ವ ಕಾಯ್ದೆ, ಒಪಿಎಸ್ ಉಲ್ಲೇಖವಿಲ್ಲ

ನರೇಂದ್ರ ಮೋದಿ ಸರ್ಕಾರದಿಂದ ಲೋಪವಾಗಿದೆ ಎಂದು ಕಾಂಗ್ರೆಸ್ ಆರೋಪಿಸಿರುವ ರಫೇಲ್ ಯುದ್ಧ ವಿಮಾನ ಖರೀಸಿ, ಪೆಗಾಸಸ್ ಕುತಂತ್ರಾಂಶ ಬಳಸಿ ಬೇಹುಗಾರಿಕೆ, ನೋಟು ರದ್ದತಿ, ಚುನಾವಣಾ ಬಾಂಡ್ ಹೀಗೆ ಹಲವು ವಿಚಾರಗಳನ್ನು ಪ್ರಣಾಳಿಕೆಯಲ್ಲಿ ಪ್ರಸ್ತಾಪಿಸಲಾಗಿದೆ. ಆದರೆ, ಪಕ್ಷವು ಹೋರಾಡಿದ ಕೆಲವು ವಿಷಯಗಳಿಗೆ ಪ್ರಣಾಳಿಕೆಯಲ್ಲಿ ಜಾಗ ಸಿಕ್ಕಿಲ್ಲ.

'ಪರಿಸ್ಥಿತಿ ಬದಲಿಸದೆ ಕೈ' ಎಂಬ ಟ್ಯಾಗ್‌ಲೈನ್ ಹೊಂದಿರುವ ಪ್ರಣಾಳಿಕೆಯಲ್ಲಿ ವಿವಾದಾತ್ಮಕ ಪೌರತ್ವ (ತಿದ್ದುಪಡಿ) ಕಾಯ್ದೆ, ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯಡಿ ನೀಡಲಾಗಿದ್ದ ವಿಶೇಷ ಸ್ಥಾನಮಾನದ ಮರುಸ್ಥಾಪನೆ ಹಾಗೂ ಹಳೆಯ ಪಿಂಚಣಿ ಯೋಜನೆ (ಒಪಿಎಸ್) ಬಗ್ಗೆ ಉಲ್ಲೇಖ ಇಲ್ಲ. ಆದರೆ, ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯ ಸ್ಥಾನಮಾನವನ್ನು ತಕ್ಷಣವೇ ಮರುಸ್ಥಾಪನೆ ಮಾಡಲಾಗುವುದು ಎಂದು ಪಕ್ಷ ಭರವಸೆ ನೀಡಿದೆ.

ಆಡಳಿತಾರೂಢ ಬಿಜೆಪಿಯು ಪೌರತ್ವವನ್ನು ನೀಡಲು ಧರ್ಮವನ್ನು ಮಾನದಂಡವಾಗಿ ಬಳಸಿಕೊಳ್ಳುತ್ತಿದೆ ಎಂಬ ಕಾರಣ ನೀಡಿ ಕಾಂಗ್ರೆಸ್ ಪಕ್ಷವು ಸಂಸತ್ತಿನ ಒಳಗೆ ಹಾಗೂ ಹೊರಗೆ ಪೌರತ್ವ ತಿದ್ದುಪಡಿ ಕಾಯ್ದೆಯನ್ನು ವಿರೋಧಿಸಿದೆ. ಈ ಕಾನೂನು ಮುಸ್ಲಿಮರನ್ನು ಬಲಿಪಶು ಮಾಡುವ ಹುನ್ನಾರ ಹೊಂದಿದೆ ಎಂಬುದು ಕಾಂಗ್ರೆಸ್‌ನ ಆರೋಪ. ಈ ವಿಷಯದ ಬಗ್ಗೆ ಚುನಾವಣಾ ಕಣದಲ್ಲಿ ಪ್ರಸ್ತಾಪಿಸಿದರೆ ಹಿಂದೂ ಮತಗಳ ಧ್ರುವೀಕರಣ ಆಗಬಹುದು ಎಂಬ ಭಯ ಕಾಂಗ್ರೆಸ್ ನಾಯಕರಿಗೆ ಇದೆ.

'ಹಳೆಯ ಪಿಂಚಣಿ ಯೋಜನೆ'ಯು ವಿಧಾನಸಭಾ ಚುನಾವಣೆಗಳಲ್ಲಿ ಪಕ್ಷದ ಪ್ರಮುಖ ಚುನಾವಣಾ ವಿಷಯವಾಗಿತ್ತು. ಈ ವಿಷಯ ಹಾಗೂ ಹೊಸ ಪಿಂಚಣಿ ಯೋಜನೆಯನ್ನು ವಿರೋಧಿಸುವ ನಿಲುವು ಹಿಮಾಚಲ ಪ್ರದೇಶದಲ್ಲಿ ಪಕ್ಷದ ಗೆಲುವಿಗೆ ಕಾರಣವಾಗಿತ್ತು.

'ಎನ್‌ಪಿಎಸ್ ಪರಿಶೀಲಿಸಲು ಕೇಂದ್ರ ಸರ್ಕಾರ ಈಗಾಗಲೇ ಸಮಿತಿ ರಚಿಸಿದೆ. ಇಂತಹ ಸನ್ನಿವೇಶದಲ್ಲಿ ಆ ವಿಷಯದ ಬಗ್ಗೆ ಪ್ರಸ್ತಾಪಿಸುವುದು ಸೂಕ್ತವಲ್ಲ' ಎಂದು ಪಿ.ಚಿದಂಬರಂ ಸಮಜಾಯಿಷಿ ನೀಡಿದರು.

ವಿದ್ಯುನ್ಮಾನ ಮತ ಯಂತ್ರಗಳ (ಇವಿಎಂ) ಬಗ್ಗೆ ಕಾಂಗ್ರೆಸ್ ಸೇರಿದಂತೆ ವಿರೋಧ ಪಕ್ಷಗಳಿಗೆ ತಕರಾರು ಇದೆ. ಮತಪತ್ರ ವ್ಯವಸ್ಥೆ ಮತ್ತೆ ಬರಬೇಕು ಎಂಬುದು ಕಾಂಗ್ರೆಸ್‌ನ ಹಲವು ನಾಯಕರ ಹಕ್ಕೊತ್ತಾಯ. ಇದರ ನಡುವೆಯೇ, ಪಕ್ಷ ಅಧಿಕಾರಕ್ಕೆ ಬಂದರೆ ಮತಪತ್ರ ವ್ಯವಸ್ಥೆಯನ್ನು ಮರಳಿ ಜಾರಿಗೊಳಿಸುವುದಾಗಿ ಭರವಸೆ ನೀಡುವ ಗೋಜಿಗೆ ಹೋಗಿಲ್ಲ. ಅದರ ಬದಲು, ಇವಿಎಂಗಳ 'ದಕ್ಷತೆ' ಮತ್ತು ಮತಪತ್ರದ 'ಪಾರದರ್ಶಕತೆ'ಯನ್ನು ಸಂಯೋಜಿಸಲು ಚುನಾವಣಾ ಕಾನೂನುಗಳಿಗೆ ತಿದ್ದುಪಡಿ ಮಾಡುವ ಭರವಸೆ ನೀಡುವ ಮೂಲಕ ಸಮತೋಲನದ ನಡೆ ಇಟ್ಟಿದೆ.

'ಎಡ್ಯುವರ್ಸ್' ಇಂದು, ನಾಳೆ

ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಬಳಗದ ಶೈಕ್ಷಣಿಕ ಮೇಳ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಜಾವಾಣಿ' ಹಾಗೂ 'ಡೆಕ್ಕನ್ ಹೆರಾಲ್ಡ್' ವತಿಯಿಂದ ಆಯೋಜಿಸಿರುವ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ 'ಎಡ್ಯುವರ್ಸ್' ಇದೇ 6 ಮತ್ತು 7 ರಂದು ನಡೆಯಲಿದೆ.

ನಗರದ ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ (ಗೇಟ್ 2/3) ಎರಡೂ ದಿನ ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಮೇಳ ನಡೆಯಲಿದ್ದು, ಎಲ್ಲರಿಗೂ ಮುಕ್ತ ಆಹ್ವಾನವಿದೆ.

ಹದಿಮೂರು ವರ್ಷಗಳಿಂದ ಈ ಶೈಕ್ಷಣಿಕ ಮೇಳವನ್ನು ಹಮ್ಮಿಕೊಳ್ಳಲಾಗುತ್ತಿದೆ. ಈ ಮೇಳದಲ್ಲಿ ಶಿಕ್ಷಣ ಕ್ಷೇತ್ರದ ಹಲವು ಪರಿಣತರು, ತಜ್ಞರು ಪಾಲ್ಗೊಳ್ಳುತ್ತಿದ್ದಾರೆ. ಪರಿಣತರೊಂದಿಗೆ ಸಂವಾದ, ಉಪನ್ಯಾಸ ಮತ್ತು ಚರ್ಚೆಗಳನ್ನು ಆಯೋಜಿಸ ಲಾಗುತ್ತದೆ. ಎರಡೂ ದಿನ ಸಿಇಟಿ ಹಾಗೂ ಕಾಮೆಡ್–ಕೆ ಕುರಿತು ವಿಶೇಷ ಗೋಷ್ಠಿಗಳು ನಡೆಯಲಿವೆ.

50ಕ್ಕೂ ಹೆಚ್ಚಿನ ಶಿಕ್ಷಣ ಸಂಸ್ಥೆಗಳು ಈ ಮೇಳದಲ್ಲಿ ಪಾಲ್ಗೊಳ್ಳಲಿವೆ. ಪಿಯುಸಿ ನಂತರ ಮುಂದೇನು ಎಂಬ ಪ್ರಶ್ನೆಗೆ ಮೇಳದಲ್ಲಿ ಪರಿಹಾರ ಪಡೆಯಬಹುದಾಗಿದೆ. ಜೊತೆಗೆ, ಪಿಯುಸಿ ಅಥವಾ ತತ್ಸಮಾನ ವಿದ್ಯಾಭ್ಯಾಸ ಮುಗಿಸಿದ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗಳಿಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿ ದೊರೆಯಲಿದೆ.

ಆಸಕ್ತ ವಿದ್ಯಾರ್ಥಿಗಳು www.deccanherald.com/eduverse ಜಾಲತಾಣಕ್ಕೆ ಲಾಗಿನ್ ಆಗಿ, ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ, ನಿಮ್ಮ ಸ್ಥಳವನ್ನು ಕಾಯ್ದಿರಿಸಿಕೊಳ್ಳಿ.

Eduverse
A Premier Education Expo

ಸಿಇಟಿ ಮತ್ತು ಕಾಮೆಡ್–ಕೆ ಪರೀಕ್ಷಾರ್ಥಿಗಳಿಗೆ ಎರಡೂ ದಿನ ಅಣಕು ಪರೀಕ್ಷೆ ಹಮ್ಮಿಕೊಳ್ಳಲಾಗುವುದು. ಈ ಅಣಕು ಪರೀಕ್ಷೆಯಲ್ಲಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಒಂದು ಲಕ್ಷ ಮೌಲ್ಯದ ಬಹುಮಾನಗಳನ್ನು ಗೆಲ್ಲುವ ಅವಕಾಶಗಳಿವೆ.

ವಿಶೇಷ ಉಪನ್ಯಾಸಗಳು: ಎರಡು ದಿನಗಳ ಮೇಳದಲ್ಲಿ ಶಿಕ್ಷಣ ತಜ್ಞ ಗುರುರಾಜ ಕರ್ಜಗಿ ಅವರು ವಿಶೇಷ ಉಪನ್ಯಾಸ ನೀಡಲಿದ್ದಾರೆ. 6ರಂದು ಬೆಳಿಗ್ಗೆ 10ಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿವೃತ್ತ ಪಿಆರ್‌ಒ ಎ.ಎಸ್. ರವಿ ಅವರಿಂದ ಸಿಇಟಿ ಕುರಿತ ವಿಶೇಷ ಉಪನ್ಯಾಸವಿದೆ. ಸಿ.ಇ.ಟಿ ಕೌನ್ಸೆಲಿಂಗ್‌ಗೆ ಸಿದ್ಧತೆ ಹೇಗೆ? ಬೇಕಾಗುವ ದಾಖಲೆಗಳು ಯಾವುವು? ಎಂಜಿನಿಯರಿಂಗ್ ಕಾಲೇಜು ಆಯ್ಕೆ ಹೇಗೆ? ಎಂಬ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಈ ಗೋಷ್ಠಿಯಲ್ಲಿ ಉತ್ತರ ಸಿಗಲಿದೆ.

7ರಂದು ಕಾಮೆಡ್–ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಎಸ್. ಕುಮಾರ್ ಅವರು ಕಾಮೆಡ್ –ಕೆ ಕುರಿತು ಮಾಹಿತಿ ನೀಡಲಿದ್ದಾರೆ. ಈ ಗೋಷ್ಠಿಯಲ್ಲಿ ಕೋರ್ಸ್‌ಗಳ ಆಯ್ಕೆ, ಉದ್ಯೋಗಾವಕಾಶ, ಕಾಲೇಜಿನಲ್ಲಿರುವ ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದಾಗಿದೆ.

ಇದರೊಂದಿಗೆ 'ರೇಡಿಯೊ ಸಿಟಿ' ಎಫ್‌ಎಂನ ಆರ್‌ಜೆ ರಜಸ್ ಅವರು ರೇಡಿಯೊ ಹಾಗೂ ವಾಯ್ಸ್ ಇಂಡಸ್ಟ್ರಿಯಲ್ಲಿರುವ ಅವಕಾಶಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ. ಅಪೊಲೊ ನ್ಯಾಷನಲ್ ಸ್ಕೂಲ್‌ನ ಉಪಾಧ್ಯಕ್ಷೆ ಐಶ್ವರ್ಯಾ ಡಿ.ಕೆ. ಎಸ್ ಹೆಗ್ಡೆ ಅವರು 'ಕಲಿಕೆ ಹಾಗೂ ಬೆಳವಣಿಗೆ' ಕುರಿತು ಉಪನ್ಯಾಸ ನೀಡಲಿದ್ದಾರೆ.

60 ನಾಮಪತ್ರ ತಿರಸ್ಕೃತ

ಬೆಂಗಳೂರು: ಲೋಕಸಭಾ ಚುನಾವಣೆಗೆ ಉಮೇದುವಾರಿಕೆ ಬಯಸಿ ನಾಮಪತ್ರ ಸಲ್ಲಿಸಿದ್ದ 48 ಅಭ್ಯರ್ಥಿಗಳ ನಾಮಪತ್ರಗಳು ತಿರಸ್ಕೃತವಾಗಿವೆ.

ರಾಜ್ಯದಲ್ಲಿ ನಡೆಯುತ್ತಿರುವ ಮೊದಲ ಹಂತದ 14 ಕ್ಷೇತ್ರಗಳಲ್ಲಿ ಸ್ಪರ್ಧಿಸಲು 358 ಅಭ್ಯರ್ಥಿಗಳು ಸಲ್ಲಿಸಿದ್ದ 492 ನಾಮಪತ್ರಗಳಲ್ಲಿ ಬೆಂಗಳೂರು ದಕ್ಷಿಣ ಕ್ಷೇತ್ರದ 49 ನಾಮಪತ್ರಗಳನ್ನು ಹೊರತುಪಡಿಸಿ, ಉಳಿದ ಕ್ಷೇತ್ರಗಳ 443 ನಾಮಪತ್ರಗಳನ್ನು ಶುಕ್ರವಾರ ಪರಿಶೀಲನೆ ನಡೆಯಿತು. ಒಟ್ಟು 60 ನಾಮಪತ್ರಗಳನ್ನು ತಿರಸ್ಕರಿಸಲಾಗಿದೆ. 276 ಅಭ್ಯರ್ಥಿಗಳ 384 ನಾಮಪತ್ರಗಳನ್ನು ಅಂಗೀಕರಿಸಲಾಗಿದೆ. ನಾಮಪತ್ರ ಹಿಂಪಡೆಯಲು ಏ.8 ಕೊನೆಯ ದಿನ.

ಕೆಪಿಸಿಸಿ ಕಾರ್ಯಾಧ್ಯಕ್ಷರ ಪದಗ್ರಹಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಸಿಸಿಯ ನೂತನ ಕಾರ್ಯಾಧ್ಯಕ್ಷರಾದ ತನ್ವೀರ್ ಸೇಠ್, ಜಿ.ಸಿ. ಚಂದ್ರಶೇಖರ್, ವಿನಯ ಕುಲಕರ್ಣಿ, ಮಂಜುನಾಥ ಭಂಡಾರಿ, ವಸಂತಕುಮಾರ್ ಮತ್ತು ಚುನಾವಣಾ ಪ್ರಚಾರ ಸಮಿತಿಯ ನೂತನ ಅಧ್ಯಕ್ಷ ವಿನಯ ಕುಮಾರ್ ಸೊರಕೆ ಅವರು ಶುಕ್ರವಾರ ಪದಗ್ರಹಣ ಮಾಡಿದರು.

ಕೆಪಿಸಿಸಿ ಕಚೇರಿಯಲ್ಲಿ ನಡೆದ ಸಮಾರಂಭದಲ್ಲಿ ಆರು ನೂತನ ಪದಾಧಿಕಾರಿಗಳು ಅಧಿಕಾರ ಸ್ವೀಕರಿಸಿದರು. ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಪ್ರಚಾರ ಸಮಿತಿಯ ನಿಕಟಪೂರ್ವ ಅಧ್ಯಕ್ಷರೂ ಆಗಿರುವ ಎಂ.ಬಿ. ಪಾಟೀಲ, ಸಚಿವರಾದ ಜಿ. ಪರಮೇಶ್ವರ, ಈಶ್ವರ ಖಂಡ್ರೆ, ಬಿ.ಜೆಡ್. ಜಮೀರ್ ಅಹಮದ್ ಖಾನ್ ಸೇರಿದಂತೆ ಹಲವು ನಾಯಕರು ಪಾಲ್ಗೊಂಡಿದ್ದರು.

ಸಚಿವರಾದ ಸತೀಶ ಜಾರಕಿಹೊಳಿ, ರಾಮಲಿಂಗಾ ರೆಡ್ಡಿ, ಈಶ್ವರ ಖಂಡ್ರೆ, ಚಿತ್ರದುರ್ಗ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಬಿ.ಎನ್.ಚಂದ್ರಪ್ಪ ಮತ್ತು ವಿಧಾನ ಪರಿಷತ್‌ನಲ್ಲಿ ಸರ್ಕಾರದ ಮುಖ್ಯ ಸಚೇತಕ ಸಲೀಂ ಅಹಮದ್ ಈ ಹಿಂದೆ ಕೆಪಿಸಿಸಿ ಕಾರ್ಯಾಧ್ಯಕ್ಷರಾಗಿದ್ದರು. ಅವರ ಬದಲಿಗೆ ಐವರನ್ನು ನೂತನ ಕಾರ್ಯಾಧ್ಯಕ್ಷರನ್ನಾಗಿ ನೇಮಿಸಿ ಎಐಸಿಸಿ ವಾರದ ಹಿಂದೆ ಆದೇಶ ಹೊರಡಿಸಿತ್ತು.

ನೂತನ ಕಾರ್ಯಾಧ್ಯಕ್ಷರನ್ನು ಸ್ವಾಗತಿಸಿದ ಶಿವಕುಮಾರ್, 'ಹಿಂದೆ ಕೆಪಿಸಿಸಿ ಕಾರ್ಯಾಧ್ಯಕ್ಷರ ಹುದ್ದೆಯಲ್ಲಿದ್ದವರು ಸಮರ್ಥವಾಗಿ ಕೆಲಸ ಮಾಡಿದ್ದಾರೆ. ಕೋವಿಡ್ ಅವಧಿಯಲ್ಲಿ ರಾಜ್ಯದ ಜನರ ಜತೆ ನಿಂತು ಸೇವೆ ಸಲ್ಲಿಸಿದ್ದರು' ಎಂದರು.

'ಪಕ್ಷ ಸಂಘಟನೆಯಲ್ಲಿ ಶ್ರಮ ವಹಿಸುವವರಿಗೆ ಉತ್ತಮ ಸ್ಥಾನಗಳು ದೊರಕುತ್ತವೆ. ಹೊಸ ಕಾರ್ಯಾಧ್ಯಕ್ಷರ ಅವಧಿಯಲ್ಲಿ ಪಕ್ಷವು ಮತ್ತಷ್ಟು ಎತ್ತರಕ್ಕೆ ಏರಬೇಕು. ನೀವು ಇಲ್ಲಿ ಸಾಕ್ಷ್ಯ ಬಿಟ್ಟು ಹೋಗಬೇಕು' ಎಂದರು.

ಯುದ್ಧದ ಸಂದರ್ಭದಲ್ಲಿ ನಮಗೆ ನೀಡಿರುವ ಜವಾಬ್ದಾರಿಯನ್ನು ನಿರ್ವಹಿಸುವುದು ಸವಾಲಿನ ಕೆಲಸ. ಚುನಾವಣೆಯ ಸಂದರ್ಭದಲ್ಲಿ ಭಿನ್ನಾಭಿಪ್ರಾಯಗಳನ್ನು ಮರೆತು ಪಕ್ಷದ ಗೆಲುವಿಗಾಗಿ ಹೋರಾಡೋಣ.
ತನ್ವೀರ್ ಸೇಠ್

ವಿಧಾನ ಪರಿಷತ್ ಸದಸ್ಯನಾಗಲು ಪ್ರಯತ್ನಿಸುತ್ತಿದ್ದ ನನ್ನನ್ನು ರಾಜ್ಯಸಭಾ ಸದಸ್ಯನನ್ನಾಗಿ ಮಾಡಿದರು. ಕಾರ್ಯಾಧ್ಯಕ್ಷ ಹುದ್ದೆ ನೀಡಿರುವುದು ಎಲ್ಲದಕ್ಕಿಂತಲೂ ಸಂತೋಷವಾಗಿದೆ.
ಜಿ.ಸಿ. ಚಂದ್ರಶೇಖರ್

ಜನರನ್ನು ಒಡೆದು ಆಳುವ ನೀತಿಯ ಮೂಲಕ ಅಧಿಕಾರ ನಡೆಸುತ್ತಿದೆ ಬಿಜೆಪಿ. ಸನಾತನ ಸಿದ್ಧಾಂತಕ್ಕೆ ನಾವು ತಡೆ ಹಾಕಬೇಕಾಗಿದೆ. ಎಲ್ಲರನ್ನು ಸಮಾನವಾಗಿ ಕಾಣುವ ಸಿದ್ಧಾಂತಕ್ಕೆ ನಾವು ಮತ್ತೆ ಜೀವ ನೀಡಬೇಕಾಗಿದೆ.
ವಸಂತ ಕುಮಾರ್

ಬಿಜೆಪಿಯವರ ಮೇಲೆ ಯಾರೂ ದಾಳಿ ಮಾಡುವುದಿಲ್ಲ. ಆದರೆ, ಇತರ ಪಕ್ಷಗಳ ನಾಯಕರ ಎದುರು ಇ.ಡಿ, ಐ.ಟಿ, ಸಿಬಿಐ ಎನ್ನುವ ಆಯ್ಕೆಗಳು ಇರುತ್ತವೆ.
ವಿನಯ ಕುಲಕರ್ಣಿ

ಕಾಂಗ್ರೆಸ್ ಕೊಟ್ಟ ಮಾತನ್ನು ಉಳಿಸಿಕೊಂಡಿದೆ. ಲೋಕಸಭಾ ಚುನಾವಣೆಯಲ್ಲಿ 22ರಿಂದ 24 ಸ್ಥಾನಗಳನ್ನು ಗೆಲ್ಲಲಿದೆ. ಪ್ರತಿ ಮನೆಗೂ ಕಾಂಗ್ರೆಸ್ ಪಕ್ಷದ ಯೋಜನೆಗಳನ್ನು ತಲುಪಿಸುವ ಕೆಲಸ ಮಾಡುವೆ.
ಮಂಜುನಾಥ ಭಂಡಾರಿ

ಭಗವಾಧ್ವಜ ಇಳಿಸುವ ಪಿತೂರಿ ಆರೋಪದ ಅರ್ಜಿ ವಿಚಾರಣೆ • ಹೈಕೋರ್ಟ್ ಕಿಡಿ

'ಪುಂಡರನ್ನು ಹೀಗೇ ಬಿಟ್ಟರೆ ದೇಶಕ್ಕೆ ಬೆಂಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಾವುದೇ ಸಮುದಾಯದಲ್ಲಿ ಎಲ್ಲೋ ನಾಲ್ಕಾರು ಪುಂಡರು ಇರುತ್ತಾರೆ. ಅವರನ್ನು ಗುರುತಿಸಿ ಸರಿಯಾದ ಬಂದೋಬಸ್ತ್ ಮಾಡಿದರೆ ಎಲ್ಲವೂ ನೆಟ್ಟಗಾಗುತ್ತೆ! ಇಲ್ಲಾಂದ್ರೆ, ಇವತ್ತು ಭಗವಾಧ್ವಜ ಇಳಿಸ್ತಾರೆ, ನಾಳೆ ರಾಷ್ಟ್ರಧ್ವಜ ಇಳಿಸ್ತಾರೆ, ದೇಶಕ್ಕೇ ಬೆಂಕಿ ಹಚ್ಚುತ್ತಾರೆ...' ಎಂದು ಹೈಕೋರ್ಟ್ ಕಿಡಿ ಕಾರಿದೆ.

'ಪೊಲೀಸರು ನನ್ನ ವಿರುದ್ಧ ದಾಖಲಿಸಿರುವ ದೂರು ರದ್ದುಪಡಿಸಬೇಕು' ಎಂದು ಕೋರಿ ಶಿಗ್ಗಾಂವಿಯ ಮಾಜಿ ಶಾಸಕ ಸೈಯ್ಯದ್ ಅಜ್ಜಂಪೀರ್ ಖಾದ್ರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ವೇಳೆ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದೆ.

'ಶಿಗ್ಗಾಂವಿ ತಾಲ್ಲೂಕಿನ ಕಾರಡಗಿ ಗ್ರಾಮದ ಜುಮ್ಮಾ ಮಸೀದಿಯ ಪಕ್ಕದಲ್ಲಿರುವ ಸರ್ಕಾರಿ ಶಾಲೆಯ ಎದುರಿಗಿನ ಸಾರ್ವಜನಿಕ ರಸ್ತೆಯಲ್ಲಿ ಹಲವಾರು ವರ್ಷಗಳಿಂದ ಇರುವ ಭಗವಾಧ್ವಜವನ್ನು ಕೆಳಗಿಳಿಸಿ ಗ್ರಾಮದಲ್ಲಿ ಕೋಮು ಸೌಹಾರ್ದ ಕದಡಲು ಪಿತೂರಿ ನಡೆಸಲಾಗಿದೆ' ಎಂಬ ಆರೋಪಕ್ಕೆ ಸಂಬಂಧಿಸಿದಂತೆ ಖಾದ್ರಿ ವಿರುದ್ಧ ಈ ಪ್ರಕರಣ ದಾಖಲಾಗಿತ್ತು.

ಈ ಸಂಬಂಧ ಸಲ್ಲಿಸಲಾಗಿದ್ದ ಕ್ರಿಮಿನಲ್ ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣ'ಗಳ ವಿಶೇಷ ಪೀಠದಲ್ಲಿದ್ದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಶುಕ್ರವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಎಫ್‌ಐಆರ್ ಪ್ರತಿಯನ್ನು ಓದಿದ ನ್ಯಾಯಮೂರ್ತಿಗಳು, 'ಎಫ್‌ಐಆರ್‌ನಲ್ಲಿ ಉಲ್ಲೇಖಿಸಿರುವಂತೆ ಆರೋಪಿಗಳು ಬಳಸಿರುವ ಅದರಲ್ಲೂ ಮಾಜಿ ಶಾಸಕರ ಭಾಷೆಯನ್ನು ಗಮನಿಸಿದರೆ ಒಂದಷ್ಟೂ ಸೌಜನ್ಯಯುತವಾಗಿಲ್ಲ. ಅವರಲ್ಲಿ ಗೂಂಡಾ ಪ್ರವೃತ್ತಿ ಇದ್ದಂತೆ ಕಾಣುತ್ತಿದೆ. ಇಂತಹವರಿಗೆ ಕರುಣೆ ತೋರಿಸಬಾರದು. ಸಮಾಜದಲ್ಲಿ ನಾಳೆ ಏನಾದರೂ ಏರುಪೇರಾದರೆ ಇಂತಹ ಕಿಡಿಗೇಡಿಗಳಿಂದ ಇಡೀ ಸಮುದಾಯಕ್ಕೇ ಕೆಟ್ಟ ಹೆಸರು ಬರುತ್ತದೆ' ಎಂದು ಕಳವಳ ವ್ಯಕ್ತಪಡಿಸಿದರು.

ಅರ್ಜಿದಾರರ ಪರ ವಾದ ಮಂಡಿಸಿದ ಹಿರಿಯ ವಕೀಲ ವಿ.ಲಕ್ಷ್ಮಿನಾರಾಯಣ, 'ದೂರಿನ ಅನ್ವಯ ದಾಖಲಿಸಿರುವ ಆಪಾದನೆಯ ಕಲಂಗಳಿಗೆ ಅನುಗುಣವಾಗಿ ನೋಡಿದರೆ, ಅರ್ಜಿದಾರರು ಎಲ್ಲೂ ಕೋಮು ಪ್ರಚೋದನೆಯ ಮಾತುಗಳನ್ನು ಆಡಿಲ್ಲ' ಎಂದು ಪ್ರತಿಪಾದಿಸಿದರು. ಆದರೆ ಇದನ್ನು ಒಪ್ಪದ ನ್ಯಾಯಮೂರ್ತಿಗಳು, ಕೇವಲ ಧರ್ಮಗಳ ಮಧ್ಯದಲ್ಲೇ ಪ್ರಚೋದನೆ ಉಂಟು ಮಾಡಬೇಕೆಂದೇನೂ ಇಲ್ಲ. ಅದು ಎರಡು ಊರು, ಕೇರಿ, ಜಾತಿಗಳ ನಡುವೆಯೂ ಆಗಬಹುದು. ಇದಕ್ಕೆ ಕಲಂ 153 (ಎ) ಅನ್ವಯವಾಗುತ್ತದೆ' ಎಂದು ಹೇಳಿದರು.

ಸ್ಥಳದಲ್ಲಿ ಧ್ವಜ ಇಳಿಸಿದ್ದಾರೆಯೇ ಇಲ್ಲವೇ ಎಂಬುದನ್ನು ಅರ್ಜಿದಾರರ ಪರ ವಕೀಲರಿಂದ ವಿಚಾರಣೆ ಮಧ್ಯದಲ್ಲೇ ವಾಟ್ಸ್ ಆ್ಯಪ್ ಮೂಲಕ ಛಾಯಾಚಿತ್ರ ತರಿಸಿಕೊಂಡು ವೀಕ್ಷಿಸಿದ ನ್ಯಾಯಮೂರ್ತಿಗಳು ಧ್ವಜಕ್ಕೆ ಯಾವುದೇ ಹಾನಿಯಾಗಿಲ್ಲ ಎಂಬುದನ್ನು ಖಾತರಿಪಡಿಸಿಕೊಂಡರು. ತನಿಖೆಗೆ ಮಧ್ಯಂತರ ತಡೆ ನೀಡಿ, ವಿಚಾರಣೆಯನ್ನು ಎರಡು ವಾರ ಮುಂದೂಡಿದರು.

'ಸಂಭಾಷಣೆ ನಡೆಸಿರುವ ಆರೋಪಿಗಳ ಧ್ವನಿಯನ್ನು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಬೇಕು. ಒಂದು ವೇಳೆ ಆರೋಪಿಗಳು ಯಾವುದಾದರೂ ಅಹಿತಕರ ಘಟನೆಯಲ್ಲಿ ಭಾಗಿಯಾಗಿದ್ದೇ ಆದರೆ ಪೊಲೀಸರು ತಕ್ಷಣವೇ ಅವರನ್ನು ಬಂಧಿಸಬೇಕು. ಆರೋಪಿಯ ಕುಟುಂಬದಲ್ಲಿ ಯಾರಾದರೂ ಕ್ರಿಮಿನಲ್ ಹಿನ್ನೆಲೆ ಉಳ್ಳವರು ಇದ್ದಾರೆಯೇ ಹೇಗೆ ಎಂಬುದನ್ನು ಮುಂದಿನ ವಿಚಾರಣೆ ವೇಳೆಗೆ ತಿಳಿಸಬೇಕು' ಎಂದು ರಾಜ್ಯ ಪಬ್ಲಿಕ್ ಪ್ರಾಸಿಕ್ಯೂಟರ್–2 ಬಿ.ಎನ್. ಜಗದೀಶ್ ಅವರಿಗೆ ಆದೇಶಿಸಿದರು.

ಪ್ರಕರಣವೇನು: ಹುಲಗೂರು ಪೊಲೀಸ್ ಠಾಣೆಯ ಪೊಲೀಸ್ ಸಬ್ ಇನ್‌ಸ್ಪೆಕ್ಟರ್ ಪರುಶರಾಮ ಕಟ್ಟೀಮನಿ 2024ರ ಮಾರ್ಚ್ 3ರಂದು ತಮ್ಮ ಮೊಬೈಲ್ ವಾಟ್ಸ್ ಆ್ಯಪ್‌ನಲ್ಲಿ ಬಾತ್ಮೀದಾರರಿಂದ ಆಡಿಯೊವೊಂದನ್ನು ಸ್ವೀಕರಿಸಿದ್ದರು. ಅದರಲ್ಲಿ, 'ಕಾರಡಗಿ ಗ್ರಾಮದ ಅಂಜುಮನ್ ಸಮಿತಿ ಅಧ್ಯಕ್ಷ ರಬ್ಬಾನಿ ಬಿನ್ ಅಬ್ದುಲ್ ಮುನಾಫ್ ಹಾಗೂ ಮಾಜಿ ಶಾಸಕ ಸೈಯ್ಯದ್ ಅಜ್ಜಂಪೀರ್ ಖಾದ್ರಿ ಉರ್ದುವಿನಲ್ಲಿ ಪ್ರಚೋದನಕಾರಿ ಮಾತುಗಳನ್ನು ಆಡಿದ್ದಾರೆ' ಎಂದು ಆರೋಪಿಸಿ, ಎಫ್‌ಐಆರ್ ದಾಖಲಿಸಲಾಗಿತ್ತು.

ಗಿರಿಯಾಸ್®

ಗೃಹಬಳಕೆ ವಸ್ತುಗಳ ವ್ಯಾಪಾರಿಗಳು
1971 ರಿಂದ

ಯುಗಾದಿ SALE

UPTO **20%** ಕ್ಯಾಶ್ ಬ್ಯಾಕ್* ಕ್ರೆಡಿಟ್ ಕಾರ್ಡ್ ಮೇಲೆ

1 ಇ.ಎಮ್.ಐ ಉಚಿತ*

UPTO ₹25,000 ಕಡಿತ ಎಕ್ಸ್ಚೇಂಜ್ ಮೇಲೆ*

Upto **70%** ಕಡಿತ*

DAIKIN — 2.02 TON 3 STAR INVERTER

ಗಿರಿಯಾಸ್ ರಿಯಾಯಿತಿ	₹ 14,260
ಎಕ್ಸ್ಚೇಂಜ್ ಹಳೆಯ ಎಸಿ	₹ 4,000
ಎಕ್ಸ್ಚೇಂಜ್ ಸಬ್ಸಿಡಿ	₹ 4,000

ಎಂ.ಆರ್.ಪಿ ₹86,800 · ಎಫೆಕ್ಟಿವ್ ಪ್ರೈಸ್ ₹64,540 · ಪ್ರತಿ ದಿನ ಇಎಂಐ ₹179

BLUE STAR — 1.5 TON 3 STAR INVERTER

ಗಿರಿಯಾಸ್ ರಿಯಾಯಿತಿ	₹21,580
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್	₹ 3,000
ಎಕ್ಸ್ಚೇಂಜ್ ಹಳೆಯ ಎಸಿ	₹ 4,000
ಎಕ್ಸ್ಚೇಂಜ್ ಸಬ್ಸಿಡಿ	₹ 4,000

ಎಂ.ಆರ್.ಪಿ ₹63,500 · ಎಫೆಕ್ಟಿವ್ ಪ್ರೈಸ್ ₹30,920 · ಪ್ರತಿ ದಿನ ಇಎಂಐ ₹86

ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

LG — 1.5 TON 3 STAR INVERTER TS-Q18YNXE2

ಗಿರಿಯಾಸ್ ರಿಯಾಯಿತಿ	₹35,080
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್	₹ 1,500
ಎಕ್ಸ್ಚೇಂಜ್ ಹಳೆಯ ಎಸಿ	₹ 4,000
ಎಕ್ಸ್ಚೇಂಜ್ ಸಬ್ಸಿಡಿ	₹ 4,000

ಎಂ.ಆರ್.ಪಿ ₹78,990 · ಎಫೆಕ್ಟಿವ್ ಪ್ರೈಸ್ ₹34,410 · ಪ್ರತಿ ದಿನ ಇಎಂಐ ₹96

Godrej — 1.0 TON 3 STAR INVERTER

ಗಿರಿಯಾಸ್ ರಿಯಾಯಿತಿ	₹ 9,480
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್	₹ 1,000
ಎಕ್ಸ್ಚೇಂಜ್ ಹಳೆಯ ಎಸಿ	₹ 4,000
ಎಕ್ಸ್ಚೇಂಜ್ ಹಳೆಯ ಎಸಿ	₹ 4,000

ಎಂ.ಆರ್.ಪಿ ₹41,900 · ಎಫೆಕ್ಟಿವ್ ಪ್ರೈಸ್ ₹23,420 · ಪ್ರತಿ ದಿನ ಇಎಂಐ ₹65

ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

VOLTAS — 1.0 TON 3 STAR INVERTER

ಗಿರಿಯಾಸ್ ರಿಯಾಯಿತಿ	₹ 22,620
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್	₹ 1,500
ಎಕ್ಸ್ಚೇಂಜ್ ಹಳೆಯ ಎಸಿ	₹ 4,000
ಎಕ್ಸ್ಚೇಂಜ್ ಸಬ್ಸಿಡಿ	₹ 4,000

ಎಂ.ಆರ್.ಪಿ ₹56,990 · ಎಫೆಕ್ಟಿವ್ ಪ್ರೈಸ್ ₹24,820 · ಪ್ರತಿ ದಿನ ಇಎಂಐ ₹69

ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

LLOYD — 1.0 TON 3 STAR INVERTER

ಗಿರಿಯಾಸ್ ರಿಯಾಯಿತಿ	₹ 16,440
ಕ್ರೆಡಿಟ್ ಕಾರ್ಡ್ ಕ್ಯಾಶ್ ಬ್ಯಾಕ್	₹ 1,500
ಎಕ್ಸ್ಚೇಂಜ್ ಹಳೆಯ ಎಸಿ	₹ 4,000
ಎಕ್ಸ್ಚೇಂಜ್ ಸಬ್ಸಿಡಿ	₹ 4,000

ಎಂ.ಆರ್.ಪಿ ₹49,990 · ಎಫೆಕ್ಟಿವ್ ಪ್ರೈಸ್ ₹24,050 · ಪ್ರತಿ ದಿನ ಇಎಂಐ ₹67

ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

5% INSTANT DISCOUNT* SBI card
*Min. Trxn.: ₹15,000; Max. Discount: ₹2,500 per card. Valid only on EMI Trxn. Validity: 14 Mar - 28 Apr 2024. T&C Apply.

Paytm FIRST
AN EXCLUSIVE FREE MEMBERSHIP WITH BENEFITS WORTH ₹75,000*
ON AC'S, MOBILES AND LAPTOPS. T&C APPLY

FINANCE POWERED BY Groww
0% EMI
MIN PRODUCT VALUE ₹10,000

MobiKwik
4% ಕ್ಯಾಶ್ ಬ್ಯಾಕ್* on UPI
MINIMUM TRANSACTION ₹1000
MAXIMUM CASHBACK UPTO ₹750

LG ಎಲ್ಲಾ ಉತ್ಪನ್ನಗಳ ಮೇಲೆ ಭರವಸೆಯ ಉಡುಗೊರೆಗಳು*
BT SPEAKER · INDUCTION COOKER · STEAM IRON · KETTLE · DRY IRON

SAMSUNG 653 ಲೀ ಸೈಡ್ ಬೈ ಸೈಡ್ RS76CG8113SLHL
ಇ.ಎಮ್.ಐ ₹6,033

LG 650 ಲೀ ಸೈಡ್ ಬೈ ಸೈಡ್ GL-B257DBM3
ಇ.ಎಮ್.ಐ ₹4,990

iPhone 14/15
₹58,900 ONWARDS · ₹81 ಪ್ರತಿ ದಿನ ಇಎಂಐ
70% OFF ON DAMAGE PROTECTION

SAMSUNG S24/ S24Plus/ S24Ultra
₹70,999 ONWARDS · ₹98 ಪ್ರತಿ ದಿನ ಇಎಂಐ
PAY ₹199 AND GET 1YR COMPLETE DAMAGE PROTECTION + WATCH WORTH ₹17,999

5G mela — 5G PHONE
₹9,999 ONWARDS
PAY ₹99 AND GET FREE 1 YEAR COMPLETE DAMAGE PROTECTION + BT NECKBAND WORTH UPTO ₹9999***
mi · vivo · ONEPLUS · oppo

Haier 531 ಲೀ ಸೈಡ್ ಬೈ ಸೈಡ್
ಇ.ಎಮ್.ಐ ₹6,866
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

Panasonic 280 ಲೀ ಫ್ರಾಸ್ಟ್ ಫ್ರೀ
ಇ.ಎಮ್.ಐ ₹2,724
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

Whirlpool 235 ಲೀ ಫ್ರಾಸ್ಟ್ ಫ್ರೀ
ಇ.ಎಮ್.ಐ ₹2,542
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

DELL INS 3520
- 12TH GEN I5
- 16 GB RAM
- 512 GB SSD
- 15.6 FHD
- WIN 11 MSO 21

OFFER PRICE ₹53,990

ಉಚಿತ: ₹9,999 ಮೌಲ್ಯದ ಸ್ಮಾರ್ಟ್ ಕಾಲಿಂಗ್ ವಾಚ್+ಬ್ಯಾಗ್

hp VICTUS- GAMING
- RYZEN 5 5600H
- 16GB RAM
- 512GB SSD
- 4 GB GFX
- 15.6" FHD
- WIN 11

OFFER PRICE ₹53,490

ಉಚಿತ: ₹9,999 ಮೌಲ್ಯದ ಸ್ಮಾರ್ಟ್ ಕಾಲಿಂಗ್ ವಾಚ್+ಬ್ಯಾಗ್
UPTO 2500 CASH BACK* + ADDITIONAL BENEFIT WORTH ₹10,999 @ ₹1999

Lenovo (Slim 1)
- Ryzen 3 7320
- 8GB, 512GB
- 15.6 FHD
- Win11 MSO 21

OFFER PRICE ₹36,490

ಉಚಿತ: ₹9,999 ಮೌಲ್ಯದ ಸ್ಮಾರ್ಟ್ ಕಾಲಿಂಗ್ ವಾಚ್+ಬ್ಯಾಗ್

LG 77 ಇಂಚ್ 4K SMART TV OLED77B3PSA
ಇ.ಎಮ್.ಐ ₹4,999

SAMSUNG 55 ಇಂಚ್ 4K SMART TV 55S90C
ಇ.ಎಮ್.ಐ ₹10,050

SONY 55 4K ULTRA HD SMART ಇಂಚ್ GOOGLE TV XR-55A80L
ಇ.ಎಮ್.ಐ ₹5,500

BOSCH 9 ಕೆಜಿ ಫ್ರಂಟ್ ಲೋಡಿಂಗ್
ಇ.ಎಮ್.ಐ ₹3,925
ಉಚಿತ: ₹20000 ಮೌಲ್ಯದ FIRE-BOLTT ಸ್ಮಾರ್ಟ್ ಕಾಲಿಂಗ್ ವಾಚ್

WIDEST RANGE OF AIRCOOLERS & FANS
Crompton · orient · USHA · V-GUARD · KENSTAR · Symphony · VOLTAS · BAJAJ · HAVELLS

Prestige
MIXER GRINDERS ENDURA 1000W MIXER GRINDER + PRESSURE COOKERS: SS Popular3 LTR
OFFER PRICE: ₹8,190
COMBI MRP: ₹13,385

OZONE DIGITAL LOCKERS
₹2,190 ONWARDS
AVAILABLE @ SELECTED STORES

Prestige
GAS STOVES:SVACHH DUO / NEO 3 BURNER + PRESSURE COOKERS: SS POPULAR3 LTR
OFFER PRICE: ₹8,190
COMBI MRP: ₹13,385

EUREKA FORBES · NIRLEP
AQUAGUARD SUPERIO RO+UV+MTDS+SS +
NON STICK COOKWARE: ASPA 4 Pc SET
OFFER PRICE: ₹18,990
COMBI MRP: ₹31,990

LG · SAMSUNG · SONY · Panasonic · Haier · NW · IFB · Godrej · LLOYD · Whirlpool · BOSCH · Electrolux · PHILIPS · hp · acer · DELL · Lenovo · ASUS · vivo · oppo · ONEPLUS · mi · iPhone · JBL
BLUE STAR · HAFELE · Symphony · HAVELLS · USHA · DAIKIN · GENERAL · Prestige · VOLTAS · VOLTAS·beko · Butterfly · Preethi · VIJAYALAKSHMI · ULTRA · EUREKA FORBES · pureit · Livpure · FABER · KENSTAR · Pigeon · BAJAJ · Crompton · MAHARAJA WHITELINE · V-GUARD · ZEBRONICS · KAFF · OZONE

GIRIAS THE CONSUMER DURABLE PEOPLE Since 1971

ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 77747 | ಆರ್.ಟಿ.ನಗರ 91080 65665 | ಇಂದಿರಾನಗರ 9035499255 | ಉತ್ತರಹಳ್ಳಿ 90362 89563 | ಎಲೆಕ್ಟ್ರಾನಿಕ್‌ಸಿಟಿ 9591103536 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 |ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ಜೆ.ಪಿ.ನಗರ 9606922698 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಬಾಗೇಪಲ್ಲಿ 9036289562 | ಭಾರ್ತಿಯಾ ಮಾಲ್ 70900 00981 | ಮಾದನಾಯಕನಹಳ್ಳಿ 90362 89550 | ಮಂತ್ರಿ ಮಾಲ್ 95919 25353 | ಮತ್ತಿಕೆರೆ 90352 22377 |ಮಲ್ಲೇಶ್ವರಂ 90354 99233 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 |ಶಿರಾ 9035023188 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633 | ಹೊಸೂರು ರಸ್ತೆ 9035499022

STORE LOCATOR

*Terms & conditions apply. Finance at the sole discretion of the Finance company. Upto 20% Cashback & 1 EMI off on selected brands and models. Cash Back / vouchers will be credited to the customer bank account / BFL wallet after clearing 3 EMI. EMI offers the above products based on 9,12,18,24 & fixed emi schemes.*Exchange offer valid on MRP and Product as to be in good working condition.Exchange value will differ based on the condition of old product. Flat Rs.8000 off for exchange of old split AC Free smart watch valid on 20000 & above Purchase on select models & brands. Offer valid till stock last.Free installation valid on selected Brands & Models of AC's.

156 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು. SHOP ONLINE @ www.giriasindia.com

"like" us on facebook HTTPS://WWW.FACEBOOK.COM/GIRIAS.INDIA

WE SUPPORT ROUND TABLE INDIA LADIES CIRCLE INDIA

ಪ್ರಜಾವಾಣಿ ಶನಿವಾರ, 6 ಏಪ್ರಿಲ್ 2024 10

ಭೂಮಿಕಾ

ಮಹಿಳೆಯ ಆಪ್ತ ಸಂಗಾತಿ

ಹಬ್ಬದ ಪಾಲ್ಗೊಳ್ಳುವಿಕೆಯ ಸಂಭ್ರಮವಿರಲಿ

ಇಂದಿಗೂ ಪ್ರತಿ ಹಬ್ಬದಲ್ಲೂ ತೆರೆಯ ಹಿಂದಿನ ಪಾತ್ರಧಾರಿಗಳಾಗಿ ತಮ್ಮ ಜೀವ ತೇಯುವ ನಮ್ಮ ಹೆಂಗಳೆಯರನ್ನು ದಿಟ್ಟಿಸುವಾಗ ಮನಸ್ಸು ಬೇವಾಗುತ್ತದೆ.

ಸುಚಿತ್ರಾ ಹೆಗಡೆ

ತ್ರಿಳಿವಾವುದಿಳೆಗೆ ಯುಗಯುಗದ ಬೆಳಕಾಗಿತ್ತೊ
ಹಳದೆಂದು ನೀನದನು ಕಳೆಯುವೆಯ, ಮರುಳೆ
ತಳಹದಿಯದಲ್ತೆ ನಮ್ಮೆಲ್ಲ ಹೊಸ ತಿಳಿವಿಂಗೆ?
ಹಳೆ ಬೇರು ಹೊಸ ತಳಿರು - ಮಂಕುತಿಮ್ಮ

'ಯುಗ' ವೆಂದರೆ ಎರಡು ಎನ್ನುವ ಅರ್ಥವೂ ಇದೆ. ಯುಗಾದಿಯೆಂದರೆ ಎರಡು ಯುಗಗಳ ಸಂಧ್ಯಾಕಾಲ. ಶಿಶಿರದಲ್ಲಿ ಬರಿದಾದ ಪ್ರಕೃತಿ ನವವಸಂತನ ಆಗಮನದಿಂದಾಗಿ ಹೊಸ ಚಿಗುರು, ಹೊಸ ಬಣ್ಣ ತಳೆದು ಬೆಳಗುವ ಸಮಯ. ಋತು, ಮಾಸಗಳು ಸರಿದಂತೆ ಪ್ರಕೃತಿ ಬದಲಾವಣೆಯ ಕೈಗನ್ನಡಿಯಾಗುತ್ತದೆ. ಭೂಮಿ ತನ್ನ ಭ್ರಮಣದೊಂದಿಗೆ ಸೂರ್ಯನ ಚಲನೆಗೆ ಸಾಕ್ಷಿ ಹೇಳುತ್ತದೆ. ಸುರಿವ ಮಳೆಯ ದಟ್ಟ ಹಸಿರು ಹೊದಿಕೆ, ಕಡು ಚಳಿಯಲ್ಲಿ ಜಾಳಾಗಿ, ಬಿರು ಬೇಸಿಗೆಯನ್ನು ಸ್ವಾಗತಿಸುವಂತೆ ಎಳೆ ಚಿಗುರಿನ ನಗು ಬೀರುತ್ತದೆ. ಅಲ್ಲಿಗೆ ಸುತ್ತಲಿನ ಪ್ರಕೃತಿಗೆ ಚೈತ್ರದಾಗಮನವನ್ನು ಸಾರುವ ಯುಗಾದಿ ಹಬ್ಬ ಕಾಲಿಡುತ್ತದೆ.

ಹಾಗೆಯೇ ರುಚಿ ರುಚಿಯಾದ ಭಕ್ಷ ಭೋಜ್ಯಗಳಿಲ್ಲದ, ತನ್ನದೇ ವಿಶಿಷ್ಟವಾದ ಆಚರಣೆಗಳಿಲ್ಲದ ಹಬ್ಬಗಳನ್ನು ಕಲ್ಪಿಸಿಕೊಳ್ಳಲಾಗದು. ಸಿಹಿಯಾದ ಹೋಳಿಗೆಯ ಜೊತೆಗೆ ಹುಳಿಯಾದ ಮಾವಿನಕಾಯಿಯ ಚಿತ್ರಾನ್ನದ ಸಾಂಗತ್ಯ. ಸಿಹಿ ಹುಳಿ, ಖಾರವೆನಿಸುವ ಹೋಳಿಗೆಯ ಸಾರಿನೊಡನೆ ಪೈಪೋಟಿಗಿಳಿವ ಹುಳಿ, ಸಿಹಿ, ಖಾರ, ಕಹಿ, ಒಗರು ಎಲ್ಲ ಷಡ್ರಸಭರಿತವಾದ ಪಚಡಿ ಯುಗಾದಿಯ ದಿನ ಇರಲೇಬೇಕು.

ಆದರೆ ಇಂದಿಗೂ ಪ್ರತಿ ಹಬ್ಬದಲ್ಲೂ ತೆರೆಯ ಹಿಂದಿನ ಪಾತ್ರಧಾರಿಗಳಾಗಿ ತಮ್ಮ ಜೀವ ತೇಯುವ ನಮ್ಮ ಹೆಂಗಳೆಯರನ್ನು ದಿಟ್ಟಿಸುವಾಗ ಮನಸ್ಸು ಬೇವು-ಬೆಲ್ಲದ ಬೇವಾಗುತ್ತದೆ. ಹಬ್ಬವೆಂದರೆ ನಿಜವಾಗಲೂ ಸಂಭ್ರಮಿಸುವ, ತಮ್ಮ ಹಿರಿತನವನ್ನು, ದಕ್ಷತೆಯನ್ನು ಎಲ್ಲರ ಮುಂದೆ ಸಾರಿಕೊಳ್ಳುವ ಬಹಳಷ್ಟು ಹೆಂಗಳೆಯರು ಇರಬಹುದು. ಎಲ್ಲ ಕೆಲಸಗಳಲ್ಲೂ ಹೆಣ್ಣಿಗೆ ಸಾಥ್ ಕೊಡುವ ಗಂಡುಗಳೂ ಇರಬಹುದು. ಆದರೆ ಬಹುತೇಕ ಮನೆಗಳಲ್ಲಿ ಕೈಲಾಗದಿದ್ದರೂ ಮನೆಯವರ ಆಸೆಗಳನ್ನು ಈಡೇರಿಸಲು ಒದ್ದಾಡುವ ಹೆಣ್ಣುಮಕ್ಕಳಿಗೆ, ಹೊರಗೆ ದುಡಿಯುವ ಮಹಿಳೆಯರಿಗೆ, ಕೂಲಿನಾಲಿ ಮಾಡಿ ಆವತ್ತಿನ ಖರ್ಚಿಗಾಗಿ ದುಡಿಯುವ ಕೈಗಳಿಗೆ ಹಬ್ಬವೆಂದರೆ ಬರಿಯ ಸಡಗರವಲ್ಲ. ಅದು ಮನೆಯವರೆಲ್ಲರ, ಸುತ್ತಲಿನ ಸಮಾಜದ ನಿರೀಕ್ಷೆಗಳಿಗೆ ತಕ್ಕಂತೆ ನಡೆದುಕೊಂಡು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳುವ ಹೆಣಗಾಟದಂತೆ ತೋರುತ್ತದೆ.

ಪ್ರತಿ ಹಬ್ಬದ ಯಶಸ್ಸು ಮನೆಯ ಹೆಂಗಳೆಯರ ಶ್ರಮದ ಮೇಲೆ ನಿಂತಿರುವುದನ್ನು ಅಲ್ಲಗಳೆಯಲಾಗದು. ಸಾಮಾನ್ಯವಾಗಿ ನಮ್ಮ ಸಮಾಜ ಕೂಡ ಈ ವಿಶೇಷವಾದ ದಿನಗಳ ಹೆಚ್ಚುವರಿ ಕೆಲಸಗಳನ್ನು ನಿಭಾಯಿಸುವ ಹೊಣೆ ಕೇವಲ ಹೆಂಗಸರದ್ದೆಂದು ನಂಬಿದಂತಿದೆ. ಇದು ಹಬ್ಬದ ದಿನವೊಂದೇ ಅಲ್ಲ, ಹಬ್ಬ ಬರುವ ಕೆಲವು ದಿನಗಳ ಮೊದಲೇ ಹೆಣ್ಣುಮಕ್ಕಳು ಮನೆಯನ್ನು ಸ್ವಚ್ಛಗೊಳಿಸುವ, ಶೃಂಗರಿಸುವ, ಅತಿಥಿಗಳನ್ನು ಸ್ವಾಗತಿಸುವ ಕೈಂಕರ್ಯಗಳಲ್ಲಿ ನಿರತರಾಗುತ್ತಾರೆ. ನೆರೆದ ಅತಿಥಿಗಳಾದಿಯಾಗಿ ಇಡೀ ಮನೆಯವರೆಲ್ಲರೂ ಹಬ್ಬದ ಗೌಜು ಗದ್ದಲಗಳಲ್ಲಿ ಆನಂದವಾಗಿ ಮೈ ಮರೆತಿರುವಾಗ ಮನೆಯ ಹೆಣ್ಣುಗಳಿಗೆ ಹಬ್ಬವೆಂದರೆ ಬರಿಯ ಸ್ವಚ್ಛಗೊಳಿಸು, ತಯಾರಿಸು, ನಿರ್ವಹಿಸು, ಪಾಲಿಸು, ಜೋಡಿಸು, ಈಡೇರಿಸು, ಮುಂದುವರಿಸು... ಗಳಂತಹ ಎಂದೂ ಮುಗಿಯದ ಜವಾಬ್ದಾರಿಗಳ ಸರಮಾಲೆಯಾಗಿ ಪರಿಣಮಿಸುವುದೇ ಜಾಸ್ತಿ. ಹೆಣ್ಣು ಹೊಸ ಬಟ್ಟೆ, ಹೊಸ ಒಡವೆಗಳಿಗೆ ತೃಪ್ತಿಪಟ್ಟುಕೊಳ್ಳುವ ಬದಲಾಗಿ, ನಮ್ಮ ಪುರುಷ ಪ್ರಧಾನ ಸಮಾಜ ತನ್ನ ಸುತ್ತಲೂ ಕಟ್ಟಿದ ಚೌಕಟ್ಟನ್ನು ಮೀರುವ ಪ್ರಯತ್ನಗಳನ್ನು ಮಾಡಬೇಕಿದೆ. ಅವಳು ತನ್ನ ಸ್ವಂತದ ಸುಖವನ್ನು ತ್ಯಾಗ ಮಾಡಿ ಬರೀ ಬೇರೆಯವರಿಗಾಗಿ ಶ್ರಮಿಸುವ ಮನಸ್ಥಿತಿಯಿಂದ ಹೊರಬರಬೇಕಾಗಿದೆ. ಈ ಸಲದ ಯುಗಾದಿಗೆ ಹೆಣ್ಣಿನ ಕಷ್ಟಗಳು ಅಂತ್ಯವಾಗಿ ಸಮಬಾಳು, ಸಮಪಾಲುಗಳೆಂಬ ಚಿಗುರುಗಳು ಪಲ್ಲವಿಸಲಿ. ಎಲ್ಲರೂ ಸಮಾನವಾಗಿ ಹಬ್ಬದ ಕೆಲಸಗಳನ್ನು ಹಂಚಿಕೊಂಡು ನಿರ್ವಹಿಸಿ, ಮನೆಯವರೆಲ್ಲರೂ ಒಟ್ಟಾಗಿ ಆನಂದಿಸುವ ವಾತಾವರಣ ನಿರ್ಮಾಣವಾಗಲಿ. ಎಲ್ಲ ಹೆಂಗಳೆಯರೂ ಮನೆಯ ಇತರ ಸದಸ್ಯರಷ್ಟೇ ಖುಷಿಯಿಂದ ಹಬ್ಬಗಳನ್ನು ಎದುರುನೋಡುವಂತಾಗಲಿ. ಅಂದಹಾಗೆ ಇದನ್ನು ಪುರುಷರೂ ಓದುತ್ತಿದ್ದರೆ ನೀವೇನು ಮಾಡಬೇಕೆಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ಅಲ್ಲವೇ? ❖

ಮುದ ತರುವ ಮೆಹೆಂದಿ

ಅಬ್ದುಲ್ ರಹಿಮಾನ್

ಮೆಹೆಂದಿ ಸಂಭ್ರಮದ ಸಂಕೇತ. ಖುಷಿಯ ಆಚರಣೆ ವೇಳೆ ಮಹಿಳೆಯರು ಮೆಹೆಂದಿ ಹಚ್ಚಿ ಸಂಭ್ರಮಿಸುತ್ತಾರೆ. ರಂಜಾನ್ ಹಬ್ಬದಲ್ಲೂ ಹೆಂಗಳೆರ ಸಂಭ್ರಮ, ಆಚರಣೆ ಆರಂಭವಾಗುವುದು ಮೆಹೆಂದಿ ಹಚ್ಚುವುದರಿಂದಲೇ. ಆಗಸದಲ್ಲಿ ಈದ್‌ನ ಚಂದ್ರ ಮೂಡುವಾಗ, ಹೆಣ್ಣುಮಕ್ಕಳ ಕೈಯಲ್ಲಿ ಮೆಹೆಂದಿ ಅರಳಲು ಶುರುವಾಗುತ್ತದೆ.

ಮೆಹೆಂದಿ ಹಚ್ಚುವುದು ಕೂಡ ರಂಜಾನ್ ಸಂಭ್ರಮದ ಭಾಗ. ಪುಟ್ಟ ಮಕ್ಕಳಿಂದ ಹಿಡಿದು, ಹಿರೀಕರು ಕೂಡ ಕೈಗೆ ಹೆನ್ನಾ ಹಚ್ಚಿ ಹಬ್ಬದ ಖುಷಿಯನ್ನು ಇಮ್ಮಡಿಗೊಳಿಸುತ್ತಾರೆ. ಮಸೀದಿಯ ಮಿನಾರಗಳಲ್ಲಿ ಮೊಳಗುವ ಈದ್‌ನ ಸಂಭ್ರಮದ ಅಲೆಗಳಿಗೆ ಕಾದು ಮೆಹೆಂದಿ ಹಚ್ಚಿ ನಗು ಬೀರುವ ಪುಟ್ಟ ಮಕ್ಕಳದ್ದು ಇನ್ನೊಂದು ಬಗೆಯ ಸಂಭ್ರಮ.

ಹಬ್ಬದ ಒಂದು ವಾರದ ಮೊದಲೇ ಮಾರುಕಟ್ಟೆಯಿಂದ ತಂದಿಟ್ಟ ಮೆಹೆಂದಿ ಕೋನ್‌ಗಳನ್ನು, ಹಬ್ಬದ ಹಿಂದಿನ ದಿನದ ರಾತ್ರಿ ಹಚ್ಚಿಕೊಳ್ಳುವ ವಾಡಿಕೆ ಈಗ ವಿರಳ. ವೃತ್ತಿಪರ ಮೆಹೆಂದಿ ಕಲಾವಿದರಿಂದಲೇ ಕೈಕಾಲುಗಳನ್ನು ಸಿಂಗರಿಸಿಕೊಳ್ಳುವುದು ಹೆಚ್ಚಾಗಿದೆ. ರಾಸಾಯನಿಕ ರಹಿತ, ಸಾವಯವ ಮೆಹೆಂದಿ ಹೆಚ್ಚಿನ ಜನ ಇಷ್ಟಪಡುತ್ತಾರೆ. ತಮ್ಮಿಷ್ಟದ ವಿನ್ಯಾಸಗಳನ್ನು ಆಯ್ಕೆ ಮಾಡಿಕೊಂಡು ಕೈಗಳಲ್ಲಿ ಚಿತ್ತಾರ ಮೂಡಿಸುತ್ತಾರೆ.

ಹಬ್ಬದ ಎರಡು–ಮೂರು ದಿನಕ್ಕೂ ಮುಂಚೆ ಮೆಹೆಂದಿ ಹಚ್ಚಿಸಿಕೊಳ್ಳುವ ಸಂಭ್ರಮ ಪ್ರಾರಂಭವಾಗುತ್ತದೆ. ಹಬ್ಬದ ಚಂದ್ರ ಕಂಡ ಮೇಲೆ ಮೆಹೆಂದಿ ಹಚ್ಚುವ ಖುಷಿ ವೇಗ ಪಡೆದುಕೊಳ್ಳುತ್ತದೆ. ಸಾಂಪ್ರದಾಯಿಕ ವಿನ್ಯಾಸಗಳ ಬದಲಿಗೆ, ಚಂದ್ರ, ನಕ್ಷತ್ರ, ಲಾಂದ್ರ ಮುಂತಾದ ಹಬ್ಬದ ಥೀಮ್‌ಗಳು ಜನರ ನೆಚ್ಚಿನ ಆಯ್ಕೆಗಳು. ಭಾರತೀಯ ಶೈಲಿಯ ವಿನ್ಯಾಸ, ಹೂವಿನ ಶೈಲಿಗಳನ್ನೂ ಜನ ಇಷ್ಟಪಡುತ್ತಾರೆ. ಹಲವರಿಗೆ ಸರಳ ವಿನ್ಯಾಸ ಇಷ್ಟವಾಗುತ್ತದೆ. ಅದ್ಧೂರಿ ವಿನ್ಯಾಸ ಬಯಸುವವರೂ ಇದ್ದಾರೆ. ಮದುವೆಯಾದವರ ಮೊದಲ ಹಬ್ಬವಾಗಿದ್ದರೆ, ಮತ್ತೆ ಮದುವಣಗಿತ್ತಿಯರಂತೆ ಕೈ-ಕಾಲುಗಳಿಗೆ ಮೆಹೆಂದಿ ಹಾಕಿಸಿಕೊಳ್ಳುತ್ತಾರೆ ಎನ್ನುವುದು ಮೆಹೆಂದಿ ಡಿಲೈಟ್‌ನ ಸಾನಿಯಾ ಅಮ್ರಿನ್ ಅವರ ಮಾತು.

ಮಕ್ಕಳು ಬೇಗ ಕಲೆಸಿಕೊಳ್ಳುವುದಿಂದ, 15–20 ನಿಮಿಷದಲ್ಲಿ ಬಣ್ಣ ಬರುವ ವಿಶೇಷ ಮೆಹೆಂದಿಯೂ ಇದೆ. ಹಣ್ಣಿನ ಸಾರಗಳಿಂದ ತಯಾರಿಸಿದ ಈ ಮೆಹೆಂದಿಯಿಂದ ಬೇಗನೆ ಬಣ್ಣ ಬರುತ್ತದೆ. ತುರಿಕೆ ಹಾಗೂ ದುದ್ದು ಸಮಸ್ಯೆ ಇಲ್ಲ. ಆದರೆ ಬಾಳಿಕೆ ಕಡಿಮೆ. ಸಾಮಾನ್ಯ ಮೆಹೆಂದಿ 3–4 ಗಂಟೆ ಹಚ್ಚಿಕೊಂಡರೆ ಗಾಢ ಬಣ್ಣ ಬರುತ್ತದೆ. ರಾಸಾಯನಿಕ ರಹಿತ ಮೆಹೆಂದಿ ಹಚ್ಚುವುದರಿಂದ ಚರ್ಮದ ಸಮಸ್ಯೆ ಬರುವುದಿಲ್ಲ. ಗರ್ಭಿಣಿಯರೂ ಯಾವುದೇ ಭಯ ಇಲ್ಲದೆ ಬಳಸಬಹುದು.

ಗಾಢ ಬಣ್ಣ ಬರುವ ಮೆಹೆಂದಿ ಹಚ್ಚಿದರೆ ಚರ್ಮದ ಬಣ್ಣ ಫರಕು ಬೀಳದು. ಕೈ ವಿನ್ಯಾಸಕ್ಕೆ ತಕ್ಕಂತೆ ಮೆಹೆಂದಿಯ ವಿನ್ಯಾಸವೂ ಬದಲಾಗುತ್ತದೆ. ವಿವಿಧ ವಯೋಮಾನದವರ ವಿನ್ಯಾಸ ಆಯ್ಕೆ, ಶೈಲಿ ವಿಭಿನ್ನವಾಗಿರುತ್ತದೆ. ಯುವತಿಯುರು ಟ್ರೆಂಡಿಂಗ್ ವಿನ್ಯಾಸಗಳನ್ನು ಹೆಚ್ಚಾಗಿ ಆಯ್ದುಕೊಳ್ಳುತ್ತಾರೆ. ಗಂಟೆಗಟ್ಟಲೆ ಕುಳಿತು ಮೆಹೆಂದಿ ಹಚ್ಚಿಕೊಳ್ಳಲು ಪುರುಸೊತ್ತು ಇಲ್ಲ ಎನ್ನುವವರಿಗೆ ಅಚ್ಚುಗಳೂ ಇದ್ದು (ಡೂ ಇಟ್ ಯುವರ್‌ಸೆಲ್ಫ್ ಕಿಟ್), ಅದನ್ನು ಕೈಗೆ ಅಂಟಿಸಿ ಖುದ್ದಾಗಿ ಬಿಡಿಸಿಕೊಳ್ಳಬಹುದು.

ಕೋನ್ ಮೂಲಕ ಬೆರಳ ತುದಿಗೆ ಹಚ್ಚಿಕೊಳ್ಳುವುದು ಕಷ್ಟ ಎನಿಸುವವರಿಗೆ ಇನ್‌ಸ್ಟಂಟ್ ಡಿಪ್ ಕ್ಯಾಪ್‌ಗಳೂ ಸಿಗುತ್ತವೆ. ಇದು ಕೆಂಪು ಹಾಗೂ ಕಡುಗೆಂಪು ಬಣದಲ್ಲಿ ಲಭ್ಯ. ಕಡಿಮೆ ಅವಧಿ ಬಾಳಿಕೆ ಬರುವ ನೇಲ್ ಪಾಲಿಶ್ ಹೆನ್ನಾ ಕೂಡ ಇದ್ದು, ಇದು ಬೇಗನೇ ಬಣ್ಣ ಬರುವುದದಲ್ಲದೇ, ಒಮ್ಮೆ ನೀರಿನಿಂದ ತೊಳೆದರೆ ಅಳಿಸಿಹೋಗುತ್ತದೆ. ನಿತ್ಯ ನೇಲ್ ಪಾಲಿಶ್ ಮಾಡಿಕೊಳ್ಳುವವರಿಗೆ ಇದು ಉತ್ತಮ ಆಯ್ಕೆ. ಕಪ್ಪು, ಕೆಂಪು, ಗಾಢ ಕೆಂಪು, ಗಾಢ ಕಂದು ಬಣ್ಣಗಳಲ್ಲಿ ಸಿಗುತ್ತದೆ.

ಈದ್ ಸಂಭ್ರಮ

ರಾಸಾಯನಿಕ ರಹಿತವಾಗಿ ತಯಾರಿಸಿದ ಮೆಹೆಂದಿ, 10–15 ದಿನಗಳ ಕಾಲ ಇರುತ್ತದೆ. ದೇಹದ ಉಷ್ಣಾಂಶ ಹೆಚ್ಚಿರುವವರಿಗೆ ಮೆಹೆಂದಿ ಗಾಢ ಬಣ್ಣ ಬರುತ್ತದೆ. ಹೆಚ್ಚು ದಿನ ಉಳಿಯುತ್ತದೆ. ತಂಪು ದೇಹದವರಿಗೆ ಹಚ್ಚಿದ ಮೆಹೆಂದಿ ಹೆಚ್ಚು ಬಣ್ಣ ಬರುವುದಿಲ್ಲ. ಬಾಳಿಕೆಯೂ ಕಡಿಮೆ. ಈಗ 'ಆಫ್ಟರ್ ಅಪ್ಲೈ ಕೇರ್' ಉತ್ಪನ್ನಗಳೂ ಇದ್ದು, ಇವು ಗಾಢ ಬಣ್ಣ ಬರಿಸುವ ಜೊತೆಗೆ ದೀರ್ಘ ಕಾಲ ಉಳಿಯುತ್ತವೆ. ಮನೆ ಕೆಲಸ ಮಾಡುವಾಗ ಕೈಗವಸು ಹಾಕಿಕೊಂಡು, ನೀರು ತಾಗದಂತೆ ನೋಡಿಕೊಂಡರೆ, ಬಣ್ಣ, ಬಾಳಿಕೆ ಎರಡೂ ಅಧಿಕ ಎನ್ನುತ್ತಾರೆ ಸಾನಿಯಾ ಅಮ್ರಿನ್.

ಮನೆಯಲ್ಲಿಯೇ ಸಾವಯವ ಮೆಹೆಂದಿ ತಯಾರಿಸಿ, ಅವುಗಳನ್ನು ಕೋನ್‌ನಲ್ಲಿ ತುಂಬಿ ಮಾರಾಟ ಮಾಡಿ ಸ್ವಾವಲಂಬಿಗಳಾದ ಮಹಿಳೆಯರು ಹಲವರಿದ್ದಾರೆ. ಮೆಹೆಂದಿ ಬಿಡಿಸುವುದು ಗೊತ್ತಿದ್ದರೆ ಬೋನಸ್. ಮನೆಯಲ್ಲಿ ಸಮಯ ಇದ್ದಾಗ ಮೆಹೆಂದಿ ಕೋನ್‌ಗಳನ್ನು ತಯಾರಿಸುತ್ತಿದ್ದೆ. ಸಾಮಾಜಿಕ ಜಾಲತಾಣಗಳ ಮೂಲಕ ಅವುಗಳನ್ನು ಮಾರಾಟ ಮಾಡಲು ಆರಂಭಿಸಿದೆ. ಹಬ್ಬ ಹಾಗೂ ಮದುವೆ ಋತುವಿನಲ್ಲಿ ಬೇಡಿಕೆ ಹೆಚ್ಚು. ವಿದೇಶಗಳಲ್ಲಿರುವವರೂ ಕೂಡ ಮೆಹೆಂದಿಗೆ ಆರ್ಡರ್ ನೀಡುತ್ತಾರೆ. ಮೆಹೆಂದಿ ಬಿಡಿಸಲೂ ಕರೆಯುತ್ತಾರೆ. ಟ್ರೆಂಡಿಂಗ್ ವಿನ್ಯಾಸಗಳನ್ನು ಯೂಟ್ಯೂಬ್ ನೋಡಿ ಕಲಿಯುತ್ತೇನೆ. ಮನೆಯಲ್ಲಿ ಸುಮ್ಮನಿದ್ದ ನನಗೆ ಈಗ ಆದಾಯದ ಮೂಲವೂ ಆಗಿದೆ. ಎನ್ನುವುದು ದಕ್ಷಿಣ ಕನ್ನಡ ಜಿಲ್ಲೆಯ ಅಲಂಗಾರ್‌ನ ಫರೀದಾ ಶಾಹಿದ್. ❖

ಯುಗಾದಿಗೆ ಹೊಸಬಗೆಯ ಹೋಳಿಗೆ

ಯುಗಾದಿಗೆ ಬಗೆಬಗೆಯ ಹೋಳಿಗೆಯ ರೆಸಿಪಿ ನೀಡಿದ್ದಾರೆ **ಪ್ರಭಾ ಶಾಸ್ತ್ರಿ**

ರಸಸ್ವಾದ

ಹೆಸರುಬೇಳೆ ಹೋಳಿಗೆ

ಬೇಕಾಗುವ ಸಾಮಗ್ರಿಗಳು: ಹೆಸರುಬೇಳೆ-1ಕಪ್, ಸಕ್ಕರೆ-1/2ಕಪ್, ಎಲಕ್ಕಿ ಪುಡಿ ಸ್ವಲ್ಪ, ತುಪ್ಪ-2ಚಮಚ, ಹಾಲು-2ಚಮಚ, ಪೇಣಿ ರವೆ-1/2ಕಪ್, ಗೋಧಿಹಿಟ್ಟು-1/2ಕಪ್, ಸ್ವಲ್ಪ ಉಪ್ಪು, ಅರಿಶಿನ ಸ್ವಲ್ಪ, ಎಣ್ಣೆ-4ಚಮಚ.

ಮಾಡುವ ವಿಧಾನ: ಹೆಸರುಬೇಳೆಯನ್ನು ಬಣ್ಣ ಸ್ವಲ್ಪ ಬದಲಾಗುವವರೆಗೆ ಹುರಿದುಕೊಂಡು ನುಣ್ಣಗೆ ಪುಡಿಮಾಡಿಕೊಳ್ಳಬೇಕು. ಸಕ್ಕರೆಯನ್ನು ಪುಡಿಮಾಡಿಕೊಂಡು ಎರಡನ್ನು ಪಾತ್ರೆಗೆ ಹಾಕಿ ತುಪ್ಪಹಾಕಿ ಕಲೆಸಿ, ಹಾಲನ್ನು ಹಾಕಿ ಮೃದುಮಾಡಿಕೊಳ್ಳಬೇಕು. ಹೂರಣ ರೆಡಿ.
ಪೇಣಿರವೆ, ಗೋಧಿ ಹಿಟ್ಟು, ಸ್ವಲ್ಪ ಉಪ್ಪು, ಅರಿಶಿನ ಹಾಕಿ ಸ್ವಲ್ಪ ನೀರು ಹಾಕಿ ಚಪಾತಿ ಹಿಟ್ಟಿನಂತೆ ಕಲೆಸಿ ಮೂರು ಚಮಚ ಎಣ್ಣೆಹಾಕಿ ನಾದಿ ಎರಡು ಗಂಟೆಕಾಲ ಮುಚ್ಚಿ ಇಡಿ. ಕಣಕ ರೆಡಿ.
ಕಣಕವನ್ನು ಕೈಯಲ್ಲಿ ತಟ್ಟಿ ಅಗಲವಾಗಿಸಿ, ಹೂರಣದ ಉಂಡೆ ಇಟ್ಟು ಮುಚ್ಚಿ. ಹೋಳಿಗೆ ಶೀಟಿಗೆ ಎಣ್ಣೆಹಚ್ಚಿಕೊಂಡು ತುಂಬಿದ ಉಂಡೆ ಇಟ್ಟು ಲಟ್ಟಿಸಿ. ಕಾದ ತವಾದ ಮೇಲೆ ಹಾಕಿ ಸಣ್ಣ ಉರಿಯಲ್ಲಿ ಬೇಯಿಸಿ ತೆಗೆಯಿರಿ.

ಗಸಗಸೆಯ ಹೋಳಿಗೆ

ಬೇಕಾಗುವ ಸಾಮಗ್ರಿಗಳು: ಗಸಗಸೆ-1 ಕಪ್, ಒಣ ಕೊಬ್ಬರಿ ತುರಿ-1ಕಪ್, ಬೆಲ್ಲ-3/4ಕಪ್, ಎಲಕ್ಕಿ ಪುಡಿ ಸ್ವಲ್ಪ, ಪೇಣಿ ರವೆ-1/2ಕಪ್, ಗೋಧಿಹಿಟ್ಟು-1/2ಕಪ್, ಸ್ವಲ್ಪ ಉಪ್ಪು, ಅರಿಶಿನ ಸ್ವಲ್ಪ, ಎಣ್ಣೆ-4ಚಮಚ.
ಮಾಡುವ ವಿಧಾನ: ಗಸಗಸೆ, ಕೊಬ್ಬರಿತುರಿ ಎರಡನ್ನು ನುಣ್ಣಗೆ ಪುಡಿ ಮಾಡಿಕೊಂಡು, ದಪ್ಪ ತಳದ ಪಾತ್ರ್ರೆಗೆ ಹಾಕಿ ಬೆಲ್ಲ ಎಲ್ಲಕ್ಕಿಪುಡಿ ಹಾಕಿ ನೀರು ಎರಡು ಚಮಚ ಹಾಕಿ ಒಲೆಯ ಮೇಲೆ ಇಟ್ಟು ಮಗುಚಿ ಗಟ್ಟಿಯಾದ ನಂತರ ಇಳಿಸಿ ಹೂರಣ ರೆಡಿ. ಪೇಣಿರವೆ, ಗೋಧಿ ಹಿಟ್ಟು, ಸ್ವಲ್ಪ ಉಪ್ಪು, ಅರಿಶಿನ ಹಾಕಿ ಸ್ವಲ್ಪ ನೀರು ಹಾಕಿ ಚಪಾತಿ ಹಿಟ್ಟಿನಂತೆ ಕಲೆಸಿ ಮೂರು ಚಮಚ ಎಣ್ಣೆಹಾಕಿ ನಾದಿ ಎರಡು ಗಂಟೆಕಾಲ ಮುಚ್ಚಿ ಇಡಿ.

ಕಣಕ ಮೆದುವಾದಷ್ಟೂ ಹೋಳಿಗೆ ತೀಡುವುದು ಸುಲಭವಾಗುತ್ತದೆ. ಹೂರಣದಲ್ಲಿ ನೀರಿನಂಶ ಉಳಿಯದಂತೆ ನೋಡಿಕೊಳ್ಳಿ. ಉಳಿದ ಹೋಳಿಗೆಗಳಂತೆಯೇ ಕಣಕಕ್ಕೆ ಹೂರಣ ತುಂಬಿಸಿ, ಲಟ್ಟಿಸಿ. ಕೊಬ್ಬರಿಯ ಘಮ ಹರಡುವಾಗ ಕಾವಲಿಯಿಂದ ತೆಗೆಯಿರಿ.

ಪನ್ನಿರ್ ಒಬ್ಬಟ್ಟು

ಬೇಕಾಗುವ ಸಾಮಗ್ರಿಗಳು: ಪನ್ನಿರ್ ತುರಿದಿದ್ದು-1ಬಟ್ಟಲು, ಸಪ್ಪೆಕೋವಾ-1/4ಬಟ್ಟಲು, ಸಕ್ಕರೆಪುಡಿ-1/4ಬಟ್ಟಲು, ಎಲಕ್ಕಿಪುಡಿ ಸ್ವಲ್ಪ, ಪೇಣಿ ರವೆ-1/2ಕಪ್, ಗೋಧಿಹಿಟ್ಟು-1/2ಕಪ್, ಸ್ವಲ್ಪ ಉಪ್ಪು, ಅರಿಶಿನ ಸ್ವಲ್ಪ, ಎಣ್ಣೆ-4ಚಮಚ.

ಮಾಡುವ ವಿಧಾನ: ಒಂದು ಪಾತ್ರೆಗೆ ತುರಿದು ಪನ್ನಿರ್, ಕೋವಾ,ಸಕ್ಕರೆಪುಡಿ, ಎಲ್ಲಕ್ಕಿಪುಡಿ ಹಾಕಿ ಚನ್ನಾಗಿ ಕಲೆಸಿಕೊಳ್ಳಿ. ಹೂರಣ ರೆಡಿ.
ಪೇಣಿರವೆ, ಗೋಧಿ ಹಿಟ್ಟು, ಸ್ವಲ್ಪ ಉಪ್ಪು, ಅರಿಶಿನ ಹಾಕಿ ಸ್ವಲ್ಪ ನೀರು ಹಾಕಿ ಚಪಾತಿ ಹಿಟ್ಟಿನಂತೆ ಕಲೆಸಿ ಮೂರು ಚಮಚ ಎಣ್ಣೆಹಾಕಿ ನಾದಿ ಎರಡು ಗಂಟೆಕಾಲ ಮುಚ್ಚಿ ಇಡಿ. ಕಣಕ ರೆಡಿ.
ಕಣಕವನ್ನು ಅಗಲ ಮಾಡಿಕೊಂಡು, ಹೂರಣ ತುಂಬಿ, ಹೂದಳದಂತೆ ಕಣಕವನ್ನು ಮಡಚುತ್ತ ಉಂಡೆ ಮಾಡಿ. ಇದನ್ನು ಹೋಳಿಗೆ ಶೀಟಿಗೆ ಎಣ್ಣೆಹಚ್ಚಿ ಲಟ್ಟಿಸಿ. ತುದಿ ತೆಳುವಾಗುವಂತೆ ನೋಡಿಕೊಳ್ಳಿ. ಉಳಿದ ಹೋಳಿಗೆಗಳಂತೆಯೇ ಬೇಯಿಸಿ.

ಕೋವಾ ಹೋಳಿಗೆ

ಬೇಕಾಗುವ ಸಾಮಗ್ರಿಗಳು: ಸಪ್ಪೆಕೋವಾ-1ಬಟ್ಟಲು, ಬೆಲ್ಲ-1/4ಬಟ್ಟಲು, ಗೋಧಿಹಿಟ್ಟು-2ಚಮಚ, ಎಲಕ್ಕಿ ಪುಡಿ ಸ್ವಲ್ಪ, ತುಪ್ಪ-2ಚಮಚ, ಪೇಣಿ ರವೆ-1/2ಕಪ್, ಗೋಧಿಹಿಟ್ಟು-1/2ಕಪ್, ಸ್ವಲ್ಪ ಉಪ್ಪು, ಅರಿಶಿನ ಸ್ವಲ್ಪ, ಎಣ್ಣೆ-4ಚಮಚ.
ಮಾಡುವ ವಿಧಾನ: ದಪ್ಪತಳದ ಪಾತ್ರೆಯನ್ನು ಒಲೆಯ ಮೇಲೆ ಇಟ್ಟು ಬಿಸಿಯಾದ ಮೇಲೆ ಒಂದು ಚಮಚ ತುಪ್ಪಹಾಕಿ ಗೋಧಿಹಿಟ್ಟು ಹಾಕಿ ಪರಿಮಳ ಬರುವವರೆಗೆ ಹುರಿದು ತೆಗೆದು ಇಟ್ಟುಕೊಳ್ಳಿ. ಅದೇ ಪಾತ್ರೆಗೆ ಒಂದು ಚಮಚ ತುಪ್ಪಹಾಕಿ ಕೋವಾಹಾಕಿ ಮಗುಚಿ ಬೆಲ್ಲ, ಎಲಕ್ಕಿಪುಡಿ ಹಾಕಿ ಮಗುಚಿ ಹುರಿದಿಟ್ಟು ಗೋಧಿಹಿಟ್ಟು ಹಾಕಿ ಚೆನ್ನಾಗಿ ಮಗುಚಿ ಸ್ವಲ್ಪ ಗಟ್ಟಿಯಾದ ಮೇಲೆ ಇಳಿಸಿ. ಹೂರಣ ರೆಡಿ.
ಪೇಣಿರವೆ, ಗೋಧಿ ಹಿಟ್ಟು, ಸ್ವಲ್ಪ ಉಪ್ಪು, ಅರಿಶಿನ ಹಾಕಿ ಸ್ವಲ್ಪ ನೀರು ಹಾಕಿ ಚಪಾತಿ ಹಿಟ್ಟಿನಂತೆ ಕಲೆಸಿ ಮೂರು ಚಮಚ ಎಣ್ಣೆಹಾಕಿ ನಾದಿ ಎರಡು ಗಂಟೆಕಾಲ ಮುಚ್ಚಿ ಇಡಿ. ಕಣಕ ರೆಡಿ.
ಕಣಕದೊಳಗೆ ಕೊವಾ ಇಡುವಾಗ ಅದು ಉಂಡೆಯಾಕಾರದಲ್ಲಿಯೇ ಇಡಬೇಕು. ಇಲ್ಲದಿದ್ದಲ್ಲಿ ಲಟ್ಟಿಸುವಾಗ ತುದಿಯವರೆಗೂ ಹೂರಣ ಬರುವುದಿಲ್ಲ. ಇದನ್ನು ಎಚ್ಚರದಿಂದ ಗಮನಿಸಿ, ಲಟ್ಟಿಸಿ. ಕಾದ ಹಂಚಿಗೆ ಹಾಕಿ ಸಣ್ಣ ಉರಿಯಲ್ಲಿ ಬೇಯಿಸಿ.

ಬೇಸಿಗೆಗೆ ಲಘು ಉಡುಗೆ

ರೂಪಾ ಕೆ.ಎಂ.

ಬೇಸಿಗೆಯ ಧಗೆ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ. ಉಡಲು–ತೊಡಲು ಆಯ್ಕೆ ಮಾಡುವ ಬಟ್ಟೆಗಳು ಹಾಗೂ ಅವುಗಳ ಬಣ್ಣಗಳು ಬೇಸಿಗೆಯನ್ನು ಇನ್ನಷ್ಟು ಸಹ್ಯಗೊಳಿಸಲು ನೆರವಾಗುತ್ತವೆ. ಏರುತ್ತಿರುವ ತಾಪಮಾನಕ್ಕೆ, ಸೆಕೆಗೆ ಹಿತವೆನಿಸುವ ಬಟ್ಟೆಗಳಿಗೆ ಆದ್ಯತೆ ಕೊಟ್ಟು, ವಾರ್ಡ್‌ರೋಬ್ ಅನ್ನು ಮರುಜೋಡಿಸುವ ಕೆಲಸ ಆಗಲಿ.

ಸೀರೆ ಉಡುವವರಾದರೆ ಕೈಮಗ್ಗ ಕಾಟನ್ ಸೀರೆಗಳು, ಖಾದಿ ಕಾಟನ್, ಚಾಂದೇರಿ ಕಾಟನ್, ಬಾಂದನಿ ಕಾಟನ್, ಮಾಹೇಶ್ವರಿ ಕಾಟನ್ ಹೀಗೆ ಇಚ್ಛೆಯನುಸಾರ ಆದ್ಯತೆ ನೀಡಬಹುದು. ಕುರ್ತಾಗಳು, ಮ್ಯಾಕ್ಸಿ. ಮಿನಿಸ್‌ಗಳು ಸಮ್ಮರ್ ಕಲೆಕ್ಷನ್‌ನಲ್ಲಿ ಅಗತ್ಯವಾಗಿರಲಿ.

ಸ್ಟ್ರ್ಯಾಪಿ ಮಿಡಿ: ಕಾಟನ್ ಸ್ಟ್ರ್ಯಾಪಿ ಮಿಡಿಗಳು ಬಿಸಿಲಿಗೆ ಹೇಳಿ ಮಾಡಿಸಿದ ಬಟ್ಟೆಗಳು. ಬಹಳ ಸುಲಭವಾಗಿ ಧರಿಸಬಹುದಾದ, ಕ್ಲಾಸಿಕ್ ಹಾಗೂ ಕಾಟೆಂಪರರಿ ಲುಕ್ ನೀಡುವ ಸ್ಟ್ರ್ಯಾಪಿ ಮಿಡಿಗಳು ಹೈ -ನೆಕ್‌ಲೈನ್, ಸ್ಕ್ವೇರ್ ನೆಕ್‌ಲೈನ್, ವಿ ನೆಕ್‌ಲೈನ್ ಹೀಗೆ ತರಹೇವಾರಿಯಲ್ಲಿ ನೆಕ್‌ಲೈನ್‌ಗಳಲ್ಲಿ ಲಭ್ಯವಿದೆ. ಬಿಳಿ, ಹಸಿರು ಹೀಗೆ ಆದಷ್ಟು ತಿಳಿ ಬಣ್ಣವನ್ನು ಆಯ್ಕೆ ಮಾಡಿಕೊಳ್ಳಿ. ಇದರ ಮೇಲೊಂದು ಹಗುರವೆನಿಸುವ ಲೆನಿನ್ ಕೋಟ್ ಧರಿಸಿದರೆ ಆಫೀಸಿಗೂ ಹಾಕಿಕೊಂಡು ಹೋಗಬಹುದು. ಕ್ಯಾಷುಯಲ್ ವೇರ್, ಆಫೀಸ್‌ವೇರ್ ಎರಡಕ್ಕೂ ಹೊಂದಿಕೊಳ್ಳುವ ಉಡುಗೆಯಿದು.

ಥಾಲಿಯಾ ಮ್ಯಾಕ್ಸಿ ಡ್ರೆಸ್: ಬೇಸಿಗೆ ಕಾಲಕ್ಕೆ ಸೂಕ್ತವೆನಿಸುವ ಬಟ್ಟೆ ಎಂದರೆ ಮ್ಯಾಕ್ಸಿ ಡ್ರೆಸ್. ಬೀಚ್, ಪಾರ್ಟಿ ಅಥವಾ ಪ್ರವಾಸಕ್ಕೆ ಹೋಗುವವರಾದರೆ ಮ್ಯಾಕ್ಸಿ ಡ್ರೆಸ್ ಅನ್ನು ಆಯ್ಕೆ ಮಾಡಿಕೊಳ್ಳಬಹುದು. ಎರಡೂ ಬಣ್ಣಗಳನ್ನು ಹೊಂದಿರುವ ಮ್ಯಾಕ್ಸಿ ಮೇಲೆ ಬಣ್ಣ ಬಣ್ಣದ ಬ್ಲಾಕ್ ಪ್ರಿಂಟ್‌ಗಳಿದ್ದರೆ ಅವುಗಳನ್ನು ಥಾಲಿಯಾ ಮ್ಯಾಕ್ಸಿ ಡ್ರೆಸ್ ಎನ್ನಲಾಗುತ್ತದೆ. ಕೆಂಪು ಮತ್ತು ಬಿಳಿ ಬಣ್ಣದ ಮ್ಯಾಕ್ಸಿ ಡ್ರೆಸ್ ಮೇಲೆ ಬ್ಲಾಕ್ ಪ್ರಿಂಟ್ಸ್ ಇರುವ ಮ್ಯಾಕ್ಸಿ ಡ್ರೆಸ್‌ಗಳು ಹಿತವಾಗಿರುತ್ತದೆ. ಬ್ರಾಡ್ ನೆಕ್ ವಿಥ್ ಸ್ಟ್ರೈಪ್ಸ್ ಇರುವ ಮ್ಯಾಕ್ಸಿ ಡ್ರೆಸ್‌ಗಳು ಸದ್ಯದ ಟ್ರೆಂಡ್. ಚಂದದ ಕಾಲರ್ ಬೋನ್ ಇರುವವರಿಗೆ ಈ ಡ್ರೆಸ್ ಚೆನ್ನಾಗಿ ಒಪ್ಪುತ್ತದೆ.

ಫ್ಲೋರಲ್ ಮ್ಯಾಕ್ಸಿ: ಮ್ಯಾಕ್ಸಿ ಮೇಲೆ ಚಂದದ, ಕಣ್ಣಿಗೆ ಹಿತವೆನಿಸುವ ಹೂಗಳ ಪ್ರಿಂಟ್ ಇದ್ದರೆ ಅದನ್ನು ಫ್ಲೋರಲ್ ಮ್ಯಾಕ್ಸಿ ಎಂದು ಕರೆಯಲಾಗುತ್ತದೆ. ಇದು ಎಲ್ಲ ಕಾಲಕ್ಕೂ ಬೇಸಿಗೆಯ ಟ್ರೆಂಡ್ ಎನಿಸಿಕೊಂಡ ಬಟ್ಟೆ. ತುಂಬು ತೋಳಿನ ಹಾಗೂ ತೋಳೆ ಇಲ್ಲದ ಫ್ಲೋರಲ್ ಮ್ಯಾಕ್ಸಿಗಳು ಕಾಲೇಜು ಯುವತಿಯರ ಅಚ್ಚುಮೆಚ್ಚು. ಎಲ್ಲ ಬಣ್ಣಗಳಲ್ಲಿ, ಬಗೆ ಬಗೆಯ ಹೂಗಳ ಪ್ರಿಂಟ್ ಇರುವ ಫ್ಲೋರಲ್ ಮ್ಯಾಕ್ಸಿಗಳು ಸದ್ಯಕ್ಕೆ ಚಾಲ್ತಿಯಲ್ಲಿವೆ. ಕಾಟನ್, ಶಿಫಾನ್. ಲೆನಿನ್ ಮೂರು ಬಟ್ಟೆಗಳಲ್ಲಿ ಬರುವ ಫ್ಲೋರಲ್ ಮ್ಯಾಕ್ಸಿ ತೊಡಲು ಹಿತವೆನಿಸುತ್ತದೆ.

ಶರ್ಟ್ ಡ್ರೆಸ್: ಕಾಲರ್, ಫ್ರಂಟ್ ಬಟನ್, ತೋಳಿನಪಟ್ಟಿ ಹೀಗೆ ಶರ್ಟಿನ ವಿನ್ಯಾಸವನ್ನು ಎರವಲು ಪಡೆದ ಮಿಡಿ ಮಾದರಿಯ ಬಟ್ಟೆಯಿದು. ಕಾಟನ್, ಸಿಲ್ಕ್, ಲೆನಿನ್ ಹೀಗೆ ಬಗೆಬಗೆಯ ಬಟ್ಟೆಯಲ್ಲಿಯೂ ಶರ್ಟ್‌ಡ್ರೆಸ್ ಅನ್ನು ನೋಡಬಹುದು. ಇದಕ್ಕೊಪ್ಪುವ ಸೊಂಟದ ಬೆಲ್ಟ್ ಧರಿಸಿಬಿಟ್ಟರೆ ಬಹಳ ಸ್ಟೈಲಿಶ್ ಆಗಿ ಕಾಣುತ್ತದೆ. ❖

ದೊಗಲೆ ಅಥವಾ ಓವರ್‌ಸೈಸ್ಡ್ ಈಗ ಟ್ರೆಂಡ್

ಬೇಸಿಗೆಯಲ್ಲಿ ಯಾವುದೇ ಬಗೆಯ ವಿನ್ಯಾಸವಿರುವ ದೊಗಲೆ ಅಥವಾ ಓವರ್ ಸೈಸ್ಡ್ ಬಟ್ಟೆ ಧರಿಸುವುದು ಟ್ರೆಂಡ್. ಯಾವುದರ ಮೇಲೆ ಈ ಓವರ್ ಸೈಸ್ಡ್ ಅನ್ನು ಧರಿಸುತ್ತೀರಿ ಎನ್ನುವುದು ಕೂಡ ಮುಖ್ಯವಾಗುತ್ತದೆ. ಉದಾಹರಣೆಗೆ ತಿಳಿನೀಲಿ ಜೀನ್ಸ್ ಮೇಲೆ ದೊಗಳೆ ಅಥವಾ ಓವರ್‌ಸೈಸ್ಡ್ ಎನಿಸುವ ಬಿಳಿ ಶರ್ಟ್ ಡ್ರೆಸ್ ಧರಿಸಿ, ಅದಕ್ಕೊಪ್ಪುವ ಬೆಲ್ಟ್ ಹಾಕಿಬಿಟ್ಟರೆ ಕಾಂಟೆಂಪರರಿ ಲುಕ್ ನೀಡುತ್ತದೆ ಎನ್ನುವುದರಲ್ಲಿ ಎರಡು ಮಾತಿಲ್ಲ.

DH DECCAN HERALD | ಪ್ರಜಾವಾಣಿ

ಎಡ್ಯುವರ್ಸ್™

ಪ್ರಿಮಿಯರ್ ಎಜುಕೇಶನ್ ಎಕ್ಸ್‌ಪೋ

NEWS 1st | AD6 advertising

ಬೆಂಗಳೂರು: 06-07 ಏಪ್ರಿಲ್, 2024
ತ್ರಿಪುರವಾಸಿನಿ, ಅರಮನೆ ಮೈದಾನ

ಹುಬ್ಬಳ್ಳಿ: 13-14 ಏಪ್ರಿಲ್, 2024
ರಾಯ್ಕರ್ ಪ್ರದರ್ಶನ ಮೈದಾನ

ಕಾರ್ಯಸೂಚಿ

ದಿನ - 1 06 ಏಪ್ರಿಲ್, 2024	ಉದ್ಘಾಟನೆ ವಿಜಯ ರಾಘವೇಂದ್ರ 10:00 AM	CET ಕೌನ್ಸೆಲಿಂಗ್ ಎ ಎಸ್ ರವಿ 11:00 AM	ಅತಿಥಿ ಸ್ಪೀಕರ್ ಐಶ್ವರ್ಯಾ ಡಿ.ಕೆ. ಎಸ್ ಹೆಗ್ಡೆ 11:30 AM
ದಿನ - 2 07 ಏಪ್ರಿಲ್, 2024	Comed-K ಕೌನ್ಸೆಲಿಂಗ್ ಡಾ. ಎಸ್. ಕುಮಾರ್ 10:30 AM	ಆಫ್ ಬೀಟ್ ಕರಿಯರ್ಸ್ ಕುರಿತು ಉಪನ್ಯಾಸ : ಆರ್‌ಜೆ ರಜಸ್ 11:30 AM	ಪ್ರೇರಕ ಸ್ಪೀಕರ್ ಡಾ. ಗುರುರಾಜ ಕರ್ಜಗಿ 01:30 AM

ವಿವಿಧ ಸಾಧ್ಯತೆಗಳನ್ನು ಅನ್ವೇಷಿಸಿ, ಸರಿಯಾದ ಆಯ್ಕೆ ಮಾಡಿ!

ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ಕರೆ! ಇದೀಗ ನಿಮ್ಮ ಗುರಿ ರೂಪಿಸಿಕೊಳ್ಳುವ ಮತ್ತು ಉಜ್ವಲ ಭವಿಷ್ಯದ ಮಾರ್ಗ ನಿರ್ಮಿಸಿಕೊಳ್ಳುವ ಸಮಯ ಬಂದಿದೆ!

ಕರ್ನಾಟಕದ ಅತ್ಯಂತ ಪ್ರತಿಷ್ಠಿತ ಶಿಕ್ಷಣ ಮೇಳ – ಎಡ್ಯುವರ್ಸ್‌ನಲ್ಲಿ ಪಾಲ್ಗೊಳ್ಳಿರಿ ಮತ್ತು ಅಸೀಮಿತ ಸಾಧ್ಯತೆಗಳ ಬಾಗಿಲುಗಳು ತೆರೆದಿರುವ ಅನುಭವ ನಿಮ್ಮದಾಗಿಸಿಕೊಳ್ಳಿ. ಅಸಂಖ್ಯಾತ ಕೋರ್ಸ್‌ಗಳ ಬಗ್ಗೆ ತಿಳಿಯಿರಿ ಮತ್ತು ಉನ್ನತ ದರ್ಜೆಯ ಸಂಸ್ಥೆಗಳು ನೀಡುತ್ತಿರುವ ವೈವಿಧ್ಯಮಯ ಆಯ್ಕೆಗಳಲ್ಲಿನ ನಿಮ್ಮ ನೆಚ್ಚಿನ ಕೋರ್ಸ್ ಆಯ್ಕೆ ಮಾಡಿಕೊಳ್ಳಿ. ನೀವು ಇಂಜಿನಿಯರ್, ಡಾಕ್ಟರ್, ಡಿಸೈನರ್ ಅಥವಾ ಉದ್ಯಮಿಯಾಗಬೇಕೇ ಈ ನಮ್ಮ ಎಕ್ಸ್‌ಪೋ‌ದಲ್ಲಿ ಅತ್ಯುತ್ತಮ ಶೈಕ್ಷಣಿಕ ಸಂಸ್ಥೆಗಳು ನಿಮಗೆ ಒಟ್ಟಾಗಿ ಲಭಿಸುತ್ತವೆ ಮತ್ತು ನಿಮ್ಮನ್ನುಯಶಸ್ಸಿನೆಡೆಗೆ ಮುನ್ನಡೆಸಲು ಮಾರ್ಗದರ್ಶನ ನೀಡಲು ಸಹಾಯ ಮಾಡಲಿವೆ.

ಪ್ರವೇಶ ಉಚಿತ

ಕೋಡ್ ಸ್ಕ್ಯಾನ್ ಮಾಡಿ

CET ಮತ್ತು NEET ಮಾಕ್ ಪರೀಕ್ಷೆಗಾಗಿ ಈಗಲೇ ನೋಂದಾಯಿಸಿ. ಸ್ಮಾರ್ಟ್ ವಾಚ್‌ಗಳು, ಇಯರ್‌ಪಾಡ್‌ಗಳು ಮತ್ತು ಇನ್ನೂ ಹೆಚ್ಚಿನ ವಿಶೇಷ ಬಹುಮಾನಗಳನ್ನು ಗೆಲ್ಲಿರಿ...

University Pavilion Sponsors

AMITY UNIVERSITY BENGALURU · CMR UNIVERSITY · DAYANANDA SAGAR UNIVERSITY · GALGOTIAS UNIVERSITY · GARDEN CITY UNIVERSITY · GM UNIVERSITY · ICFAI Foundation for Higher Education · MANIPAL ACADEMY of HIGHER EDUCATION BENGALURU CAMPUS · RAMAIAH UNIVERSITY OF APPLIED SCIENCES · REVA UNIVERSITY · SAPTHAGIRI NPS UNIVERSITY · RV UNIVERSITY · CHANAKYA UNIVERSITY

Gold Sponsors

ABBS AUTONOMOUS · CAMBRIDGE INSTITUTE OF TECHNOLOGY · EAST POINT GROUP OF INSTITUTIONS · KLE ACADEMY OF HIGHER EDUCATION AND RESEARCH, BELAGAVI · KLS GIT · Karnataka Bank · KAMMAVARI SANGHAM GROUP OF INSTITUTIONS · KLE Technological University · NAGARJUNA COLLEGE OF ENGINEERING & TECHNOLOGY · THE Oxford EDUCATIONAL INSTITUTIONS

Silver Sponsors

EAST WEST GROUP OF INSTITUTIONS BENGALURU · MS ENGINEERING COLLEGE · RAJARAJESWARI COLLEGE OF ENGINEERING · BIJAPUR LINGAYAT DISTRICT EDUCATIONAL ASSOCIATION · NEW HORIZON COLLEGE OF ENGINEERING · SAMBHRAM INSTITUTIONS · ST JOSEPH ENGINEERING COLLEGE MANGALURU · JSS SCIENCE AND TECHNOLOGY UNIVERSITY MYSURU

Exhibitors

ACS COLLEGE OF ENGINEERING · AIMS INSTITUTES · AMRITA VISHWA VIDYAPEETHAM School of Engineering · ATRIA INSTITUTE OF TECHNOLOGY · Don Bosco Group of Institutions · S.E.A GROUP OF INSTITUTIONS · MES · YENEPOYA · HINDUSTAN COLLEGE · IIBS · IAS BABA · PES UNIVERSITY · SVIT · ACHARYA · S-VYASA · Navkis · SDMCET · Dr. S.R. Chandrasekhar Institute of Speech and Hearing · SURANA EDUCATIONAL INSTITUTIONS · ORIENT FLIGHTS · MIT-WPU · MIT WORLD PEACE UNIVERSITY PUNE · National Forensic Sciences University · GOPALAN GROUP OF INSTITUTIONS · VIDYASHILP UNIVERSITY · Bangalore STUDY.com · VVCE · MIT-ADT UNIVERSITY PUNE, INDIA

ಅತ್ಯಾಕರ್ಷಕ ಬಹುಮಾನಗಳನ್ನು ಗೆಲ್ಲುವ ಅವಕಾಶವನ್ನು ಪಡೆಯಿರಿ

ಪ್ರಜಾ ಮತ

2024 ಜನತಂತ್ರದ ಹಬ್ಬ

ಮತ ಪತ್ರ



ಮತ ಆಮಿಷ: ಆಯೋಗದ ವಶ

₹**34.59** ಕೋಟಿ ನಗದು

ಉಚಿತ ಉಡುಗೊರೆ	₹ 12.89 ಕೋಟಿ
ಮದ್ಯ	₹ 133.08 ಕೋಟಿ (1.33 ಕೋಟಿ ಲೀ)
ಮಾದಕವಸ್ತು	₹ 5.35 ಕೋಟಿ (313.72 ಕೆ.ಜಿ.)
ಚಿನ್ನ	₹ 9.43 ಕೋಟಿ (16.02 ಕೆ.ಜಿ.)
ಬೆಳ್ಳಿ	₹27.23 ಲಕ್ಷ (59.04 ಕೆ.ಜಿ.)

ಎಂಥಾ ಮಾತು!

ಎಚ್.ಡಿ. ಕುಮಾರಸ್ವಾಮಿ ಅವರು ಸಹಕಾರ ಕೊಡಿ ಎಂದು ಹೇಳಿದ್ದಾರೆ. ಪ್ರಚಾರಕ್ಕೆ ಬನ್ನಿ ಎಂದು ಕರೆದಿಲ್ಲ. ಮಂಡ್ಯದಲ್ಲಿ ಕುಮಾರಸ್ವಾಮಿ ಪರ ಪ್ರಚಾರ ಕುರಿತು ಪಕ್ಷದ ಸೂಚನೆಯಂತೆ ನಡೆದುಕೊಳ್ಳುತ್ತೇನೆ. ಇದು ಮಂಡ್ಯದ ಚುನಾವಣೆಯಲ್ಲ, ದೇಶಕ್ಕಾಗಿ ನಡೆಯುತ್ತಿರುವ ಚುನಾವಣೆ. 400ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆದ್ದು ಮೋದಿಯವರನ್ನು ಮತ್ತೊಮ್ಮೆ ಪ್ರಧಾನಿಯಾಗಿ ಮಾಡುವುದು ನಮ್ಮ ಗುರಿ

ಸುಮಲತಾ ಅಂಬರೀಷ್, ಮಂಡ್ಯ ಸಂಸದೆ



ಕಳೆದ ವಿಧಾನಸಭಾ ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ಪಕ್ಷ ಘೋಷಿಸಿದ್ದ ಗ್ಯಾರಂಟಿ ಯೋಜನೆಗಳನ್ನು ಹಲವರು ತಿರಸ್ಕಾರದಿಂದ ನೋಡುತ್ತಿದ್ದರು. ಈಗ 1.14 ಕೋಟಿ ಮಹಿಳೆಯರು ನೇರವಾಗಿ ಆರ್ಥಿಕ ಪ್ರಯೋಜನ ಪಡೆಯುತ್ತಿದ್ದಾರೆ. ರಾಜ್ಯದಲ್ಲಿ ಬಿಜೆಪಿಗೆ 10 ಸ್ಥಾನ ಕೂಡ ಬರುವುದಿಲ್ಲ ಎಂಬ ವರದಿಯನ್ನು ಕೇಂದ್ರ ಗುಪ್ತಚರ ಇಲಾಖೆಯವರು ಪ್ರಧಾನಿ ನರೇಂದ್ರ ಮೋದಿಯವರಿಗೆ ಕೊಟ್ಟಿದ್ದಾರಂತೆ. ನನಗಿರುವ ಮಾಹಿತಿ ಪ್ರಕಾರ, ಗ್ಯಾರಂಟಿ ಯೋಜನೆಗಳಿಂದಾಗಿ ಬಿಜೆಪಿಯ ಶೇಕಡ 10ರಿಂದ 15ರಷ್ಟು ಮತಗಳು ಕಾಂಗ್ರೆಸ್ ಪಕ್ಷಕ್ಕೆ ವರ್ಗಾವಣೆ ಆಗಲಿವೆ

ವಿನಯಕುಮಾರ್ ಸೊರಕೆ, ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ

ಮಾಜಿ 'ಸಿ.ಎಂ'ಗಳಿಗೆ ಬಡ್ತಿ ಕನಸು...

ಬೆಂಗಳೂರು: ಕರ್ನಾಟಕದ ಮುಖ್ಯಮಂತ್ರಿಗಳಾಗಿದ್ದ ಮೂವರು ಈ ಬಾರಿ ಲೋಕಸಭೆಗೆ 'ಬಡ್ತಿ' ಪಡೆದು, ಸಚಿವರಾಗುವ ಕನಸಿನಲ್ಲಿದ್ದಾರೆ.

ಮುಖ್ಯಮಂತ್ರಿ, ವಿಧಾನಸಭಾಧ್ಯಕ್ಷ, ವಿರೋಧ ಪಕ್ಷದ ನಾಯಕ, ಸಚಿವರಾಗಿ ಕೆಲಸ ಮಾಡಿರುವ ಜಗದೀಶ ಶೆಟ್ಟರ್, ಬಿಜೆಪಿಯಿಂದ ವಿಧಾನಸಭೆ– ಕಾಂಗ್ರೆಸ್‌ನಿಂದ ಪರಿಷತ್ತನ್ನು ಪ್ರತಿನಿಧಿಸಿದವರು. ಈಗ ಲೋಕಸಭೆಯತ್ತ ಚಿತ್ತ ನೆಟ್ಟಿದ್ದಾರೆ.

ಸಚಿವ ಸ್ಥಾನದ ಅನುಭವವೇ ಇಲ್ಲದೇ ಎರಡು ಬಾರಿ ಮುಖ್ಯಮಂತ್ರಿಯಾದ ಎಚ್.ಡಿ. ಕುಮಾರಸ್ವಾಮಿ, ಲೋಕಸಭೆ ಸದಸ್ಯರೂ ಆಗಿದ್ದರು. ಲೋಕಸಭೆಯ ಕನಸಿನೊಂದಿಗೆ ಈ ಬಾರಿ ಮಂಡ್ಯದಿಂದ ತಮ್ಮ ಅದೃಷ್ಟ ಪರೀಕ್ಷೆಗೆ ಇಳಿದಿದ್ದಾರೆ.

ಮುಖ್ಯಮಂತ್ರಿ, ಸಚಿವರಾಗಿ ಕಾರ್ಯನಿರ್ವಹಿಸಿದ ಬಸವರಾಜ ಬೊಮ್ಮಾಯಿ, ಮೊದಲ ಬಾರಿಗೆ ದೆಹಲಿಯತ್ತ ಮುಖ ಮಾಡಿದ್ದಾರೆ. ಜೆಡಿಯುನಿಂದ ಪರಿಷತ್, ಬಿಜೆಪಿಯಿಂದ ವಿಧಾನಸಭೆ ಪ್ರವೇಶಿಸಿದವರು.



ಜಗದೀಶ ಶೆಟ್ಟರ್
ಬೆಳಗಾವಿ, ಬಿಜೆಪಿ
2012ರ ಜುಲೈ 12ರಿಂದ 2013ರ ಮೇ 12ರವರೆಗೆ, (10 ತಿಂಗಳು)

ಎಚ್.ಡಿ.ಕುಮಾರಸ್ವಾಮಿ
ಮಂಡ್ಯ, ಜೆಡಿಎಸ್
- 2006ರ ಫೆಬ್ರುವರಿ 3ರಿಂದ 2007ರ ಅಕ್ಟೋಬರ್ 8ರವರೆಗೆ ಬಿಜೆಪಿ ಜತೆಗೆ ಸರ್ಕಾರ (1 ವರ್ಷ 8 ತಿಂಗಳು)
- 2018ರ ಮೇ 23ರಿಂದ 2019ರ ಜುಲೈ, 23ರವರೆಗೆ ಕಾಂಗ್ರೆಸ್ ಜತೆಗೆ ಸರ್ಕಾರ (1 ವರ್ಷ 2 ತಿಂಗಳು)

ಬಸವರಾಜ ಬೊಮ್ಮಾಯಿ
ಹಾವೇರಿ, ಬಿಜೆಪಿ
2021ರ ಜುಲೈ 27ರಿಂದ 2023ರ ಮೇ 20ರವರೆಗೆ (1 ವರ್ಷ 10 ತಿಂಗಳು)

'ಎಲ್ಲಿದೆ ಮೋದಿ ಗ್ಯಾರಂಟಿ?

ವಿಧಾನಸಭೆ ಚುನಾವಣೆಯಲ್ಲಿ ಭರ್ಜರಿ ಬಹುಮತದಿಂದ ಗೆದ್ದ ಗುಂಗಿನಲ್ಲಿರುವ ಕೆಪಿಸಿಸಿ ಅಧ್ಯಕ್ಷ ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, 'ಗ್ಯಾರಂಟಿ' ಫಲಾನುಭವಿಗಳ ಆಶೀರ್ವಾದ, ಬಿಜೆಪಿಗೆ ಇರುವ ವಿರೋಧಿ ಅಲೆಯ ಮೇಲೆ ಲೋಕಸಭೆಯಲ್ಲೂ ಭಾರಿ ಫಲಿತಾಂಶದ ನಿರೀಕ್ಷೆಯಲ್ಲಿದ್ದಾರೆ. ಬಿಜೆಪಿ–ಜೆಡಿಎಸ್ ಮೈತ್ರಿಕೂಟದಿಂದ ಕಾಂಗ್ರೆಸ್‌ಗೆ ಲಾಭವೇ ಆಗಲಿದೆ ಎಂಬ ಲೆಕ್ಕಾಚಾರದಲ್ಲೂ ಇದ್ದಾರೆ. ಈ ಎಲ್ಲದರ ಕುರಿತು 'ಪ್ರಜಾವಾಣಿ' ಜತೆ ಅವರು ಮಾತನಾಡಿರುವುದು ಇಲ್ಲಿದೆ.

• ರಾಜೇಶ್ ರೈ ಚಟ್ಲ

ಪ್ರಜಾವಾಣಿ ಸಂದರ್ಶನ
ಡಿ.ಕೆ. ಶಿವಕುಮಾರ್

- **ರಾಜ್ಯ ರಾಜಕೀಯದ ಸದ್ಯದ ಚಿತ್ರಣವನ್ನು ಹೇಗೆ ಗ್ರಹಿಸುತ್ತೀರಿ?**

ಇಷ್ಟು ಬೇಗ ಆಡಳಿತ ವಿರೋಧಿ ಅಲೆಯನ್ನು ಬಿಜೆಪಿ ಎದುರಿಸಬೇಕಾಗುತ್ತದೆ ಎಂದು ನಾನು ನಿರೀಕ್ಷೆ ಮಾಡಿರಲಿಲ್ಲ. ಗೆಲುವು ಸಾಧ್ಯವೇ ಇಲ್ಲ ಎಂಬ ಕಾರಣಕ್ಕೆ ರಾಜ್ಯದಲ್ಲಿ ಬಿಜೆಪಿ–ಜೆಡಿಎಸ್ ಒಂದಾಗಿವೆ. ಜೆಡಿಎಸ್‌ಗೆ ಅಸ್ತಿತ್ವದ ಪ್ರಶ್ನೆ. ಆದರೆ, ಜನ ಇದನ್ನು ಒಪ್ಪಲ್ಲ. ಇನ್ನು ಆಂತರಿಕ ಸಂಘರ್ಷ ಇದ್ದಾಗ ಗೊಂದಲ, ಚಿಂತೆ ಇರುತ್ತದೆ. ನಮ್ಮಲ್ಲಿ (ಕಾಂಗ್ರೆಸ್) ಅಂತಹ ಸಂಘರ್ಷ ಏನೂ ಇಲ್ಲ. ಅದೇ ಬಲ.

- **ಬಿಜೆಪಿ– ಜೆಡಿಎಸ್ 'ಮೈತ್ರಿ' ಪರಿಣಾಮ ಬೀರುವುದಿಲ್ಲವೇ?**

ಜನ ನಂಬಬೇಕಲ್ಲವೇ? ನಾವು (ಕಾಂಗ್ರೆಸ್) ಜೆಡಿಎಸ್‌ಗೆ ಬೆಂಬಲ ನೀಡಿದಾಗ ಯಡಿಯೂರಪ್ಪ, 'ಏಯ್... ಡಿ.ಕೆ. ನೆನಪಿಟ್ಟುಕೊಂಡಿರು. ಈ ಅಪ್ಪ, ಮಗನನ್ನು ನಂಬಬೇಡ, ಬೆನ್ನಿಗೆ ಚೂರಿ ಹಾಕುವವರು' ಅಂದಿದ್ದರು. ಅಂತಹ ಮಾತುಗಳನ್ನು ಜನ ಮರೆಯಲು ಸಾಧ್ಯವೇ?

- **'ಗ್ಯಾರಂಟಿ'ಗಳು 'ಕೈ'ಹಿಡಿಯಲಿವೆ ಎಂಬ ವಿಶ್ವಾಸವೇ?**

'ಗ್ಯಾರಂಟಿ' ಮತ ಅಲ್ಲ. ಜನರ ಬದುಕಿಗೆ ಆಧಾರ. ಜನ ಉಪಕಾರ ಸ್ಮರಣೆ ತೋರಿಸುವ ನಂಬಿಕೆಯಿದೆ. ಜೊತೆಗೆ, ನಮ್ಮ ಪಕ್ಷದ ಕೇಂದ್ರದ ಪ್ರಣಾಳಿಕೆಯಲ್ಲಿ ಎಲ್ಲ ವರ್ಗಗಳಿಗೂ ಗ್ಯಾರಂಟಿಗಳನ್ನು ಘೋಷಿಸಿದ್ದೇವೆ. ನಾವು ಅಧಿಕಾರಕ್ಕೆ ಬಂದಿರುವ ತೆಲಂಗಾಣ, ಕರ್ನಾಟಕ, ಹಿಮಾಚಲ ಪ್ರದೇಶ ರಾಜ್ಯದಲ್ಲಿ 'ಗ್ಯಾರಂಟಿ'ಗಳನ್ನು ಅನುಷ್ಠಾನ ಮಾಡಿದ್ದೇವೆ. ಹೆಚ್ಚು ವಿಶ್ವಾಸದಿಂದ ಜನರ ಮುಂದೆ ನಾವಿದ್ದೇವೆ. 10 ವರ್ಷಗಳಲ್ಲಿ ಜನರ ಭಾವನೆಗಳನ್ನು ಕೆರಳಿಸಿದ ಸಿಎಎ, 370 ರದ್ದತಿಯಂಥ ಘೋಷಣೆಗಳನ್ನು ಬಿಟ್ಟರೆ ಬದುಕಿಗೆ ನೆರವಾಗುವ ಯಾವುದಾರೂ ಯೋಜನೆಯನ್ನು ಎನ್‌ಡಿಎ ತಂದಿದೆಯೇ?

- **ಹಾಗಿದ್ದರೆ, ಮೋದಿ 'ಗ್ಯಾರಂಟಿ' ?**

ಎಲ್ಲಿದೆ ಮೋದಿ ಗ್ಯಾರಂಟಿ? ಪ್ರತಿಯೊಬ್ಬರ ಖಾತೆಗೆ ₹ 15 ಲಕ್ಷ ಬಂತೇ? ಕಪ್ಪು ಹಣ ತಂದ್ರಾ? ರೈತರ ಆದಾಯ ಇಮ್ಮಡಿ ಆಗಿದೆಯೇ? 2 ಕೋಟಿ ಉದ್ಯೋಗ ಎಲ್ಲಿದೆ? ಕೋವಿಡ್ ಸಂದರ್ಭದಲ್ಲಿ ಜನರಿಗೆ ₹ 20 ಲಕ್ಷ ಕೋಟಿ ಕೊಟ್ಟಿದ್ದೇವೆಂದು ನಿರ್ಮಲಾ ಸೀತಾರಾಮನ್ ಹೇಳುತ್ತಾರೆ. ಯಾರಿಗೆ ಹಣ ಬಂದಿದೆ? ಯಾವ ವರ್ಗದವರ ಕೈ ಸೇರಿದೆ? ಮೋದಿ ಹೆಸರೇ 'ಗ್ಯಾರಂಟಿ' ಎಂದು ಬಿಜೆಪಿಯವರು ಹೇಳುತ್ತಿದ್ದಾರೆ, ಅದರಿಂದ ಯಾರದಾದರೂ ಹೊಟ್ಟೆ ತುಂಬುತ್ತದೆಯೇ?

- **ಅಯೋಧ್ಯೆಯ ಬಾಲರಾಮನ ಪ್ರಭಾವ?**

ಫೋಟೊದಲ್ಲಿ, ಹೃದಯದಲ್ಲಿ ರಾಮ ಇದ್ದಾನೆ. ಚುನಾವಣೆಯಲ್ಲಿ ಇಲ್ಲ. ಭಾವನೆಗೆ ರಾಮ. ಬದುಕಿಗೆ ಅಲ್ಲ.

- **ಜೆಡಿಎಸ್ ಸಖ್ಯದ ಕಾರಣಕ್ಕೆ ಬಿಜೆಪಿಯತ್ತ ಒಕ್ಕಲಿಗರು ವಾಲಬಹುದೆಂಬ ಆತಂಕವಿದೆಯೇ?**

ಒಕ್ಕಲಿಗ ಸಮುದಾಯಕ್ಕೆ ಬಿಜೆಪಿಯವರು ಅವಮಾನ ಮಾಡಿದ್ದಾರೆ. ಹಾಲಿ ಸಂಸದರಿಗೆ ಟಿಕೆಟ್ ನಿರಾಕರಿಸಿದರು. ಸದಾನಂದ ಗೌಡ, ಪ್ರತಾಪ್ ಸಿಂಹ, ನಳಿನ್‌ಕುಮಾರ್ ಕಟೀಲ್ ಏನು ತಪ್ಪು ಮಾಡಿದ್ದಾರೆ? ಪಕ್ಷ ನಿಷ್ಠೆಯಿಂದ ದುಡಿದವರನ್ನು ದೂರ ಇಟ್ಟರು. ಬಿಜೆಪಿಗಿದು ತಿರುಗುಬಾಣವಾಗಲಿದೆ.

- **ಒಕ್ಕಲಿಗರಿಗೆ ಎಂಟು ಟಿಕೆಟ್ ಕೊಟ್ಟಿದ್ದೀರಿ. ಒಳಗುಟ್ಟೇನು?**

ಗೆಲ್ಲುವ ಅವಕಾಶ ನೋಡಿಕೊಂಡು ಒಕ್ಕಲಿಗರಿಗೆ, ಲಿಂಗಾಯತರಿಗೆ ಟಿಕೆಟ್ ಕೊಟ್ಟಿದ್ದೇವೆ. ಪರಿಶಿಷ್ಟ ಸಮುದಾಯದ ಬಲಗೈಗೆ ಮೂರು ಕಡೆ ಕೊಟ್ಟಿದ್ದೇವೆ. ಅಲ್ಪಸಂಖ್ಯಾತರು, ಹಿಂದುಳಿದ ವರ್ಗಕ್ಕೆ ಹಿಂದೆ ಆದ್ಯತೆ ಸಿಗುತ್ತಿತ್ತು. ಈ ಬಾರಿ ಕಾರ್ಯತಂತ್ರ ಬದಲಿಸಿಕೊಂಡಿದ್ದೇವೆ. 43 ವರ್ಷಗಳ ಬಳಿಕ ಮೈಸೂರಿನಲ್ಲಿ ಒಕ್ಕಲಿಗರಿಗೆ ಟಿಕೆಟ್ ನೀಡಿದ್ದೇವೆ.

- **ಟಿಕೆಟ್ ಹಂಚಿಕೆಯಲ್ಲಿ ಕುಟುಂಬ ಸದಸ್ಯರದ್ದೇ ಪಾರುಪತ್ಯ. ಸೋಲಿನ ಭಯದಿಂದ ಸಚಿವರು ಸ್ಪರ್ಧೆಗೆ ಹಿಂಜರಿದರೇ?**

ಸ್ಥಳೀಯ ರಾಜಕೀಯ ಸ್ಥಿತಿಗತಿ ನೋಡಿ ಟಿಕೆಟ್ ನೀಡಿದ್ದೇವೆ. ಸಚಿವರನ್ನು ಕಣಕ್ಕಿಳಿಸುವ ಬಗ್ಗೆ ಚರ್ಚೆಯಾಗಿರುವುದು ನಿಜ. ಹಾಗೆಂದು ಅವರಾಗಿಯೇ ಹಿಂದೆ ಸರಿದಿಲ್ಲ. ಹೊಸ ಮುಖ, ವಿದ್ಯಾವಂತರು, ಪಕ್ಷ ಸಂಘಟನೆಯಲ್ಲಿ ಸಕ್ರಿಯರಾಗಿದ್ದಾರೆಂದು ಸಚಿವರ ಮಕ್ಕಳಿಗೆ, ರಕ್ಷಾ ರಾಮಯ್ಯನಂಥವರಿಗೆ ಟಿಕೆಟ್ ಕೊಟ್ಟಿದ್ದೇವೆ. ಭವಿಷ್ಯದಲ್ಲಿ ಪಕ್ಷಕ್ಕೆ, ಸಂಸತ್ತಿಗೆ ಅವರೆಲ್ಲ ದೊಡ್ಡ ಆಸ್ತಿಯಾಗಲಿದ್ದಾರೆ.

- **ಕೋಲಾರ ಟಿಕೆಟ್ ವಿಷಯದಲ್ಲಿ ಕೊನೆಗೂ ರಾಜಿ ಸಂಧಾನ ಸಾಧ್ಯವಾಗಲಿಲ್ಲವಲ್ಲ?**

ಇಬ್ಬರನ್ನೂ (ಕೆ.ಎಚ್. ಮುನಿಯಪ್ಪ, ಕೆ.ಆರ್. ರಮೇಶ್‌ಕುಮಾರ್ ಬಣ) ಕರೆಸಿ ಮಾತನಾಡಿದ್ದೇವೆ. ಮುನಿಯಪ್ಪ ಪುತ್ರಿ ರೂಪಕಲಾ ಅವರಿಗೆ ಟಿಕೆಟ್ ನೀಡಲು ಸಿದ್ಧರಿದ್ದೆವು. ಆದರೆ, ಒಪ್ಪಲಿಲ್ಲ.

'ಆಂತರಿಕ ಸಂಘರ್ಷವಿಲ್ಲ; ಅದೇ ನಮ್ಮ ಬಲ'

- **ಹೆಚ್ಚು ಸ್ಥಾನ ಗೆದ್ದರೆ ನೀವು 'ಮುಖ್ಯಮಂತ್ರಿ' ಕುರ್ಚಿಯಲ್ಲಿ ಕುಳಿತುಕೊಳ್ಳುತ್ತೀರಾ?**

ಈ ಪ್ರಶ್ನೆಗೆ ಸಮಯ ಉತ್ತರ ಕೊಡುತ್ತದೆ. ಈಗ ಬೇಡ. ನಮ್ಮ (ಸಿದ್ದರಾಮಯ್ಯ– ಡಿ.ಕೆ. ಶಿವಕುಮಾರ್) ಮಧ್ಯೆ ಹೊಂದಾಣಿಕೆಯಿದೆ. ಮುಂದುವರಿಸಿಕೊಂಡು ಹೋಗುತ್ತೇವೆ.

- **'ಅಧಿಕಾರ ಹಂಚಿಕೆ' ಬಗ್ಗೆ ಅಲ್ಲಲ್ಲಿ ಧ್ವನಿ ಎದ್ದಿದೆಯಲ್ಲ?**

ನಾನು ಎಲ್ಲೂ ಹೇಳಿಕೆ ನೀಡಿಲ್ಲ. ಮುಖ್ಯಮಂತ್ರಿ ಕೂಡಾ ಹೇಳಿಕೆಗಳನ್ನು ನೀಡಿಲ್ಲ. ಏನೂ ಗೊತ್ತಿಲ್ಲದೆ ಕೆಲವರು ಮಾತನಾಡಿದ್ದಾರೆ. ನೀವು ಏನೂ ಮಾತನಾಡಬೇಡಿ ಎಂದು ಹೈಕಮಾಂಡ್ ಸೂಚನೆ ನೀಡಿದೆ. ಅದನ್ನು ಪಾಲಿಸುತ್ತೇವೆ.

- **ಚುನಾವಣೆ ನಂತರ ಸರ್ಕಾರ ಪತನವಾಗಲಿದೆ ಎಂದು ಯಡಿಯೂರಪ್ಪ ಹೇಳುತ್ತಿದ್ದಾರಲ್ಲ?**

ಅಯ್ಯೋ...? (ನಗು). ಅದು ಭ್ರಮೆ. ಹೇಗೆ ಬೀಳುತ್ತದೆ. ಜನರ ಆಯ್ಕೆ ಬಗ್ಗೆ ಅವರಿಗೆ ವಿಶ್ವಾಸ ಇಲ್ಲ. ಏನು 'ಆಪರೇಷನ್ ಕಮಲ' ಮಾಡುತ್ತಾರಾ? ಪ್ರಜಾಪ್ರಭುತ್ವ ಕೊಲೆ ಮಾಡಲು ಹೊರಟಿದ್ದಾರಾ? ಯಡಿಯೂರಪ್ಪ ಅಧಿಕಾರಕ್ಕೆ ಬಂದಾಗ ಎಂದೂ 113 ಸೀಟು ಬಂದಿಲ್ಲ. ನಾವು 135 ಇದ್ದೇವೆ. ಸರ್ಕಾರ ತೆಗೆಯುತ್ತೇನೆಂದರೆ, ಅದು ಸಾಧ್ಯವೇ ಇಲ್ಲ.

ಗೊಂದಲಕ್ಕೆ ಅವಕಾಶ ನೀಡದೆ ಮೂರನೇ ವ್ಯಕ್ತಿಗೆ ಟಿಕೆಟ್ ಕೊಟ್ಟಿದ್ದೇವೆ. ಇದೊಂದು ರೀತಿಯ 'ಸಂದೇಶ'ವೂ ಹೌದು.

- **ನಿಮ್ಮ ಸ್ವಕ್ಷೇತ್ರ ಬೆಂಗಳೂರು ಗ್ರಾಮಾಂತರ ಸವಾಲಾಗಿದೆಯೇ?**

ಅಲ್ಲಿ ಪಕ್ಷದ ಅಭ್ಯರ್ಥಿ, ನನ್ನ ತಮ್ಮ ಸುರೇಶ ಮಾಡಿದ ಸೇವೆಯನ್ನು ಯಾರ ಜೊತೆಗೂ ಹೋಲಿಸಲು ಆಗಲ್ಲ. ವಿಧಾನಸಭೆ ಚುನಾವಣೆಯಲ್ಲಿ ನಾನು ಕ್ಷೇತ್ರಕ್ಕೆ (ಕನಕಪುರ) ಕಾಲಿಡದಿದ್ದರೂ 1.23 ಲಕ್ಷ ಲೀಡ್ ಬಂದಿರುವುದು ಅವನಿಂದಲೇ. ಜನರ ಮನದಾಳ ಅರಿತು ಕೆಲಸ ಮಾಡುತ್ತಿದ್ದಾನೆ. ಹೀಗಿರುವಾಗ ಜನರೇನು ದಡ್ಡರಾ?

- **ಅಧಿಕಾರಕ್ಕಾಗಿ ಶಿವಕುಮಾರ್ ಕಾಯುತ್ತಿದ್ದಾರೆಂದು ಅಮಿತ್ ಶಾ ಹೇಳುತ್ತಿದ್ದಾರಲ್ಲ?**

ರಾಜಕಾರಣದಲ್ಲಿ ಇರುವವರೆಲ್ಲ ಅಧಿಕಾರಕ್ಕೆ ತಾನೆ ಬಡಿದಾಡುವುದು. ನಾನು ಸನ್ಯಾಸಿ ಅಲ್ವಲ್ಲ. ಶಾ, ಮೋದಿ ಅವರ್‍ಯಾರೂ ಸನ್ಯಾಸಿ ಅಲ್ವಲ್ಲ...

- **ಲೋಕಸಭೆ ಚುನಾವಣೆಯಲ್ಲಿ ಎಷ್ಟು ಸೀಟು ಗೆಲ್ಲುತ್ತೀರಿ?**

ವಿಧಾನಸಭೆ ಚುನಾವಣೆಯಲ್ಲಿ ಗೆದ್ದಂತೆ, ಅದೇ ಅನುಪಾತದಷ್ಟು ಸೀಟು ಗೆಲ್ಲುತ್ತೇವೆ. ಮೊದಲ ಹಂತದ ಚುನಾವಣೆಯ ಬಳಿಕ ಎಷ್ಟು ಕ್ಷೇತ್ರವೆಂದು ಹೇಳುತ್ತೇನೆ.

- **ಬಿಜೆಪಿಯಲ್ಲಿ ಟಿಕೆಟ್ ಸಿಗದವರಿಂದ ತೆರೆಮರೆಯ ಸಹಾಯ ನಿರೀಕ್ಷಿಸುತ್ತೀರಾ?**

ನೀವೇ ನೋಡಿದ್ದೀರಲ್ಲ... ಪ್ರತಾಪ್ ಸಿಂಹ, ಡಿ.ವಿ. ಸದಾನಂದ ಗೌಡ, ಯಲಹಂಕ ಶಾಸಕ ವಿಶ್ವನಾಥ್ ಮಾತು, 'ಗೋ ಬ್ಯಾಕ್' ಅಭಿಯಾನ. ಶ್ರೀನಿವಾಸ ಪ್ರಸಾದ್ ಅವರ ಪ್ರಭಾವವನ್ನು ಕಡೆಗಣಿಸಲು ಆಗುತ್ತದೆಯೇ? ಅವರಿಗೆ ಲಿಂಗಾಯತರು, ದಲಿತರು ಬೆಂಬಲ ನೀಡಿದ್ದರು. ಈ ಚುನಾವಣೆಯಲ್ಲಿ ಅವರೆಲ್ಲರೂ ನಮ್ಮ ಪಕ್ಷದ ಪರ ನಿಲ್ಲುವ ವಿಶ್ವಾಸವಿದೆ.

ಜೆಡಿಎಸ್ ಜತೆ ಸಮನ್ವಯದಿಂದ ಕೆಲಸ ಮಾಡಿ: ಮೋದಿ

'ಮತದಾರರ ಮನ ಗೆಲ್ಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಸಾಧನೆಗಳನ್ನು ಮನೆಮನೆಗೂ ತಲುಪಿಸಬೇಕು. ಎಲ್ಲ ಕ್ಷೇತ್ರಗಳಲ್ಲೂ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಸಮನ್ವಯದಿಂದ ಕೆಲಸ ಮಾಡಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಪಕ್ಷದ ಕಾರ್ಯಕರ್ತರಿಗೆ ಸೂಚನೆ ನೀಡಿದರು.

ಕರ್ನಾಟಕದ ಬೂತ್ ಕಾರ್ಯಕರ್ತರ ಜತೆ 'ನಮೋ ಆ್ಯಪ್' ಮೂಲಕ ಶುಕ್ರವಾರ ಸಂವಾದ ನಡೆಸಿ ಮಾತನಾಡಿದ ಅವರು, ಕೇಂದ್ರದ ಸಾಧನೆಗಳ ಜತೆ ಕರ್ನಾಟಕದ ಕಾಂಗ್ರೆಸ್ ಸರ್ಕಾರದ ವೈಫಲ್ಯಗಳನ್ನೂ ಜನರಿಗೆ ಮನವರಿಕೆ ಮಾಡಬೇಕು ಎಂದು ಹೇಳಿದರು.

ಪ್ರತಿ ಬೂತ್‌ನಲ್ಲೂ ಎರಡು–ಮೂರು ಜನರ ಗುಂಪು ರಚಿಸಿಕೊಂಡು, ಒಂದೆಡೆ ಕುಳಿತು ಮಾತನಾಡಿ, ಕೇಂದ್ರದ ಸಾಧನೆಗಳನ್ನು ನಿರ್ದಿಷ್ಟ ಮನೆಗಳಿಗೆ ತಲುಪಿಸಬೇಕು. ಕಳೆದ 10 ವರ್ಷಗಳಲ್ಲಿ ನಾರಿ ಶಕ್ತಿಗೆ ಇನ್ನಷ್ಟು ಬಲ ತುಂಬಿದ್ದೇವೆ. 'ನಾರಿ ಶಕ್ತಿ ವಂದನಾ' ರಾಜಕೀಯವಾಗಿ ಮಹಿಳಾಬಲ ವರ್ಧನೆ ಮಾಡಲಿದೆ. ಹೀಗಾಗಿ ಮಹಿಳೆಯರ ಮತದಾನದ ಪ್ರಮಾಣವನ್ನು ಹೆಚ್ಚಿಸಲು ಶ್ರಮಿಸಬೇಕು. ಬೂತ್ ಕಾರ್ಯಕರ್ತರು ತಮ್ಮ ಕಾರ್ಯದ ಅವಲೋಕನ ಮಾಡಲು ಪ್ರತಿ ದಿನದ ಚುನಾವಣಾ ಕೆಲಸ ಮುಗಿಸ ಬಳಿಕ ಒಂದೆಡೆ ಸೇರಿ ಮತಗಳ ಪ್ರಮಾಣ ಹೆಚ್ಚಾಗುತ್ತಿದೆಯೇ ಎಂಬ ಅಭಿಪ್ರಾಯಗಳನ್ನೂ ಹಂಚಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಗ್ಯಾರಂಟಿ ವಿಚಾರದಲ್ಲಿ ಕರ್ನಾಟಕ ಸರ್ಕಾರದ ವೈಫಲ್ಯಗಳನ್ನು ತಿಳಿಸಬೇಕು. ಕಾಂಗ್ರೆಸ್‌ನ ಭ್ರಷ್ಟಾಚಾರಗಳನ್ನು ಅನಾವರಣಗೊಳಿಸಬೇಕು. ಫಲಾನುಭವಿಗಳ ಜೊತೆ ಮಾತನಾಡಲು ಯುವ ಜನರ ಜೊತೆ ಯುವ ಜನರನ್ನೇ ನಿಯೋಜಿಸಬೇಕು. ಹಿರಿಯರ ಜತೆ ಹಿರಿಯರೇ ಮಾತನಾಡಬೇಕು.

ಕಾರ್ಯಕರ್ತರಿಗೆ ಮೋದಿ ಪ್ರಶ್ನೆ

- ರಾಮಮಂದಿರದ ವಿಚಾರ ಎಷ್ಟು ಪ್ರಭಾವ ಬೀರಬಹುದು?
- ಜನರನ್ನು ಸಂಪರ್ಕಿಸುವ ಕೆಲಸ ಆರಂಭಿಸಿದ್ದೀರಾ?
- ಸಾಧನೆಗಳನ್ನು ತಿಳಿಸುತ್ತಿದ್ದೀರಾ?
- ಬಿಜೆಪಿ ಸರ್ಕಾರದ ಯಾವ ಕೆಲಸ ಹೆಚ್ಚು ಇಷ್ಟವಾಗಿದೆ?

ನರೇಂದ್ರ ಮೋದಿ

ಕೇಂದ್ರಯೋಜನೆಗಳಿಂದ ಫಲಾನುಭವಿಗಳಿಗೆ ಆದ ಲಾಭವನ್ನು ಗಮನದಲ್ಲಿ ಇಟ್ಟುಕೊಂಡು ಮಾತನಾಡಬೇಕು. ಮತದಾರರ ಮನವನ್ನು ಗೆಲ್ಲಬೇಕು. ಇದನ್ನು ಸವಾಲು ಎಂದು ಪರಿಗಣಿಸಿ ಕಾರ್ಯನಿರ್ವಹಿಸಬೇಕು ಎಂದು ಮೋದಿ ಹೇಳಿದರು.

'ಕರ್ನಾಟಕದಲ್ಲಿ ಬಿಜೆಪಿ– ಜೆಡಿಎಸ್ ಮೈತ್ರಿ ಇದ್ದು, ಪ್ರತಿ ಬೂತ್‌ನಲ್ಲೂ ಎರಡೂ ಪಕ್ಷಗಳ ಸಮನ್ವಯ ಸಭೆ ನಡೆಸಬೇಕು. ಇದು ಗೆಲುವಿನ ಕಡೆ ನಮ್ಮನ್ನು ಕರೆದೊಯ್ಯಲಿದೆ. ನಾವು ರಾಜ್ಯದಲ್ಲಿ ಆಡಳಿತದಲ್ಲಿ ಇಲ್ಲದಿದ್ದರೂ ನಾವು ಭೇದಭಾವ ಮಾಡಿಲ್ಲ ಎಂಬುದನ್ನು ಜನರಿಗೆ ತಿಳಿಸಬೇಕು' ಎಂದು ವಿವರಿಸಿದರು.

ಕಾಂಗ್ರೆಸ್ ಸರ್ಕಾರವು ರೈತರಿಗೆ ಸಮರ್ಪಕವಾಗಿ ವಿದ್ಯುತ್ ಪೂರೈಕೆ ಮಾಡುತ್ತಿಲ್ಲ. ರೈತರು ಕಷ್ಟಪಡುವಂತಾಗಿದೆ. ಈ ವಿಚಾರವನ್ನು ಜನರಿಗೆ ಮನದಟ್ಟು ಮಾಡಬೇಕು. 'ಮೋದಿ ಗ್ಯಾರಂಟಿ' ಎಂದರೆ, ನುಡಿದಂತೆ ನಡೆಯುವ ಗ್ಯಾರಂಟಿ ಎಂಬುದನ್ನು ತಿಳಿಹೇಳಬೇಕು. 'ಮೋದಿ ಗ್ಯಾರಂಟಿ' ಎಂದರೆ ಬಡವರಿಗೆ ಮನೆ ನಿರ್ಮಾಣ, ಶೌಚಾಲಯ, ಗ್ಯಾಸ್ ಸಂಪರ್ಕ, ಮನೆಮನೆಗೆ ನಲ್ಲಿ ನೀರಿನ ಸಂಪರ್ಕ, ಕಿಸಾನ್ ಸಮ್ಮಾನ್ ಸೇರಿ ಹಲವು ಉಪಯುಕ್ತ ಯೋಜನೆಗಳು. ಈ ಬಗ್ಗೆ ಜನರಿಗೆ ತಿಳಿಸಿ ಎಂದು ಮೋದಿ ಹೇಳಿದರು.

ಕೈಯ ಮೇಲೆ ಕಮಲದ ಚಿಹ್ನೆ...

'ಹಿಂದಿನ ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ಪಡೆದ ಮತಗಳ ಕುರಿತು ಮಾಹಿತಿ ಶೇಖರಿಸಿದ್ದೀರಾ' ಎಂದು ಮೋದಿ ಕಾರ್ಯಕರ್ತರನ್ನು ಪ್ರಶ್ನಿಸಿದರು. 'ಕಮಲದ ಚಿಹ್ನೆಯನ್ನು ಕೈಯ ಮೇಲೆ ಮೆಹಂದಿ ಮೂಲಕ ಹಾಕಿಕೊಳ್ಳಿ. ಇದರ ಮೂಲಕ ಜನಜಾಗೃತಿ ಮೂಡಿಸಿ ಎಂದು ಅವರು ಸಲಹೆ ಕೊಟ್ಟರು. ಯುಗಾದಿ ಸಂದರ್ಭದಲ್ಲಿ ಕಮಲದ ಚಿಹ್ನೆ ಮೂಲಕ ರಂಗೋಲಿ ಮಾಡುವ ಕುರಿತು ಸಲಹೆಯೂ ಒಳ್ಳೆಯದೇ' ಎಂದು ಅವರು ಹೇಳಿದರು.

ಬೇಸಿಗೆ ಕಾಲವಾದ್ದರಿಂದ ಬಿಸಿಲು ಪ್ರಖರವಾಗಿರುತ್ತದೆ. ಬಿಸಿಲು ಏರುವುದಕ್ಕೆ ಮುನ್ನವೇ ಹೆಚ್ಚು ಮತದಾನ ಆಗುವಂತೆ ನೋಡಿಕೊಳ್ಳಿ. ಬಿಜೆಪಿ ಗೆಲ್ಲಲು ಪ್ರತಿಯೊಬ್ಬರೂ ಶ್ರಮ ಹಾಕಬೇಕು ಎಂದು ಅವರು ಸೂಚಿಸಿದರು. ಮೈಸೂರಿನ ರಾಜೇಶ್, ಶಿವಮೊಗ್ಗದ ಸರಳಾ, ಬೆಳಗಾವಿಯ ಶ್ರುತಿ ಆಪ್ಟೇಕರ್, ಉಡುಪಿಯ ಸುಪ್ರೀತ್ ಭಂಡಾರಿ ಅವರಿಗೆ ಪ್ರಶ್ನೆಗಳನ್ನು ಕೇಳಿದರು.

ಒಳೇಟು ಕೊಟ್ಟರೆ ಹೊರಕ್ಕೆ

ಕಾಂಗ್ರೆಸ್ ನಾಯಕರಿಗೆ ಕೆಪಿಸಿಸಿ ಅಧ್ಯಕ್ಷ ಡಿಕೆಶಿ ಎಚ್ಚರಿಕೆ

ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ ಕ್ಷೇತ್ರಗಳ ಕಾಂಗ್ರೆಸ್ ಪಕ್ಷದ ಮುಖಂಡರ ಸಭೆ ಶುಕ್ರವಾರ ಬೆಂಗಳೂರಿನ ಕೆಪಿಸಿಸಿ ಕಚೇರಿಯಲ್ಲಿ ನಡೆಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಗಳಿಗೆ ಒಳ ಏಟು ಕೊಟ್ಟು, ಸೋಲಿಸುವ ಪ್ರಯತ್ನ ಮಾಡುವ ಕಾಂಗ್ರೆಸ್ ನಾಯಕರನ್ನು ತಕ್ಷಣವೇ ಪಕ್ಷದಿಂದ ಹೊರಗಟ್ಟಲಾಗುವುದು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಎಚ್ಚರಿಸಿದ್ದಾರೆ.

ರಾಜ್ಯದಲ್ಲಿ ಎರಡನೇ ಹಂತದಲ್ಲಿ ಮತದಾನ ನಡೆಯಲಿರುವ 14 ಲೋಕಸಭಾ ಕ್ಷೇತ್ರಗಳ ಉಸ್ತುವಾರಿ ಸಚಿವರು, ಪಕ್ಷದ ಪ್ರಮುಖ ನಾಯಕರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಜತೆಗೂಡಿ ಶುಕ್ರವಾರ ಸಭೆ ನಡೆಸಿದ ಅವರು, 'ಪಕ್ಷದ ಅಭ್ಯರ್ಥಿಗಳ ವಿರುದ್ಧ ಕೆಲಸ ಮಾಡುವವರು ಎಷ್ಟೇ ಪ್ರಭಾವಿಗಳಾಗಿದ್ದರೂ ಮುಲಾಜಿಲ್ಲದೆ ಕ್ರಮ ಜರುಗಿಸುತ್ತೇವೆ' ಎಂದು ಹೇಳಿದ್ದಾರೆ.

'14 ಲೋಕಸಭಾ ಕ್ಷೇತ್ರಗಳಲ್ಲಿನ ಪರಿಸ್ಥಿತಿ ಕುರಿತು ಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷರು ಸ್ಥಳೀಯ ನಾಯಕರಿಂದ ಮಾಹಿತಿ ಪಡೆದರು. ಯಾವುದೇ ಕ್ಷೇತ್ರದಲ್ಲೂ ಆಂತರಿಕ ಭಿನ್ನಾಭಿಪ್ರಾಯಗಳಿಗೆ ಅವಕಾಶ ನೀಡದಂತೆ ಚುನಾವಣಾ ಉಸ್ತುವಾರಿಗಳಿಗೆ ಸೂಚಿಸಿದರು. ಪಕ್ಷ ವಿರೋಧಿ ಚಟುವಟಿಕೆಗಳನ್ನು ನಡೆಸುವವರ ಪತ್ತೆಗೆ ತೀವ್ರ ನಿಗಾ ಇರಿಸುವುದಾಗಿ ಶಿವಕುಮಾರ್ ತಿಳಿಸಿದರು. ಮಾಹಿತಿ ಸಿಕ್ಕ ದಿನವೇ ಉಚ್ಚಾಟಿಸುತ್ತೇನೆ ಎಂಬ ಕಠಿಣ ಎಚ್ಚರಿಕೆಯನ್ನು ಸಭೆಯಲ್ಲಿ ನೀಡಿದರು' ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

'ಇತರ ಪಕ್ಷಗಳ ಯಾವುದೇ ಮುಖಂಡರು ಕಾಂಗ್ರೆಸ್ ಪಕ್ಷ ಸೇರಲು ಬಯಸಿದರೆ ವೈಯಕ್ತಿಕ ಹಿತಾಸಕ್ತಿ ಮುಂದಿಟ್ಟುಕೊಂಡು ಅಡ್ಡಗಾಲು ಹಾಕಬಾರದು. ಯಾವುದೇ ಮುಖಂಡರ ವೈಯಕ್ತಿಕ ಭಿನ್ನಾಭಿಪ್ರಾಯಗಳು ಪಕ್ಷಕ್ಕೆ ಹಿನ್ನಡೆ ಮಾಡಬಾರದು. ಎರಡೂ ಹಂತಗಳ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳನ್ನು ಗೆಲ್ಲಲು ಅವಕಾಶವಿದೆ. ಗೆಲುವಿನತ್ತ ಗುರಿ ಇರಿಸಿ, ಒಗ್ಗಟ್ಟಿನಿಂದ ಕೆಲಸ ಮಾಡಬೇಕು ಎಂಬುದಾಗಿ ಕೆಪಿಸಿಸಿ ಅಧ್ಯಕ್ಷರು ತಾಕೀತು ಮಾಡಿದ್ದಾರೆ' ಎಂದು ಮೂಲಗಳು ಹೇಳಿವೆ.

'ಯಾವ ಅಲೆಯೂ ಇಲ್ಲ': 'ಕಾಂಗ್ರೆಸ್ ನಾಯಕರು ಆಂತರಿಕ ಭಿನ್ನಾಭಿಪ್ರಾಯಗಳನ್ನು ಮರೆತು ಚುನಾವಣೆಯಲ್ಲಿ ಕೆಲಸ ಮಾಡಬೇಕು. ವೈಯಕ್ತಿಕ ಹಿತಾಸಕ್ತಿಗಳಿಗಿಂತ ಪಕ್ಷ ಮುಖ್ಯ ಎಂಬುದನ್ನು ಎಲ್ಲರೂ ಅರಿತುಕೊಳ್ಳಬೇಕು. ಈಗ ದೇಶದಲ್ಲಿ ಮೋದಿ ಅಲೆ ಇಲ್ಲ. ಯಾವ ಅಲೆಯೂ ಇಲ್ಲ. ಒಗ್ಗಟ್ಟಿನಿಂದ ಕೆಲಸ ಮಾಡಿದರೆ ಕಾಂಗ್ರೆಸ್ ಹೆಚ್ಚು ಸ್ಥಾನ ಪಡೆಯಬಹುದು. ಅದಕ್ಕೆ ಪೂರಕವಾಗಿ ಕೆಲಸ ಮಾಡಬೇಕು ಎಂಬುದಾಗಿ ಸಿದ್ದರಾಮಯ್ಯ ನಿರ್ದೇಶನ ನೀಡಿದರು' ಎಂದು ಮೂಲಗಳು ತಿಳಿಸಿವೆ.

ಬಂಜಾರ ಸಮುದಾಯದ ಅಸಮಾಧಾನ

'ಬಂಜಾರ ಸಮುದಾಯವರಿಗೆ ಸಂಪುಟದಲ್ಲಿ ಅವಕಾಶ ನೀಡಿಲ್ಲ. ಲೋಕಸಭಾ ಟಿಕೆಟ್ ಕೂಡ ನೀಡದೇ ಕಡೆಗಣಿಸಲಾಗಿದೆ' ಎಂದು ವಿಧಾನ ಪರಿಷತ್ ಸದಸ್ಯ ಪ್ರಕಾಶ್ ರಾಠೋಡ್, ಶಾಸಕ ಪಿ.ಟಿ. ಪರಮೇಶ್ವರ ನಾಯ್ಕ ಸಭೆಯಲ್ಲೇ ಆಕ್ಷೇಪಿಸಿದರು.

ಈ ಮಾತಿಗೆ ಬಂಜಾರ ಸಮುದಾಯದ ಹಲವು ಮುಖಂಡರು ದನಿಗೂಡಿಸಿದರು. ದೀರ್ಘ ಕಾಲ ಚರ್ಚೆ ಬೆಳೆಯಿತು. ಇದರಿಂದ ಸಿಟ್ಟಾದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ಭೀಮಾ ನಾಯ್ಕ ಅವರನ್ನು ಕೆಎಂಎಫ್ ಅಧ್ಯಕ್ಷ ಮಾಡಿಲ್ಲವೆ? ರುದ್ರಪ್ಪ ಲಮಾಣಿ ಅವರಿಗೆ ಉಪ ಸಭಾಧ್ಯಕ್ಷ ಸ್ಥಾನ ನೀಡಿಲ್ಲವೆ ಎಂಬ ಪ್ರಶ್ನೆ ಕೇಳಿದರು. ಈ ಸಭೆಯಲ್ಲಿ ಇವೆಲ್ಲ ಚರ್ಚಿಸಬೇಡಿ ಎಂದು ತಾಕೀತು ಮಾಡಿದರು' ಎಂದು ಮೂಲಗಳು ತಿಳಿಸಿವೆ.

'40 ಸ್ಥಾನ ಗೆಲ್ಲದ ಸ್ಥಿತಿ ಕಾಂಗ್ರೆಸ್‌ನದು'

ಪ್ರಜಾವಾಣಿ ವಾರ್ತೆ



ಬೆಂಗಳೂರು: 'ಕಾಂಗ್ರೆಸ್‌ನವರು ನೂರಿನ್ನೂರು ಸ್ಥಾನಗಳನ್ನು ಗೆಲ್ಲುವ ಬಗ್ಗೆ ಕೊಚ್ಚಿಕೊಳ್ಳುತ್ತಿದ್ದಾರೆ. ಆದರೆ, 40 ಕ್ಕಿಂತಲೂ ಹೆಚ್ಚು ಸ್ಥಾನಗಳನ್ನು ಗೆಲ್ಲದ ದಾರುಣ ಸ್ಥಿತಿಗೆ ಆ ಪಕ್ಷ ತಲುಪಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದರು.

'ಕೇಂದ್ರದಲ್ಲಿ ಸರ್ಕಾರ ರಚಿಸುವ ಹಗಲುಗನಸನ್ನು ಕಾಣುತ್ತಿದ್ದಾರೆ. ಇಂಡಿ ಒಕ್ಕೂಟದಲ್ಲಿ ಪ್ರಧಾನಮಂತ್ರಿಯಾಗಲು ಲಾಯಕ್ಕಾಗಿರುವ ಒಬ್ಬ ನಾಯಕನಾದರೂ ಇದ್ದಾರೆಯೇ' ಎಂದು ಪ್ರಶ್ನಿಸಿದರು. 'ರಾಜ್ಯದ ಜನತೆ ಸಿದ್ದರಾಮಯ್ಯ ಸರ್ಕಾರದ ಪೊಳ್ಳು ಭರವಸೆಗಳಿಗೆ ಮಾರು ಹೋಗುವುದಿಲ್ಲ. ಮುಖ್ಯಮಂತ್ರಿಯವರು ಇನ್ನಾದರೂ ಜನರನ್ನು ಯಾಮಾರಿಸುವುದನ್ನು ನಿಲ್ಲಿಸಬೇಕು. ಪ್ರಧಾನಿ ಮೋದಿ ಅವರ ಸಮಕ್ಕೆ ನಿಲ್ಲುವ ಒಬ್ಬ ನಾಯಕನೂ ಇಲ್ಲದ ಇಂಡಿ ಒಕ್ಕೂಟವು ಹೇಳ ಹೆಸರಿಲ್ಲದಂತಾಗಲಿದೆ' ಎಂದರು.

'ಈಶ್ವರಪ್ಪ ಟೀಕೆ, ಸ್ಪರ್ಧೆ ನಿಲ್ಲಿಸಲಿ'

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮತ್ತು ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ಪಕ್ಷ ಕಟ್ಟುವ ಕಾಯಕದಲ್ಲಿ ತೊಡಗಿದ್ದಾರೆ. ಮಾಜಿ ಸಚಿವ ಕೆ.ಎಸ್. ಈಶ್ವರಪ್ಪ ಅವರು ಅಪ್ಪ–ಮಕ್ಕಳ ಕೈಯಲ್ಲಿ ಬಿಜೆಪಿಯಿದೆ ಎಂದು ಆರೋಪ ಮಾಡುತ್ತಿರುವುದು ಸುಳ್ಳು. ಈ ರೀತಿಯ ಹೇಳಿಕೆ ನೀಡುವುದನ್ನು ಮತ್ತು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸುವ ವಿಚಾರವನ್ನು ಈಶ್ವರಪ್ಪ ಕೈ ಬಿಡಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕರೂ ಆದ ಬಿಜೆಪಿ ಶಾಸಕ ದೊಡ್ಡನಗೌಡ ಪಾಟೀಲ ಹೇಳಿದರು.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈಶ್ವರಪ್ಪ ಅವರಿಗೆ ಟಿಕೆಟ್ ಹಂಚಿಕೆ ವಿಚಾರದಲ್ಲಿ ಸಮುದಾಯಕ್ಕೆ ಅನ್ಯಾಯವಾಗಿದೆ. ಮುಂದಿನ ದಿನಗಳಲ್ಲಿ ಪರಿಹರಿಸಲಾಗುವುದು' ಎಂದರು.

ಕೇಂದ್ರ ಕೃಷಿ ಸಚಿವನಾಗುವೆ: ಎಚ್‌ಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇಂದ್ರದಲ್ಲಿ ಮತ್ತೆ ಎನ್‌ಡಿಎ ಅಧಿಕಾರಕ್ಕೆ ಬರಲಿದ್ದು, ಪ್ರಧಾನಿ ಮೋದಿ ಅವರು ವಿಶ್ವಾಸವಿಟ್ಟು ಅವಕಾಶ ಕೊಟ್ಟರೆ ಕೃಷಿ ಸಚಿವನಾಗುವೆ' ಎಂದು ಮಂಡ್ಯ ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಎಚ್.ಡಿ. ಕುಮಾರಸ್ವಾಮಿ ಹೇಳಿದ್ದಾರೆ.

'ಲೋಕಸಭಾ ಚುನಾವಣೆಯಲ್ಲಿ ಪಕ್ಷಕ್ಕೆ ನೀಡಿರುವ ಮೂರು ಕ್ಷೇತ್ರದ ಜತೆಗೆ ಎಲ್ಲ 28 ಕ್ಷೇತ್ರಗಳ ಎನ್‌ಡಿಎ ಅಭ್ಯರ್ಥಿಗಳ ಗೆಲುವಿಗೆ ಪ್ರಾಮಾಣಿಕವಾಗಿ ಶ್ರಮಿಸುತ್ತೇವೆ. ಬಿಜೆಪಿ ಜತೆ ದೀರ್ಘಕಾಲ ಸಂಬಂಧ ಮುಂದುವರಿಕೆಗೆ ಆದ್ಯತೆ ನೀಡುತ್ತೇವೆ. ಮುಂದೆ ಅವರು ಜೆಡಿಎಸ್ ನಾಯಕರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದರ ಮೇಲೆ ಎನ್‌ಡಿಎ ಭಾಗವಾಗಿರುವುದು ಅವಲಂತವಾಗಿರುತ್ತದೆ' ಎಂದಿದ್ದಾರೆ.

'ನಾನು ಕೇಂದ್ರ ಸಚಿವನಾಗಬೇಕು ಎನ್ನುವುದು ಮಂಡ್ಯ ಕ್ಷೇತ್ರದ ಜನರ ಆಸೆಯಷ್ಟೇ ಅಲ್ಲ, ಬಿಜೆಪಿ–ಜೆಡಿಎಸ್ ಗೆಳೆಯರ ಆಶಯವೂ ಆಗಿದೆ. ಕೃಷಿ ಸಚಿವನಾದರೆ ಸರ್ಕಾರಕ್ಕೆ ಒಳ್ಳೆಯ ಹೆಸರು ತರುತ್ತೇನೆ ಎನ್ನುವ ನಂಬಿಕೆ ಅವರಿಗಿದೆ' ಎಂದು ಹೇಳಿದ್ದಾರೆ.

‘ಬಾಲರಾಮ’ನ ಪ್ರಭಾವಳಿಯಲ್ಲಿ ದಾಖಲೆಯ ಕನಸು

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: ಅಯೋಧ್ಯೆ ರಾಮಜನ್ಮಭೂಮಿ ವಿವಾದಕ್ಕೂ ಬಿಜೆಪಿಯ ಬೆಳವಣಿಗೆಗೂ ಅವಿನಾಭಾವ ನಂಟು. 1984ರಲ್ಲಿ ಕೇವಲ ಎರಡು ಸಂಸದರನ್ನು ಹೊಂದಿದ್ದ ಬಿಜೆಪಿ, 2019ರ ಲೋಕಸಭಾ ಚುನಾವಣೆಯ ವೇಳೆಗೆ ಬರೋಬ್ಬರಿ 303 ಸ್ಥಾನ ಗಳಿಸುವವರೆಗೂ ಅಯೋಧ್ಯೆಯ ರಾಮ ಜನ್ಮಭೂಮಿ ಹೋರಾಟದ ಪ್ರಭಾವವನ್ನು ಕಾಣಬಹುದು. ಈ ಬಾರಿ ಅಯೋಧ್ಯೆಯಲ್ಲಿ ರಾಮ ಮಂದಿರ ನಿರ್ಮಾಣ ಮಾಡಿ, ‘ಬಾಲ ರಾಮ’ನ ವಿಗ್ರಹವನ್ನು ಪ್ರತಿಷ್ಠಾಪಿಸಿದ ಬಳಿಕ ಎದುರಾಗಿರುವ ಲೋಕಸಭಾ ಚುನಾವಣೆಯಲ್ಲಿ, ರಾಮನ ಪ್ರಭಾವಳಿಯಲ್ಲಿ ಮತ್ತಷ್ಟು ಬಲ ಹೆಚ್ಚಿಸಿಕೊಂಡು ತನ್ನ ಸಾರ್ವಕಾಲಿಕ ಸಾಧನೆಯ ದಾಖಲೆಯನ್ನು ಬರೆಯುವ ಕನಸಿನಲ್ಲಿ ಕಮಲ ಪಾಳಯ ಇದೆ.

ಜನವರಿ 22ರಂದು ನಡೆದ ‘ಬಾಲ ರಾಮ’ನ ವಿಗ್ರಹದ ಪ್ರತಿಷ್ಠಾಪನೆ ಕಾರ್ಯಕ್ರಮದ ನೇತೃತ್ವವನ್ನು ಖುದ್ದಾಗಿ ಪ್ರಧಾನಿ ನರೇಂದ್ರ ಮೋದಿಯವರೇ ವಹಿಸಿದ್ದರು. ಮಂದಿರ ಉದ್ಘಾಟನೆಯ ಜತೆಯಲ್ಲೇ ಮನೆ ಮನೆಗೂ ‘ಮಂತ್ರಾಕ್ಷತೆ’ ವಿತರಣೆ, ದೇವಾಲಯಗಳ ಸ್ವಚ್ಛತಾ ಅಭಿಯಾನ, ಮನೆ ಮನೆಗಳಲ್ಲೂ ದೀಪ ಬೆಳಗಿಸುವುದು, ಮನೆಗಳು, ಕಟ್ಟಡಗಳ ಮೇಲೆ ಭಗವಾಧ್ವಜ, ಹನುಮ ಧ್ವಜ ಮತ್ತು ಶ್ರೀರಾಮನ ಚಿತ್ರವುಳ್ಳ ಧ್ವಜಗಳನ್ನು ಹಾರಿಸುವ ಅಭಿಯಾನದ ಮೂಲಕ ‘ಬಾಲ ರಾಮ’ನ ಪ್ರತಿಷ್ಠಾಪನೆಯನ್ನು ಲೋಕಸಭಾ ಚುನಾವಣೆಯಲ್ಲಿ ಮತ ಕೊಯ್ಲಿಗೆ ಪೂರಕವಾಗಿ ಬಳಸಿಕೊಳ್ಳುವ ವ್ಯವಸ್ಥಿತವಾದ ತಂತ್ರಗಾರಿಕೆಯನ್ನು ಬಿಜೆಪಿ ಮತ್ತು ಸಂಘ ಪರಿವಾರ ಮಾಡಿದ್ದವು.

ಮತ ಸೆಳೆಯಲು ಅಯೋಧ್ಯೆ ಪ್ರವಾಸ

ಅಯೋಧ್ಯೆಯಲ್ಲಿ ಜನವರಿ 22ರಂದು ‘ಬಾಲ ರಾಮ’ನ ವಿಗ್ರಹ ಪ್ರತಿಷ್ಠಾಪನೆ ಆದ ಬಳಿಕ ಅಲ್ಲಿಗೆ ಭೇಟಿನೀಡುವ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತಿದೆ. ‘ಅಯೋಧ್ಯೆ ಪ್ರವಾಸಕ್ಕೆ ತೆರಳುವವರಿಗೆ ನೆರವಾಗಿ’ ಎಂದು ತಮ್ಮ ಪಕ್ಷದ ಕಾರ್ಯಕರ್ತರಿಗೆ ಕರೆ ನೀಡುವ ಮೂಲಕ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಅವರು, ಇದನ್ನು ಚುನಾವಣಾ ಲಾಭಕ್ಕೆ ಬಳಸಿ-ಕೊಳ್ಳುವಂತೆ ಪರೋಕ್ಷವಾಗಿ ಸೂಚನೆ ನೀಡಿದ್ದರು. ಆಯೋಧ್ಯೆ ಶ್ರೀ ರಾಮ ಜನ್ಮಭೂಮ ತೀರ್ಥ ಕ್ಷೇತ್ರ ಟ್ರಸ್ಟ್ ಪ್ರಕಾರ, ನಿತ್ಯವೂ ಅಯೋಧ್ಯೆಗೆ 1 ಲಕ್ಷದಿಂದ 1.5 ಲಕ್ಷ ಜನರು ಭೇಟಿ ನೀಡುತ್ತಿದ್ದಾರೆ. ರಾಮ ಭಕ್ತರಿಗೆ ನೆರವಾಗಿ ಅವರ ಮತ ಸೆಳೆಯುವ ಕಸರತ್ತುಗಳೂ ವಿವಿಧೆಡೆ ನಡೆಯುತ್ತಿವೆ.



ಮನೆಗಳು, ಕಟ್ಟಡಗಳು, ಗ್ರಾಮ ಮತ್ತು ನಗರಗಳ ಪ್ರಮುಖ ವೃತ್ತಗಳಲ್ಲಿನ ಗಗನಚುಂಬಿ ಧ್ವಜ ಸ್ತಂಭಗಳಲ್ಲಿ ಈಗಲೂ ಹಾರಾಡುತ್ತಿರುವ ಕೇಸರಿ ಬಣ್ಣದ ತರಹೇವಾರಿ ಬಾವುಟಗಳು ರಾಮ ಮಂದಿರ ಉದ್ಘಾಟನೆಯ ನೆನಪು ಲೋಕಸಭಾ ಚುನಾವಣೆಯ ಮೇಲೆ ಬೀರಬಹುದಾದ ಪ್ರಭಾವವನ್ನು ಸೂಚಿಸುವಂತಿದೆ. 15ನೇ ಲೋಕಸಭೆಯ ಕೊನೆಯ ಅಧಿವೇಶನದ ಅಂತಿಮ ದಿನವಾದ ಫೆಬ್ರುವರಿ 10ರಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿದಂತೆ ಬಿಜೆಪಿಯ ಹಲವರು ರಾಮ ಮಂದಿರ ಉದ್ಘಾಟನೆ ಮತ್ತು ಅದರ ಹಿಂದಿನ ಘಟನಾವಳಿಗಳನ್ನು ಮೆಲುಕು ಹಾಕುವ ಮೂಲಕ ಈ ವಿಚಾರವನ್ನು ಚುನಾವಣಾ ಅಸ್ತ್ರವನ್ನಾಗಿ ಬಳಸಿಕೊಳ್ಳುವ ಸುಳಿವು ನೀಡಿದ್ದರು. ಈಗ ರಾಮ ಮಂದಿರವನ್ನು ಮುಂದಿಟ್ಟುಕೊಂಡು ಧರ್ಮದ ಆಧಾರದಲ್ಲಿ ಮತಗಳ ಧ್ರುವೀಕರಣದ ಯೋಜನೆ ಕಮಲ ಪಾಳಯದಲ್ಲಿ ಸಿದ್ಧವಾಗುತ್ತಿದೆ.

ಶತಮಾನಗಳ ಇತಿಹಾಸವಿರುವ ಅಯೋಧ್ಯೆ ರಾಮ ಜನ್ಮಭೂಮಿ ವಿವಾದವು 1986ರಲ್ಲಿ ರಾಜೀವ್ ಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರವು, ಬಾಬರಿ ಮಸೀದಿಯ ಬಾಗಿಲು ತೆರೆಸಿ ಹಿಂದೂಗಳಿಗೆ ಶ್ರೀರಾಮನ ಪೂಜೆಗೆ ಅವಕಾಶ ಕಲ್ಪಿಸಿದ ಬಳಿಕ ಮತ್ತೊಂದು ಮಗ್ಗುಲಿಗೆ ಹೊರಳಿತ್ತು. ಈ ಅವಕಾಶವನ್ನು ಸರಿಯಾಗಿಯೇ ಬಳಸಿಕೊಂಡ ಬಿಜೆಪಿ, ರಾಮ ಜನ್ಮಭೂಮಿ ಹೋರಾಟವನ್ನು ವಿಸ್ತರಿಸುವ ಕೆಲಸ ಮಾಡಿತ್ತು. ಅದರ ಫಲವಾಗಿ 1989ರ ಚುನಾವಣೆಯಲ್ಲಿ 85 ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವಲ್ಲಿ ಯಶಸ್ವಿಯಾಗಿತ್ತು.

1990ರಲ್ಲಿ ಲಾಲ್ ಕೃಷ್ಣ ಅಡ್ವಾಣಿ ಅವರು ಸೋಮನಾಥದಿಂದ ಅಯೋಧ್ಯೆವರೆಗೆ ನಡೆಸಿದ್ದ ‘ರಥ ಯಾತ್ರೆ’ಯು ಬಿಜೆಪಿಯ ಬಲವನ್ನು ಮತ್ತಷ್ಟು ಹೆಚ್ಚಿಸಿತ್ತು. 1991ರ ಚುನಾವಣೆಯಲ್ಲಿ ಲೋಕಸಭೆಯಲ್ಲಿ ಕಮಲ ಪಾಳಯದ ಬಲ 120ಕ್ಕೆ ಜಿಗಿದಿತ್ತು. ನಂತರ ಏರುಗತಿಯಲ್ಲೇ ಇದ್ದ ಬಿಜೆಪಿಯ ಸಾಧನೆ, 1998ರ ಚುನಾವಣೆಯಲ್ಲಿ 182 ಸ್ಥಾನ ಗಳಿಸುವವರೆಗೂ ಸಾಗಿತ್ತು. ಆ ಬಳಿಕದ ಎರಡು ಚುನಾವಣೆಗಳಲ್ಲಿ ಬಿಜೆಪಿಯ ಗಳಿಕೆ ತುಸು ಇಳಿಮುಖವಾಗಿತ್ತು. 2009ರ ಚುನಾವಣೆಯಲ್ಲಿ ಬಿಜೆಪಿ 116 ಸ್ಥಾನಗಳಿಗೆ ಕುಸಿದಿತ್ತು. 2014ರ ಚುನಾವಣೆಯಲ್ಲಿ 282 ಸ್ಥಾನ ಗೆದ್ದು ಅಧಿಕಾರ ಹಿಡಿದಿದ್ದ ಬಿಜೆಪಿ, 2019ರ ಚುನಾವಣೆಯಲ್ಲಿ 303 ಸ್ಥಾನಗಳೊಂದಿಗೆ ಮತ್ತಷ್ಟು ಎತ್ತರಕ್ಕೆ ಏರಿತ್ತು.

ರಾಮ ಜನ್ಮಭೂಮಿ ಮತ್ತು ಬಿಜೆಪಿಯ ಬೆಳವಣಿಗೆ

ಲೋಕಸಭಾ ಚುನಾವಣೆಯ ವರ್ಷ	ಬಿಜೆಪಿ ಅಭ್ಯರ್ಥಿಗಳ ಸಂಖ್ಯೆ	ಗೆಲುವು	ಶೇಕಡಾವಾರು ಮತಗಳಿಕೆ
1984	224	02	7.74
1989	225	85	11.36
1991	468	120	20.11
1996	471	161	20.29
1998	388	182	25.29
1999	339	182	23.75
2004	364	138	22.16
2009	433	116	18.80
2014	428	282	31.34
2019	436	303	37.7

ಅಯೋಧ್ಯೆ ವಿವಾದದ ಕುರಿತು 2019ರಲ್ಲಿ ಸುಪ್ರೀಂ ಕೋರ್ಟ್ ನೀಡಿದ್ದ ತೀರ್ಪಿನಲ್ಲಿ, ರಾಮ ಮಂದಿರ ನಿರ್ಮಾಣ ಪ್ರಕ್ರಿಯೆಯಲ್ಲಿ ಕೇಂದ್ರ ಸರ್ಕಾರದ ಪಾಲ್ಗೊಳ್ಳುವಿಕೆಗೆ ನೀಡಿದ್ದ ಅವಕಾಶವನ್ನು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರ ಪೂರ್ಣ ಪ್ರಮಾಣದಲ್ಲಿ ಬಳಸಿಕೊಂಡಿದೆ. ರಾಮ ಮಂದಿರ ನಿರ್ಮಾಣದ ಭೂಮಿ ಪೂಜೆಯಿಂದ ಉದ್ಘಾಟನೆಯವರೆಗೆ ಎಲ್ಲ ಧಾರ್ಮಿಕ ಕಾರ್ಯಕ್ರಮ ಗಳಲ್ಲೂ ಖುದ್ದಾಗಿ ಮುಂದಾಳತ್ವ ವಹಿಸಿದ್ದ ಮೋದಿ ಅವರನ್ನು ‘ಹಿಂದೂ ಹೃದಯ ಸಾಮ್ರಾಟ’ ಎಂದು ಬಿಂಬಿಸುವ ಕೆಲಸವನ್ನು ಬಿಜೆಪಿ ಜೋರಾಗಿಯೇ ಮಾಡುತ್ತಿದೆ. ಈ ತಂತ್ರಗಾರಿಕೆ ಬಿಜೆಪಿ, ಕೇಂದ್ರದಲ್ಲಿ ಮತ್ತೊಂದು ಅವಧಿಗೆ ಅಧಿಕಾರದ ಗದ್ದುಗೆ ಹಿಡಿಯಲು ನೆರವಾಗಲಿದೆ ಎಂಬ ವಿಶ್ವಾಸ ಕಮಲ ಪಾಳಯದ್ದು.

ಕಾಂಗ್ರೆಸ್ ಪಕ್ಷವು ರಾಮ ಮಂದಿರ ಉದ್ಘಾಟನೆಯ ಕಾರ್ಯಕ್ರಮದಿಂದ ಅಂತರ ಕಾಯ್ದುಕೊಂಡಿತ್ತು. ಡಿಎಂಕೆ ಸೇರಿದಂತೆ ಹಲವು ಪ್ರಾದೇಶಿಕ ಪಕ್ಷಗಳೂ ಅದೇ ನಿಲುವನ್ನು ತಳೆದಿದ್ದವು. ‘ಬಾಲ ರಾಮ’ ವಿಗ್ರಹದ ಪ್ರತಿಷ್ಠಾಪನಾ ಕಾರ್ಯಕ್ರಮದಿಂದ ದೂರ ಉಳಿದಿದ್ದನ್ನು ಹಿಂದೂ ವಿರೋಧಿ ನಿಲುವು ಎಂದು ಬಿಂಬಿಸಿ ಮತಗಳ ಧ್ರುವೀಕರಣವನ್ನು ಮತ್ತಷ್ಟು ಹೆಚ್ಚಿಸುವ ಕಾರ್ಯತಂತ್ರವೂ ಬಿಜೆಪಿಯ ಬತ್ತಳಿಕೆಯಲ್ಲಿದೆ.

ಚುನಾವಣಾ ಬಾಂಡ್ ಹೆಸರಿನಲ್ಲಿ ಭ್ರಷ್ಟಾಚಾರ ನಡೆಸಿರುವ ಆರೋಪ, ಕೇಂದ್ರೀಯ ತನಿಖಾ ಸಂಸ್ಥೆಗಳ ದುರ್ಬಳಕೆಯ ಆಪಾದನೆ, ಬೆಲೆ ಏರಿಕೆಯ ಬಿಸಿಯಂತಹ ಸವಾಲುಗಳನ್ನು ಮೀರಿ ‘ಹಿಂದುತ್ವ’ದ ಕಾರ್ಯಸೂಚಿಯಲ್ಲೇ ಮತ್ತೆ ಅಧಿಕಾರ ಕ್ಕೇರಲು ‘ಬಾಲ ರಾಮ’ನ ಪ್ರಭಾವಳಿ ನೆರವಾಗಬಹುದು ಎಂಬ ನಂಬಿಕೆಯಲ್ಲಿ ಬಿಜೆಪಿ ಇದೆ.

‘ಬಾಲ ರಾಮನ ಪ್ರತಿಷ್ಠಾಪನೆಯು ಈ ಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚು ಸ್ಥಾನ ತಂದುಕೊಡಬಹುದು’ ಎಂದು ಅಯೋಧ್ಯೆ ಶ್ರೀರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಟ್ರಸ್ಟಿಯೂ ಆಗಿರುವ ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಇತ್ತೀಚೆಗೆ ದಾವಣಗೆರೆಯಲ್ಲಿ ಹೇಳಿಕೆ ನೀಡಿದ್ದರು. ‘ಬಾಲ ರಾಮ’ನ ಪ್ರಭಾವಳಿ ಚುನಾವಣಾ ರಾಜಕೀಯದೊಳಕ್ಕೆ ಸದ್ದು ಮಾಡಲಿದೆ ಎಂಬುದು ಸ್ವಾಮೀಜಿಯವರ ಹೇಳಿಕೆಯೊಳಗೆ ಅಡಗಿದ್ದಂತಿದೆ. ‘ಮಂದಿರ ರಾಜಕೀಯ’ ಈ ಬಾರಿಯೂ ಬಿಜೆಪಿಯ ಕೈ ಹಿಡಿಯಬಹುದೆ? ಇಲ್ಲವೆ ಎಂಬ ಕುತೂಹಲ ಗರಿಗೆದರಿದೆ.

ಪ್ರತ್ಯಸ್ತ್ರಗಳ ಕೊರತೆಯ ಸವಾಲು

ಕಾಂಗ್ರೆಸ್ ಮತ್ತು ಪ್ರಮುಖ ಪ್ರಾದೇಶಿಕ ಪಕ್ಷಗಳು ರಾಮ ಮಂದಿರದ ಉದ್ಘಾಟನೆಯಿಂದ ದೂರ ಉಳಿದಿರುವ ವಿಷಯವನ್ನು ಚುನಾವಣಾ ಅಂಗಳದಲ್ಲಿ ಕೆದಕಿ ಲಾಭ ಪಡೆಯುವ ಬಿಜೆಪಿ ಪ್ರಯತ್ನಕ್ಕೆ ವಿರೋಧ ಪಕ್ಷಗಳ ಮೈತ್ರಿಕೂಟ ಈವರೆಗೂ ಬಲವಾದ ಪ್ರತ್ಯಸ್ತ್ರಗಳನ್ನು ಬಳಸಿಲ್ಲ.

ಹಿಂದಿ ಭಾಷಿಕರು ಹೆಚ್ಚಾಗಿರುವ ಉತ್ತರ ಭಾರತದಲ್ಲಿ ‘ಬಾಲರಾಮ’ನ ಹೆಸರಿನಲ್ಲಿ ಬಿಜೆಪಿ ಹೆಚ್ಚು ಲಾಭ ಪಡೆಯುವ ಸಾಧ್ಯತೆಗಳಿವೆ. ಅದರ ಜತೆಯಲ್ಲೇ ದಕ್ಷಿಣದ ರಾಜ್ಯಗಳಲ್ಲಿ ತನ್ನ ನೆಲೆ ವಿಸ್ತರಿಸಿಕೊಳ್ಳುವುದಕ್ಕೂ ‘ಬಾಲ ರಾಮ’ನ ಪ್ರಭಾವಳಿಯನ್ನು ಬಳಸಿಕೊಳ್ಳುವ ಕಾರ್ಯಸೂಚಿ ಬಿಜೆಪಿಯದ್ದು. ಪ್ರಾದೇಶಿಕ ಅಸ್ಮಿತೆ ಮತ್ತು ದ್ರಾವಿಡ ರಾಜಕಾರಣವನ್ನು ಮುಂದಿಟ್ಟುಕೊಂಡು ಬಿಜೆಪಿಯ ಧರ್ಮ ಕೇಂದ್ರಿತ ರಾಜಕಾರಣವನ್ನು ಹಿಮ್ಮೆಟ್ಟಿಸಲು ವಿರೋಧ ಪಕ್ಷಗಳು ಪ್ರಯತ್ನಿಸುತ್ತಿವೆ. ಈ ಜಿದ್ದಾಜಿದ್ದಿಯಲ್ಲಿ ಯಾರ ಕೈ ಮೇಲಾಗಲಿದೆ ಎಂಬುದನ್ನು ಚುನಾವಣಾ ಫಲಿತಾಂಶವೇ ಹೇಳಬೇಕಿದೆ.

ಗೊಂದಲಗಳೂ ಇವೆ

ಅಯೋಧ್ಯೆಯ ಶ್ರೀರಾಮ ಮಂದಿರ ನಿರ್ಮಾಣ ಮತ್ತು ಮಂದಿರ ಉದ್ಘಾಟನೆಯ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ನಾಯಕರ ಮಧ್ಯೆ ಗೊಂದಲಗಳೂ ಇವೆ. ಎಐಸಿಸಿ ಮಟ್ಟದ ನಾಯಕರು ಈ ವಿಷಯದಿಂದ ಅಂತರ ಕಾಯ್ದುಕೊಂಡಿದ್ದರೆ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸೇರಿದಂತೆ ಕರ್ನಾಟಕ ಕಾಂಗ್ರೆಸ್‌ನ ಹಲವು ನಾಯಕರು ರಾಮ ಮಂದಿರ ನಿರ್ಮಾಣದಲ್ಲಿ ಕಾಂಗ್ರೆಸ್‌ನ ಕೊಡುಗೆಯೂ ಇದೆ ಎಂದು ಪ್ರತಿಪಾದಿಸು ತ್ತಿದ್ದಾರೆ. ‘ನಾನೂ ರಾಮನ ಭಕ್ತ’ ಎನ್ನುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ದನಿಗೂಡಿಸಿದ್ದಾರೆ.

ಅಯೋಧ್ಯೆಯಲ್ಲಿ ‘ಬಾಲ ರಾಮ’ ವಿಗ್ರಹ ಪ್ರತಿಷ್ಠಾಪನೆ ದಿನ ರಾಜ್ಯ ಸರ್ಕಾರದ ವತಿಯಿಂದ ಮುಜರಾಯಿ ದೇವಸ್ಥಾನಗಳಲ್ಲಿ ವಿಶೇಷ ಪೂಜೆಯೂ ನಡೆದಿದೆ. ಕಾಂಗ್ರೆಸ್ ಪಕ್ಷದ ಶಾಸಕರು, ನಾಯಕರು ಕೂಡ ಸಂಭ್ರಮಾಚರಣೆಗಳನ್ನು ನಡೆಸಿದ್ದಾರೆ.

‘ಇಂಡಿಯಾ’ದ್ದು ಸೈದ್ಧಾಂತಿಕ ಹೋರಾಟ: ರಾಹುಲ್

ಚುನಾವಣೆ ನಂತರ ಪ್ರಧಾನಿ ಆಯ್ಕೆ

ನವದೆಹಲಿ (ಪಿಟಿಐ): ಚುನಾವಣೆ ಗೆದ್ದ ನಂತರ ‘ಇಂಡಿಯಾ’ ಮೈತ್ರಿಕೂಟದ ಮಿತ್ರಪಕ್ಷಗಳೆಲ್ಲ ಸೇರಿ ಪ್ರಧಾನಿ ಅಭ್ಯರ್ಥಿಯನ್ನು ನಿರ್ಧರಿಸಲಿವೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಶುಕ್ರವಾರ ತಿಳಿಸಿದರು.

2004ರಲ್ಲಿ ‘ಭಾರತ ಪ್ರಕಾಶಿಸುತ್ತಿದೆ’ ಎನ್ನುವ ಘೋಷಣೆಗೆ ಒದಗಿದ ಗತಿಯೇ, ಎನ್‌ಡಿಎ ಮೈತ್ರಿಕೂಟಕ್ಕೆ 2024ರ ಚುನಾವಣೆಯಲ್ಲಿ ಒದಗಲಿದೆ ಎಂದು ಭರವಸೆ ವ್ಯಕ್ತಪಡಿಸಿದರು.

ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ ಬಿಡುಗಡೆ ಕಾರ್ಯ-ಕ್ರಮದಲ್ಲಿ ಮಾತನಾಡಿದ ರಾಹುಲ್, ‘ಭಾರತವು ಎರಡು ಮೂರು ಸಂಘಟಿತ ವ್ಯಾಪಾರ ಕೂಟಗಳಿಗಾಗಿ ಇರುವಂತಹ-ದ್ದಲ್ಲ, ದೇಶದ ಬೃಹತ್ ಜನಸಮೂಹಕ್ಕಾಗಿ ಇರುವಂತಹದ್ದು. ನಮ್ಮದು ಏಕಸ್ವಾಮ್ಯದ ದೇಶವಲ್ಲ, ಉದ್ದಿಮೆಗಳ ನಡುವೆ ಸಮಾನ ಸ್ಪರ್ಧೆಯ ಅವಕಾಶ ಇರುವ ದೇಶ’ ಎಂದು ಹೇಳಿದರು.

‘2004ರಲ್ಲಿ ಅಟಲ್ ಬಿಹಾರಿ ವಾಜಪೇಯಿ ನೇತೃತ್ವದಲ್ಲಿ ‘ಭಾರತ ಪ್ರಕಾಶಿಸುತ್ತಿದೆ’ ಎಂಬ ಘೋಷಣೆಯಡಿ ಚುನಾವಣೆ ಎದುರಿಸಿದ್ದ ಎನ್‌ಡಿಎ, ಯುಪಿಎ ಎದುರು ಸೋಲು ಅನುಭವಿಸಿತ್ತು. ಆದರೆ, ಇದು ಮೂಲಭೂತವಾಗಿ ಭಿನ್ನವಾದ ಚುನಾವಣೆ. ಏಕೆಂದರೆ, ಪ್ರಜಾಪ್ರಭುತ್ವ ಮತ್ತು ಸಂವಿಧಾನ ಇಂದು ಅಪಾಯದಲ್ಲಿವೆ’ ಎಂದು ಅಭಿಪ್ರಾಯಪಟ್ಟರು.

‘ಆರ್‌ಎಸ್‌ಎಸ್, ಬಿಜೆಪಿ ಮತ್ತು ಮುಖ್ಯವಾಗಿ ನರೇಂದ್ರ ಮೋದಿ ರೂಪಿಸಿರುವ ತಂತ್ರಗಾರಿಕೆಯ ಮೂಲ ಏನು ಎನ್ನುವುದನ್ನು ನಾವು ಅರ್ಥಮಾಡಿ ಕೊಳ್ಳಬೇಕು. ಕೋಟ್ಯಧಿಪತಿ ಗೌತಮ್ ಅದಾನಿಗೆ ಬಂದರು, ಮೂಲಸೌಕರ್ಯ ಮತ್ತು ರಕ್ಷಣಾ ಕ್ಷೇತ್ರಗಳಲ್ಲಿ ಏಕಸ್ವಾಮ್ಯ ನೀಡಿದಂತೆ ಜಾರಿ ನಿರ್ದೇಶನಾಲಯ, ಸಿಬಿಐ, ಆದಾಯ ತೆರಿಗೆ ಇಲಾಖೆಯಂತಹ ಸಂಸ್ಥೆಗಳ ಮೂಲಕ ಪ್ರಧಾನಿ ಅವರು ರಾಜಕೀಯ ದೇಣಿಗೆ ಪಡೆಯು ವಲ್ಲಿಯೂ ಏಕಸ್ವಾಮ್ಯತೆಯನ್ನು ಸಾಧಿಸಿದ್ದಾರೆ’ ಎಂದು ಹೇಳಿದರು.

ರಾಹುಲ್ ಹೇಳಿದ್ದು...

- ಇದೊಂದು ಜಿದ್ದಾಜಿದ್ದಿಯ ಚುನಾವಣೆ. ನಾವು ಅದ್ಭುತ ಹೋರಾಟ ಮಾಡಲಿದ್ದು, ಚುನಾವಣೆ ಗೆಲ್ಲಲಿದ್ದೇವೆ
- ಚುನಾವಣಾ ಬಾಂಡ್ ಯೋಜನೆಯ ಮೂಲಕ ಮೋದಿ ಅವರು ಬೆದರಿಕೆ, ಸುಲಿಗೆ, ಒತ್ತಡಗಳನ್ನು ಬಳಸಿ ರಾಜಕೀಯ ದೇಣಿಗೆ ಸಂಗ್ರಹಿಸಿದರು
- ನರೇಂದ್ರ ಮೋದಿ ಭಯಗೊಂಡಿದ್ದಾರೆ. ಅದರ ಫಲವೇ ಅವರು 400 ಸ್ಥಾನ ಗೆಲ್ಲುತ್ತೇವೆ ಎಂದು ಹೇಳುತ್ತಿದ್ದಾರೆ
- 2019ರಲ್ಲಿ ಆರಂಭವಾದ ಸಾಂವಿಧಾನಿಕ ಸಂಸ್ಥೆಗಳ ದುರ್ಬಳಕೆಯು ಇಂದು ಪರಾಕಾಷ್ಠೆ ಮುಟ್ಟಿದೆ

ಕಾಂಗ್ರೆಸ್ ಪ್ರಣಾಳಿಕೆ ‘ಸುಳ್ಳಿನ ಕಂತೆ’: ಬಿಜೆಪಿ

ನವದೆಹಲಿ (ಪಿಟಿಐ): ಕಾಂಗ್ರೆಸ್ ಪ್ರಣಾಳಿಕೆಯನ್ನು ‘ಸುಳ್ಳಿನ ಕಂತೆ’ ಎಂದು ಕರೆದಿರುವ ಬಿಜೆಪಿ, ದೇಶದಲ್ಲಿ ಹಲವು ದಶಕಗಳ ಕಾಲ ಆಡಳಿತ ನಡೆಸಿರುವ ಪಕ್ಷವು ಈ ಹಿಂದೆ ಮಾಡಿದ್ದ ಯಾವ ಭರವಸೆಯನ್ನೂ ಈಡೇರಿಸಿಲ್ಲ ಎಂದು ಟೀಕಿಸಿದೆ.

‘ಹಲವು ದಶಕಗಳ ಕಾಲ ಆಡಳಿತದ ಚುಕ್ಕಾಣಿ ಹಿಡಿದ ಕಾಂಗ್ರೆಸ್, ಈ ಬಾರಿ ಅಧಿಕಾರಕ್ಕೆ ಬಂದರೆ ಅದ್ಭುತ ಗಳನ್ನು ಮಾಡುವುದಾಗಿ ಭರವಸೆ ನೀಡುತ್ತಿದೆ. ಕಾಂಗ್ರೆಸ್ ತನ್ನ ಪ್ರಣಾಳಿಕೆಗೆ 'ನ್ಯಾಯ ಪತ್ರ' ಎಂದು ಹೆಸರಿಟ್ಟಿದೆ. ಅಂದರೆ ಅದು ತನ್ನ 55–60 ವರ್ಷಗಳ ಆಡಳಿತದಲ್ಲಿ ದೇಶದ ಜನರಿಗೆ ‘ಅನ್ಯಾಯ’ ಮಾಡಿರುವುದನ್ನು ಒಪ್ಪಿಕೊಂಡಿದೆ’ ಎಂದು ಬಿಜೆಪಿ ವಕ್ತಾರ ಸುಧಾಂಶು ತ್ರಿವೇದಿ ಶುಕ್ರವಾರ ಹೇಳಿದರು.

‘ಈ ಹಿಂದಿನ ಲೋಕಸಭಾ ಚುನಾವಣೆ ಮತ್ತು ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳ ಸಂದರ್ಭ ಗಳಲ್ಲಿ ಪ್ರಣಾಳಿಕೆಯಲ್ಲಿ ನೀಡಿದ್ದ ಯಾವುದೇ ಭರವಸೆಯನ್ನೂ ಈಡೇರಿಸಿಲ್ಲ’ ಎಂದು ಆರೋಪಿಸಿದರು.

92ನೇ ವಯಸ್ಸಲ್ಲಿ ಮೊದಲ ಮತದಾನ!

ಸಾಹಿಬ್‌ಗಂಜ್ (ಪಿಟಿಐ): ವಿಶೇಷ ಪ್ರಕರಣವೊಂದ ರಲ್ಲಿ, 92 ವರ್ಷದ ಅಂಗವಿಕಲ ವ್ಯಕ್ತಿ ಖಲೀಲ್ ಅನ್ಸಾರಿ ಲೋಕಸಭಾ ಚುನಾವಣೆಯಲ್ಲಿ ಮೊಟ್ಟ ಮೊದಲ ಬಾರಿಗೆ ಮತದಾನ ಮಾಡಲು ಸಿದ್ಧರಾಗಿದ್ದಾರೆ.

ಖಲೀಲ್ ಅವರ ಹೆಸರನ್ನು ತಕ್ಷಣವೇ ಮತದಾರರ ಪಟ್ಟಿಯಲ್ಲಿ ಸೇರಿಸುವಂತೆ ಜಾರ್ಖಂಡ್ ಮುಖ್ಯ ಚುನಾವಣಾ ಅಧಿಕಾರಿ (ಸಿಇಒ), ಸಾಹಿಬ್‌ಗಂಜ್ ಜಿಲ್ಲಾ ಚುನಾವಣಾಧಿಕಾರಿಗೆ ಶುಕ್ರವಾರ ನಿರ್ದೇಶನ ನೀಡಿದ್ದಾರೆ.

ರಾಜ್ಯ ರಾಜಧಾನಿ ರಾಂಚಿಯಿಂದ 450 ಕಿ.ಮೀ. ದೂರ ಇರುವ ಸಾಹಿಬ್‌ಗಂಜ್ ಜಿಲ್ಲೆಯ ಮುಂದ್ರೊ ವಲಯದ ಮತಗಟ್ಟೆ ಗಳಿಗೆ ಸಿಇಒ ಕೆ.ರವಿಕುಮಾರ್ ಶುಕ್ರವಾರ ದಿಢೀರ್ ಭೇಟಿ ನೀಡಿದ್ದರು. ಈ ವೇಳೆ ಅವರು, ಹಿರಿಯ ನಾಗರಿಕರನ್ನು ಮತ್ತು ಅಂಗವಿಕಲ ಮತದಾರರನ್ನು ಭೇಟಿಯಾಗಿದ್ದರು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಆಗ ಅವರು ಅನ್ಸಾರಿಯವರನ್ನು ‘ನೀವು ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿದ್ದೀರಾ’ ಎಂದು ಪ್ರಶ್ನಿಸಿದ್ದಾರೆ. ‘ನನ್ನ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲದೇ ಇರುವುದರಿಂದ ಎಂದೂ ಮತದಾನ ಮಾಡಿಯೇ ಇಲ್ಲ’ ಎಂದು ಖಲೀಲ್ ಉತ್ತರಿಸಿದ್ದಾರೆ.

ತಕ್ಷಣವೇ ಈ ಸಂಬಂಧ ಕ್ರಮ ಕೈಗೊಳ್ಳುವಂತೆ ಸಿಇಒ ಅಧಿಕಾರಿಗಳಿಗೆ ಸೂಚಿಸಿದರು. ‘ನಾನು ಮೊಟ್ಟ ಮೊದಲ ಬಾರಿಗೆ ಮತದಾನ ಮಾಡಲಿದ್ದೇನೆ’ ಎಂದು ಖಲೀಲ್ ಹರ್ಷ ವ್ಯಕ್ತಪಡಿಸಿದರು.

ಪ್ರಚಾರ — ಅಸ್ಸಾಂನ ಮಾಜುಲಿಯಲ್ಲಿ ಚುನಾವಣಾ ಪ್ರಚಾರ ಕಾರ್ಯದಲ್ಲಿ ಶುಕ್ರವಾರ ಪಾಲ್ಗೊಂಡಿದ್ದ ಕಾಂಗ್ರೆಸ್ ಅಭ್ಯರ್ಥಿ ಗೌರವ್ ಗೊಗೋಯಿ ಅವರು ಬೆಂಬಲಿಗರೊಂದಿಗೆ ನೃತ್ಯ ಮಾಡಿದರು –ಪಿಟಿಐ ಚಿತ್ರ

ಸಿಕ್ಕಿಂ: ಕಣದಲ್ಲಿ ಕೇವಲ 12 ಮಹಿಳೆಯರು

ಗ್ಯಾಂಗ್ಟಕ್ (ಪಿಟಿಐ): ರಾಜ್ಯದ ಮತದಾರರಲ್ಲಿ ಸುಮಾರು ಅರ್ಧದಷ್ಟು ಮಹಿಳೆಯರೇ ಇದ್ದರೂ, ಸಿಕ್ಕಿಂ ವಿಧಾನಸಭೆಯ 32 ಸ್ಥಾನಗಳು ಮತ್ತು ಒಂದು ಲೋಕಸಭಾ ಕ್ಷೇತ್ರದ ಒಟ್ಟು 146 ಅಭ್ಯರ್ಥಿಗಳ ಪೈಕಿ 12 ಮಹಿಳೆಯರು ಮಾತ್ರ ಚುನಾವಣೆಯಲ್ಲಿ ಸ್ಪರ್ಧಿಸಿದ್ದಾರೆ.

ಅವಧಿ ಅಂತ್ಯಗೊಳ್ಳುತ್ತಿರುವ ಹಾಲಿ ವಿಧಾನಸಭೆಯಲ್ಲಿ ಮೂವರು ಶಾಸಕಿಯರಿ-ದ್ದಾರೆ. ಕಳೆದ ವಿಧಾನಸಭೆ ಮತ್ತು ಲೋಕಸಭಾ ಚುನಾವಣೆಯಲ್ಲಿ 15 ಮಹಿಳೆಯರು ಸ್ಪರ್ಧಿಸಿ ದ್ದರು. ಆಡಳಿತಾರೂಢ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ 4 ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದೆ. ಸಿಟಿಜನ್ ಆ್ಯಕ್ಷನ್ ಪಕ್ಷವು ನಾಲ್ವರು ಮಹಿಳಾ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದು, ಬಿಜೆಪಿ ಮತ್ತು ಕಾಂಗ್ರೆಸ್ ತಲಾ ಇಬ್ಬರು ಮಹಿಳೆಯರಿಗೆ ಟಿಕೆಟ್ ನೀಡಿವೆ.

4.66 ಲಕ್ಷ ಸಿಕ್ಕಿಂನ ಒಟ್ಟು ಮತದಾರರು

2.31 ಲಕ್ಷ ಮಹಿಳಾ ಮತದಾರರು

ತರೂರ್ ಆಸ್ತಿ ₹ 20 ಕೋಟಿ ಹೆಚ್ಚಳ

ತಿರುವನಂತಪುರ (ಪಿಟಿಐ): ಕೇರಳದ ತಿರುವನಂತಪುರ ಲೋಕಸಭಾ ಕ್ಷೇತ್ರದಿಂದ ಸತತ ನಾಲ್ಕನೇ ಬಾರಿ ಗೆಲುವಿನ ನಿರೀಕ್ಷೆ-ಯಲ್ಲಿರುವ ಕಾಂಗ್ರೆಸ್ ಅಭ್ಯರ್ಥಿ ಶಶಿ ತರೂರ್ ಅವರ ಆಸ್ತಿ ಕಳೆದ ಐದು ವರ್ಷಗಳಲ್ಲಿ ₹ 20 ಕೋಟಿಯಷ್ಟು ಹೆಚ್ಚಳವಾಗಿದೆ.

ತಮ್ಮ ಬಳಿ ₹ 55 ಕೋಟಿ ಆಸ್ತಿ ಇರುವುದಾಗಿ ಅವರು ಪ್ರಮಾಣಪತ್ರದಲ್ಲಿ ಘೋಷಿಸಿಕೊಂಡಿದ್ದಾರೆ. 2014 ರಲ್ಲಿ ₹ 23 ಕೋಟಿ ಹಾಗೂ 2019 ರಲ್ಲಿ ₹ 35 ಕೋಟಿ ಆಸ್ತಿ ಇರುವುದಾಗಿ ಅವರು ಘೋಷಿಸಿ ಕೊಂಡಿದ್ದರು.

19 ಬ್ಯಾಂಕ್ ಖಾತೆಗಳಲ್ಲಿರುವ ಮೊತ್ತ, ಮ್ಯುಚುವಲ್ ಫಂಡ್, ವಿವಿಧ ಬಾಂಡ್‌ಗಳಲ್ಲಿ ಹೂಡಿಕೆ ಸೇರಿದಂತೆ ಒಟ್ಟು ₹ 49 ಕೋಟಿ ಚರಾಸ್ತಿ ಹೊಂದಿರುವುದಾಗಿ ವಿವರ ನೀಡಿದ್ದಾರೆ.

ಪಾಲಕ್ಕಾಡ್‌ನಲ್ಲಿ 2.51 ಎಕರೆ ಕೃಷಿ ಭೂಮಿ ಮತ್ತು ತಿರುವನಂತಪುರ ದಲ್ಲಿ 10.47 ಎಕರೆ ಜಮೀನು ಸೇರಿದಂತೆ ಒಟ್ಟು ₹ 6.75 ಕೋಟಿ ಮೌಲ್ಯದ ಸ್ಥಿರಾಸ್ತಿ ಇರುವುದಾಗಿ ಪ್ರಮಾಣಪತ್ರದಲ್ಲಿ ತಿಳಿಸಿದ್ದಾರೆ.

ತರೂರ್ ವಿರುದ್ಧ ಒಟ್ಟು ಏಳು ಪ್ರಕರಣಗಳು ಇವೆ. ಅವರ ವಿರುದ್ಧದ ಹೆಚ್ಚಿನ ಎಫ್‌ಐಆರ್‌ಗಳು ವಿವಿಧ ಗುಂಪುಗಳ ನಡುವೆ ದ್ವೇಷ ಉತ್ತೇಜಿಸಿದ್ದಕ್ಕೆ ಸಂಬಂಧಿಸಿ-ದ್ದಾಗಿವೆ. ಕಾನೂನುಬಾಹಿರ ಸಭೆ ನಡೆಸಿದ್ದಕ್ಕೆ ಕೇರಳದಲ್ಲಿ ಒಂದು ಪ್ರಕರಣ ದಾಖಲಾಗಿದೆ.

ಸಚಿವ ರಾಜೀವ್ ಆಸ್ತಿ ₹ 28 ಕೋಟಿ

ತಿರುವನಂತಪುರ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸುತ್ತಿರುವ ಬಿಜೆಪಿ ಅಭ್ಯರ್ಥಿ, ಕೇಂದ್ರ ಸಚಿವ ರಾಜೀವ್ ಚಂದ್ರಶೇಖರ್ ಅವರು ₹ 28 ಕೋಟಿ ಆಸ್ತಿ ಘೋಷಣೆ ಮಾಡಿದ್ದಾರೆ. ₹ 13.69 ಕೋಟಿ ಚರಾಸ್ತಿ ಹಾಗೂ ₹ 14.40 ಕೋಟಿ ಸ್ಥಿರಾಸ್ತಿ ಹೊಂದಿರುವುದಾಗಿ ಪ್ರಮಾಣಪತ್ರ ದಲ್ಲಿ ತಿಳಿಸಿದ್ದಾರೆ.

ಖಜುರಾಹೊ: ಎಸ್‌ಪಿ ಅಭ್ಯರ್ಥಿ ನಾಮಪತ್ರ ತಿರಸ್ಕೃತ

ಪನ್ನಾ (ಪಿಟಿಐ): ಮಧ್ಯಪ್ರದೇಶದ ಖಜುರಾಹೊ ಲೋಕಸಭಾ ಕ್ಷೇತ್ರದ ಸಮಾಜವಾದಿ ಪಕ್ಷದ (ಎಸ್‌ಪಿ) ಅಭ್ಯರ್ಥಿ ಮೀರಾ ಯಾದವ್ ಅವರ ನಾಮಪತ್ರವನ್ನು ಚುನಾವಣಾಧಿಕಾರಿ ಶುಕ್ರವಾರ ತಿರಸ್ಕರಿಸಿದ್ದಾರೆ.

‘ಇಂಡಿಯಾ’ ಕೂಟದ ಮೈತ್ರಿ ಒಪ್ಪಂದದಂತೆ ಕಾಂಗ್ರೆಸ್ ಈ ಸ್ಥಾನವನ್ನು ಎಸ್‌ಪಿಗೆ ಬಿಟ್ಟುಕೊಟ್ಟಿತ್ತು.

‘ಮೀರಾ ಅವರ ನಾಮಪತ್ರವನ್ನು ಚುನಾವಣಾಧಿಕಾರಿಯೂ ಆಗಿರುವ ಪನ್ನಾ ಜಿಲ್ಲಾಧಿಕಾರಿ ತಿರಸ್ಕರಿಸಿದ್ದಾರೆ. ಮೀರಾ ಅವರು ಬಿ ಫಾರಂಗೆ ಸಹಿ ಮಾಡಿರಲಿಲ್ಲ ಮತ್ತು 2023ರ ವಿಧಾನಸಭಾ ಚುನಾವಣೆಯ ಮತದಾರರ ಪಟ್ಟಿಯನ್ನು ಲಗತ್ತಿಸಿರಲಿಲ್ಲ’ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮೀರಾ ಅವರ ಪತಿ ದೀಪ್ ನಾರಾಯಣ್ ಯಾದವ್ ಅವರು ಈ ಬಗ್ಗೆ ಪ್ರತಿಕ್ರಿಯಿಸಿದ್ದು, ಚುನಾವಣಾಧಿಕಾರಿಯ ಆದೇಶದ ವಿರುದ್ಧ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಲಾಗುವುದು ಎಂದು ಹೇಳಿದ್ದಾರೆ.

> **ಇದು ಪ್ರಜಾಪ್ರಭುತ್ವದ ಕಗ್ಗೊಲೆ. ಅಭ್ಯರ್ಥಿ ಸಹಿ ಮಾಡಿರಲಿಲ್ಲ ಎನ್ನುತ್ತಿದ್ದಾರೆ. ನಾಮಪತ್ರ ಸ್ವೀಕರಿಸುವಾಗ ಏಕೆ ಅಧಿಕಾರಿ ಅದನ್ನೆಲ್ಲ ಗಮನಿಸಲಿಲ್ಲ. ಈ ಬಗ್ಗೆ ನ್ಯಾಯಾಂಗ ತನಿಖೆ ನಡೆಯಬೇಕು**
> **ಅಖಿಲೇಶ್ ಯಾದವ್,** ಎಸ್‌ಪಿ ಮುಖ್ಯಸ್ಥ

‘ಪರಿಶೀಲನೆಯ ನಂತರ ಗುರುವಾರ ನಾಮಪತ್ರವನ್ನು ಪರೀಕ್ಷಿಸಿದ್ದೆವು. ಅಭ್ಯರ್ಥಿ ಅನಕ್ಷರಸ್ಥರಾಗಿದ್ದರೂ, ನಾಮಪತ್ರದಲ್ಲಿ ಏನಾದರೂ ವ್ಯತ್ಯಾಸವಿದ್ದರೆ ಅದನ್ನು ಸರಿ-ಪಡಿಸಿಕೊಳ್ಳಬೇಕು ಎಂಬ ನಿಯಮವೇ ಇದೆ. ಗುರುವಾರ ನಾಮಪತ್ರದಲ್ಲಿ ಎಲ್ಲವೂ ಸರಿಯಿತ್ತು. ಶುಕ್ರವಾರ ಎರಡು ಲೋಪಗಳನ್ನು ತೋರಿಸುತ್ತಿದ್ದಾರೆ’ ಎಂದು ಅವರು ಆಕ್ಷೇಪ ವ್ಯಕ್ತಪಡಿಸಿದರು.

‘ಕಣದಲ್ಲಿ 15 ಮಂದಿ ಇದ್ದು, ಪಕ್ಷದ ಹಿರಿಯರ ಸಲಹೆ ಪಡೆದು ಅವರಲ್ಲಿ ಯಾರಾದರೊಬ್ಬರನ್ನು ಬೆಂಬಲಿಸುತ್ತೇವೆ’ ಎಂದು ಹೇಳಿದರು.

ಚುಟುಕು

ಶಾಸಕನಿಂದ ಮತದಾರರಿಗೆ ಎಚ್ಚರಿಕೆ: ಹರಿದಾಡಿದ ವಿಡಿಯೊ

ಬದಾಂಯೂ, ಉತ್ತರ ಪ್ರದೇಶ (ಪಿಟಿಐ): ಉತ್ತರ ಪ್ರದೇಶದ ಜಸ್ವಂತ್‌ನಗರ ಶಾಸಕ ಹಾಗೂ ಸಮಾಜವಾದಿ ಪಕ್ಷದ ಅಭ್ಯರ್ಥಿ ಶಿವಪಾಲ್ ಯಾದವ್ ಅವರು ಮತದಾರರಿಗೆ ‘ಎಚ್ಚರಿಕೆ’ ನೀಡಿದ್ದಾರೆ ಎನ್ನಲಾದ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದೆ.

‘ನಾವು ಎಲ್ಲರ ಮತಗಳನ್ನೂ ಕೇಳುತ್ತೇವೆ. ನೀವು ನಮಗೆ ಮತ ಹಾಕಿದರೆ, ಎಲ್ಲವೂ ನೆಟ್ಟಗಿರುತ್ತದೆ. ಇಲ್ಲದಿದ್ದರೆ, ಅದರ ಬಗ್ಗೆ ಮುಂದೆ ವಿಚಾರಿಸಿಕೊಳ್ಳುತ್ತೇವೆ’ ಎಂದು ಶಿವಪಾಲ್ ಹೇಳಿರುವುದು ವಿಡಿಯೊದಲ್ಲಿ ದಾಖಲಾಗಿದೆ.

ಯಾವಾಗ, ಎಲ್ಲಿ ಈ ಹೇಳಿಕೆ ನೀಡಿದ್ದಾರೆ ಎನ್ನುವುದು ಸ್ಪಷ್ಟವಿಲ್ಲ. ಆದರೆ, ಶಿವಪಾಲ್ ಯಾದವ್ ಅವರೊಂದಿಗೆ ಅವರ ಮಗ ಹಾಗೂ ಸಹಸ್ವಾನ್ ಕ್ಷೇತ್ರದ ಶಾಸಕ, ಸಮಾಜವಾದಿ ಪಕ್ಷದ ಮುಖಂಡ ಬೃಜೇಶ್ ಯಾದವ್ ಕೂಡ ವೇದಿಕೆಯಲ್ಲಿ ಆಸೀನಾಗಿರುವ ದೃಶ್ಯ ವಿಡಿಯೊದಲ್ಲಿದೆ.

‘ಮಹಾಘಟಬಂಧನ’ಕ್ಕೆ ವಿಐಪಿ ಸೇರ್ಪಡೆ

ಪಟ್ನಾ (ಪಿಟಿಐ): ಆರ್‌ಜೆಡಿ ನೇತೃತ್ವದ ‘ಮಹಾಘಟಬಂಧನಕ್ಕೆ’ ಸೇರ್ಪಡೆ ಗೊಳ್ಳುವುದಾಗಿ ಬಿಹಾರದ ಮಾಜಿ ಸಚಿವ ಹಾಗೂ ವಿಕಾಸ್‌ಶೀಲ್ ಇನ್ಸಾನ್ ಪಕ್ಷದ (ವಿಐಪಿ) ಮುಖ್ಯಸ್ಥ ಮುಕೇಶ್ ಸಹಾನಿ ಅವರು ಶುಕ್ರವಾರ ಘೋಷಿಸಿದರು. ಮೂರು ವರ್ಷಗಳ ಹಿಂದೆ ಅವರು ಮೈತ್ರಿಕೂಟ ತೊರೆದು ಬಿಜೆಪಿ ನೇತೃತ್ವದ ಎನ್‌ಡಿಎಗೆ ಸೇರಿದ್ದರು.

ಬಿಹಾರದಲ್ಲಿ ‘ಇಂಡಿಯಾ’ ಕೂಟದ ಸೀಟು ಹಂಚಿಕೆ ಸೂತ್ರವನ್ನು ಈಗಾಗಲೇ ಪ್ರಕಟಿಸಲಾಗಿದೆ. ಆರ್‌ಜೆಡಿಯು 26 ಕ್ಷೇತ್ರಗಳಲ್ಲಿ ಸ್ಪರ್ಧಿಸುತ್ತಿದ್ದು, ನಮ್ಮ ಕ್ಷೇತ್ರಗಳ ಪೈಕಿ ಮೂರು ಕ್ಷೇತ್ರಗಳನ್ನು ವಿಐಪಿ ಪಕ್ಷಕ್ಕೆ ಬಿಟ್ಟುಕೊಡಲಾಗು-ವುದು ಎಂದು ಆರ್‌ಜೆಡಿ ಮುಖಂಡ ತೇಜಸ್ವಿ ಯಾದವ್ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಜಿಗಿ–ನೆಗೆದಾಟ

ತೆಲಂಗಾಣ: ಬಿಜೆಪಿ ಮುಖಂಡ ಶ್ರೀಶೈಲಂ ಕಾಂಗ್ರೆಸ್‌ಗೆ

ಹೈದರಾಬಾದ್ (ಪಿಟಿಐ): ತೆಲಂಗಾಣದ ಮಾಜಿ ಶಾಸಕ, ಕೂನ ಶ್ರೀಶೈಲಂ ಗೌಡ್ ಅವರು ಬಿಜೆಪಿ ತೊರೆದು ಕಾಂಗ್ರೆಸ್‌ಗೆ ಶುಕ್ರವಾರ ಸೇರ್ಪಡೆಗೊಂಡರು.

ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ, ಎಐಸಿಸಿ ತೆಲಂಗಾಣ ಉಸ್ತುವಾರಿ ದೀಪಾ ದಾಸ್ ಮುನ್ಶಿ ಅವರ ಸಮ್ಮುಖದಲ್ಲಿ ಶ್ರೀಶೈಲಂ ಅವರು ಪಕ್ಷಕ್ಕೆ ಸೇರಿದರು.

2021ರಲ್ಲಿ ಬಿಜೆಪಿಗೆ ಸೇರಿದ್ದ ಶ್ರೀಶೈಲಂ ಅವರು, ಕಳೆದ ನವೆಂಬರ್‌ನಲ್ಲಿ ನಡೆದ ವಿಧಾನಸಭಾ ಚುನಾವಣೆಯಲ್ಲಿ ತೆಲಂಗಾಣ ಕ್ಷೇತ್ರದಿಂದ ಸ್ಪರ್ಧಿಸಿ ಸೋತಿದ್ದರು.

ಲೋಕಸಭಾ ಚುನಾವಣೆ ಮತದಾನ ಸನ್ನಿಹಿತವಾಗುತ್ತಿದ್ದಂತೆ ತೆಲಂಗಾಣದಲ್ಲಿ ಬಿಆರ್‌ಎಸ್ ಮತ್ತು ಇತರ ಪಕ್ಷಗಳ ನಾಯಕರು ಕಾಂಗ್ರೆಸ್‌ಗೆ ಸೇರ್ಪಡೆಗೊಳ್ಳುತ್ತಿದ್ದಾರೆ.

ಎಂಥಾ ಮಾತು!

‘ಇಂಡಿಯಾ’ವು ಭ್ರಷ್ಟ ಪಕ್ಷಗಳ ಕೂಟವಾಗಿದೆ. ಶಿವಸೇನಾ (ಉದ್ಧವ್ ಠಾಕ್ರೆ ಬಣ) ಮುಖ್ಯಸ್ಥರಾದ ಉದ್ಧವ್ ಠಾಕ್ರೆ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮತ್ತು ಕಾಂಗ್ರೆಸ್‌ನಿಂದ ಉಚ್ಚಾಟನೆಗೊಂಡಿರುವ ಸಂಜಯ್ ನಿರುಪಮ್ ಅವರ ಹೇಳಿಕೆಗಳನ್ನು ಗಮನಿಸಿದರೆ ಸಾಕು. ಅವರು ಪರಸ್ಪರ ಕಚ್ಚಾಡುತ್ತಿರುವುದು ಗೊತ್ತಾಗುತ್ತದೆ. ತಮನ್ನು ರಕ್ಷಿಸಿಕೊಳ್ಳುವ ಸಲುವಾಗಿ ಅವರು ಒಂದಾಗಿದ್ದಾರೆ. ಪ್ರಜಾಪ್ರಭುತ್ವ ಮತ್ತು ಸಂವಿಧಾನ ಅಪಾಯದಲ್ಲಿಲ್ಲ. ಕಾಂಗ್ರೆಸ್ ಪಕ್ಷ ಮಾತ್ರ ಅಪಾಯದಲ್ಲಿದೆ

ಶಿವರಾಜ್ ಸಿಂಗ್ ಚೌಹಾಣ್, ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ

ಕ್ಷೇತ್ರ ಮಹಾತ್ಮೆ

ಮಹಾರಾಷ್ಟ್ರದ ಅಕೋಲಾ ಲೋಕಸಭಾ ಕ್ಷೇತ್ರವು ಈ ಬಾರಿ ತ್ರಿಕೋನ ಸ್ಪರ್ಧೆಗೆ ಸಾಕ್ಷಿಯಾಗಲಿದೆ. ‘ಮಹಾಯುತಿ’ ಮೈತ್ರಿಕೂಟವು ಬಿಜೆಪಿಯ ಅನೂಪ್ ಧೋತ್ರೆ ಅವರನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದರೆ, ಡಾ. ಅಭಯ್ ಪಾಟೀಲ್ ಅವರನ್ನು ಕಾಂಗ್ರೆಸ್ ಸ್ಪರ್ಧಿಯನ್ನಾಗಿಸಿದೆ. ಇವರಿಬ್ಬರಿಗೆ ಪೈಪೋಟಿ ನೀಡಲು ವಂಚಿತ್ ಬಹುಜನ ಆಘಾಡಿ ಮುಖ್ಯಸ್ಥ ಹಾಗೂ ಡಾ. ಬಿ.ಆರ್. ಅಂಬೇಡ್ಕರ್ ಅವರ ಮೊಮ್ಮಗ ಪ್ರಕಾಶ್ ಅಂಬೇಡ್ಕರ್ ಕೂಡ ಅಖಾಡಕ್ಕಿಳಿ-ದಿದ್ದಾರೆ. ಪ್ರಕಾಶ್ ಅವರು ಸ್ಪರ್ಧಿಸಿರುವುದ ರಿಂದ ಕ್ಷೇತ್ರದ ಜಾತ್ಯತೀತ ನಿಲುವಿನ ಮತದಾರರ ಮತಗಳು ಹಂಚಿ ಹೋಗುವ ಸಾಧ್ಯತೆ ಇದೆ ಮತ್ತು ಇದರಿಂದ ಬಿಜೆಪಿ ಅಭ್ಯರ್ಥಿಗೆ ಅನುಕೂಲವಾಗಲಿದೆ ಎಂದು ಚುನಾವಣಾ ವಿಶ್ಲೇಷಕರು ಅಭಿಪ್ರಾಯ-ಪಟ್ಟಿದ್ದಾರೆ. ಅನೂಪ್ ಧೋತ್ರೆ ಅವರು ಅಕೋಲಾ ಸಂಸದ ಸಂಜಯ್ ಧೋತ್ರೆ ಅವರ ಮಗನಾಗಿದ್ದು, ನಾಲ್ಕು ಬಾರಿ ತಂದೆಯ ಕೈ ಹಿಡಿದಿದ್ದ ಕ್ಷೇತ್ರವು ಈ ಬಾರಿ ತಮಗೆ ಒಲಿಯಲಿದೆ ಎಂಬ ದೃಢ ವಿಶ್ವಾಸ ದಲ್ಲಿದ್ದಾರೆ. ‘ಇಂಡಿಯಾ’ ಒಕ್ಕೂಟದ ಜೊತೆಗೆ ಕೈಜೋಡಿಸುವುದಾಗಿ ಆರಂಭದಲ್ಲಿ ಹೇಳಿದ್ದ ಪ್ರಕಾಶ್ ಅವರು ಅಕೋಲಾದಲ್ಲಿ ಸ್ಪರ್ಧಿಸುವ ನಿಲುವು ಪ್ರಕಟಿಸುವ ಮೂಲಕ ಅಚ್ಚರಿ ಮೂಡಿಸಿದ್ದರು. ವೈದ್ಯರಾಗಿ ಮತ್ತು ಸಾಮಾಜಿಕ ಕಾರ್ಯಕರ್ತರಾಗಿ ಹೆಸರು ಮಾಡಿರುವ ಅಭಯ್, ಈ ಕ್ಷೇತ್ರದ ಜನರೊಂದಿಗೆ ನೇರ ಸಂಪರ್ಕ ಹೊಂದಿರುವವರು. ಈ ಕಾರಣಕ್ಕಾಗಿಯೇ ಕಾಂಗ್ರೆಸ್ ಅವರನ್ನು ಅಭ್ಯರ್ಥಿಯಾಗಿಸಿದೆ ಮತ್ತು ಗೆಲುವಿನ ನಿರೀಕ್ಷೆಯಲ್ಲಿದೆ. 2019ರಲ್ಲಿ ಇಲ್ಲಿಂದ ಸ್ಪರ್ಧಿಸಿದ್ದ ಸಂಜಯ್ ಧೋತ್ರೆ, 2,75,596 ಮತಗಳ ಅಂತರದಿಂದ ಎದುರಾಳಿ ಪ್ರಕಾಶ್ ಅಂಬೇಡ್ಕರ್ ಅವರನ್ನು ಮಣಿಸಿದ್ದರು.

ಮುಖಾಮುಖಿ

ಲಖನೌ (ಉತ್ತರಪ್ರದೇಶ)

ರಾಜನಾಥ್ ಸಿಂಗ್ (ಬಿಜೆಪಿ)

ಉತ್ತರಪ್ರದೇಶದ ಲಖನೌ ಲೋಕಸಭಾ ಕ್ಷೇತ್ರವು ಈ ಬಾರಿ ಬಿಜೆಪಿ ಮತ್ತು ಸಮಾಜವಾದಿ ಪಕ್ಷದ (ಎಸ್‌ಪಿ) ಪ್ರಬಲ ಅಭ್ಯರ್ಥಿಗಳ ನೇರ ಹಣಾಹಣಿಗೆ ಸಾಕ್ಷಿಯಾಗಲಿದೆ. ಕಳೆದೆರಡು ಚುನಾವಣೆಯಲ್ಲಿ ಇಲ್ಲಿಂದ ಗೆದ್ದು ಸಂಸತ್ ಪ್ರವೇಶಿಸಿರುವ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರನ್ನೇ ಬಿಜೆಪಿಯು ಮತ್ತೆ ಅಭ್ಯರ್ಥಿಯಾಗಿಸಿದೆ. 2019ರ ಚುನಾವಣೆಯಲ್ಲಿ 3,47,302 ಮತಗಳ ಅಂತರದಿಂದ ಸಿಂಗ್ ಅವರು ಪ್ರತಿಸ್ಪರ್ಧಿ ಎಸ್‌ಪಿಯ ಪೂನಂ ಸಿನ್ಹಾ ಅವರನ್ನು ಪರಾಭವ ಗೊಳಿಸಿದ್ದರು. ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರು ಐದು ಬಾರಿ ಪ್ರತಿನಿಧಿಸಿದ್ದ ಈ ಕ್ಷೇತ್ರವು ದಶಕಗಳಿಂದಲೂ ಬಿಜೆಪಿಯ ತೆಕ್ಕೆಯಲ್ಲಿದೆ. ಉತ್ತರಪ್ರದೇಶದ ಮಾಜಿ ಮುಖ್ಯಮಂತ್ರಿ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದ ಸಿಂಗ್ ಅವರು ಸ್ಥಳೀಯ ಹಾಗೂ ರಾಷ್ಟ್ರ ಮಟ್ಟದ ರಾಜಕಾರಣದಲ್ಲಿ ಪ್ರಭಾವಿಯಾಗಿರು-ವುದರಿಂದ ಈ ಸಲವೂ ಗೆಲ್ಲುತ್ತಾರೆ ಎಂಬ ವಿಶ್ವಾಸ ಬಿಜೆಪಿಗಿದೆ.

V/S

ರವಿದಾಸ್ ಮೆಹರೋತ್ರಾ (ಸಮಾಜವಾದಿ ಪಕ್ಷ)

ಬಿಜೆಪಿಯ ಭದ್ರಕೋಟೆಯಾಗಿರುವ ಲಖನೌ ಕ್ಷೇತ್ರದಲ್ಲಿ ರಾಜನಾಥ್ ಸಿಂಗ್ ಅವರನ್ನು ಮಣಿಸಲು ತಂತ್ರಗಾರಿಕೆ ರೂಪಿಸಿರುವ ಸಮಾಜವಾದಿ ಪಕ್ಷವು, ಶಾಸಕ ರವಿದಾಸ್ ಮೆಹರೋತ್ರಾ ಅವರನ್ನು ಅಖಾಡಕ್ಕಿಳಿಸಿದೆ. ಇವರು ಲಖನೌ ಸೆಂಟ್ರಲ್ ಕ್ಷೇತ್ರದ ಶಾಸಕರಾಗಿದ್ದು, ಸ್ಥಳೀಯವಾಗಿಯೂ ಹೆಚ್ಚು ಪ್ರಭಾವ ಹೊಂದಿರುವ ನಾಯಕರಾಗಿದ್ದಾರೆ. ಅಖಿಲೇಶ್ ಯಾದವ್ ಅವರು ಉತ್ತರ ಪ್ರದೇಶದ ಮುಖ್ಯಮಂತ್ರಿ ಯಾಗಿದ್ದಾಗ ರವಿದಾಸ್ ಅವರು ಸಚಿವರಾಗಿದ್ದರು. ‘ಇಂಡಿಯಾ’ ಒಕ್ಕೂಟದ ಜೊತೆಗೆ ಕೈಜೋಡಿಸಿ ರುವುದರಿಂದ ಕಾಂಗ್ರೆಸ್ ಮತಗಳು ಈ ಬಾರಿ ರವಿದಾಸ್ ಅವರಿಗೆ ಸಿಗಲಿದೆ ಎಂಬುದು ಸಮಾಜವಾದಿ ಪಕ್ಷದ ವಿಶ್ವಾಸ. ಕಳೆದ ಚುನಾವಣೆಯಲ್ಲಿ ಇಲ್ಲಿಂದ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ಆಚಾರ್ಯ ಪ್ರಮೋದ್ ಕೃಷ್ಣಂ ಅವರು 1,80,011 ಮತಗಳನ್ನು ಪಡೆದಿ ದ್ದರು. ಈ ಮತಗಳು ಈ ಸಲ ಎಸ್‌ಪಿ ಬತ್ತಳಿಕೆಗೆ ಸೇರಲಿವೆ ಎಂಬ ವಿಶ್ವಾಸ-ದಲ್ಲಿದ್ದಾರೆ ಅದರ ನಾಯಕರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,514
ಇಂದಿನ ಅಂತ್ಯ	22,513
▲	1
ದಿನದ ಗರಿಷ್ಠ	22,537

ವಿನಿಮಯ ದರ

$ ಡಾಲರ್	83.31
£ ಪೌಂಡ್	105.22
€ ಯೂರೊ	90.33
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ಫಿಲ್ಟರ್)	₹1520 (1520)
ಸೋಯಾ (ರಿಫೈನ್ಡ್)	₹975 (985)
ಸೂರ್ಯಕಾಂತಿ (ರಿಫೈನ್ಡ್)	₹975 (980)
ಪಾಮೋಲಿನ್	₹970 (982)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪ್ರ.ಕೆ)	₹255-450
ದ್ವಿತಳಿ (ಪ್ರ.ಕೆ)	₹271-538

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹7500-9360
ತಿಪಟೂರು	₹8000-9500

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹181
ಆರ್‌ಎಸ್‌ಎಸ್-5	₹174.50
ಗುಡ್ ಲಾಟ್	₹164.50

(ಪ್ರತಿ ಕೆಜಿಗೆ)

ಆ್ಯಪಲ್: 614 ಉದ್ಯೋಗಿಗಳ ವಜಾ

ವಾಷಿಂಗ್ಟನ್ (ಎಪಿ): ಐ ಫೋನ್ ತಯಾರಿಕಾ ಕಂಪನಿ ಆ್ಯಪಲ್, ಅಮೆರಿಕದ ಕ್ಯಾಲಿಫೋರ್ನಿಯಾದಲ್ಲಿರುವ ತನ್ನ ಕಚೇರಿಯಲ್ಲಿರುವ 614 ಉದ್ಯೋಗಿಗಳನ್ನು ಕೆಲಸದಿಂದ ವಜಾಗೊಳಿಸಲು ನಿರ್ಧರಿಸಿದೆ.

ವೆಚ್ಚ ತಗ್ಗಿಸಲು ಈ ನಿರ್ಧಾರ ಕೈಗೊಂಡಿದೆ. ಕೋವಿಡ್ ಸಾಂಕ್ರಾಮಿಕದ ಬಳಿಕ ಆ್ಯಪಲ್ ಕಂಪನಿಯಲ್ಲಿ ನಡೆಯುತ್ತಿರುವ ಉದ್ಯೋಗ ಕಡಿತದ ಮೊದಲ ಪ್ರಕರಣ ಇದಾಗಿದೆ.

ಮೇ 27ರಿಂದ ಕೆಲಸದಿಂದ ವಜಾಗೊಳಿಸುವ ಪ್ರಕ್ರಿಯೆ ಆರಂಭಿಸುವ ಬಗ್ಗೆ ಸಾಂತಾ ಕ್ಲಾರಾದಲ್ಲಿರುವ ತನ್ನ ಎಂಟು ಕಚೇರಿಗಳಿಗೆ ಇತ್ತೀಚೆಗೆ ಸಂದೇಶ ಕಳುಹಿಸಿದೆ.

ಕಾರ್ಮಿಕರ ಮರುಹೊಂದಾಣಿಕೆ ಮತ್ತು ಮರು ತರಬೇತಿ ಅಧಿಸೂಚನೆ ಕಾಯ್ದೆಯಡಿ ಸರ್ಕಾರಕ್ಕೆ ಈ ಕುರಿತು ಮಾಹಿತಿ ಸಲ್ಲಿಸಿದೆ. ಆದರೆ, ಯಾವ ವಿಭಾಗ ಅಥವಾ ಪ್ರಾಜೆಕ್ಟ್‌ಗೆ ಸಂಬಂಧಿಸಿದ ಉದ್ಯೋಗಿಗಳು ಕೆಲಸ ಕಳೆದುಕೊಳ್ಳಲಿದ್ದಾರೆ ಎಂಬ ಬಗ್ಗೆ ಸ್ಪಷ್ಟಪಡಿಸಿಲ್ಲ.

ಕೋವಿಡ್ ಸಾಂಕ್ರಾಮಿಕದ ವೇಳೆ ಆನ್‌ಲೈನ್‌ನಲ್ಲಿ ಜನರು ಹೆಚ್ಚು ಸಮಯ ಹಾಗೂ ಹಣ ವ್ಯಯಿಸಿದ್ದರು. ಆ ವೇಳೆ ಟೆಕ್ ಕಂಪನಿಗಳು ಹೆಚ್ಚು ಉದ್ಯೋಗಿಗಳ ನೇಮಕಕ್ಕೆ ಒತ್ತು ನೀಡಿದ್ದವು. ಇತ್ತೀಚೆಗೆ ಕಂಪನಿಗಳ ಬೆಳವಣಿಗೆ ಮಂದಗತಿಯಲ್ಲಿದೆ. ಹಾಗಾಗಿ, ತಳಮಟ್ಟದಲ್ಲಿ ವೆಚ್ಚ ಕಡಿತಕ್ಕೆ ಮುಂದಾಗಿವೆ. ಕ್ಲೌಡ್ ಕಂಪ್ಯೂಟಿಂಗ್ ವಹಿವಾಟು ನಡೆಸುವ ಅಮೆಜಾನ್ ವೆಬ್ ಸರ್ವೀಸ್‌ನಲ್ಲಿ (ಎಡಬ್ಲ್ಯುಎಸ್) ಉದ್ಯೋಗ ಕಡಿತಗೊಳಿಸುವುದಾಗಿ ಕಳೆದ ವಾರ ಅಮೆಜಾನ್ ಕಂಪನಿ ಹೇಳಿತ್ತು.

ವಿಡಿಯೊ ಗೇಮ್ ತಯಾರಿಕಾ ಕಂಪನಿ ಎಲೆಕ್ಟ್ರಾನಿಕ್ ಆರ್ಟ್ಸ್, ಶೇ 5ರಷ್ಟು ಉದ್ಯೋಗಿಗಳನ್ನು ವಜಾಗೊಳಿಸುವುದಾಗಿ ಹೇಳಿತ್ತು. ಸೋನಿ ಕಂಪನಿಯು 900 ಉದ್ಯೋಗಿಗಳು ಹಾಗೂ ಸಿಸ್ಕೊ ಕಂಪನಿಯು 4 ಸಾವಿರ ಉದ್ಯೋಗಿಗಳನ್ನು ವಜಾಗೊಳಿಸುವುದಾಗಿ ತಿಳಿಸಿತ್ತು. ಸ್ನ್ಯಾಪ್‌ಚಾಟ್ ಕೂಡ ಶೇ 10ರಷ್ಟು ಉದ್ಯೋಗ ಕಡಿತಗೊಳಿಸಲಾಗುವುದು ಎಂದು ಹೇಳಿದೆ.

ಯುಪಿಐ ಮೂಲಕ ಹಣ ವರ್ಗಾವಣೆ ಸೌಲಭ್ಯ

ನವದೆಹಲಿ (ಪಿಟಿಐ): ಎಟಿಎಂ ಕೇಂದ್ರಗಳಲ್ಲಿ ಯುಪಿಐ ಆಧಾರಿತ ಹಣ ವರ್ಗಾವಣೆ ಸೌಲಭ್ಯವನ್ನು ಜಾರಿಗೊಳಿಸಲು ಭಾರತೀಯ ರಿಸರ್ವ್ ಬ್ಯಾಂಕ್ ನಿರ್ಧರಿಸಿದೆ.

ಬಿಲ್ ಪಾವತಿ, ವ್ಯಾಪಾರ ವಹಿವಾಟು ಮತ್ತು ಇತರೆ ಡಿಜಿಟಲ್ ಪಾವತಿಗಳಿಗೆ ಸದ್ಯ ಯುಪಿಐ ಬಳಸಲಾಗುತ್ತಿದೆ. ಇನ್ನು ಮುಂದೆ ಇದರ ಮೂಲಕ ಬ್ಯಾಂಕ್‌ಗಳಿಗೆ ಹಣ ವರ್ಗಾವಣೆ ಮಾಡುವ ವ್ಯವಸ್ಥೆಗೆ ಶೀಘ್ರವೇ ಚಾಲನೆ ನೀಡಲಾಗುವುದು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ಪ್ರಸ್ತುತ ಎಟಿಎಂ ಯಂತ್ರಗಳ ಮೂಲಕ ಡೆಬಿಟ್ ಕಾರ್ಡ್ ಬಳಸಿ ಹಣ ವರ್ಗಾವಣೆ ಮಾಡಲಾಗುತ್ತಿದೆ. ಈ ವೇಳೆ ಗ್ರಾಹಕರು ಬ್ಯಾಂಕ್ ಖಾತೆಯ ಸಂಖ್ಯೆಯನ್ನು ನಮೂದಿಸಬೇಕಿದೆ. ಈ ಹೊಸ ವ್ಯವಸ್ಥೆಯಿಂದ ಗ್ರಾಹಕರಿಗೆ ಅನುಕೂಲವಾಗಲಿದೆ. ಜೊತೆಗೆ, ಬ್ಯಾಂಕ್‌ಗಳ ಕರೆನ್ಸಿ ನಿರ್ವಹಣಾ ಪ್ರಕ್ರಿಯೆ ಸುಗಮವಾಗಲಿದೆ ಎಂದರು.

ಆ್ಯಪ್ ಬಿಡುಗಡೆಗೆ ನಿರ್ಧಾರ: ರಿಟೇಲ್ ಡೈರೆಕ್ಟ್ ಸ್ಕೀಂನಡಿ ಸರ್ಕಾರಿ ಸಾಲಪತ್ರಗಳನ್ನು ನೇರವಾಗಿ ಖರೀದಿಸಲು ಅಥವಾ ಹೂಡಿಕೆ ಮಾಡಲು ಚಿಲ್ಲರೆ ಹೂಡಿಕೆದಾರರಿಗೆ ಅನುಕೂಲವಾಗುವಂತೆ ಮೊಬೈಲ್ ಆ್ಯಪ್ ಬಿಡುಗಡೆಗೊಳಿಸುವುದಾಗಿ ಆರ್‌ಬಿಐ ತಿಳಿಸಿದೆ. 2021ರ ನವೆಂಬರ್‌ನಲ್ಲಿ ಆರ್‌ಬಿಐ ಈ ಯೋಜನೆ ಆರಂಭಿಸಿತ್ತು.

ಜಿಡಿಪಿ ಕುರಿತ ಸುಬ್ರಮಣಿಯನ್ ಹೇಳಿಕೆಗೆ ಐಎಂಎಫ್ ಆಕ್ಷೇಪ

ವಾಷಿಂಗ್ಟನ್ (ಪಿಟಿಐ): 'ಭಾರತದ ಆರ್ಥಿಕತೆ ಬೆಳವಣಿಗೆ ಕುರಿತಂತೆ ಐಎಂಎಫ್‌ನ ಕಾರ್ಯ ನಿರ್ವಾಹಕ ನಿರ್ದೇಶಕ ಕೃಷ್ಣಮೂರ್ತಿ ಸುಬ್ರಮಣಿಯನ್ ನೀಡಿರುವ ಹೇಳಿಕೆಯು ವೈಯಕ್ತಿಕ ನೆಲೆಗಟ್ಟಿನದ್ದಾಗಿದೆ. ಅದು ಐಎಂಎಫ್‌ನ ಅಧಿಕೃತ ಹೇಳಿಕೆಯಲ್ಲ' ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿಯ (ಐಎಂಎಫ್) ವಕ್ತಾರೆ ಜೂಲಿ ಕೊಜಾಕ್ ಸ್ಪಷ್ಟಪಡಿಸಿದ್ದಾರೆ.

ಕಳೆದ ಹತ್ತು ವರ್ಷಗಳಲ್ಲಿ ಕೇಂದ್ರ ಸರ್ಕಾರವು ಉತ್ತಮ ನೀತಿಗಳನ್ನು ರೂಪಿಸಿದ್ದು, ಹಲವು ಸುಧಾರಣಾ ಕ್ರಮಗಳನ್ನು ಕೈಗೊಂಡಿದೆ. ಇವುಗಳನ್ನು ದುಪ್ಪಟ್ಟುಗೊಳಿಸಿ ಮುಂದುವರಿದರೆ 2047ರ ವರೆಗೆ ಭಾರತದ ಜಿಡಿಪಿಯು ಶೇ 8ರಷ್ಟು ಪ್ರಗತಿ ಕಾಣಲಿದೆ ಎಂದು ಅವರು ಇತ್ತೀಚೆಗೆ ನೀಡಿದ್ದ ಹೇಳಿಕೆಯು ಚರ್ಚೆಗೆ ಗ್ರಾಸವಾಗಿತ್ತು.

'ಸುಬ್ರಮಣಿಯನ್ ಅವರು ಐಎಂಎಫ್‌ನಲ್ಲಿ ಭಾರತವನ್ನು ಪ್ರತಿನಿಧಿಸುತ್ತಾರಷ್ಟೇ. ಅವರ ಹೇಳಿಕೆಯು ಐಎಂಎಫ್‌ನ ನಿಲುವುಗಳನ್ನು ಪ್ರತಿನಿಧಿಸುವುದಿಲ್ಲ' ಎಂದು ಜೂಲಿ ಹೇಳಿದ್ದಾರೆ. ಕಾರ್ಯಕಾರಿ ಮಂಡಳಿಯ ಕಾರ್ಯ ನಿರ್ವಾಹಕ ನಿರ್ದೇಶಕರು ಆಯಾ ರಾಷ್ಟ್ರಗಳಷ್ಟೇ ಪ್ರತಿನಿಧಿಸುತ್ತಾರೆ. ಶೀಘ್ರವೇ, ವಿಶ್ವ ಆರ್ಥಿಕತೆಯ ಮುನ್ನೋಟ ಕುರಿತ ಪರಿಷ್ಕೃತ ವರದಿಯನ್ನು ಐಎಂಎಫ್ ಪ್ರಕಟಿಸಲಿದೆ ಎಂದು ತಿಳಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

05-4-2024

ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10900-11000
ದಪ್ಪ ಮಧ್ಯಪ್ರದೇಶ(ಹೊಸ)	9900-10000
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1530)
ಒಂದು ವಾರದ ಡೆಲಿವರಿ	1525 (1525)
ಸೋಯಾ ಕಚ್ಚಾ	930 (945)
ಪಾಮ್ ವಾರದ ಡೆಲಿವರಿ	968 (980)
ಸೂರ್ಯಕಾಂತಿ ಎಣ್ಣೆ ಕಚ್ಚಾ	890 (910)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹69,750 (69,500)
ಬೆಳ್ಳಿ ಕೆ.ಜಿ ₹79,200 (79,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾರುಕಟ್ಟೆ ಧಾರಣೆ

ಅಡಿಕೆ (ಬಂಟ್ವಾಳ)	
ಕೋಕ	18000-28500
ಹೊಸತು	28500-35800
ಹಳತು	35800-43000
ಕುಮಟ	
ಚಿಪ್ಪು	24869-27599
ಕೋಕ	16019-23599
ಫ್ಯಾಕ್ಟರಿ	11099-21429
ಹಳೆಚಾಲಿ	34509-36199
ಹೊಸಚಾಲಿ	30099-34019
ಪುತ್ತೂರು	
ಕೋಕ	11500-26000
ಶಿವಮೊಗ್ಗ	
ಬೆಟ್ಟೆ	37599-49900
ಗೊರಬಲು	17029-31369
ರಾಶಿ	32000-47299
ಸರಕು	41100-80000
ಸಿದ್ದಾಪುರ	
ಬಿಳಿಗೋಟು	25899-29129
ಚಾಲಿ	32899-35239
ಕೋಕ	24019-29070
ಹಳೆಚಾಲಿ	35319-36839
ಕೆಂಪುಗೋಟು	28929-31809
ರಾಶಿ	43899-46209
ತಟ್ಟಿಬೆಟ್ಟೆ	36099-45499

ಮುದ್ರಮನೆ ಕಾಫಿ

(50 ಕೆಜಿಗೆ)

ಎಪಿ	₹14700
ಎಸಿ	₹8400
ಆರ್‌ಪಿ	₹15400
ಆರ್‌ಸಿ	₹9430

ತಾಪಮಾನ ಏರಿಕೆಯಿಂದ ಆಹಾರ ಪದಾರ್ಥಗಳ ಬೆಲೆ ಹೆಚ್ಚಳ ಸಂಭವ: ಶಕ್ತಿಕಾಂತ ದಾಸ್

7ನೇ ಬಾರಿ ರೆಪೊ ದರ ಯಥಾಸ್ಥಿತಿ

ಮುಂಬೈ (ಪಿಟಿಐ): ಆರ್ಥಿಕ ತಜ್ಞರ ನಿರೀಕ್ಷೆಯಂತೆಯೇ ಭಾರತೀಯ ರಿಸರ್ವ್ ಬ್ಯಾಂಕ್, ರೆಪೊ ದರದಲ್ಲಿ ಯಥಾಸ್ಥಿತಿ ಕಾಯ್ದುಕೊಂಡಿದೆ. ಹಾಗಾಗಿ ಗೃಹ, ವಾಹನ ಮತ್ತು ಇತರೆ ಸಾಲಗಳ ಮೇಲಿನ ಬಡ್ಡಿದರ ಇಳಿಕೆಯಾಗಲಿದೆ ಎಂಬ ನಿರೀಕ್ಷೆಯಲ್ಲಿದ್ದ ಸಾಲಗಾರರಿಗೆ ತೀವ್ರ ನಿರಾಸೆಯಾಗಿದೆ.



ಶಕ್ತಿಕಾಂತ ದಾಸ್

ಶುಕ್ರವಾರ ಮುಕ್ತಾಯಗೊಂಡ 2024–25ನೇ ಆರ್ಥಿಕ ವರ್ಷದ ಆರ್‌ಬಿಐನ ಹಣಕಾಸು ನೀತಿ ಸಮಿತಿಯ (ಎಂಪಿಸಿ) ಪ್ರಥಮ ಸಭೆಯಲ್ಲಿ, ಆರು ಸದಸ್ಯರ ಪೈಕಿ ಐವರು ರೆಪೊ ದರವನ್ನು ಶೇ6.5ರಲ್ಲಿಯೇ ಉಳಿಸಿಕೊಳ್ಳಲು ಒಪ್ಪಿಗೆ ನೀಡಿದ್ದಾರೆ. 2023ರ ಫೆಬ್ರುವರಿಯಿಂದಲೂ ರೆಪೊ ದರದಲ್ಲಿ ಬದಲಾವಣೆ ಮಾಡಿಲ್ಲ.

ಏಪ್ರಿಲ್‌ನಿಂದ ಜೂನ್‌ವರೆಗೆ ಸಾಮಾನ್ಯ ತಾಪಮಾನ ಹೆಚ್ಚಿರಲಿದೆ ಎಂದು ಭಾರತೀಯ ಹವಾಮಾನ ಇಲಾಖೆಯು ಮುನ್ಸೂಚನೆ ನೀಡಿದೆ. ಇದರಿಂದ ಆಹಾರ ಪದಾರ್ಥಗಳ ಬೆಲೆ ಏರಿಕೆಯಾಗುವ ಸಾಧ್ಯತೆಯಿದೆ. ಹಾಗಾಗಿ, ಚಿಲ್ಲರೆ ಹಣದುಬ್ಬರವು ಏರಿಕೆಯಾಗುವ ಸಾಧ್ಯತೆ ಇರುವುದರಿಂದ ಬಡ್ಡಿದರದಲ್ಲಿ ಬದಲಾವಣೆಗೆ ಆರ್‌ಬಿಐ ಮುಂದಾಗಿಲ್ಲ. ಸತತ ಏಳನೇ ಬಾರಿಗೆ ಯಥಾಸ್ಥಿತಿ ಕಾಯ್ದುಕೊಂಡಿದೆ.

ಭಾರತೀಯ ರಿಸರ್ವ್ ಬ್ಯಾಂಕ್, ಸರ್ಕಾರಿ ಸಾಲ ಪತ್ರಗಳನ್ನು ವಾಣಿಜ್ಯ ಬ್ಯಾಂಕ್‌ಗಳಲ್ಲಿ ಅಡಮಾನ ಇಡದೆ ಅವುಗಳ ಬಳಿ ಇರುವ ಹೆಚ್ಚುವರಿ ಹಣವನ್ನು ತನ್ನ ವಶಕ್ಕೆ ತೆಗೆದುಕೊಳ್ಳುತ್ತದೆ (ಸ್ಟ್ಯಾಂಡಿಂಗ್ ಡಿಪಾಸಿಟ್ ಫೆಸಿಲಿಟಿ- ಎಸ್‌ಡಿಎಫ್). ಇದು ನಗದು ಹರಿವಿನ ಪ್ರಮಾಣ ತಗ್ಗಿಸಲು ನೆರವಾಗಲಿದೆ.

ಈ ಹಣಕ್ಕೆ ನಿಗದಿಪಡಿಸಿರುವ ಶೇ6.25ರಷ್ಟು ಬಡ್ಡಿದರದಲ್ಲೂ ಬದಲಾವಣೆ ಮಾಡಿಲ್ಲ. ತುರ್ತು ಪರಿಸ್ಥಿತಿಯಲ್ಲಿ ಆರ್‌ಬಿಐನಿಂದ ಬ್ಯಾಂಕ್‌ಗಳು ಪಡೆಯುವ ಸಾಲಕ್ಕೆ ನಿಗದಿಪಡಿಸಿರುವ ಶೇ 6.75ರಷ್ಟು ಬಡ್ಡಿದರದಲ್ಲೂ ಯಥಾಸ್ಥಿತಿ ಕಾಯ್ದುಕೊಂಡಿದೆ.

ಸಭೆಯ ಬಳಿಕ ಮಾತನಾಡಿದ ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್, 'ದೇಶದ ಅರ್ಥ ವ್ಯವಸ್ಥೆಯ ಮುನ್ನೋಟವನ್ನು ಅವಲೋಕಿಸಿ ಈ ತೀರ್ಮಾನ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

ಹಂತ ಹಂತವಾಗಿ ಹಣದುಬ್ಬರವನ್ನು ಶೇ 4ರ ಮಿತಿಯೊಳಗೆ ತರುವ ನಿಟ್ಟಿನಲ್ಲಿ ಹಣದ ಹರಿವನ್ನು ಸಂಕುಚಿತಗೊಳಿಸುವ ಕ್ರಮಕ್ಕೆ ಮುಂದಾಗಿದ್ದೇವೆ. ಇದು ಆರ್ಥಿಕತೆ ಬೆಳವಣಿಗೆಗೂ ನೆರವಾಗಲಿದೆ ಎಂದು ಹೇಳಿದರು.

2022ರ ಏಪ್ರಿಲ್‌ನಲ್ಲಿ ಶೇ 7.8ರಷ್ಟಿದ್ದ ಹಣದುಬ್ಬರವನ್ನು ನೆನಪಿಸಿಕೊಂಡ ಅವರು, 'ಆ ವೇಳೆ ಹಣದುಬ್ಬರದ ಕೊಠಡಿಗೆ ಆನೆಯೊಕ್ಕಿತ್ತು. ಈಗ ಅದು ಹೊರಗೆ ವಿಹಾರಕ್ಕೆ ಹೋಗಿದ್ದು, ಅರಣ್ಯದೊಳಕ್ಕೆ ಹೋಗುವಂತೆ ಕಾಣುತ್ತಿದೆ. ಅದು ಕಾಡಿಗೆ ಮರಳಿ ಅಲ್ಲಿಯೇ ಉಳಿಯುವಂತೆ ಬಯಸುತ್ತೇವೆ' ಎಂದು ಹೇಳಿದರು. 'ಗ್ರಾಹಕ ಬೆಲೆ ಸೂಚ್ಯಂಕ ಆಧಾರಿತ ಹಣದುಬ್ಬರವು ಮಧ್ಯಮ ಹಂತದಲ್ಲಿದ್ದು, ನಿಗದಿತ ಗುರಿಯತ್ತ ಸಾಗುತ್ತಿದೆ. ಈ ಗುರಿ ಮುಟ್ಟದ ಹೊರತು ನಮ್ಮ ಕಾರ್ಯ ಪೂರ್ಣಗೊಳ್ಳುವುದಿಲ್ಲ' ಎಂದು ಸ್ಪಷ್ಟಪಡಿಸಿದರು.

ಜಿಡಿಪಿ ಶೇ 7ರಷ್ಟು ಪ್ರಗತಿ ನಿರೀಕ್ಷೆ

2024–25ನೇ ಆರ್ಥಿಕ ವರ್ಷದಲ್ಲಿ ದೇಶದ ಜಿಡಿಪಿ ಬೆಳವಣಿಗೆಯು ಶೇ 7ರಷ್ಟು ಪ್ರಗತಿ ಕಾಣಲಿದೆ ಎಂದು ಆರ್‌ಬಿಐ ಅಂದಾಜಿಸಿದೆ.

2023–24ನೇ ಆರ್ಥಿಕ ವರ್ಷದಲ್ಲಿ ಜಿಡಿಪಿಯು ಶೇ 7.6ರಷ್ಟು ದಾಖಲಾಗಲಿದೆ ಎಂದು ಹೇಳಿದೆ.

ಈ ಬಾರಿ ಮುಂಗಾರು ಸಾಮಾನ್ಯವಾಗಿರಲಿದ್ದು, ಹಣದುಬ್ಬರದ ಒತ್ತಡ ತಗ್ಗಲಿದೆ. ತಯಾರಿಕಾ ಮತ್ತು ಸೇವಾ ವಲಯಗಳ ಬೆಳವಣಿಗೆ ವೇಗವು ಸುಸ್ಥಿರವಾಗಿರಲಿದೆ. ಇದು ದೇಶದ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಗೆ ಸಹಕಾರಿಯಾಗಲಿದೆ ಎಂದು ಶಕ್ತಿಕಾಂತ ದಾಸ್ ಹೇಳಿದ್ದಾರೆ.



ಕೃಷಿ ಮತ್ತು ಗ್ರಾಮೀಣ ಚಟುವಟಿಕೆಗಳು ಸದೃಢವಾಗಿರಲಿವೆ. ಖಾರೀಫ್ ಅವಧಿಯಲ್ಲೂ ಫಸಲು ಸುಧಾರಿಸಲಿದೆ. ಗ್ರಾಮೀಣ ಪ್ರದೇಶದಲ್ಲಿನ ಬೇಡಿಕೆ ಹೆಚ್ಚಳ ಹಾಗೂ ಬಳಕೆಗೆ ಉತ್ತೇಜನ ಸಿಗಲಿದ್ದು, ಅರ್ಥ ವ್ಯವಸ್ಥೆಗೆ ನೆರವಾಗಲಿದೆ ಎಂದಿದ್ದಾರೆ.

ಸಿಮೆಂಟ್ ಉತ್ಪಾದನೆಯು ಚೇತರಿಕೆ ಕಾಣಲಿದೆ. ಉಕ್ಕಿನ ಬಳಕೆ ಮತ್ತು ಉತ್ಪಾದನೆಯೂ ಸದೃಢವಾಗಿರಲಿದೆ. ಬಂಡವಾಳ ಸರಕುಗಳ ಆಮದು ಬಲಗೊಳ್ಳಲಿದೆ. ಇದು ಹೂಡಿಕೆ ಚಕ್ರದ ಸುಗಮ ಚಾಲನೆಗೆ ಸಹಕಾರಿಯಾಗಲಿದೆ ಎಂದು ಹೇಳಿದ್ದಾರೆ.

'ಹಣದುಬ್ಬರ ಶೇ 4.5ರಷ್ಟು ಇರಲಿದೆ'

ಹಣದುಬ್ಬರದ ಪಥದಲ್ಲಿ ಆಹಾರ ಪದಾರ್ಥಗಳ ಬೆಲೆ ನಿಯಂತ್ರಣವು ಅನಿಶ್ಚಿತತೆಯಿಂದ ಕೂಡಿದೆ. ಹಾಗಾಗಿ, 2024–25ನೇ ಆರ್ಥಿಕ ವರ್ಷದಲ್ಲಿ ಚಿಲ್ಲರೆ ಹಣದುಬ್ಬರವು ಶೇ 4.5ರಷ್ಟು ಇರಲಿದೆ ಎಂದು ಹಣಕಾಸು ನೀತಿ ಸಮಿತಿ ಅಂದಾಜಿಸಿದೆ.

ಫೆಬ್ರುವರಿ ತಿಂಗಳಿನಲ್ಲಿ ಚಿಲ್ಲರೆ ಹಣದುಬ್ಬರವು ಶೇ 5.1ರಷ್ಟು ದಾಖಲಾಗಿದೆ. ಆಹಾರ ಹಣದುಬ್ಬರವು ಶೇ 8.66ರಷ್ಟಿದೆ. 2023–24ನೇ ಆರ್ಥಿಕ ವರ್ಷದಲ್ಲಿ ಹಣದುಬ್ಬರವು ಶೇ 5.4ರಷ್ಟು ಇರಲಿದೆ ಎಂದು ಅಂದಾಜಿಸಲಾಗಿದೆ.



ಮಾರ್ಚ್ ತಿಂಗಳ ಮಧ್ಯದಲ್ಲಿ ಪೆಟ್ರೋಲ್ ಹಾಗೂ ಡೀಸೆಲ್ ದರ ಕಡಿತವಾಗಿದೆ. ಆದರೆ, ಇತ್ತೀಚೆಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯಾಗಿದೆ. ಮುಂದುವರಿದಿರುವ ಜಾಗತಿಕ ಬಿಕ್ಕಟ್ಟುಗಳು ಸರಕುಗಳ ಬೆಲೆ ಮತ್ತು ಪೂರೈಕೆ ಸರಪಳಿಗೆ ಧಕ್ಕೆ ತರುವ ಸಾಧ್ಯತೆಯಿದೆ ಎಂದು ಆರ್‌ಬಿಐ ತಿಳಿಸಿದೆ.

ಕಳೆದ ಎರಡು ವರ್ಷಗಳ ಹಿಂದೆ ಗೋಧಿ ಫಸಲು ಬಿಸಿ ಗಾಳಿಗೆ ಸಿಲುಕಿ ಇಳುವರಿ ಕುಂಠಿತವಾಗಿತ್ತು. ರಾಬಿ ಅವಧಿಯಲ್ಲಿ ಗೋಧಿ ಉತ್ಪಾದನೆ ಹೆಚ್ಚಲಿದೆ. ಆದರೆ, ಬಿಸಿ ಗಾಳಿಯು ತರಕಾರಿಗಳ ಬೆಲೆ ಏರಿಕೆಯ ಮೇಲೆ ಪರಿಣಾಮ ಬೀರಬಹುದು ಎಂದು ಶಕ್ತಿಕಾಂತ ದಾಸ್ ಆತಂಕ ವ್ಯಕ್ತಪಡಿಸಿದ್ದಾರೆ.

'ಫೋರ್ಬ್ಸ್' ಪಟ್ಟಿಯಲ್ಲಿ ಮೈಸೂರಿನ ಉದ್ಯಮಿ ರಮೇಶ್

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿ ಕೇಂದ್ರ ಕಚೇರಿ ಹೊಂದಿರುವ ಕೇನ್ಸ್ ಟೆಕ್ನಾಲಜಿ ಕಂಪನಿಯ ಸ್ಥಾಪಕ ಮತ್ತು ವ್ಯವಸ್ಥಾಪಕ ನಿರ್ದೇಶಕರಾಗಿರುವ ರಮೇಶ್ ಕಣ್ಣನ್ ಅಮೆರಿಕದ 'ಫೋರ್ಬ್ಸ್' ನಿಯತಕಾಲಿಕ ಪ್ರಕಟಿಸುವ ಶತಕೋಟ್ಯಧಿಪತಿಗಳ (ಬಿಲಿಯನೇರ್) ಪಟ್ಟಿಗೆ ಇದೇ ಮೊದಲ ಬಾರಿಗೆ ಸೇರ್ಪಡೆಯಾಗಿದ್ದಾರೆ.



ರಮೇಶ್ ಕಣ್ಣನ್

ದೇಶದ ಹೆಗ್ಗಳಿಕೆಯಾದ 'ಚಂದ್ರಯಾನ–3'ರ ನೌಕೆಯ ಲ್ಯಾಂಡರ್ ಹಾಗೂ ರೋವರ್‌ಗೆ ಎಲೆಕ್ಟ್ರಾನಿಕ್ ಉಪಕರಣಗಳನ್ನು ಇಸ್ರೊಗೆ ಪೂರೈಕೆ ಮಾಡಿದ್ದ ಈ ಕಂಪನಿಯ ಷೇರುಗಳ ಬೆಲೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದ್ದರಿಂದ ರಮೇಶ್ ಅವರ ಸಂಪತ್ತಿನಲ್ಲೂ ಏರಿಕೆ ಕಂಡಿದೆ ಎಂದು ಹೇಳಲಾಗಿದೆ.

ರಮೇಶ್ ಅವರು 'ಫೋರ್ಬ್ಸ್' ಪಟ್ಟಿಯಲ್ಲಿ ಸ್ಥಾನ ಪಡೆದಿರುವುದನ್ನು ಕಂಪನಿಯ ಮೂಲಗಳು ಖಚಿತಪಡಿಸಿವೆ.

₹10 ಸಾವಿರ ಕೋಟಿಗೂ ಹೆಚ್ಚು ಆಸ್ತಿಯನ್ನು ಅವರು ಹೊಂದಿದ್ದಾರೆ. ವಿಶ್ವದ ಶ್ರೀಮಂತ ಉದ್ಯಮಿಗಳಾದ ಇಲಾನ್ ಮಸ್ಕ್, ಮುಕೇಶ್ ಅಂಬಾನಿ ಮೊದಲಾದವರ ಸಾಲಿಗೆ ಸೇರಿದ್ದಾರೆ. ಎಲೆಕ್ಟ್ರಿಕಲ್ ಎಂಜಿನಿಯರ್ ಆಗಿರುವ ಅವರು, 1988ರಲ್ಲಿ ಕೇನ್ಸ್ ಟೆಕ್ನಾಲಜಿ ಕಂಪನಿಯನ್ನು ಸ್ಥಾಪಿಸಿದ್ದಾರೆ.

ಅವರ ಪತ್ನಿ ಸವಿತಾ ರಮೇಶ್ ಆಡಳಿತ ಮಂಡಳಿಯ ಅಧ್ಯಕ್ಷರಾಗಿದ್ದಾರೆ. ಈ ಕಂಪನಿಯಲ್ಲಿ ರಮೇಶ್ ಅವರು ಶೇ64ರಷ್ಟು ಷೇರು ಹೊಂದಿದ್ದಾರೆ. ಕಂಪನಿಯು 2022ರ ನವೆಂಬರ್‌ನಲ್ಲಿ ಷೇರು ಮಾರುಕಟ್ಟೆ ಪ್ರವೇಶಿಸಿತ್ತು.

ತಿರುಪತಿ: ವಿವಿಧ ಹೂವಿನಿಂದ ವೆಂಕಟೇಶ್ವರನಿಗೆ ಪೂಜೆ

ಪುಷ್ಪಯಾಗಕ್ಕೆ 3 ಟನ್ ಹೂವು ಬಳಕೆ

ತಿರುಪತಿ (ಆಂಧ್ರಪ್ರದೇಶ) (ಪಿಟಿಐ): ಇಲ್ಲಿನ ಶ್ರೀ ವೆಂಕಟೇಶ್ವರ ದೇವಸ್ಥಾನದಲ್ಲಿ ಗುರುವಾರ ಟಿಟಿಡಿಯು ಹಲವು ಬಗೆಯ ಮೂರು ಟನ್ ಹೂವುಗಳನ್ನು ಬಳಸಿ ವಾರ್ಷಿಕ ಪುಷ್ಪಯಾಗ ಉತ್ಸವವನ್ನು ನಡೆಸಿತು.

ಭಕ್ತರು ಮತ್ತು ದೇವಸ್ಥಾನದ ಅಧಿಕಾರಿಗಳು ಪುಷ್ಪಾರ್ಚನೆಗಾಗಿ ಗುಲಾಬಿ, ಮಲ್ಲಿಗೆ, ನೈದಿಲೆ ಮತ್ತು ಇತರ ಹೂವುಗಳನ್ನು ಬುಟ್ಟಿಗಳಲ್ಲಿ ತಂದಿದ್ದರು.

'ಶ್ರೀನಿವಾಸ ಮಂಗಾಪುರದ ಕಲ್ಯಾಣ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಗುರುವಾರ ಮಧ್ಯಾಹ್ನ 2ರಿಂದ ಸಂಜೆ 5 ಗಂಟೆಯವರೆಗೆ ವಾರ್ಷಿಕ ಪುಷ್ಪಯಾಗವು ವಿಜೃಂಭಣೆಯಿಂದ ನಡೆಯಿತು. ಉತ್ಸವ ಮೂರ್ತಿಗಳಿಗೆ ಪುಷ್ಪ ಸ್ನಾನ ಮಾಡಿಸಲು ಹತ್ತಾರು ಬಗೆಯ ಮೂರು ಟನ್ ಹೂವು ಮತ್ತು ವಿವಿಧ ಬಗೆಯ ಎಲೆಗಳನ್ನು ಬಳಸಲಾಯಿತು' ಎಂದು ಟಿಟಿಡಿ ಪ್ರಕಟಣೆ ತಿಳಿಸಿದೆ.

ಪುಷ್ಪಾರ್ಚನೆಗೆ ಮುನ್ನ ದೇವಸ್ಥಾನದ ವತಿಯಿಂದ ಅಭಿಷೇಕ ಕಲ್ಯಾಣೋತ್ಸವ ನಡೆಸಲಾಯಿತು. ಪೂರ್ವಭಾವಿಯಾಗಿ ತಿರುಪ್ಪಾವಾಡ ಮತ್ತು ಕಲ್ಯಾಣೋತ್ಸವವನ್ನು ರದ್ದುಗೊಳಿಸಲಾಯಿತು.

ಡಯಲ್ ಯುವರ್ ಇಒ: ಭಕ್ತರ ಪ್ರತಿಕ್ರಿಯೆ ಮತ್ತು ಸಲಹೆಗಳನ್ನು ಸ್ವೀಕರಿಸಲು ಆರಂಭಿಸಿರುವ ತಿಂಗಳ 'ಡಯಲ್ ಯುವರ್ ಇಒ' ಕಾರ್ಯಕ್ರಮದಲ್ಲಿ ಟಿಟಿಡಿ ಕಾರ್ಯ ನಿರ್ವಾಹಕ ಅಧಿಕಾರಿ (ಇಒ) ಎ.ವಿ. ಧರ್ಮ ರೆಡ್ಡಿ ಭಾಗವಹಿಸಿ, ಭಕ್ತರ ಸಲಹೆ ಸ್ವೀಕರಿಸಿದರು.

ಶುಕ್ರವಾರ ದೇಶದ ವಿವಿಧೆಡೆಯಿಂದ 29 ಮಂದಿ ಭಕ್ತರು ಕರೆ ಮಾಡಿದ್ದರು. ಗುಜರಾತ್‌ನ ವೆಂಕಟೇಶ್ ಎಂಬವರು ಕರೆ ಮಾಡಿ, ಉತ್ತರ ಭಾರತದಲ್ಲಿರುವ 120 ವರ್ಷಗಳಷ್ಟು ಹಳೆಯದಾದ ಶ್ರೀ ವೆಂಕಟೇಶ್ವರ ದೇವಸ್ಥಾನ ಜೀರ್ಣೋದ್ಧಾರ ವಿಧಾನದ ಬಗ್ಗೆ ರೆಡ್ಡಿ ಅವರನ್ನು ವಿಚಾರಿಸಿದರು.

'ಟಿಟಿಡಿಯ ಅಧಿಕಾರಿಗಳ ತಂಡವು ದೇವಾಲಯಕ್ಕೆ ಭೇಟಿ ನೀಡಿ, ಸಾಧ್ಯತೆಗಳನ್ನು ಪರಿಶೀಲಿಸಿದ ನಂತರ, ಶ್ರೀ ವೆಂಕಟೇಶ್ವರ ಆಲಯ ನಿರ್ಮಾಣ ಟ್ರಸ್ಟ್ (ಶ್ರೀವಾಣಿ) ಕೋರಿಕೆಯಂತೆ ಟಿಟಿಡಿ ನಿಧಿಯಿಂದ ದೇವಾಲಯ ನಿರ್ಮಾಣ ಅಥವಾ ನವೀಕರಣ ನಡೆಸಲಿದೆ' ಎಂದು ರೆಡ್ಡಿ ತಿಳಿಸಿದರು.

ದೇವಾಲಯದ ಸಂಸ್ಥೆಯು ಕಳೆದ ಮೂರು ವರ್ಷಗಳಲ್ಲಿ 3,600 ದೇವಾಲಯಗಳ ನಿರ್ಮಾಣ ಪ್ರಾರಂಭಿಸಿದ್ದು, ಇದರಲ್ಲಿ 1700 ದೇವಾಲಯಗಳನ್ನು ಪೂರ್ಣಗೊಳಿಸಿದೆ ಎಂದು ರೆಡ್ಡಿ ಹೇಳಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

General

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Multiple Vacancy

REQUIRED EXPERIENCED Telecaller, Loan Recovery Supervisor. For BankLoan collection. Salary 30,000+ Incentive Contact: 9620206756.

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

TRAVEL CORNER

HITESH HOLIDAYS : BENGALURU
SINGAPORE AND MALAYSIA- 07 DAYS
Date: 29th April 2024 &
Rs. 99990/-* P.P.
BALI - 06 DAYS
Date : 12th May 2024 &
Rs. 79990/-* P.P.
Contact for other travel packages & GST 5% Extra on all the package
Contact: 9739326102 / 9036568598

ಭವಿಷ್ಯ

Astrology

★ಓಂದುರ್ಗ ಆಂಜನಂ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲೂ ಪರಿಹಾರವಾಗದ ಸ್ತ್ರೀಪುರುಷ ಸಂಬಂಧಿತ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವಾನಂದನ್. 9845005009

ಪ್ರವಾಸ

Travel

ಸುವರ್ಣ ಯಾತ್ರ ನೇಪಾಳ ಪಶುಪತಿನಾಥ, ಅಯೋಧ್ಯ ಮುಕ್ತಿನಾಥ, ಮನೋಕಮನ ಕಠ್ಮಂಡು ಪೋಕ್ರ ಪ್ರವಾಸ 29/4/24. 9 ದಿನಗಳು 8660233673 9019462508

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಕಚ್ಚತೀವು: ಭಾರತದ ಬೇಡಿಕೆಗೆ ಆಧಾರವಿಲ್ಲ –ಶ್ರೀಲಂಕಾ

ಕೊಲಂಬೊ (ಪಿಟಿಐ): 'ಕಚ್ಚತೀವು ದ್ವೀಪವನ್ನು 'ಮರುವಶ' ಪಡೆಯುವ ಬಗ್ಗೆ ಭಾರತದಿಂದ ಕೇಳಿ ಬರುತ್ತಿರುವ ಬೇಡಿಕೆಗೆ ಯಾವುದೇ ಆಧಾರವಿಲ್ಲ' ಎಂದು ಶ್ರೀಲಂಕಾದ ಮೀನುಗಾರಿಕೆ ಸಚಿವ ಡೌಗ್ಲಸ್ ದೇವಾನಂದ ಅವರು ಶುಕ್ರವಾರ ಪ್ರತಿಕ್ರಿಯಿಸಿದ್ದಾರೆ.

ಕಚ್ಚತೀವು ದ್ವೀಪವನ್ನು ನೆಪವಾಗಿಸಿ ನರೇಂದ್ರ ಮೋದಿ ನೇತೃತ್ವದ ಭಾರತ ಸರ್ಕಾರವು, ಕಾಂಗ್ರೆಸ್ ಮತ್ತು ತಮಿಳುನಾಡಿನ ಡಿಎಂಕೆ ಪಕ್ಷಗಳ ಮೇಲೆ ನಡೆಸುತ್ತಿರುವ ವಾಗ್ದಾಳಿ ಹಿನ್ನೆಲೆಯಲ್ಲಿ ಹೀಗೆ ಹೇಳಿದ್ದಾರೆ.

'ಭಾರತದಲ್ಲಿ ಈಗ ಸಾರ್ವತ್ರಿಕ ಚುನಾವಣೆಯ ಸಮಯ. ಕಚ್ಚತೀವು ವಶಕ್ಕೆ ಪಡೆಯುವ ಕುರಿತು ಹೇಳಿಕೆ, ಪ್ರತಿ ಹೇಳಿಕೆಗಳು ಸಾಮಾನ್ಯ' ಎಂದು ಸುದ್ದಿಗಾರರಿಗೆ ಹೇಳಿದರು.

'ಬಹುಶಃ, ಶ್ರೀಲಂಕಾವು ಈ ಸಂಪನ್ಮೂಲಭರಿತ ದ್ವೀಪದ ಮೇಲೆ ಹಕ್ಕು ಪ್ರತಿಪಾದಿಸಬಾರದು. ಆ ದೇಶದ ಮೀನುಗಾರರು ಈ ದ್ವೀಪ ಭಾಗದಲ್ಲಿ ಮೀನುಗಾರಿಕೆ ನಡೆಸಲು ಸಾಧ್ಯವಾಗದಂತೆ ತನ್ನ ಹಕ್ಕು ಸ್ಥಾಪಿಸಲು ಭಾರತ ಈಗ ಯತ್ನಿಸುತ್ತಿರಬಹುದು' ಎಂದು ಸಚಿವರು ಅಭಿಪ್ರಾಯಪಟ್ಟರು.

'1974ರ ಒಪ್ಪಂದದ ಅನುಸಾರ ಎರಡೂ ರಾಷ್ಟ್ರಗಳ ಮೀನುಗಾರರೂ ಈ ದ್ವೀಪ ಭಾಗದಲ್ಲಿ ಮೀನುಗಾರಿಕೆಯನ್ನು ನಡೆಸಬಹುದು. ಆದರೆ, ಬಳಿಕ 1976ರಲ್ಲಿ ಈ ಒಪ್ಪಂದವನ್ನು ಪರಿಷ್ಕರಿಸಲಾಗಿದ್ದು, ತಿದ್ದುಪಡಿ ಮಾಡಲಾಗಿದೆ' ಎಂದು ಅವರು ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ರಿಯಲ್ ಎಸ್ಟೇಟ್ ಷೇರು ಮೌಲ್ಯ ಏರಿಕೆ

ನವದೆಹಲಿ (ಪಿಟಿಐ): ಆರ್‌ಬಿಐ ರೆಪೊ ದರವನ್ನು ಯಥಾಸ್ಥಿತಿ ಕಾಯ್ದುಕೊಂಡಿರುವ ಬೆನ್ನಲ್ಲೇ ರಿಯಲ್ ಎಸ್ಟೇಟ್ ಷೇರುಗಳ ಮೌಲ್ಯ ಶುಕ್ರವಾರ ಏರಿಕೆ ಕಂಡಿದೆ.

ಗೋದ್ರೇಜ್ ಪ್ರಾಪರ್ಟಿಸ್ (ಶೇ 3.92), ಮಹೀಂದ್ರ ಲೈಫ್‌ಸ್ಪೇಸ್ ಡೆವಲಪರ್ಸ್ (ಶೇ 2.59), ಮ್ಯಾಕ್ರೋಟೆಕ್ ಡೆವಲಪರ್ಸ್ (ಶೇ 1.99), ಡಿಎಲ್‌ಎಫ್ (ಶೇ 1.98), ಒಬೆರಾಯ್ (ಶೇ 0.96) ಬ್ರಿಗೇಡ್ ಎಂಟರ್‌ಪ್ರೈಸಸ್ (ಶೇ 0.86) ಷೇರಿನ ಮೌಲ್ಯ ಏರಿಕೆ ಆಗಿದೆ.

ಪ್ರೆಸ್ಟೀಜ್ ಎಸ್ಟೇಟ್ಸ್ ಪ್ರಾಜೆಕ್ಟ್ಸ್ (ಶೇ 1.14), ಶೋಭಾ (ಶೇ 0.53) ಮತ್ತು ಫೀನಿಕ್ಸ್ ಮಿಲ್ಸ್ (ಶೇ 0.22) ಷೇರಿನ ಮೌಲ್ಯ ಇಳಿಕೆ ಆಗಿದೆ.

ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 20 ಅಂಶ ಏರಿಕೆಯಾಗಿ 74,248ಕ್ಕೆ ಸ್ಥಿರಗೊಂಡಿದೆ. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 1 ಅಂಶ ಹೆಚ್ಚಳವಾಗಿ 22,513ಕ್ಕೆ ಕೊನೆಗೊಂಡಿತು.

ಮಾಲ್ದೀವ್ಸ್‌ಗೆ ಅಗತ್ಯ ವಸ್ತುಗಳ ಪೂರೈಕೆಗೆ ಕೇಂದ್ರ ಅನುಮತಿ

ನವದೆಹಲಿ/ ಮಾಲೆ (ಪಿಟಿಐ): ಮಾಲ್ದೀವ್ಸ್‌ಗೆ ಅಗತ್ಯ ವಸ್ತುಗಳನ್ನು ಪೂರೈಸಲು ಅನುಕೂಲವಾಗುವಂತೆ ಭಾರತವು ಶುಕ್ರವಾರ, ರಫ್ತು ನಿರ್ಬಂಧಗಳನ್ನು ತೆಗೆದುಹಾಕಿದೆ.

2024–25ನೇ ಸಾಲಿನ ದ್ವಿಪಕ್ಷೀಯ ಒಪ್ಪಂದದ ಅನ್ವಯ ಈ ತೀರ್ಮಾನ ಕೈಗೊಳ್ಳಲಾಗಿದೆ.

ಮೊಟ್ಟೆ, ಆಲೂಗೆಡ್ಡೆ, ಈರುಳ್ಳಿ, ಅಕ್ಕಿ, ಗೋಧಿ ಹಿಟ್ಟು, ಸಕ್ಕರೆ, ಬೇಳೆ ಹಾಗೂ ಮರಳನ್ನು ಪೂರೈಸಲು ಅನುಮತಿ ನೀಡಲಾಗಿದೆ ಎಂದು ಕೇಂದ್ರ ವಾಣಿಜ್ಯ ಸಚಿವಾಲಯದ ಅಧೀನದಲ್ಲಿ ಬರುವ ವಿದೇಶಿ ವ್ಯಾಪಾರದ ಮಹಾನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ.

ಅಗತ್ಯ ಆಹಾರ ವಸ್ತುಗಳ ರಫ್ತು ಕೋಟಾವನ್ನು ಶೇ 5ರಷ್ಟು ಹೆಚ್ಚಿಸಲಾಗಿದೆ ಎಂದು ತಿಳಿಸಿದೆ.

ಚಂಡೀಗಢ ಮೇಯರ್ ಚುನಾವಣೆ ಚುನಾವಣಾಧಿಕಾರಿ ಕ್ಷಮೆಯಾಚನೆ

ನವದೆಹಲಿ (ಪಿಟಿಐ): ಚಂಡೀಗಢದ ಮೇಯರ್ ಚುನಾವಣೆಯ ಚುನಾವಣಾಧಿಕಾರಿ ಆಗಿದ್ದ ಅನಿಲ್ ಮಸೀಹ್ ಅವರು ತಮ್ಮ ನಡವಳಿಕೆಗಾಗಿ ಸುಪ್ರೀಂ ಕೋರ್ಟ್‌ನಲ್ಲಿ ಶುಕ್ರವಾರ ಬೇಷರತ್ ಕ್ಷಮೆಯಾಚಿಸಿದ್ದಾರೆ.

ಮಸೀಹ್ ಅವರು ಪ್ರಕಟಿಸಿದ್ದ ಚುನಾವಣಾ ಫಲಿತಾಂಶವನ್ನು ಸುಪ್ರೀಂ ಕೋರ್ಟ್ ಫೆಬ್ರುವರಿಯಲ್ಲಿ ರದ್ದುಪಡಿಸಿತ್ತು. ಈ ಪ್ರಕರಣದ ವಿಚಾರಣೆ ಸಂದರ್ಭದಲ್ಲಿ, ಸುಳ್ಳು ಹೇಳಿಕೆ ನೀಡಿದ್ದಕ್ಕಾಗಿ ಮತ್ತು ಮತ ಎಣಿಕೆ ಸಮಯದಲ್ಲಿ ದುರ್ವತನೆ ತೋರಿದ್ದಕ್ಕಾಗಿ ಮಸೀಹ್ ವಿರುದ್ಧ ಸುಪ್ರೀಂ ಕೋರ್ಟ್ ಕ್ರಿಮಿನಲ್ ಮೊಕದ್ದಮೆ ದಾಖಲಿಸಲು ಆದೇಶಿಸಿತ್ತು.

'ನಾನು ಆತಂಕದಲ್ಲಿದ್ದು, ಖಿನ್ನತೆ ಎದುರಿಸುತ್ತಿದ್ದೇನೆ. ಮತಪತ್ರಗಳನ್ನು ತಿದ್ದಿದ ಆರೋಪವನ್ನು ನಿರಾಕರಿಸಿ ಈ ಹಿಂದೆ ಸಲ್ಲಿಸಿದ್ದ ಅಫಿಡವಿಟ್ ಅನ್ನು ಹಿಂಪಡೆಯುವುದಾಗಿ' ಮಸೀಹ್ ಹೇಳಿದರು. ಜನವರಿ 30ರ ಚುನಾವಣಾ ಫಲಿತಾಂಶವನ್ನು ರದ್ದುಗೊಳಿಸಿದ್ದ ಸುಪ್ರೀಂ ಕೋರ್ಟ್, ಪರಾಜಿತರಾಗಿದ್ದ ಎಎಪಿ– ಕಾಂಗ್ರೆಸ್ ಮೈತ್ರಿ ಅಭ್ಯರ್ಥಿ ಕುಲದೀಪ್ ಕುಮಾರ್ ಅವರನ್ನು ಹೊಸ ಮೇಯರ್ ಎಂದು ಫೆಬ್ರುವರಿಯಲ್ಲಿ ಘೋಷಿಸಿತ್ತು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ತ್ರಿಸದಸ್ಯ ಪೀಠ ವಿಚಾರಣೆ ನಡೆಸಿತು. ಮಸೀಹ್ ಪರ ವಾದಿಸಿದ ಹಿರಿಯ ವಕೀಲ ಮುಕುಲ್ ರೋಹಟಗಿ ಅವರು, 'ಮಸೀಹ್ ಅವರು ಸಂಪೂರ್ಣ ಬೇಷರತ್ತಾಗಿ ಕ್ಷಮೆಯಾಚಿಸಿದ್ದಾರೆ' ಎಂದರು.

ಕುಮಾರ್ ಪರ ವಾದಿಸಿದ ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಅವರು ಚುನಾವಣಾಧಿಕಾರಿಯ ಕ್ಷಮಾಪಣೆಯನ್ನು ವಿರೋಧಿಸಿದರು. ಪೀಠವು ವಿಚಾರಣೆಯನ್ನು ಜುಲೈ 23ಕ್ಕೆ ಮುಂದೂಡಿತು.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಇಸ್ರೇಲ್, ಅಮೆರಿಕದ ಮೇಲೆ ಪ್ರತೀಕಾರ: ಇರಾನ್ ಪ್ರತಿಜ್ಞೆ

ಟೆಹರಾನ್ (ಎಪಿ): ಸಿರಿಯಾದ ರಾಜಧಾನಿ ಡಮಾಸ್ಕಸ್‌ನಲ್ಲಿನ ಇರಾನ್ ರಾಯಭಾರ ಕಚೇರಿ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಹತರಾದ ಇರಾನ್ ರೆವಲ್ಯೂಷನರಿ ಗಾರ್ಡ್‌ನ (ಐಆರ್‌ಜಿ) ಏಳು ಮಂದಿಯ ಪಾರ್ಥಿವ ಶರೀರಗಳ ಮೆರವಣಿಗೆ ಮತ್ತು ಭಾರಿ ಪ್ರತಿಭಟನೆ ಟೆಹರಾನ್‌ನಲ್ಲಿ ಶುಕ್ರವಾರ ನಡೆಯಿತು.

ಸಲಾಮಿ

ಟೆಹರಾನ್‌ನ ವಿಶ್ವವಿದ್ಯಾಲಯದ ಬಳಿ ಪ್ರತಿಭಟನೆ ವೇಳೆ ಮಾತನಾಡಿದ ಐಆರ್‌ಜಿ ಕಮಾಂಡರ್ ಮೇಜರ್ ಜನರಲ್ ಹುಸೇನ್ ಸಲಾಮಿ, 'ಉನ್ನತ ಸೇನಾಧಿಕಾರಿಗಳ ಹತ್ಯೆ ಮಾಡಿರುವ ಇಸ್ರೇಲ್ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳದೇ ಬಿಡುವುದಿಲ್ಲ' ಎಂದು ಪ್ರತಿಜ್ಞೆ ಮಾಡಿದರು.

'ಇದು ಬೆದರಿಕೆಯಲ್ಲ, ನಾವು ಉತ್ತರ ನೀಡುತ್ತೇವೆ. ಜಿಯೋನಿಸ್ಟ್ ಆಡಳಿತ ಪತನ ಹತ್ತಿರವಾಗಿದೆ. ನಮಗೆ ದೇವರ ಅನುಗ್ರಹವಿದೆ. ಅಮೆರಿಕವು ವಿಶ್ವದಲ್ಲಿ ಅದರಲ್ಲೂ ವಿಶೇಷವಾಗಿ ಮುಸ್ಲಿಂ ಪ್ರಾಬಲ್ಯದ ದೇಶಗಳ ತೀವ್ರ ದ್ವೇಷ ಕಟ್ಟಿಕೊಂಡಿದೆ' ಎಂದು ಸಲಾಮಿ ಗುಡುಗಿದರು. ಏಳು ಸೇನಾಧಿಕಾರಿಗಳ ಶವಗಳನ್ನು ಅಂತ್ಯಸಂಸ್ಕಾರ ನಡೆಸಲು ಟ್ರಕ್‌ನಲ್ಲಿ ಸ್ಮಶಾನಕ್ಕೆ ಕೊಂಡೊಯ್ಯಲಾಯಿತು. ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಸಾವಿರಾರು ಇರಾನಿಗರು, ಇಸ್ರೇಲ್ ಮತ್ತು ಅಮೆರಿಕದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿ, ಈ ಎರಡೂ ದೇಶಗಳಿಗೆ ವಿನಾಶ ಕಾದಿದೆ ಎಂದು ಕಿಡಿಕಾರಿದರು.

ಇಸ್ರೇಲ್ ಸೋಮವಾರ ನಡೆಸಿದ ವೈಮಾನಿಕ ದಾಳಿಗೆ, ಇರಾನ್ ಸೇನೆಯ ಇಬ್ಬರು ಬ್ರಿಗೇಡಿಯರ್ ಜನರಲ್‌ಗಳು ಮತ್ತು ಐವರು ರೆವಲ್ಯೂಷನರಿ ಗಾರ್ಡ್‌ಗಳು, ಸಿರಿಯಾದ ನಾಲ್ವರು ನಾಗರಿಕರು ಮತ್ತು ಲೆಬನಾನಿನ ಉಗ್ರಗಾಮಿ ಹಿಜ್ಬುಲ್ಲಾ ಗುಂಪಿನ ಸದಸ್ಯ ಸೇರಿ 12 ಮಂದಿ ಹತರಾಗಿದ್ದರು.

ಬೆಂಗಳೂರಿಗೆ ರಾಜಸ್ಥಾನ ರಾಯಲ್ಸ್ ಚಾಲೆಂಜ್

ರಿಯಾನ್ ಪರಾಗ್ (ಆರ್‌ಆರ್)

3	2	181	84	160.18
ಪಂದ್ಯ	ಅರ್ಧಶತಕ	ರನ್	ಶ್ರೇಷ್ಠ	ಸ್ಟ್ರೈಕ್‌ರೇಟ್



ಬಲಾಬಲ

ಪಂದ್ಯ	30
ಆರ್‌ಸಿಬಿ ಜಯ	15
ರಾಜಸ್ಥಾನ ಜಯ	12
ಫಲಿತಾಂಶವಿಲ್ಲ	3

ರಾಜಸ್ಥಾನ ರಾಯಲ್ಸ್ ತಂಡದ ರಿಯಾನ್ ಪರಾಗ್ –ಪಿಟಿಐ ಚಿತ್ರ

ಪಿಚ್ ಹೇಗಿದೆ?

ಸವಾಯಿ ಮಾನಸಿಂಗ್ ಕ್ರೀಡಾಂಗಣದ ಪಿಚ್ ರನ್ ಗಳಿಕೆಗೆ ಸೂಕ್ತವಾಗಿದೆ. ಈ ಟೂರ್ನಿಯಲ್ಲಿ ನಡೆದ ಎರಡೂ ಪಂದ್ಯಗಳಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ತಂಡವು 180 ರನ್‌ಗಳಿಗಿಂತ ಹೆಚ್ಚಿನ ಮೊತ್ತ ಗಳಿಸಿವೆ. ಆದ್ದರಿಂದ ಟಾಸ್ ಗೆದ್ದ ತಂಡವು ತೆಗೆದುಕೊಳ್ಳುವ ನಿರ್ಧಾರವೂ ಇಲ್ಲಿ ಮಹತ್ವದ್ದಾಗಲಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ಟಿವಿ, ಜಿಯೊ ಸಿನಿಮಾ ಆ್ಯಪ್

ಜೈಪುರ (ಪಿಟಿಐ): ಗೆಲುವಿಗಾಗಿ ತವಕಿಸುತ್ತಿರುವ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 'ಯಥಾಪ್ರಕಾರ' ತನ್ನ ಹಳೆಯ ದೌರ್ಬಲ್ಯಗಳೊಂದಿಗೆ ಶನಿವಾರ ರಾಜಸ್ಥಾನ ರಾಯಲ್ಸ್ ಎದುರು ಕಣಕ್ಕಿಳಿಯಲಿದೆ.

ಟೂರ್ನಿಯಲ್ಲಿ ಆಡಿರುವ ಮೂರು ಪಂದ್ಯಗಳಲ್ಲಿಯೂ ಗೆದ್ದು ಆತ್ಮವಿಶ್ವಾಸದ ಆಗಸದಲ್ಲಿರುವ ರಾಜಸ್ಥಾನ ತಂಡವು ತವರಿನಂಗಳದಲ್ಲಿ ಮೇಲುಗೈ ಸಾಧಿಸುವ ಛಲದಲ್ಲಿದೆ. ಆದರೆ ಫಫ್ ಡುಪ್ಲೆಸಿ ಬಳಗವು ಆಡಿರುವ ನಾಲ್ಕು ಪಂದ್ಯಗಳಲ್ಲಿ ಒಂದರಲ್ಲಿ ಮಾತ್ರ ಗೆದ್ದಿದೆ.

ಬ್ಯಾಟಿಂಗ್‌ನಲ್ಲಿ ವಿರಾಟ್ ಕೊಹ್ಲಿ ಬಿಟ್ಟರೆ ಉಳಿದವರಿಂದ ಸ್ಥಿರ ಪ್ರದರ್ಶನವಿಲ್ಲ. ಅದರಲ್ಲೂ ಆರ್‌ಸಿಬಿಯು ಬ್ಯಾಟಿಂಗ್‌ನಲ್ಲಿ ವಿರಾಟ್ ಬಿಟ್ಟರೆ ಡುಪ್ಲೆಸಿ, ಗ್ಲೆನ್ ಮ್ಯಾಕ್ಸ್‌ವೆಲ್ ಮತ್ತು ದಿನೇಶ್ ಕಾರ್ತಿಕ್ ಅವರ ಮೇಲೆ ಹೆಚ್ಚು ಅವಲಂಬಿತವಾಗಿದೆ. ವಿರಾಟ್ ಒಬ್ಬರೇ ಆರೇಂಜ್ ಕ್ಯಾಪ್ ಧರಿಸುವಷ್ಟು ರನ್ ಕಲೆಹಾಕಿದ್ದಾರೆ. ಫಫ್ ಲಯ ಕಂಡುಕೊಂಡಿಲ್ಲ. ಮ್ಯಾಕ್ಸ್‌ವೆಲ್ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಆಡುತ್ತಿಲ್ಲ. ದಿನೇಶ್ ಕೊನೆಯ ಹಂತದಲ್ಲಿ ಒಂದಿಷ್ಟು ರನ್ ಗಳಿಸುತ್ತಿರುವುದು ಸಮಾಧಾನಕರ. ಅದರೆ ಯುವ ಪ್ರತಿಭೆ ರಜತ್ ಪಾಟೀದಾರ್, ಅನುಜ್ ರಾವತ್ ಅವರು ನಿರಾಶೆ ಮೂಡಿಸುತ್ತಿದ್ದಾರೆ.

ರಾಯಲ್ಸ್ ತಂಡದಲ್ಲಿ ಭರ್ಜರಿ ಫಾರ್ಮ್‌ನಲ್ಲಿರುವ ನಾಂದ್ರೆ ಬರ್ಗರ್, ಟ್ರೆಂಟ್ ಬೌಲ್ಟ್, ಡೆತ್ ಓವರ್ ಪರಿಣತ ಆವೇಶ್ ಖಾನ್ ಅವರನ್ನು ಎದುರಿಸಿ ನಿಲ್ಲಬೇಕಾದ ಸವಾಲು ಬೆಂಗಳೂರು ಬ್ಯಾಟರ್‌ಗಳ ಮುಂದಿದೆ.

ತಂಡದ ಬೌಲಿಂಗ್ ವಿಭಾಗವಂತೂ ಮೊದಲಿನಿಂದಲೂ ದುರ್ಬಲವಾಗಿದೆ. ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಆಡಿದ ಮೂರು ಪಂದ್ಯಗಳಲ್ಲಿಯೂ ಬೌಲರ್‌ಗಳ ಪ್ರದರ್ಶನ ಹೇಳಿಕೊಳ್ಳುವಂತೆ ಇರಲಿಲ್ಲ. ಇಂಪ್ಯಾಕ್ಟ್ ಪ್ಲೇಯರ್ ಆಗಿ ಆಡಿದ್ದ ಸ್ಥಳೀಯ ವೈಶಾಖ ವಿಜಯಕುಮಾರ್ ಅವರಿಗೆ ಒಂದೇ ಪಂದ್ಯದಲ್ಲಿ ಅವಕಾಶ ಸಿಕ್ಕಿತ್ತು. ಅದರಲ್ಲಿ ಅವರು ಚೆನ್ನಾಗಿ ಬೌಲಿಂಗ್ ಮಾಡಿದ್ದರು. ಆದರೆ ನಂತರದ ಪಂದ್ಯದಲ್ಲಿ ಅವರಿಗೆ ಅವಕಾಶ ನೀಡಲಿಲ್ಲ.

ಮೊದಲ ಮೂರು ಪಂದ್ಯಗಳಲ್ಲಿ ವಿಫಲರಾದ ಅಲ್ಜರಿ ಜೋಸೆಫ್ ಅವರನ್ನು ಕಳೆದ ಪಂದ್ಯದಲ್ಲಿ ಬದಲಿಸಿ ರೀಸ್ ಟಾಪ್ಲಿಯನ್ನು ಆಡಿಸಲಾಯಿತು. ಆದರೆ ಪ್ರಯೋಜನವಾಗಲಿಲ್ಲ. ಅನುಭವಿ ಸಿರಾಜ್, ಯಶ್ ದಯಾಳ್ ಕೂಡ ಪರಿಣಾಮ ಬೀರುತ್ತಿಲ್ಲ. ಸ್ಪಿನ್ ವಿಭಾಗದಲ್ಲಿ ಮ್ಯಾಕ್ಸ್‌ವೆಲ್ ಒಬ್ಬರೇ ಪರವಾಗಿಲ್ಲ.

ಆದರೆ ರಾಜಸ್ಥಾನ ತಂಡದ ಬ್ಯಾಟಿಂಗ್ ವಿಭಾಗ ಬಲಾಢ್ಯವಾಗಿದೆ. ಅದರಲ್ಲೂ ಅಸ್ಸಾಂ ಹುಡುಗ ರಿಯಾನ್ ಪರಾಗ್ ಅವರನ್ನು ಕಟ್ಟಿಹಾಕುವುದೇ ದೊಡ್ಡ ಸವಾಲು. ನಾಲ್ಕನೇ ಕ್ರಮಾಂಕದಲ್ಲಿ ಬಂದು ಪಂದ್ಯ ಗೆಲ್ಲಿಸಿಕೊಡಬಲ್ಲ ಚತುರ ಬ್ಯಾಟರ್ ರಿಯಾನ್. ಕಳೆದೆರಡೂ ಪಂದ್ಯಗಳಲ್ಲಿ ಅರ್ಧಶತಕ ಬಾರಿಸಿ ಮಿಂಚಿದ್ದರು. ಆರಂಭಿಕ ಬ್ಯಾಟರ್ ಯಶಸ್ವಿ ಜೈಸ್ವಾಲ್, ಜೋಸ್ ಬಟ್ಲರ್ ಅವರ ಸತತ ವೈಫಲ್ಯವನ್ನು ರಿಯಾನ್ ಸರಿದೂಗಿಸಿದ್ದಾರೆ. ನಾಯಕ ಸಂಜು ಸ್ಯಾಮ್ಸನ್ ಟೂರ್ನಿಯ ಮೊದಲ ಪಂದ್ಯದಲ್ಲಿ ಮಿಂಚಿದ್ದರು. ಆಲ್‌ರೌಂಡರ್ ಆರ್. ಅಶ್ವಿನ್, ಶುಭಂ ದುಬೆ ಅವರು ಲಯಕ್ಕೆ ಮರಳಿದರೆ ತಂಡದ ಬಲ ಹೆಚ್ಚುವುದು ಖಚಿತ.

ಆದರೆ ಹೋದ ಆವೃತ್ತಿಯಲ್ಲಿ ಉಭಯ ತಂಡಗಳು ಎರಡು ಬಾರಿ ಮುಖಾಮುಖಿಯಾದಾಗಲೂ ಆರ್‌ಸಿಬಿಯೇ ಗೆದ್ದಿತ್ತು.

ಮುಖ್ಯಾಂಶಗಳು

- ನಾಲ್ಕು ಪಂದ್ಯಗಳಲ್ಲಿ ಒಂದರಲ್ಲಿ ಜಯಿಸಿರುವ ಆರ್‌ಸಿಬಿ
- ಆಡಿದ ಎಲ್ಲ ಮೂರು ಪಂದ್ಯಗಳಲ್ಲಿ ಗೆದ್ದಿರುವ ರಾಜಸ್ಥಾನ ರಾಯಲ್ಸ್
- ಸತತ ಎರಡು ಪಂದ್ಯಗಳಲ್ಲಿ ಅರ್ಧಶತಕ ಗಳಿಸಿರುವ ರಿಯಾನ್ ಪರಾಗ್

ಜೈಪುರದಲ್ಲಿ ರಾಜಸ್ಥಾನ ಸವಾಲು; ರಿಯಾನ್, ವಿರಾಟ್ ಬ್ಯಾಟಿಂಗ್ ಪೈಪೋಟಿ

ವಿರಾಟ್ ಕೊಹ್ಲಿ(ಆರ್‌ಸಿಬಿ)

4	2	203	83	140.97
ಪಂದ್ಯ	ಅರ್ಧಶತಕ	ರನ್	ಶ್ರೇಷ್ಠ	ಸ್ಟ್ರೈಕ್‌ರೇಟ್

ಕ್ಯಾಚಿಂಗ್ ಅಭ್ಯಾಸದಲ್ಲಿ ವಿರಾಟ್ ಕೊಹ್ಲಿ –ಪಿಟಿಐ ಚಿತ್ರ

ಕೊಹ್ಲಿಗೆ ಬೆಂಬಲ ಬೇಕು: ಸ್ಟೀವ್ ಸ್ಮಿತ್

ಮುಂಬೈ (ಪಿಟಿಐ): ವಿರಾಟ್ ಕೊಹ್ಲಿ ಅವರು ಅಪಾರ ಒತ್ತಡದಲ್ಲಿದ್ದಾರೆ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಉಳಿದ ಬ್ಯಾಟರ್‌ಗಳೂ ಚೆನ್ನಾಗಿ ಆಡುವ ಮೂಲಕ ಕೊಹ್ಲಿಗೆ ಬೆಂಬಲವಾಗಿ ನಿಲ್ಲಬೇಕು ಎಂದು ಆಸ್ಟ್ರೇಲಿಯಾ ಆಟಗಾರ ಸ್ಟೀವ್ ಸ್ಮಿತ್ ಹೇಳಿದ್ದಾರೆ.

ಪ್ರಸಕ್ತ ಟೂರ್ನಿಯಲ್ಲಿ ಕೊಹ್ಲಿ 203 ರನ್‌ಗಳನ್ನು ಗಳಿಸಿದ್ದಾರೆ. ಆದರೆ ಉಳಿದ ಬ್ಯಾಟರ್‌ಗಳು ಹೇಳಿಕೊಳ್ಳುವಂತಹ ಸಾಧನೆ ಮಾಡಿಲ್ಲ.

ಈ ಕುರಿತು ಸ್ಮಿತ್ ಸ್ಟಾರ್ ಸ್ಪೋರ್ಟ್ಸ್ ಸಂವಾದದಲ್ಲಿ ಮಾತನಾಡಿದರು.

'ತಂಡದ ಉಳಿದ ಪ್ರಮುಖ ಬ್ಯಾಟರ್‌ಗಳು ತಮ್ಮ ಹೊಣೆ ನಿಭಾಯಿಸಬೇಕು. ತಂಡದ ಗೆಲುವಿಗಾಗಿ ವಿರಾಟ್ ಅವರೊಬ್ಬರ ಮೇಲೆ ಅವಲಂಬಿತವಾಗುವುದು ಸರಿಯಲ್ಲ. ಇದರಿಂದಾಗಿ ಅವರ ಮೇಲೆ ಹೆಚ್ಚುವರಿ ಒತ್ತಡ ಬಿದ್ದಿದೆ. ಅಗ್ರ ಮತ್ತು ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಉತ್ತಮವಾಗಿ ಆಡಬೇಕು' ಎಂದು ಹೇಳಿದರು.

'ವಿರಾಟ್ ಅತ್ಯದ್ಭುತ ಆಟಗಾರ. ಆದರೆ ಪ್ರತಿ ಪಂದ್ಯದಲ್ಲಿಯೂ ಅವರೇ ಹೆಚ್ಚು ರನ್ ಗಳಿಸಬೇಕು ಎಂದು ನಿರೀಕ್ಷಿಸುವುದು ತಪ್ಪು. ಅವರಿಗೆ ಉಳಿದವರಿಂದ ಸೂಕ್ತ ಬೆಂಬಲ ಬೇಕು' ಎಂದರು.

ಏಡನ್ ಮರ್ಕರಂ, ಅಭಿಷೇಕ್ ಶರ್ಮಾ ಮಿಂಚಿನ ಬ್ಯಾಟಿಂಗ್

ಸನ್‌ರೈಸರ್ಸ್‌ಗೆ ಎರಡನೇ ಜಯ

ಹೈದರಾಬಾದ್ (ಪಿಟಿಐ): ಸನ್‌ರೈಸರ್ಸ್ ಹೈದರಾಬಾದ್ ಬೌಲರ್‌ಗಳ ಶಿಸ್ತಿನ ದಾಳಿ ಮತ್ತು ಏಡನ್ ಮರ್ಕರಂ ಅವರ ಅಬ್ಬರದ ಬ್ಯಾಟಿಂಗ್ ಮುಂದೆ 'ಹಾಲಿ ಚಾಂಪಿಯನ್' ಚೆನ್ನೈ ಸೂಪರ್ ಕಿಂಗ್ಸ್ ಮಂಡಿಯೂರಿತು.

ಉಪ್ಪಳದ ರಾಜೀವಗಾಂಧಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಶುಕ್ರವಾರ ಆತಿಥೇಯ ಸನ್‌ರೈಸರ್ಸ್ ತಂಡವು 6 ವಿಕೆಟ್‌ಗಳಿಂದ ಜಯಿಸಿತು.

ಟಾಸ್ ಗೆದ್ದ ಸನ್‌ರೈಸರ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಾಯಕ ಪ್ಯಾಟ್ ಕಮಿನ್ಸ್ ಸೇರಿದಂತೆ ಏಳು ಮಂದಿ ಬೌಲರ್‌ಗಳು ಶಿಸ್ತುಬದ್ಧ ದಾಳಿ ನಡೆಸಿದರು.

ಶಿವಂ ದುಬೆ (45; 24ಎ) ಮತ್ತು ರವೀಂದ್ರ ಜಡೇಜ (31; 23ಎ) ಅವರ ಬಿರುಸಿನ ಬ್ಯಾಟಿಂಗ್ ನೆರವಿನಿಂದ ಚೆನ್ನೈ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 165 ರನ್ ಗಳಿಸಿತು. ಹೈದರಾಬಾದ್ ತಂಡದ ಬ್ಯಾಟಿಂಗ್ ಪಡೆಯ ಹಿಂದಿನ ಸಾಧನೆ ನೋಡಿದರೆ ಚೆನ್ನೈ ನೀಡಿರುವುದು ಸಾಧಾರಣ ಗುರಿಯಂತೆ ಕಾಣಿಸಿತು.

ಏಡನ್ ಮರ್ಕರಂ (50; 36ಎ, 4X4, 6X1) ಅವರ ಬಿರುಸಿನ ಬ್ಯಾಟಿಂಗ್‌ನಿಂದಾಗಿ ತಂಡವು 18.1 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 166 ರನ್ ಗಳಿಸಿ ಜಯಿಸಿತು. ಟೂರ್ನಿಯಲ್ಲಿ ತಂಡಕ್ಕೆ ಇದು ಎರಡನೇ ಜಯವಾಗಿದೆ.

ಗುರಿ ಬೆನ್ನಟ್ಟಿದ ಸನ್‌ರೈಸರ್ಸ್ ತಂಡಕ್ಕೆ ಟ್ರಾವಿಸ್ ಹೆಡ್ ಮತ್ತು ಅಭಿಷೇಕ್ ಶರ್ಮಾ ಅಬ್ಬರದ ಆರಂಭ ನೀಡಿದರು. ಇಬ್ಬರೂ ಸೇರಿ ಕೇವಲ 16 ಎಸೆತಗಳಲ್ಲಿ 46 ರನ್ ಸೇರಿಸಿದರು. ಅದರಲ್ಲಿ ಎರಡನೇ ಓವರ್‌ನಲ್ಲಿ ಅಭಿಷೇಕ್ 27 ರನ್ ಹೊಡೆದರು. ಮೂರನೇ ಓವರ್‌ನಲ್ಲಿ ಅಭಿಷೇಕ್ ಔಟಾದರು. ಕ್ರೀಸ್‌ಗೆ ಬಂದ ಮರ್ಕರಂ ಅಬ್ಬರಿಸಿದರು. ಟ್ರಾವಿಸ್ ಮತ್ತು ಮರ್ಕರಂ ಎರಡನೇ ವಿಕೆಟ್ ಜೊತೆಯಾಟದಲ್ಲಿ 60 ರನ್ ಸೇರಿಸಿದರು.

ಇದರಿಂದಾಗಿ ಹತ್ತು ಓವರ್‌ಗಳು ದಾಟುವ ಮುನ್ನವೇ ತಂಡವು ಶತಕದ ಗಡಿ ದಾಟಿತು. ಆದರೆ ಈ ಹಂತದಲ್ಲಿ ಸ್ಪಿನ್ನರ್ ಮೋಯಿನ್ ಅಲಿ ಅವರು ಮರ್ಕರಂ ಅವರನ್ನು ಎಲ್‌ಬಿಡಬ್ಲ್ಯು ಬಲೆಗೆ ಕೆಡವಿದರು. ತಮ್ಮ ಇನ್ನೊಂದು ಓವರ್‌ನಲ್ಲಿ ಶಾಬಾಜ್ ಅಹಮದ್ ಅವರ ವಿಕೆಟ್ ಕೂಡ ಕಬಳಿಸಿದರು. ಇದರಿಂದಾಗಿ ರನ್ ಗಳಿಕೆಯ ವೇಗ ಕಡಿಮೆಯಾಯಿತು. ಈ ಹಂತದಲ್ಲಿ ಒಂದಿಷ್ಟು ಚುರುಕಾದ ಫೀಲ್ಡಿಂಗ್ ಮಾಡಿದ ಚೆನ್ನೈ ಆಟಗಾರರು ಸನ್‌ರೈಸರ್ಸ್ ಗೆಲುವನ್ನು ಕಸಿದುಕೊಳ್ಳುವ ಯತ್ನ ಮಾಡಿದರು. ಆದರೆ ಹೆನ್ರಿಚ್ ಕ್ಲಾಸನ್ ಮತ್ತು ನಿತೀಶ್ ರೆಡ್ಡಿ ಅದಕ್ಕೆ ಆಸ್ಪದ ನೀಡಲಿಲ್ಲ.

ಚೆನ್ನೈ ಸೂಪರ್ ಕಿಂಗ್ಸ್ ತಂಡದ ಬ್ಯಾಟರ್ ಶಿವಂ ದುಬೆ –ಎಎಫ್‌ಪಿ ಚಿತ್ರ

ಉತ್ತಮ ಬ್ಯಾಟಿಂಗ್ ಪಡೆ ಇರುವ ಆತಿಥೇಯ ತಂಡಕ್ಕೆ ದೊಡ್ಡ ಮೊತ್ತದ ಗುರಿ ನೀಡದೇ ಇರುವುದು ಚೆನ್ನೈ ಸೋಲಿಗೆ ಪ್ರಮುಖ ಕಾರಣವಾಯಿತು. ಅಜಿಂಕ್ಯ ರಹಾನೆ (35; 30ಎ), ಶಿವಂ ದುಬೆ (24 ಎಸೆತಗಳಲ್ಲಿ 45) ಮಧ್ಯಮ ಕ್ರಮಾಂಕದಲ್ಲಿ ಮಿಂಚಿದರು. ಶಿವಂ ನಾಲ್ಕು ಸಿಕ್ಸರ್ ಎತ್ತಿದ ಅವರು ಎರಡು ಬೌಂಡರಿ ಕೂಡ ಬಾರಿಸಿದರು. ಎಡಗೈ ವೇಗಿ ಟಿ. ನಟರಾಜನ್ ಹಾಕಿದ 12ನೇ ಓವರ್‌ನಲ್ಲಿ ಎರಡು ಸಿಕ್ಸರ್ ಸಹಿತ 15 ರನ್ ಸೂರೆ ಮಾಡಿದ ದುಬೆ ಮಿಂಚಿದರು.

ಆದರೆ, 14ನೇ ಓವರ್‌ನಲ್ಲಿ ಪ್ಯಾಟ್ ಕಮಿನ್ಸ್ ಹಾಕಿದ ನಿಧಾನಗತಿಯ ಬೌನ್ಸರ್‌ನಲ್ಲಿ ಶಿವಂ ಅವರು ಫೀಲ್ಡರ್ ಭುವನೇಶ್ವರ್ ಕುಮಾರ್ ಕ್ಯಾಚ್ ಪಡೆದರು. ಅಲ್ಲಿಗೆ ಜೊತೆಯಾಟವೂ ಮುರಿದುಬಿತ್ತು. ನಂತರದ ಓವರ್‌ನಲ್ಲಿ ಅಜಿಂಕ್ಯ ಕೂಡ ಔಟಾದರು. ಇದರಿಂದಾಗಿ ತಂಡದ ರನ್ ವೇಗ ಕುಂಠಿತವಾಯಿತು. ಕೊನೆಯ ಐದು ಓವರ್‌ಗಳಲ್ಲಿ ಕೇವಲ 38 ರನ್‌ಗಳು ಮಾತ್ರ ಸೇರಿದವು. ಅದರಲ್ಲಿ ಜಡೇಜ ಅವರ ಕೊಡುಗೆ ಹೆಚ್ಚಿತ್ತು. ಮಹೇಂದ್ರಸಿಂಗ್ ಧೋನಿ ಎರಡು ಎಸೆತ ಎದುರಿಸಿ ಒಂದು ರನ್ ಮಾತ್ರ ಮಾಡಿದರು.

ಸ್ಕೋರ್ ಕಾರ್ಡ್

ಚೆನ್ನೈ ಸೂಪರ್ ಕಿಂಗ್ಸ್: 5ಕ್ಕೆ165 (20 ಓವರುಗಳಲ್ಲಿ)

ರವೀಂದ್ರ ಸಿ ಮರ್ಕರಂ ಬಿ ಕುಮಾರ್ 12 (9ಎ, 4x2)
ಋತುರಾಜ್ ಸಿ ಸಮದ್ ಬಿ ಶಾಬಾಜ್ 26 (21, 4x3, 6x1)
ಅಜಿಂಕ್ಯ ಸಿ ಮಾರ್ಕಂಡೆ ಬಿ ಉನದ್ಕತ್ 35 (30ಎ, 4x2, 6x1)
ದುಬೆ ಸಿ ಕುಮಾರ್ ಬಿ ಕಮಿನ್ಸ್ 45 (24, 4x2, 6x4)
ಜಡೇಜ ಔಟಾಗದೇ 31 (23ಎ, 4x4)
ಮಿಚೆಲ್ ಸಿ ಸಮದ್ ಬಿ ನಟರಾಜನ್ 13 (11ಎ, 4x1)
ಧೋನಿ ಔಟಾಗದೇ 1 (2ಎ)
ಇತರೆ: 2 (ಲೆಗ್‌ಬೈ 1, ವೈಡ್ 1)
ವಿಕೆಟ್ ಪತನ: 1–25 (ರಚಿನ್ ರವೀಂದ್ರ, 3.1), 2–54 (ಋತುರಾಜ್ ಗಾಯಕವಾಡ್, 7.1), 3–119 (ಶಿವಂ ದುಬೆ, 13.4), 4–127 (ಅಜಿಂಕ್ಯ ರಹಾನೆ, 14.6), 5–160 (ಡೇರಿಲ್ ಮಿಚೆಲ್, 19.3).
ಬೌಲಿಂಗ್: ಅಭಿಷೇಕ್ ಶರ್ಮಾ 1-0-7-0; ಭುವನೇಶ್ವರ ಕುಮಾರ್ 4-0-28-1; ಟಿ.ನಟರಾಜನ್ 4-0-39-1, ಪ್ಯಾಟ್ ಕಮಿನ್ಸ್ 4-0-29-1, ಮಯಂಕ್ ಮಾರ್ಕಂಡೆ 2-0-21-0, ಶಾಬಾಜ್ ಅಹ್ಮದ್ 1-0-11-1, ಜೈದೇವ್ ಉನದ್ಕತ್ 4-0-29-1

ಸನ್‌ರೈಸರ್ಸ್ ಹೈದರಾಬಾದ್: 4ಕ್ಕೆ166 (18.1 ಓವರುಗಳಲ್ಲಿ)

ಹೆಡ್ ಸಿ ರವೀಂದ್ರ ಬಿ ತೀಕ್ಷಣ 31 (24ಎ, 4x3, 6x1)
ಅಭಿಷೇಕ್ ಸಿ ಜಡೇಜ ಬಿ ಚಾಹರ್ 37 (12ಎ, 4x3, 6x4)
ಮರ್ಕರಂ ಎಲ್‌ಬಿಡಬ್ಲ್ಯು ಅಲಿ 50 (36ಎ, 4x4, 6x1)
ಶಾಬಾಜ್ ಎಲ್‌ಬಿಡಬ್ಲ್ಯು ಅಲಿ 18 (19ಎ, 6x1)
ಕ್ಲಾಸೆನ್ ಔಟಾಗದೇ 10 (11ಎ, 4x1)
ನಿತೀಶ್ ರೆಡ್ಡಿ ಔಟಾಗದೇ 14 (8ಎ, 4x1, 6x1)
ಇತರೆ: 6 (ಬೈ3, ಲೆಗ್‌ಬೈ 1, ನೋಬಾಲ್ 1, ವೈಡ್ 1)
ವಿಕೆಟ್ ಪತನ: 1–46 (ಅಭಿಷೇಕ್ ಶರ್ಮಾ, 2.4), 2–106 (ಹೆಡ್, 9.4), 3–132 (ಏಡನ್ ಮರ್ಕರಂ, 13.6), 4–141 (ಶಾಬಾಜ್ ಅಹ್ಮದ್, 15.4)
ಬೌಲಿಂಗ್: ದೀಪಕ್ ಚಾಹರ್ 3.1–0–32–1; ಮುಕೇಶ್ ಚೌಧರಿ 1–0–27–0, ಮಹೀಷ ತೀಕ್ಷಣ 4–0–27–1; ತುಷಾರ ದೇಶಪಾಂಡೆ 2–0–20–0; ರವೀಂದ್ರ ಜಡೇಜ 4–0–30–0, ಮೊಯಿನ್ ಅಲಿ 3–0–23–2; ರಚಿನ್ ರವೀಂದ್ರ 1–0–3–0.

ಪಂದ್ಯದ ಆಟಗಾರ: ಅಭಿಷೇಕ್ ಶರ್ಮಾ

ಸೂರ್ಯ ಅಭ್ಯಾಸ; ಮುಂಬೈಗೆ ಸಂತಸ

ಡೆಲ್ಲಿ ಕ್ಯಾಪಿಟಲ್ಸ್ ತಂಡದ ಎದುರಿನ ಪಂದ್ಯದಲ್ಲಿ ಕಣಕ್ಕಿಳಿಯುವುದು ಖಚಿತ

ಮುಂಬೈ (ಪಿಟಿಐ): ಸತತ ಸೋಲುಗಳಿಂದ ಕಂಗೆಟ್ಟಿರುವ ಮುಂಬೈ ಇಂಡಿಯನ್ಸ್ ತಂಡಕ್ಕೆ ಸಂತಸದ ಸುದ್ದಿಯೊಂದು ಲಭಿಸಿದೆ.

ಟಿ20 ಪರಿಣತ ಕ್ರಿಕೆಟಿಗ ಸೂರ್ಯಕುಮಾರ್ ಯಾದವ್ ಅವರು ತಂಡಕ್ಕೆ ಮರಳಿದ್ದಾರೆ. ಭಾನುವಾರ ನಡೆಯಲಿರುವ ಡೆಲ್ಲಿ ಕ್ಯಾಪಿಟಲ್ಸ್ ಎದುರಿನ ಪಂದ್ಯದಲ್ಲಿ ಅವರು ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ.

ಗಾಯದಿಂದಾಗಿ ಅವರು ದೀರ್ಘಕಾಲ ಕ್ರಿಕೆಟ್‌ನಿಂದ ಹೊರಗುಳಿದಿದ್ದರು. ಶುಕ್ರವಾರ ಅವರು ಅಭ್ಯಾಸದ ಸಂದರ್ಭದಲ್ಲಿ ತಮ್ಮ ಟ್ರೇಡ್‌ಮಾರ್ಕ್ ಹೊಡೆತಗಳನ್ನು ಪ್ರದರ್ಶಿಸಿದರು. ಅವರಲ್ಲಿ ಯಾವುದೇ ಆಯಾಸವಾಗಲಿ, ಫಿಟ್‌ನೆಸ್ ಸಂಬಂಧಿತ ಸಮಸ್ಯೆಗಳು ಕಾಣಲಿಲ್ಲ. ಉಲ್ಲಾಸದಿಂದ ಭಾಗವಹಿಸಿದ್ದರು.

ಹಾರ್ದಿಕ್ ಪಾಂಡ್ಯ ನಾಯಕತ್ವದ ಮುಂಬೈ ತಂಡವು ಈ ಟೂರ್ನಿಯಲ್ಲಿ ಆಡಿರುವ ಮೊದಲ ಮೂರು ಪಂದ್ಯಗಳಲ್ಲಿಯೂ ಸೋತಿದೆ.

ಇದೇ ಕ್ರೀಡಾಂಗಣದ ಇನ್ನೊಂದು ನೆಟ್ಸ್‌ನಲ್ಲಿ ಡೆಲ್ಲಿ ತಂಡದ ಡೇವಿಡ್ ವಾರ್ನರ್ ಕೂಡ ಬ್ಯಾಟಿಂಗ್ ಅಭ್ಯಾಸ ನಡೆಸಿದರು. ಮುಂಬೈ ರಣಜಿ ಟ್ರೋಫಿ ತಂಡದ ಬೌಲರ್ ಮೋಹಿತ್ ಅವಸ್ತಿ ವಾರ್ನರ್ ಅವರಿಗೆ ಬೌಲಿಂಗ್ ಮಾಡಿದರು.



ಸೂರ್ಯಕುಮಾರ್ ಯಾದವ್

ಕುಲದೀಪ್‌ಗೆ ವಿಶ್ರಾಂತಿ

ಮುಂಬೈ(ಪಿಟಿಐ): ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರಿಗೆ ತೊಡೆಯ ನೋವು ಇರುವುದರಿಂದ ವಿಶ್ರಾಂತಿ ಪಡೆಯಲು ವೈದ್ಯರು ಸಲಹೆ ನೀಡಿದ್ದಾರೆ.

ಡೆಲ್ಲಿ ಕ್ಯಾಪಿಟಲ್ಸ್ ತಂಡದ 29 ವರ್ಷದ ಬೌಲರ್ ಕುಲದೀಪ್ ಈಚೆಗೆ ರಾಜಸ್ಥಾನ ರಾಯಲ್ಸ್ ಎದುರಿನ ಪಂದ್ಯದಲ್ಲಿ ಆಡುವಾಗ ನೋವು ಅನುಭವಿಸಿದ್ದರು. ಗಾಯ ಉಲ್ಬಣಿಸದಂತೆ ಮುನ್ನೆಚ್ಚರಿಕೆ ಕ್ರಮವಾಗಿ ಪಂದ್ಯಗಳಲ್ಲಿ ಆಡದೇ ವಿಶ್ರಾಂತಿ ಪಡೆಯಲು ವೈದ್ಯರ ತಂಡ ಸೂಚಿಸಿದೆ.

ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿ ಸಮೀಪಿಸುತ್ತಿರುವುದರಿಂದ ಕುಲದೀಪ್ ಅವರ ಫಿಟ್‌ನೆಸ್ ಮುಖ್ಯವಾಗಿದೆ. ಅವರೂ ಭಾರತ ತಂಡದಲ್ಲಿ ಸ್ಥಾನ ಪಡೆಯುವ ಸಾಧ್ಯತೆ ಹೆಚ್ಚಿದೆ ಎಂದು ಮೂಲಗಳು ತಿಳಿಸಿವೆ.

ಶಶಾಂಕ್ ಆಟಕ್ಕೆ ಪ್ರೀತಿ ಮೆಚ್ಚುಗೆ

ಅಹಮದಾಬಾದ್ (ಪಿಟಿಐ): 'ಶಶಾಂಕ್ ಸಿಂಗ್ ಅವರು ತಮ್ಮ ಜೀವನದುದ್ದಕ್ಕೂ ಟೀಕೆ ಹಾಗೂ ವ್ಯಂಗ್ಯಗಳನ್ನು ಕ್ರೀಡಾಮನೋಭಾವದಿಂದ ಸ್ವೀಕರಿಸಿದರು. ಅದರಿಂದಾಗಿ ಇವತ್ತು ಅವರು ಯಶಸ್ವಿಯಾದರು' ಎಂದು ಪಂಜಾಬ್ ಕಿಂಗ್ಸ್ ತಂಡದ ಸಹಮಾಲೀಕರಾದ ಪ್ರೀತಿ ಜಿಂಟಾ ಹೇಳಿದ್ದಾರೆ.

ಶಶಾಂಕ್ ಸಿಂಗ್

ಗುರುವಾರ ಗುಜರಾತ್ ಟೈಟನ್ಸ್ ಎದುರಿನ ಪಂದ್ಯದಲ್ಲಿ ಪಂಜಾಬ್ ತಂಡವು ರೋಚಕ ಜಯ ಸಾಧಿಸಲು ಶಶಾಂಕ್ ಅವರ ಬ್ಯಾಟಿಂಗ್ ಕಾರಣವಾಗಿತ್ತು.

ಅವರು 29 ಎಸೆತಗಳಲ್ಲಿ ಅಜೇಯ 61 ರನ್ ಗಳಿಸಿದ್ದರು. ಅದರಿಂದಾಗಿ ಗುರಿ ಮುಟ್ಟಲು ತಂಡಕ್ಕೆ ಸಾಧ್ಯವಾಗಿತ್ತು.

ಭಾರತ–ಆಸ್ಟ್ರೇಲಿಯಾ ಹಾಕಿ ಇಂದಿನಿಂದ

ಪರ್ತ್ (ಆಸ್ಟ್ರೇಲಿಯಾ), (ಪಿಟಿಐ): ಉತ್ತಮ ಲಯದಲ್ಲಿರುವ ಭಾರತ ಪುರುಷರ ಹಾಕಿ ತಂಡ, ಆಸ್ಟ್ರೇಲಿಯಾ ಪ್ರವಾಸದ ತನ್ನ ಮೊದಲ ಟೆಸ್ಟ್ ಪಂದ್ಯವನ್ನು ಶನಿವಾರ ಆಡಲಿದೆ. ಪ್ರಬಲ ಆಸ್ಟ್ರೇಲಿಯಾ ವಿರುದ್ಧದ ಸರಣಿ ಭಾರತಕ್ಕೆ ಸತ್ವಪರೀಕ್ಷೆಯಾಗಲಿದೆ.

ಪ್ರವಾಸದಲ್ಲಿ ಭಾರತ ಐದು ಪಂದ್ಯಗಳನ್ನು ಆಡಲಿದ್ದು, ಪ್ಯಾರಿಸ್ ಒಲಿಂಪಿಕ್ಸ್‌ಗೆ ಮುನ್ನ ತಂಡದಲ್ಲಿ ಸುಧಾರಿಸಿಕೊಳ್ಳಬಹುದಾದ ಕ್ಷೇತ್ರ ತಿಳಿದುಕೊಳ್ಳಲು ಐದು ಪಂದ್ಯಗಳ ಈ ಸರಣಿ ನೆರವಾಗಲಿದೆ.

'ಪ್ಯಾರಿಸ್ ಒಲಿಂಪಿಕ್ಸ್‌ಗೆ ನಮ್ಮ ತಂಡದ ಸಿದ್ಧತೆಯ ಪ್ರಮಾಣ ತಿಳಿದುಕೊಳ್ಳಲು ಈ ಸರಣಿಯು 'ಲಿಟ್ಮಸ್' ಪರೀಕ್ಷೆ ಆಗಲಿದೆ. ನಮ್ಮ ತಂತ್ರಗಳಿಗೆ ಅಂತಿಮ ರೂಪು ನೀಡಲು ಮತ್ತು ಸುಧಾರಿಸಿಕೊಳ್ಳಬಹುದಾದ ಕ್ಷೇತ್ರ ತಿಳಿದುಕೊಳ್ಳಲು ಮತ್ತು ಪ್ಯಾರಿಸ್ ಒಲಿಂಪಿಕ್ಸ್‌ಗೆ ಒಳ್ಳೆಯ ಲಯದಲ್ಲಿರುವುದನ್ನು ಮನವರಿಕೆ ಮಾಡಿಕೊಳ್ಳಲು ಈ ಸರಣಿ ನೆರವಾಗಲಿದೆ' ಎಂದು ಕೋಚ್ ಕ್ರೇಗ್ ಫುಲ್ಟನ್ ಅವರು ಹೇಳಿದರು.

ಒಂದು ದಶಕದ ನಂತರ ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಸರಣಿಯೊಂದನ್ನು ಅದರ ತವರಿನಲ್ಲಿ ಗೆಲ್ಲಲೂ ಅವಕಾಶ ಇದಾಗಿದೆ. 2014ರಲ್ಲಿ ಭಾರತ ಕೊನೆಯ ಬಾರಿ ಆಸ್ಟ್ರೇಲಿಯಾ ವಿರುದ್ಧ ಆ ತಂಡದ ತವರಿನಲ್ಲಿ ಟೆಸ್ಟ್ ಸರಣಿ ಗೆದ್ದಿತ್ತು. ಹರ್ಮನ್‌ಪ್ರೀತ್ ಬಳಗ ಫೆಬ್ರುವರಿಯಲ್ಲಿ ನಡೆದ ಎಫ್‌ಐಎಚ್ ಪ್ರೊ ಲೀಗ್‌ನಲ್ಲಿ ಉತ್ತಮ ಪ್ರದರ್ಶನ ನೀಡಿದ್ದು ಈ ಸರಣಿಯನ್ನು ಆತ್ಮವಿಶ್ವಾಸದಿಂದ ಎದುರಿಸಲು ಸಜ್ಜಾಗಿದೆ.

ಪ್ರಸ್ತುತ ವಿಶ್ವ ಕ್ರಮಾಂಕದಲ್ಲಿ ಭಾರತ ನಾಲ್ಕನೇ ಹಾಗೂ ಆಸ್ಟ್ರೇಲಿಯಾ ಐದನೇ ಸ್ಥಾನದಲ್ಲಿವೆ. ಒಲಿಂಪಿಕ್ಸ್‌ನಲ್ಲೂ ಎರಡೂ ತಂಡಗಳು ಒಂದೇ ಗುಂಪಿನಲ್ಲಿ ಆಡಬೇಕಿದೆ. ಹೀಗಾಗಿ ಎರಡೂ ತಂಡಗಳ ನಡುವೆ ಉತ್ತಮ ಹೋರಾಟ ನಿರೀಕ್ಷಿಸಲಾಗಿದೆ. ಪಂದ್ಯ ಆರಂಭ: ಮಧ್ಯಾಹ್ನ 2 ಗಂಟೆ (ಭಾರತೀಯ ಕಾಲಮಾನ)

ಭಾರತ ಒಲಿಂಪಿಕ್ ಸಂಸ್ಥೆಯಲ್ಲಿ ಅಂತಃಕಲಹ

'ಅನಧಿಕೃತ ವ್ಯಕ್ತಿಗಳಿಗೆ ಪ್ರವೇಶವಿಲ್ಲ'

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆಯಲ್ಲಿ ತಲೆದೋರಿರುವ ಅಂತಃಕಲಹ ಶುಕ್ರವಾರ ಹೊಸ ತಿರುವು ಪಡೆದಿದೆ. 'ಅನಧಿಕೃತ ವ್ಯಕ್ತಿಗಳು' ಪ್ರಧಾನ ಕಚೇರಿಯೊಳಗೆ ಪ್ರವೇಶಿಸಬಾರದು ಎನ್ನುವ ನೋಟಿಸ್‌ಅನ್ನು ಕಾರ್ಯಕಾರಿ ಸಮಿತಿಯ ಒಂಬತ್ತು ಸದಸ್ಯರು ಕಚೇರಿ ಆವರಣದಲ್ಲಿ ಹಚ್ಚಿದ್ದಾರೆ.

ಇತ್ತೀಚೆಗಷ್ಟೇ ನೇಮಕಗೊಂಡ ಇಬ್ಬರು ಹೊಸ ಅಧಿಕಾರಿಗಳನ್ನು ಉದ್ದೇಶಿಸಿ ಈ ನೋಟಿಸ್ ಅನ್ನು ಐಒಎ ಅಂಟಿಸಲಾಗಿದೆ. ಮಂಗಳವಾರ ಈ ಸದಸ್ಯರು ಸಭೆ ನಡೆಸಿದ ನಂತರ ಈ ಕ್ರಮ ಕೈಗೊಂಡಿದ್ದಾರೆ.

ಜನವರಿ 6ರಂದು ರಘುರಾಮ್ ಅಯ್ಯರ್ ಅವರನ್ನು ಸಿಇಒ ಆಗಿ ನೇಮಕ ಮಾಡಿದ ನಂತರ ಐಒಎ ಅಧ್ಯಕ್ಷೆ ಪಿ.ಟಿ.ಉಷಾ ಮತ್ತು ಕಾರ್ಯಕಾರಿ ಸಮಿತಿಯ (ಎಕ್ಸಿಕ್ಯೂಟಿವ್ ಕೌನ್ಸಿಲ್) ಬಹುತೇಕ ಸದಸ್ಯರ ನಡುವೆ ವೈಮನಸ್ಸು ತಾಂಡವವಾಡುತ್ತಿದೆ. ಅಯ್ಯರ್ ಅದಕ್ಕೆ ಮೊದಲು ಐಪಿಎಲ್ ತಂಡವಾದ ರಾಜಸ್ಥಾನ ರಾಯಲ್ಸ್ ಸಿಇಒ ಆಗಿದ್ದರು.

ಸಮ್ಮತಿಯಿಲ್ಲದ, ಅಮಾನತುಗೊಂಡ ಸಿಬ್ಬಂದಿ ಕಚೇರಿ ಪ್ರವೇಶಿಸಿ, ಸಿಬ್ಬಂದಿ ಸ್ಥಳದಲ್ಲಿ ಕುಳಿತುಕೊಳ್ಳುತ್ತಿದ್ದಾರೆ. ಇದು ಅಕ್ರಮ ಮತ್ತು ಅತಿಕ್ರಮ ಪ್ರವೇಶಕ್ಕೆ ಕಾರಣವಾಗುತ್ತದೆ' ಎಂದು ಅದರಲ್ಲಿ ಹೇಳಲಾಗಿದೆ.

ನೋಟಿಸ್‌ಗೆ ಹಿರಿಯ ಉಪಾಧ್ಯಕ್ಷ ಅಜಯ್ ಪಟೇಲ್, ಉಪಾಧ್ಯಕ್ಷರಾದ ರಾಘುಲಕ್ಷ್ಮಿ ಸಿಂಗ್‌ದೇವ್ ಮತ್ತು ಗಗನ್ ನಾರಂಗ್, ಖಜಾಂಚಿ ಸಹದೇವ್ ಯಾದವ್, ಸದಸ್ಯರಾದ ಡೋಲಾ ಬ್ಯಾನರ್ಜಿ, ಹರಪಾಲ್ ಸಿಂಗ್, ಯೋಗೇಶ್ವರ ದತ್, ಅಮಿತಾಭ್ ಶರ್ಮಾ ಮತ್ತು ಭೂಪಿಂದರ್ ಸಿಂಗ್ ಬಾಜ್ವಾ ಅವರು ನೋಟಿಸ್‌ಗೆ ಸಹಿ ಮಾಡಿದ್ದಾರೆ.

ಉಷಾ ಸದ್ಯ ನಗರದಲ್ಲಿಲ್ಲ. ಆದರೆ ಅವರಿಗೆ ಬೆಳವಣಿಗೆಗಳ ಬಗ್ಗೆ ಮಾಹಿತಿ ನೀಡಲಾಗಿದೆ.

ಸಿಇಒ ಆಗಿ ಅಯ್ಯರ್ ಅವರನ್ನು ನೇಮಕ ಮಾಡಿದ ಕೆಲವೇ ದಿನಗಳ ನಂತರ ಸಮಿತಿಯ 15 ಸದಸ್ಯರ ಪೈಕಿ 12 ಮಂದಿ, 'ಈ ನೇಮಕಕ್ಕೆ ತಮ್ಮ ಮೇಲೆ ಒತ್ತಡ ತರಲಾಗಿದೆ' ಎಂದು ದೂರಿದ್ದರು. ಇದಕ್ಕೆ ಪ್ರತಿಯಾಗಿ, 'ಇಂಥ ಆರೋಪ ನಾಚಿಕೆಗೇಡಿದ್ದು' ಎಂದು ಭಾರತೀಯ ಅಥ್ಲೆಟಿಕ್ಸ್‌ನ ದಂತಕಥೆ ಉಷಾ ಟೀಕಿಸಿದ್ದರು.

ಅಯ್ಯರ್ ಅವರ ನೇಮಕ ಅನೂರ್ಜಿತ ಎಂದು ಹೇಳಿ ಸಮಿತಿಯ ಬಹುಸಂಖ್ಯಾತ ಸದಸ್ಯರು ಅಮಾನತು ಪತ್ರಕ್ಕೆ ಸಹಿ ಮಾಡಿದ್ದರು. ಐಒಎ ಅಧ್ಯಕ್ಷರಿಗೆ ಕಾರ್ಯನಿರ್ವಾಹಕ ಅಸಿಸ್ಟೆಂಟ್ ಆಗಿ ಅಜಯ್ ನಾರಂಗ್ ಅವರ ನೇಮಕವನ್ನೂ ರದ್ದುಪಡಿಸಲಾಗಿದೆ ಎಂದು ಈ ಸದಸ್ಯರು ಹೇಳಿದ್ದರು. ಆದರೆ ಉಷಾ ಅವರಿಂದ ನೇಮಕಗೊಂಡ ನಂತರ ಈ ಇಬ್ಬರೂ ಕಾರ್ಯನಿರ್ವಹಿಸುತ್ತಿದ್ದಾರೆ. ಹೊಸದಾಗಿ ನೇಮಕಗೊಂಡಿರುವ ಸಿಇಒ ಬಗ್ಗೆ ತಮಗೆ ಪೂರ್ಣ ವಿಶ್ವಾಸವಿದೆ ಎಂದು ಉಷಾ ಸಮರ್ಥನೆ ನೀಡಿದ್ದರು.

ಈ ರೀತಿ ಹಟದ ಧೋರಣೆ ಮುಂದುವರಿಸಿದಲ್ಲಿ ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ ಮಧ್ಯಪ್ರವೇಶಿಸಿ ಭಾರತವನ್ನು ಅಮಾನತು ಮಾಡಬಹುದು ಎಂದು ಉಷಾ, ಕಾರ್ಯಕಾರಿ ಸಮಿತಿ ಸದಸ್ಯರಿಗೆ ಎಚ್ಚರಿಕೆ ನೀಡಿದ್ದರು.

ಕ್ಯಾಂಡಿಡೇಟ್ಸ್ ಚೆಸ್: ಮೊದಲ ದಿನ ಏಳು 'ಡ್ರಾ'

ಟೊರಾಂಟೊ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಆರ್.ಪ್ರಜ್ಞಾನಂದ, ಕ್ಯಾಂಡಿಡೇಟ್ಸ್ ಚೆಸ್ ಟೂರ್ನಿಯ ಮೊದಲ ಸುತ್ತಿನಲ್ಲಿ ಗುರುವಾರ ಫ್ರಾನ್ಸ್‌ನ ಅಲಿರೇಝಾ ಫಿರೋಜ್ ಎದುರು 'ಡ್ರಾ' ಮಾಡಿಕೊಳ್ಳುವ ಮೊದಲು ಕೊಂಚ ಆತಂಕದ ಕ್ಷಣಗಳನ್ನು ಎದುರಿಸಿದರು.

ಡಿ.ಗುಕೇಶ್ ಇನ್ನೊಂದು ಪಂದ್ಯದಲ್ಲಿ ಸ್ವದೇಶದ ವಿದಿತ್ ಎಸ್.ಗುಜರಾತಿ ಜೊತೆ ಪಾಯಿಂಟ್ ಹಂಚಿಕೊಂಡರು.

ಓಪನ್ ವಿಭಾಗದ ನಾಲ್ಕೂ ಪಂದ್ಯಗಳು 'ಡ್ರಾ' ಆದರೆ, ಮಹಿಳೆಯರ ವಿಭಾಗದ ಲ್ಲೂ ಮೂರು ಪಂದ್ಯಗಳು ಅದೇ ಹಾದಿ ಹಿಡಿದವು. ಚೀನಾ ಆಟಗಾರ್ತಿಯರ ವ್ಯವಹಾರವಾಗಿದ್ದ ಒಂದು ಪಂದ್ಯದಲ್ಲಿ ಝೊಂಗ್‌ವಿ, ಟಿಂಗ್‌ಜಿ ಲೀ ಅವರನ್ನು ಸೋಲಿಸಿ ಮುನ್ನಡೆ ಪಡೆದರು.

ಭಾರತದ ಆರ್.ವೈಶಾಲಿ ಮತ್ತು ಕೋನೇರು ಹಂಪಿ ತಮ್ಮ ನಡುವಣ ಪಂದ್ಯವನ್ನು 41 ನಡೆಗಳ ನಂತರ ಡ್ರಾ ಮಾಡಿಕೊಂಡು ತಲಾ ಅರ್ಧ ಪಾಯಿಂಟ್ ಪಡೆದರು. ಹೆಚ್ಚಿನ ಬೋರ್ಡ್‌ಗಳಲ್ಲಿ ಒಂದೇ ದೇಶದ ಆಟಗಾರರು ಎದುರಾದರು.

ಯುವ ಆಟಗಾರರಾದ ಪ್ರಜ್ಞಾನಂದ ಮತ್ತು ಅಲಿರೇಝಾ ಎದುರಾಳಿ ರಾಜನತ್ತ ದಾಳಿಗೆ ಪೈಪೋಟಿಯಲ್ಲಿ ನಿರತಾದರು. ಆದರೆ ಕೊನೆಗೆ ನಡೆಗಳ ಪುನರಾವರ್ತನೆಯಿಂದ (39 ನಡೆಗಳ ನಂತರ) ಪಂದ್ಯ ಡ್ರಾ ಆಯಿತು.

ಪ್ರಜ್ಞಾನಂದ ಕಪ್ಪು ಕಾಯಿಗಳಲ್ಲಿ ಆಡಿದ್ದರು. ಇವರಿಬ್ಬರ ಆಟದ ಕಂಪ್ಯೂಟರ್ ವಿಶ್ಲೇಷಣೆಯೂ ಸಮಬಲ ತೋರಿಸಿತು. ಎರಡನೇ ಸುತ್ತಿನಲ್ಲಿ ಪ್ರಜ್ಞಾನಂದ, ಸ್ವದೇಶದ ಗುಕೇಶ್ ಎದುರು ಆಡಲಿದ್ದಾರೆ. ಅಲಿರೇಝಾ ಅವರಿಗೆ ನೆಪೊಮ್‌ನಿಯಾಚಿ ಎದುರಾಳಿಯಾಗಿದ್ದಾರೆ. ಟೂರ್ನಿಯಲ್ಲಿ ಭಾಗವಹಿಸುವವರಲ್ಲಿ ಕಡಿಮೆ ರ್‍ಯಾಂಕಿಂಗ್ ಹೊಂದಿರುವ ನಿಜತ್ ಅಬಸೋವ್ (ಫಿಡೆ), ಪ್ರಬಲ ಎದುರಾಳಿ ನೆಪೊಮ್‌ನಿಯಾಚಿ ಎದುರು ಸುಲಭವಾಗಿ ಡ್ರಾ ಮಾಡಿಕೊಂಡು 'ಗ್ರೇಟ್ ಹಾಲ್' ನಿಂದ ನಿರ್ಗಮಿಸಿದ ಮೊದಲ ಆಟಗಾರ ಎನಿಸಿದರು.

ಪ್ರಜ್ಞಾನಂದ

'ಇಂಡಿಯನ್ ಡರ್ಬಿ' ಪಂದ್ಯದಲ್ಲಿ ವಿದಿತ್, ಸಮತೋಲನದ ಪಂದ್ಯದಲ್ಲಿ ಅವಕಾಶಗಳಿಗೆ ಹೊಂಚುಹಾಕಿದರು. 17ನೇ ನಡೆಯಲ್ಲಿ ಬಿಷಪ್ ಸ್ಯಾಕ್ರಿಫೈಸ್‌ಗೆ (ಬಿಟ್ಟುಕೊಡಲು) ಮುಂದಾದರು. ಆದರೆ ಅದನ್ನು ಪಡೆದರೆ ಆಗುವ ಅಪಾಯ ಗ್ರಹಿಸಿದ ಗುಕೇಶ್ ನಡೆಗಳ ಪುನರಾವರ್ತನೆ ಅನಿವಾರ್ಯಗೊಳಿಸಿ 'ಡ್ರಾ' ಮಾಡಿಕೊಂಡರು.

ಗುಜರಾತಿ ಅವರ ಸಿದ್ಧತಾ ತಂಡದಲ್ಲಿ ಭಾರತದ ಸೂರ್ಯಶೇಖರ ಗಂಗೂಲಿ ಮತ್ತು ಡೇನಿಯಲ್ ವೊಕಾಟುರೊ (ಇಟಲಿ) ಇದ್ದು ಟೊರಾಂಟೊದಲ್ಲೇ ವಾಸ್ತವ್ಯ ಹೂಡಿದ್ದಾರೆ. ಗುಕೇಶ್ ಅವರ 'ಸೆಕೆಂಡ್' (ಸಿದ್ಧತೆಯಲ್ಲಿ ನೆರವುಗಾರ) ಆಗಿ ಗ್ರೆಗೊರ್ಝ್ ಗಜೆವ್‌ಸ್ಕಿ ಕಾರ್ಯನಿರ್ವಹಿಸುತ್ತಿದ್ದಾರೆ.

ಫಲಿತಾಂಶಗಳು: ಮೊದಲ ಸುತ್ತು: ಅಲಿರೇಜಾ ಫಿರೋಜ್ ಮತ್ತು ಪ್ರಜ್ಞಾನಂದ ಆರ್. ನಡುವಣ ಪಂದ್ಯ ಡ್ರಾ; ಡಿ.ಗುಕೇಶ್ ಮತ್ತು ವಿದಿತ್ ಗುಜರಾತಿ ನಡುವಣ ಪಂದ್ಯ ಡ್ರಾ; ಫ್ಯಾಬಿಯಾನೊ ಕರುವಾನಾ (ಅಮೆರಿಕ) ಮತ್ತು ಹಿಕಾರು ನಕಾಮುರಾ (ಅಮೆರಿಕ) ನಡುವಣ ಪಂದ್ಯ ಡ್ರಾ;

ನಿಜತ್ ಅಬಸೋವ್ (ಅಜರ್‌ಬೈಜಾನ್) ಮತ್ತು ಇಯಾನ್ ನೆಪೊಮ್‌ನಿಯಾಚಿ (ಫಿಡೆ). ಮಹಿಳಾ ವಿಭಾಗ:ಆರ್.ವೈಶಾಲಿ ಮತ್ತು ಕೆ.ಹಂಪಿ ನಡುವಣ ಪಂದ್ಯ 'ಡ್ರಾ'; ಟಿಂಗ್ಜಿ ಲೀ (ಚೀನಾ) ಅವರಿಗೆ ಝೊಂಗ್‌ಯಿ ತಾನ್ (ಚೀನಾ) ಎದುರು ಸೋಲು; ಅನ್ನಾ ಮುಝಿಚುಕ್ (ಉಕ್ರೇನ್) ಮತ್ತು ನುರ್ಗ್ಯುಲ್ ಸಲಿಮೋವ (ಬಲ್ಗೇರಿಯಾ) ನಡುವಣ ಪಂದ್ಯ ಡ್ರಾ

ಹಾಕಿ: ಕರವಂಡ ತಂಡಕ್ಕೆ ರೋಚಕ ಜಯ

ನಾಪೋಕ್ಲು (ಕೊಡಗು ಜಿಲ್ಲೆ): ಪೆನಾಲ್ಟಿ ಶೂಟೌಟ್ ಅವಕಾಶವನ್ನು ಸದುಪಯೋಗಪಡಿಸಿಕೊಂಡ ಕರವಂಡ ತಂಡವು ಇಲ್ಲಿನ ಚೆರಿಯಾಪರಂಬುವಿನಲ್ಲಿ ನಡೆಯುತ್ತಿರುವ ಕೊಡವ ಕೌಟುಂಬಿಕ ಹಾಕಿ ಟೂರ್ನಿ ಕುಂಡ್ಯೋಳಂಡ ಕಪ್‌ನಲ್ಲಿ ಶುಕ್ರವಾರ ಕೋಳೆರ ತಂಡದ ವಿರುದ್ಧ 4–3 ಅಂತರದಿಂದ ರೋಚಕ ಗೆಲುವು ದಾಖಲಿಸಿತು.

ವಿಶ್ವ ಟೆನ್‌ಕೆ ಓಟ: ವೆಲೇರಿ ರಾಯಭಾರಿ

ಪ್ರಜಾವಾಣಿ ವಾರ್ತೆ

